| 17 | <u>ಕೆ.ಟಿ.ಪಿ.ಪಿ ಕಾಯ್ದೆ-1999-2000 ರ ನಿಯಮ ಉಲ್ಲಂಘಿಸಿ ವಿಶ್ವವಿದ್ಯಾನಿಲಯಕ್ಕೆ ರಾಸಾಯನಿಕ ಹಾಗೂ ಪ್ರಯೋಗಾಲಯ ಸಾಮಾಗ್ರಿಗಳನ್ನು ಖರೀದಿಸಿರುವುದು :</u><br>2016-17ನೇ ಸಾಲಿನಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ವಿಭಾಗಗಳಿಗೆ ಹಾಗೂ ಘಟಕ ಕಾಲೇಜುಗಳಿಗೆ ಅಗತ್ಯವಿರುವ ರಾಸಾಯನಿಕಗಳು ಹಾಗೂ ಪ್ರಯೋಗಾಲಯ ಪರಿಕರಗಳನ್ನು ಖರೀದಿಸಿರುವ ಸಂಬಂಧ ವಿವಿಧ ಏಜೆನ್ಸಿಗಳಿಗೆ ವೆಚ್ಚ ಪಾವತಿಸಿರುವುದನ್ನು ಗಮನಿಸಲಾಗಿದ್ದು, ಸದರಿ ವೆಚ್ಚಗಳ ಪಾವತಿ ಸಂಬಂಧ ಪೂರಕ ದಾಖಲಾತಿಗಳನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ: 29/2018-19 ದಿ:23.11.2018, 35/18-19 ದಿ:03.12.2018, 64/18-19 ದಿ:21.12.2018, 116/18-19 ದಿ:17.01.2019 ಹಾಗೂ 109/2018-19 ದಿ:08.01.2019 ಗಳನ್ನು ಜಾರಿ ಮಾಡಲಾಗಿತ್ತು.<br>ಅದರಂತೆ ಹಾಜರುಪಡಿಸಲಾದ ದಾಖಲಾತಿಗಳನ್ನು ಪರಿಶೀಲಿಸಲಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಅಧಿಕೃತ ಜ್ಞಾಪನಾ: ಮಂವಿ/ಡಿಇವಿ/28/2016-17/ಡಿ2 ದಿ:25.08.2016 ರಂತೆ ಸಿಂಡಿಕೇಟು ಸಭೆಯ ಕಾರ್ಯ ಸೂಚಿ ಸಂಖ್ಯೆ:ಡಿಇವಿ/ಸಾ.ಸ/5/30/2016 ದಿನಾಂಕ:30.07.2016 ರ ನಿರ್ಣಯದಂತೆ ಒಟ್ಟು ಹದಿನಾಲ್ಕು ಸಂಸ್ಥೆಗಳಿಗೆ ರೂ.3,000/-ಗಳ ಹಿಂದಿರುಗಿಸಲಾಗದ ಠೇವಣಿಯೊಂದಿಗೆ ದರ ಗುತ್ತಿಗೆ ಆಧಾರದಲ್ಲಿ ರಾಸಾಯನಿಕಗಳು ಹಾಗೂ ಪ್ರಯೋಗಾಲಯ ಪರಿಕರಗಳನ್ನು ಖರೀದಿಸಲು ಕನಿಷ್ಠ 5% ರಿಂದ ಗರಿಷ್ಠ 31% ರವರೆಗೆ ವಿವಿಧ ರಸಾಯನಿಕ ಹಾಗೂ ಪರಿಕರಗಳ ಮುಖಬೆಲೆಗೆ ರಿಯಾಯಿತಿ ನೀಡುವ ಆಧಾರದಲ್ಲಿ ಕಂಪನಿವಾರು ಅನುಮೋದನೆಯನ್ನು ನೀಡಲಾಗಿರುತ್ತದೆ. ಸದರಿ ಸಂಸ್ಥೆಗಳು ರಾಸಾಯನಿಕ ಹಾಗೂ ಪ್ರಯೋಗಾಲಯ ಪರಿಕರಗಳನ್ನು ಸರಬರಾಜು ಮಾಡಿ ಪಾವತಿಗಾಗಿ ಸಲ್ಲಿಸಿರುವ ಬಿಲ್ಲುಗಳಲ್ಲಿ ಕಂಪನಿಗಳು ಶೇಕಡವಾರು ರಿಯಾಯಿತಿ ದಾಖಲಿಸದೇ ಐಟಂವಾರು ದರಗಳನ್ನು ದಾಖಲಿಸಲಾಗಿದ್ದು, ಕಂಪನಿಯ ನಮೂದಿಸಿರುವ ದರವು ರಿಯಾಯಿತಿ ದರದ ಕಡತ ಮಾಡಲಾದ ಮೊತ್ತಕ್ಕೆ ಅನುಗುಣವಾಗಿ ರಿಯಾಯಿತಿ ನೀಡಲಾಗಿಯೇ ಎನ್ನುವುದನ್ನು ಖಚಿತ ಪಡಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ಇದರಿಂದಾಗಿ ಹೆಚ್ಚುವರಿ ಬಿಲ್ಲು ಪಾವತಿಯಾಗಿ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ನಷ್ಟ ಉಂಟಾಗಿರಬಹುದೆಂದು ಭಾವಿಸಲಾಗಿದೆ. ಆದ್ದರಿಂದ ಈ ಬಗ್ಗೆ ಪೂರಕ ದಾಖಲಾತಿಗಳೊಂದಿಗೆ ವಿವರಣೆ ನೀಡಲು ಕೋರಿದೆ.<br>ಕೆ.ಟಿ.ಪಿ.ಪಿ ಕಾಯ್ದೆ-1999-2000 ಕಲಂ 4(ಇ) ಪ್ರಕಾರ ಹಾಗೂ ಸರ್ಕಾರದ ಆದೇಶ ಸಂಖ್ಯೆ:ಆಇ/01/ಟಿ.ಸಿ.ಇ/2012 ಬೆಂಗಳೂರು ದಿನಾಂಕ: 21.06.2012 ರನ್ವಯ ರೂ.5,000/-ಗಳ ಮೇಲ್ಪಟ್ಟ ಖರೀದಿಗೆ ದರಪಟ್ಟಿ ಹಾಗೂ ರೂ.1.00 ಲಕ್ಷಗಳ ಮೇಲ್ಪಟ್ಟ ಖರೀದಿಗಳಿಗೆ ಟೆಂಡರ್ ಕರೆದು ಕ್ರಮವಹಿಸಬೇಕಾಗಿದ್ದು, ಸ್ಪರ್ಧಾತ್ಮಕ ದರಗಳಲ್ಲಿ ಗುಣಮಟ್ಟದ ಸರಕು ಸೇವೆಗಳನ್ನು ಪಡೆಯಬಹುದಾಗಿದ್ದು. ಈ ಮೇಲ್ಕಂಡ ಸಾಮಾಗ್ರಿ/ ಸಲಕರಣೆಗಳ ಖರೀದಿಯ ಪ್ರಕ್ರಿಯೆಯಲ್ಲಿ ಸದರಿ ನಿಯಮಾವಳಿಯ ಸ್ಪಷ್ಟ ಉಲ್ಲಂಘನೆಯಾಗಿರುವುದರಿಂದ ಈ ಸಂಬಂಧ ಭರಿಸಲಾದ ಒಟ್ಟು ಮೊತ್ತ ರೂ.78,44,490/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರವನ್ನು <u>ಅನುಬಂಧ- 6ರಲ್ಲಿ</u> ವರದಿಗೆ ಲಗತ್ತಿಸಿದೆ. | ಪ್ರತಿ ವರ್ಷದಂತೆ 2016–17ನೇ ಸಾಲಿನಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಜ್ಞಾನ ವಿಭಾಗಗಳು ಹಾಗೂ ಘಟಕ ಕಾಲೇಜುಗಳ ವಿಜ್ಞಾನ ವಿಭಾಗಗಳಿಗೆ ಅಗತ್ಯವಿರುವ ರಾಸಾಯನಿಕ, ಗ್ಲಾಸ್‌ವೇರ್ ಮತ್ತುಬಳಕೆ ವಸ್ತುಗಳನ್ನು ಧಾರಣಾ ಗುತ್ತಿಗೆ ದರದ ಮೂಲಕ ಖರೀದಿಸಲು ಕ್ರಮಕೈಗೊಳ್ಳಲಾಗಿದ್ದು ಸದರಿ ಪ್ರಕ್ರಿಯೆಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಕಾಯ್ದೆಯಡಿ ದಕ್ಷಿಣ ಕನ್ನಡ ಜಿಲ್ಲಾ ಟೆಂಡರ್ ಬುಲೆಟಿನ್‌ನಲ್ಲಿ ಪ್ರಕಟಣೆ ನೀಡಿ ರೂ.3,000/– ಹಿಂದಿರುಗಿಸಲಾಗದ ಠೇವಣಿಯನ್ನು ಪಡೆದುಕೊಂಡು, ಗರಿಷ್ಠ ರಿಯಾಯಿತಿ ಆಧಾರ ದಲ್ಲಿ ವಿವಿಧ ವಿತರಕ ಸಂಸ್ಥೆಗಳನ್ನು ಧಾರಣಾಗುತ್ತಿಗೆ ದರ ಪಟ್ಟಿಗೆ ಸೇರಿಸಿ ಖರೀದಿಗೆ ಇದುವರೆಗೆ ಕ್ರಮಕೈಗೊಳ್ಳಲಾಗುತ್ತಿತ್ತು.<br>ಸದರಿ ಪ್ರಕ್ರಿಯೆಯು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಕಾಯ್ದೆಯ ನಿಯಮಾವಳಿಗಳ ಅನುಸಾರವಿರುವುದಿಲ್ಲವೆಂದು 2016–17ನೇ ಸಾಲಿನ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯ ತಪಾಸಣೆಗೆ ಆಗಮಿಸಿದ, ಕರ್ನಾಟಕ ರಾಜ್ಯ ಲೆಕ್ಕಪತ್ರ ಇಲಾಖೆಯ ಲೆಕ್ಕ ಪರಿಶೋಧಕರು ತಿಳಿಸಿರುವುದರಿಂದ, 2019–20ನೇ ಸಾಲಿನಲ್ಲಿ ಧಾರಣಾಗುತ್ತಿಗೆ ದರ ನಿಗದಿ ಪಡಿಸುವ ಸಂದರ್ಭದಲ್ಲಿ ಪ್ರತಿಯೊಂದು ವಿಭಾಗಕ್ಕೆ ಒಂದು ವರ್ಷಕ್ಕೆ ಬೇಕಾಗುವ ಅಂದಾಜು ರಾಸಾಯನಿಕ/ಗ್ಲಾಸ್‌ವೇರ್/ ಬಳಕೆ ವಸ್ತುಗಳ ಐಟೆಂವಾರು ಪಟ್ಟಿಯನ್ನು ಪಡೆದುಕೊಂಡು, ಕ್ರೋಢೀಕರಿಸಿ ಟೆಂಡರ್ ಪೋರ್ಟಲ್‌ನಲ್ಲಿ ಪ್ರಕಟಣೆ ನೀಡಿ ಕನಿಷ್ಟ ದರ ನಮೂದಿಸಿದ ಸಂಸ್ಥೆಗಳನ್ನು ಧಾರಣಾ ಗುತ್ತಿಗೆ ದರಪಟ್ಟಿಗೆ ಸೇರಿಸಿ ಒಪ್ಪಂದವನ್ನು ಮಾಡಿಕೊಳ್ಳುವಂತೆ ಮೌಖಿಕವಾಗಿ ಸಲಹೆ ನೀಡಿರುವುದರಿಂದ ಸದರಿ ಲೆಕ್ಕಪರಿಶೋಧಕರ ಸಲಹೆಯಂತೆ 2019–20ನೇ ಸಾಲಿಗೆ ಇ–ಟೆಂಡರ್‌ಪೋರ್ಟಲ್‌ನಲ್ಲಿ ಐಟೆಂವಾರು ವಿವರದೊಂದಿಗೆ ಟೆಂಡರ್ ಆಹ್ವಾನಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br>ಆದುದರಿಂದ 2016–17, 2017–18 ಮತ್ತು 2018–19ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಟೆಂಡರ್ ಬುಲೆಟಿನ್‌ನಲ್ಲಿ ಪ್ರಕಟನೆ ನೀಡಿ ಮೇಲೆ ತಿಳಿಸಿದಂತೆ ಧಾರಣಾ ಗುತ್ತಿಗೆ ದರ ನಿಗದಿಪಡಿಸಿ ವಿವಿಧ ವಿಭಾಗಗಳಲ್ಲಿ ರಾಸಾಯನಿಕ/ಗ್ಲಾಸ್‌ವೇರ್/ ಬಳಕೆ ವಸ್ತುಗಳ ಖರೀದಿಗೆ ಈಗಾಗಲೇ ಮಂಜೂರಾತಿ ನೀಡಲ್ಪಟ್ಟಿರುವುದರಿಂದ, ಪ್ರಕ್ರಿಯೆ ಯಲ್ಲಿ ಆಗಿರುವ ಈ ಲೋಪವನ್ನು ಮನ್ನಿಸಿ, ಆಕ್ಷೇಪಣೆಯನ್ನು ಕೈಬಿಡುವಂತೆ ಕೋರಲಾಗಿದೆ. ಮುಂದಿನ ವರ್ಷಗಳಲ್ಲಿ ಇಂತಹ ತಪ್ಪುಗಳಾಗದಂತೆ ಎಚ್ಚರ ವಹಿಸಲಾಗುವುದು ಎಂದು ತಿಳಿಸಲಾಗಿದೆ. |

| | | |
|---|---|---|
| 18 | **ಟೆಂಡರ್ ಪ್ರಕ್ರಿಯೆ ಕೈಗೊಳ್ಳದೆ Software ಮತ್ತು ಇನ್ನಿತರೆ ಉಪಕರಣಗಳನ್ನು ಖರೀದಿಸಿರುವುದು :**<br>2016-17ನೇ ಸಾಲಿನ ಲೆಕ್ಕ ತಪಾಸಣೆಯಲ್ಲಿ DST FIST Programme ಅಡಿಯಲ್ಲಿ ಸಂಶೋಧನೆ ಕೈ ಗೊಳ್ಳಲು, ಓಚರ್ ಸಂಖ್ಯೆ: 10/10-03-2017 ರಲ್ಲಿ ಧನಾದೇಶ ಸಂಖ್ಯೆ:562582, ದಿನಾಂಕ:16/06/2017 ರಲ್ಲಿ ರೂ1,54,575(68,700+85,875) ಗಳನ್ನು Photonics India Bangalore ರವರಿಗೆ ಪಾವತಿಸಿ Spare EEPROM IC With Software ಮತ್ತು Spare Main PCB ಉಪಕರಣಗಳನ್ನು ಖರೀದಿಸಲಾಗಿದ್ದು, KTPPಕಾಯ್ದೆ 2000ರ ಕಾಲಂ 4ಇ ಪ್ರಕಾರ ಟೆಂಡರ್ ಪ್ರಕ್ರಿಯೇ ಕೈಗೊಂಡ ಕಡತಗಳನ್ನು ಹಾಗೂ ದಾಸ್ತಾನು ವಹಿಯನ್ನು ಹಾಜರುಪಡಿಸುವಂತೆ ಲೆಕ್ಕ ತಪಾಸಣಾ ವಿಚಾರಣಾ ಪತ್ರ ಸಂಖ್ಯೆ: 138/ ದಿನಾಂಕ 29/01/2019 ರಂದು ಜಾರಿ ಮಾಡಿ ಓಚರ್ಸ್‌ಗಳನ್ನು ಲೆಕ್ಕ ತಪಾಸಣೆಗೆ ಹಾಜರುಪಡಿಸಿದ್ದು ಟೆಂಡರ್ ಪ್ರಕ್ರಿಯೆ ಕಡತಗಳನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ ಸದರಿ ಮೊತ್ತ ರೂ.1,54,575/- ಗಳನ್ನು ಆಕ್ಷೇಪಣೆಗೆ ಸೂಚಿಸಿದೆ. | ಮೆ. ಫೋಟೋನಿಕ್ಸ್ ಇಂಡಿಯಾ ಬೆಂಗಳೂರು ಇವರು ಈ ಉಪಕರಣಗಳ ಏಕೈಕ ಪೂರೈಕೆದಾರರಾಗಿದ್ದು ಇದರ ನಿರ್ವಹಣೆ ಬೇರೆ ಸಂಸ್ಥೆಗಳಿಂದ ಸಾಧ್ಯವಿರುವುದಿಲ್ಲ. ಸದ್ರಿ ಉಪಕರಣಗಳ ತಯಾರಿಕ ಸಂಸ್ಥೆ ಮೆ. ಲೇಸರ್ ಪ್ರೋಬ್ ಇಂಕ್ ಇವರು ಗೊತ್ತುಪಡಿಸಿದ ಸೇವಾ ವಿತರಕರು ಮೆ. ಫೋಟೋನಿಕ್ಸ್ ಇಂಡಿಯಾ ಬೆಂಗಳೂರು ಮಾತ್ರವಾಗಿರುತ್ತಾರೆ. ಕೆಟಿಪಿಪಿ ಆಕ್ಟ್ 4(ಬಿ) ಪ್ರಕಾರ ಕೊಟೇಶನನ್ನು ಅನುಮೋದಿಸಲಾಗಿದೆ. ಆಕ್ಷೇಪಣೆಯನ್ನು ಕೈಬಿಡುವಂತೆ ಕೋರಲಾಗಿದೆ. |
| 19 | **ಖರೀದಿ ಬಿಲ್ಲುಗಳಲ್ಲಿ ಅಗತ್ಯವಾದ ಮತ್ತು ಅವಶ್ಯವಾದ ಮಾಹಿತಿ ದೃಢೀಕರಣ ಇಲ್ಲದಿದ್ದರೂ ಬಿಲ್ಲುಗಳನ್ನು ಪಾವತಿಸಿರುವುದು :**<br>ನೆಹರು ರವರ ಭಾರತ ಕಲ್ಪನೆ ಕಾರ್ಯಕ್ರಮ ಮತ್ತು ದಕ್ಷಿಣ ವಲಯ ಯುವ ಜನೋತ್ಸವ ಕಾರ್ಯಕ್ರಮಗಳಿಗೆ ಸಂಬಂಧಪಟ್ಟ ವೋಚರ್‌ಗಳನ್ನು ಪರಿಶೀಲಿಸಲಾಗಿ, ವೋಚರ್ ಸಂಖ್ಯೆ:166/ ದಿ:06.04.2016 ಧನಾದೇಶ ಸಂಖ್ಯೆ:066355/ ದಿ:06.04.2016 ರ ಹಾಗೂ ವೋಚರ್ ಸಂಖ್ಯೆ: 769/ ದಿ:29.04.2016 ಧನಾದೇಶ ಸಂಖ್ಯೆ:077277 ದಿ:03.05.2016 ರನ್ವಯ ಕ್ರಮವಾಗಿ ರೂ.59,150/– ಮತ್ತು ರೂ.17,09,278/– ಗಳನ್ನು ಪಾವತಿಸಲಾಗಿರುವ ಕೆಲವು ವೋಚರ್‌ಗಳಲ್ಲಿ ಟಿನ್ ನಂಬರ್, ತ್ರಿಪ್ರತಿಯಲ್ಲಿ ಬಿಲ್ ಸಲ್ಲಿಸದಿರುವುದು, ಬಿಲ್ಲಿನ ಹಿಂಬದಿಯಲ್ಲಿ ಘೋಷಣೆ ಇಲ್ಲದಿರುವುದು, ಜಿ.ಎಸ್.ಟಿ, ಬಿಲ್ಲು ನಂಬರ್, ಫೋನ್ ನಂಬರ್, ಕ್ರೆಡಿಟ್/ ಕಾಶ್ ಬಿಲ್ ಇತ್ಯಾದಿ ವಿವರಗಳು ಇಲ್ಲದಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ. ಆದ್ದರಿಂದ ಕೆಲವು ಬಿಲ್ಲುಗಳಲ್ಲಿ ಅವಶ್ಯ ಮಾಹಿತಿ ಹಾಗೂ ದೃಢೀಕರಣಗಳು ಇಲ್ಲದಿರುವುದರಿಂದ ಇವುಗಳನ್ನು ಅಸಹಜ ವೋಚರ್ ಎಂದು ಪರಿಗಣಿಸಲಾಗಿದೆ. ಈ ಸಂಬಂಧವಾಗಿ ಲೆಕ್ಕತಪಾಸಣೆ ವಿಚಾರಣೆ ಸಂಖ್ಯೆ: 75/2018–19 ದಿನಾಂಕ:27.12.2018 ರಂದು ಜಾರಿ ಮಾಡಲಾಗಿ ಉತ್ತರ ಸಲ್ಲಿಸಲಾಗಿದ್ದು, ಅದರಲ್ಲಿ ರೂ.93,980/–ಕ್ಕೆ ಒದಗಿಸಿದ ಉತ್ತರವು ಸಮಂಜಸವಾಗಿಲ್ಲದಿರುವುದರಿಂದ **ಆಕ್ಷೇಪಣೆಗೆ ಸೂಚಿಸಲಾಗಿದೆ**. ವೋಚರ್‌ಗಳ ವಿವರಗಳನ್ನು ಅನುಬಂಧ–7 ರಲ್ಲಿ ವಿವರಿಸಲಾಗಿದೆ. | ವಿವರಗಳನ್ನು ಮುಂದಿನ ಲೆಕ್ಕ ತಪಾಸಣಾ ವೇಳೆ ಒದಗಿಸಲಾಗುವುದು. |
| 20 | **ಹೊಸ ವಾಹನಗಳ ಖರೀದಿಗೆ ಸಂಬಂಧಿಸಿದಂತೆ ಸರ್ಕಾರದ ಅನುಮತಿ ಪತ್ರ ಹಾಗೂ ಸಿಂಡಿಕೇಟ್ ನಿರ್ಣಯದ ನಡವಳಿ ಪ್ರತಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು :**<br>2016-17ನೇ ಸಾಲಿನ ವಾರ್ಷಿಕ ಲೆಕ್ಕಪತ್ರದಲ್ಲಿನ ಲೆಕ್ಕಶೀರ್ಷಿಕೆ ಸಂಖ್ಯೆ: 1433 ರಲ್ಲಿ ದಾಖಲಿಸಿರುವಂತೆ ಹಾಗೂ ಹಾಜರುಪಡಿಸಲಾದ ವೋಚರ್‌ಗಳ ಆಧಾರದಂತೆ ಮೂರು ಹೊಸ ವಾಹನಗಳ ಖರೀದಿಗೆಂದು ಒಟ್ಟು ರೂ.33,40,000/-ಗಳನ್ನು ('ಮಹೀಂದ್ರ XUV 500'- 1 X 14,80,000/- ಹಾಗೂ 'ಮಹೀಂದ್ರ TUV 300' -2 X 9,30,000/-) ವೆಚ್ಚ ಮಾಡಲಾಗಿದ್ದು, ಈ ವಾಹನಗಳ ಖರೀದಿ ಸಂಬಂಧ ಸಿಂಡಿಕೇಟ್ ತೀರ್ಮಾನ ನಡವಳಿ ಪ್ರತಿ ಹಾಗೂ ರಾಜ್ಯ ಸರ್ಕಾರದ ಆರ್ಥಿಕ ಇಲಾಖೆಯಿಂದ ಅನುಮತಿ/ ಅನುಮೋದನೆ ಪಡೆದಿರುವ ಬಗೆಗಿನ ದಾಖಲೆ ಪತ್ರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಕೋರಿ ಆಡಿಟ್ ವಿಚಾರಣಾ ಪತ್ರ ಸಂಖ್ಯೆ:132/2018-19 ದಿನಾಂಕ:28.01.2019 ರಂದು ಜಾರಿ ಮಾಡಲಾಗಿತ್ತು. ಅದಕ್ಕೆ ನೀಡಲಾದ ಅನುಸರಣಾ ವರದಿ ಹಾಗೂ ಹಾಜರುಪಡಿಸಲಾದ ದಾಖಲೆ ಪತ್ರಗಳು ಅಸಮಂಜಸ ಹಾಗೂ ಅಸಮರ್ಪಕವಾಗಿರುವುದರಿಂದ ವಾಹನಗಳ ಖರೀದಿಗೆ ಸಿಂಡಿಕೇಟ್ ನಿರ್ಣಯ ಹಾಗೂ ಸರ್ಕಾರದಿಂದ ಪಡೆದ ಅನುಮೋದನೆ ಪತ್ರವನ್ನು ಹಾಜರುಪಡಿಸುವವರೆಗೆ ಸದರಿ ವಾಹನಗಳ ಒಟ್ಟು ಖರೀದಿ ಮೊತ್ತ ರೂ.33,40,000/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. | ಹೊಸ ವಾಹನ ಖರೀದಿ ಬಗ್ಗೆ ಘಟನೋತ್ತರ ಅನುಮೋದನೆ ನೀಡುವ ಬಗ್ಗೆ ಸರಕಾರಕ್ಕೆ ಈ ಕಚೇರಿ ಪತ್ರ ಸಂ.ಮಂ.ವಿ/ಆಡಳಿತ /ವಾಹನ ಖರೀದಿ/2019-20/ ಬಿ3 ದಿನಾಂಕ 31.08.2019ರಂದು ಪತ್ರ ಬರೆಯಲಾಗಿದೆ. ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ. |

| | | |
|---|---|---|
| 21 | 21.<u>ವಾಹನಗಳಿಗೆ ಖರೀದಿಸಲಾದ ಇಂಧನ ಮತ್ತು ವಾಹನಗಳ ದುರಸ್ಥಿಗಳಿಗೆ ಸಂಬಂಧಪಟ್ಟಂತೆ ಲಾಗ್ ಪುಸ್ತಕಗಳನ್ನು ಹಾಜರುಪಡಿಸದಿರುವುದು</u><br>ಮಂಗಳೂರು ವಿಶ್ವವಿದ್ಯಾನಿಲಯ ಆಡಳಿತ ವ್ಯಾಪ್ತಿಗೆ ಒಳಪಡುವ ವಾಹನಗಳಿಗೆ ಸಂಬಂಧಪಟ್ಟಂತೆ 2016-17ನೇ ಸಾಲಿಗೆ ಖರೀದಿಸಲಾಗಿರುವ ಇಂಧನ ಖರೀದಿ ಮತ್ತು ವಾಹನಗಳ ದುರಸ್ಥಿಗಳಿಗೆ ಸಂಬಂಧಪಟ್ಟಂತೆ ವಾಹನಗಳ ಲಾಗ್ ಪುಸ್ತಕಗಳೊಂದಿಗೆ ಪೂರಕ ದಾಖಲಾತಿಗಳನ್ನು ಹಾಜರುಪಡಿಸಲು ಕೋರಿ ಲೆಕ್ಕಪರಿಶೋಧನೆ ವಿಚಾರಣೆ ಸಂಖ್ಯೆ:13/18-19 ದಿ:14.11.2018 ರಂದು ಮತ್ತು ವಿಚಾರಣೆ ಸಂಖ್ಯೆ:117/18-19 ದಿ:17.01.2019 ರ ದಿನಗಳಲ್ಲಿ ನೀಡಲಾಗಿ, ಈ ವಿಚಾರಣೆಗಳಿಗೆ ಪ್ರತಿಯಾಗಿ ಕೇವಲ ಕೆಲವೇ ಕೆಲವು ಇಂಧನ ಖರೀದಿಗಳಿಗೆ ಸಂಬಂಧಪಟ್ಟಂತೆ ಹಾಜರುಪಡಿಸಲಾದ ಲಾಗ್ ಪುಸ್ತಕಗಳನ್ನು ಪರಿಶೀಲಿಸಲಾಯಿತು, ಹಾಜರುಪಡಿಸದೇ ಇರುವ ಲಾಗ್‌ಪುಸ್ತಕಗಳ ಬಗ್ಗೆ ಪುನಃ ಲೆಕ್ಕತಪಾಸಣೆ ವಿಚಾರಣೆ ಸಂಖ್ಯೆ: 129/18-19 ದಿನಾಂಕ:24.01.2019 ರ ಮೂಲಕ ತಿಳಿಸಿ, ಬಾಕಿ ಉಳಿದ ಬಿಲ್ಲುಗಳನ್ನು ತಪಾಸಣೆಗೆ ಹಾಜರುಪಡಿಸಲು ಕೋರಲಾಯಿತು. ಆದರೂ ತಪಾಸಣೆ ಮುಕ್ತಾಯ ಹಂತ ತಲುಪಿದರು ಸಹ ತಪಾಸಣೆಗೆ ಬಾಕಿ ಉಳಿದ ಇಂಧನ ಖರೀದಿ ಬಿಲ್ಲುಗಳನ್ನು ಮತ್ತು ದುರಸ್ಥಿ ವಿವರಗಳಿಗೆ ಸಂಬಂಧಪಟ್ಟಂತೆ ಲಾಗ್ ಪುಸ್ತಕಗಳನ್ನು ಬಿಲ್ಲುಗಳೊಂದಿಗೆ ತಪಾಸಣೆಗೆ ಹಾಜರುಪಡಿಸದಿರುವುದು ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ 174 ಹಾಗೂ ಅದರಡಿಯಲ್ಲಿ ಉಪ ಅನುಚ್ಛೇದಗಳ ಮತ್ತು ಕರ್ನಾಟಕ ಸಾದಿಲ್ವಾರು ಕೈಪಿಡಿ ವಿಶೇಷ ನಿಯಮಗಳು 55(40) ಗಳನ್ನು ಉಲ್ಲಂಘಿಸಿರುವುದರಿಂದ, 2016-17ನೇ ಸಾಲಿನಲ್ಲಿ ವಿವಿಧ ಲೆಕ್ಕಶೀರ್ಷಿಕೆಗಳಲ್ಲಿ ಇಂಧನ ಖರೀದಿ ಮತ್ತು ದುರಸ್ಥಿಗಳಿಗೆ ಸಂಬಂಧಪಟ್ಟಂತೆ ತಪಾಸಣೆಗೆ ಹಾಜರುಪಡಿಸಲಾದ ಕೆಲವು ಮಾಹೆಗಳ ವೋಚರ್ಸ್‌ಗಳನ್ನು ಪರಿಶೀಲಿಸಿರುವುದನ್ನು ಹೊರತುಪಡಿಸಿ, ಹಾಜರುಪಡಿಸದೆ ಇರುವ ಬಿಲ್ಲುಗಳ ವಿವರಗಳನ್ನು <u>ಅನುಬಂಧ-8ರಲ್ಲಿ</u> ವಿವರಿಸಲಾಗಿರುವಂತೆ ಒಟ್ಟು ಖರೀದಿ ಮೊತ್ತ ರೂ.34,25,443/- ಗಳನ್ನು ಲಾಗ್ ಪುಸ್ತಕಗಳನ್ನು ಹಾಜರುಪಡಿಸುವವರೆಗೆ ಆಕ್ಷೇಪಿಸಿದೆ. | ಎಲ್ಲಾ ವಾಹನಗಳ ಲಾಗ್ ಪುಸ್ತಕಗಳನ್ನು ಹಾಜರುಪಡಿಸಲಾಗಿದೆ. ಅನುಬಂಧದಲ್ಲಿ ನೀಡಲಾಗಿರುವ ಎಲ್ಲಾ ವೋಚರ್‌ಗಳ ವಿವರಗಳನ್ನು ಮುಂದಿನ ಲೆಕ್ಕತನಿಖೆ ವೇಳೆ ಹಾಜರುಪಡಿಸಲಾಗುವುದು. |
| 22 | <u>ಟೆಂಡರ್ ಕರೆಯದೇ ವಿಶ್ವವಿದ್ಯಾನಿಲಯದ 2016-17ನೇ ಸಾಲಿನ ಕ್ಯಾಲೆಂಡರ್ ಹಾಗೂ ಡೈರಿ ಮುದ್ರಣ ಮಾಡಿಸಿರುವ ಬಗ್ಗೆ :</u><br>ಮಂಗಳೂರು ವಿಶ್ವವಿದ್ಯಾನಿಲಯದ 2016-17ನೇ ಸಾಲಿನ ಕ್ಯಾಲೆಂಡರ್ ಹಾಗೂ ಡೈರಿ ಮುದ್ರಣ ಸಂಬಂಧ ಒಟ್ಟು ರೂ.3,28,016/-ಗಳ ವೆಚ್ಚವನ್ನು ಭರಿಸಲಾಗಿದ್ದು, ಈ ಖರೀದಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ನಿಯಮ-1999 ರಲ್ಲಿ ಸೂಚಿಸಿರುವಂತೆ 1.00 ಲಕ್ಷ ಮೇಲ್ಪಟ್ಟಲ್ಲಿ ಟೆಂಡರ್ ಕೈಗೊಳ್ಳಬೇಕಾಗಿರುತ್ತದೆ. ಆದರೆ, ಇಲ್ಲಿ ಟೆಂಡರ್ ಕರೆಯದೇ ದರಪಟ್ಟಿಯ ಮೂಲಕ ರೂ.1.00 ಲಕ್ಷಕ್ಕೂ ಮೀರದಂತೆ ಬಿಡಿ-ಬಿಡಿಯಾಗಿ ಕ್ಯಾಲೆಂಡರ್ ಹಾಗೂ ಡೈರಿಗಳನ್ನು ಖರೀದಿಸಿರುವುದು ಕಂಡು ಬಂದಿರುತ್ತದೆ. ಇದು ಕೆ.ಟಿ.ಪಿ.ಪಿ ನಿಯಮ-1999 ರ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಸ್ಪಷ್ಟೀಕರಣವನ್ನು ನೀಡುವಂತೆ ವಿಚಾರಣಾ ಪತ್ರ ಸಂಖ್ಯೆ:111/2018-19 ದಿ:09.01.2019 ರಲ್ಲಿ ಜಾರಿ ಮಾಡಲಾಗಿತ್ತು, ಒದಗಿಸಿ ಕೋರಲಾದ ವಿವರಣೆಯು ಸಮರ್ಥನೀಯವಾಗಿಲ್ಲದ ಕಾರಣ ಸದರಿ ಮೊತ್ತ ರೂ.3,28,016/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರವನ್ನು ಅನುಬಂಧ-9ರಲ್ಲಿ ಒದಗಿಸಲಾಗಿದೆ. | ವಿಶ್ವವಿದ್ಯಾನಿಲಯದ ಡೈರಿ ಮತ್ತು ಕ್ಯಾಲೆಂಡರ್‌ಗಳನ್ನು ತುರ್ತಾಗಿ ಮುದ್ರಣ ಮಾಡಬೇಕಾಗಿದ್ದುದರಿಂದ ದರಪಟ್ಟಿ ಕರೆದು ಕನಿಷ್ಠ ದರ ನಮೂದಿಸಿದ ಸಂಸ್ಥೆಯಿಂದ ಮುದ್ರಣ ಮಾಡಲಾಗಿದೆ. ಈ ವರ್ಷದಿಂದ ಟೆಂಡರ್ ಕರೆದು ಮುದ್ರಣ ಮಾಡಲಾಗಿದೆ. ಆದುದರಿಂದ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ. |
| 23 | <u>**Digital University Information Management System (DUIMS)**ಈ ತಂತ್ರಜ್ಞಾನವನ್ನು ವಿಶ್ವವಿದ್ಯಾನಿಲಯಕ್ಕೆ ಅಳವಡಿಸಿರುವ ವೆಚ್ಚಕ್ಕೆ ಸಂಬಂಧಪಟ್ಟಂತೆ ಟೆಂಡರ್ ಕಡತವನ್ನು ಹಾಜರುಪಡಿಸದಿರುವುದು :</u><br>2016-17ನೇ ಸಾಲಿನ ವೋಚರ್ಸ್‌ಗಳ ಪರಿಶೀಲನೆಯಲ್ಲಿ ವೋಚರ್ ಸಂಖ್ಯೆ:84 ದಿನಾಂಕ:02.04.2016 ರಲ್ಲಿ ಧನಾದೇಶ ಸಂಖ್ಯೆ:066296 ದಿ:04.04.2016 ಹಾಗೂ ಮತ್ತೊಂದು ಧನಾದೇಶದ ಮೂಲಕ M/S Qventures pvt ltd ಇವರಿಗೆ Digital University Information Management System (DUIMS) ಎಂಬ ತಂತ್ರಜ್ಞಾನ ಅಳವಡಿಕೆ ಸಂಬಂಧ 2016-17ನೇ ಸಾಲಿನಲ್ಲಿ ಒಟ್ಟಾರೆ ರೂ.34,50,478 ಹಾಗೂ 2015-16ನೇ ಸಾಲಿನಲ್ಲಿ ರೂ.16,50,000/-ಗಳು ಒಟ್ಟು ರೂ.51,00,478/-ಗಳನ್ನು ಪಾವತಿ ಮಾಡಲಾಗಿರುವುದು ಪಾವತಿ ವಿವರಗಳನ್ನು <u>ಅನುಬಂಧ-10 ರಲ್ಲಿ</u> ವರದಿಗೆ ಲಗತ್ತಿಸಿದೆ. | ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ವೆಬ್ ಪೋರ್ಟಲ್ ಪ್ರಾಜೆಕ್ಟ್ ಅನುಷ್ಠಾನಗೊಳಿಸಲು ಟೆಂಡರ್ ಮುಖಾಂತರ ದರಪಟ್ಟಿ ಆಹ್ವಾನಿಸಿ ಅದರಲ್ಲಿ ಎಲ್1 ಸಂಸ್ಥೆಯಾದ Q venture Pvt. Ltd. ಇವರಿಗೆ ರೂ.33,00,000/– ಗಳಿಗೆ ಆದೇಶ ನೀಡಲಾಗಿರುತ್ತದೆ. ಟೆಂಡರ್ ಪ್ರಕಾರ Display size 46” ಮತ್ತು KIOSK size 19” ಆಗಿದ್ದು ವೆಬ್ ಪೋರ್ಟಲ್ ಅನುಷ್ಠಾನ ಸಂದರ್ಭದಲ್ಲಿ ಇದು ತುಂಬಾ ಚಿಕ್ಕದಾದುದರಿಂದ ಸದ್ರಿ ವೆಬ್ ಪೋರ್ಟಲ್‌ಗೆ ಹೊಂದಿಕೊಳ್ಳುವ ದೊಡ್ಡ ಗಾತ್ರದ Display ಹಾಗೂ kiosk screen ನ್ನು ಬದಲಾವಣೆ ಮಾಡಲು ಮಾನ್ಯ ಕುಲಪತಿಗಳು |

| | | |
|---|---|---|
| | ಈ ತಂತ್ರಜ್ಞಾನ ಅಳವಡಿಕೆ ಕುರಿತು ತಪಾಸಣೆಗೆ ಹಾಜರುಪಡಿಸಲಾದ ಮಾಹಿತಿಗಳಿಗೆ ರೂ.33,00,000/-ಗಳಿಗೆ M/S Qventures pvt ltd ಇವರಿಗೆ ಟೆಂಡರ್ ಎಲ್-1 ಒಪ್ಪಿಗೆಯಾಗಿರುವುದು ಕಂಡು ಬಂದಿರುತ್ತದೆ. ಆದರೆ ಅನುಬಂಧ-10 ರಲ್ಲಿ ಒದಗಿಸಲಾದ ಪಾವತಿ ವಿವರಗಳಂತೆ, ಒಟ್ಟು ರೂ.51,00,478/-ಗಳು ಪಾವತಿಯಾಗಿರುವುದರಿಂದ ಟೆಂಡರ್ ಒಪ್ಪಿಗೆ ಮೊತ್ತಕ್ಕೂ ಮತ್ತು ವೆಚ್ಚವಾಗಿರುವ ಮೊತ್ತಕ್ಕೂ ಸುಮಾರು ರೂ.18,00,475/-ಗಳು ಸದರಿ ತಂತ್ರಜ್ಞಾನ ಅಳವಡಿಕೆಗೆ ಟೆಂಡರ್ ಮೊತ್ತಕ್ಕಿಂತ ಹೆಚ್ಚುವರಿಯಾಗಿ ವೆಚ್ಚ ಭರಿಸಲಾಗಿರುವ ಮೊತ್ತಕ್ಕೆ ಕಾರಣಗಳನ್ನು ತಪಾಸಣೆಯಲ್ಲಿ ತಿಳಿದುಕೊಳ್ಳುವ ಉದ್ದೇಶದಿಂದ ಟೆಂಡರ್ ಕಡತ ಹಾಗೂ ಕರಾರು ಪತ್ರ ಮುಂತಾದ ಪೂರಕ ದಾಖಲಾತಿಗಳನ್ನು ತಪಾಸಣೆ ಒದಗಿಸಲು ಕೋರಿ ಲೆಕ್ಕತಪಾಸಣೆ ವಿಚಾರಣೆ ಸಂಖ್ಯೆ:43 ದಿ:11.12.2018 ರಲ್ಲಿ ಜಾರಿ ಮಾಡಲಾಗಿತ್ತು. ಆದರೆ ತಪಾಸಣೆ ಮುಗಿಯುವ ಅವಧಿಯವರೆಗೂ ಸಹ ಟೆಂಡರ್ ಕಡತ ಮತ್ತು ಪೂರಕ ದಾಖಲಾತಿಗಳನ್ನು ಹಾಜರುಪಡಿಸದೆ ಇರುವುದರಿಂದ ಈ ಖರೀದಿ ಪ್ರಕ್ರಿಯೆಯಲ್ಲಿ ಹಣದುರುಪಯೋಗವಾಗಿರುವ ಸಾಧ್ಯತೆಗಳನ್ನು ತಳ್ಳಿ ಹಾಕುವಂತಿಲ್ಲದಕಾರಣಸದರಿ ವೆಚ್ಚದ ಒಟ್ಟು ಮೊತ್ತ ರೂ.51,00,478/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ಈ ಬಗ್ಗೆ ಆಡಳಿತಾತ್ಮಕವಾಗಿ ಪರಿಶೀಲಿಸಿ, ಭರಿಸಲಾದ ವೆಚ್ಚವು ಸಮರ್ಥನೀಯವೇ ಎನ್ನುವುದನ್ನು ಖಚಿತಪಡಿಸಿಕೊಂಡು ಅನುಸರಣ ವರದಿಯನ್ನು ಸಲ್ಲಿಸಲು ಸೂಚಿಸಿದೆ. | ಸೂಚಿಸಿದ್ದು ಮತ್ತು ದಿನಾಂಕ 10.03.2016ರ ಸಿಂಡಿಕೇಟ್ ಸಭೆಯ ನಿರ್ಣಯದಂತೆ Display size 55 ಮತ್ತುKIOSK size 23ಗೆ ಹೆಚ್ಚಿಸಲಾಗಿದೆ. ಸದ್ರಿ ಸಂಸ್ಥೆಯು ಸರಬರಾಜು ಮಾಡಿರುವ ವೆಬ್ ಪೋರ್ಟಲ್‌ಗೆ ಅದೇ ಸಂಸ್ಥೆಯು ಸಲಕರಣೆಗಳನ್ನು ಅಳವಡಿಸಬೇಕಾಗಿರುವುದರಿಂದ ಹೆಚ್ಚುವರಿ ವೆಚ್ಚ ಮಾಡಿ ಅಳವಡಿಸಲಾಗಿದೆ. ಈ ಸಂಬಂಧ ಹೆಚ್ಚುವರಿ ವೆಚ್ಚ ರೂ. 11,41,972/–ನ್ನು ವಿಶ್ವವಿದ್ಯಾಲಯ ಅಧಿನಿಯಮ 2000 ಸೆಕ್ಷನ್ 29(2) (ಐ)ರ ಅವಕಾಶದಂತೆ ದಿನಾಂಕ 10.03.2016 ರ ಸಿಂಡಿಕೇಟ್ ಸಭೆಯ ನಿರ್ಣಯದಂತೆ ಪಾವತಿಸಲಾಗಿದೆ. ಈ ಪಾವತಿಯು ಸಿಂಡಿಕೇಟ್ ಸಭೆಯ ಅನುಮೋದನೆಯಂತೆ ಮಾಡಿರುವುದರಿಂದ ಸದರಿ ಆಕ್ಷೇಪಣೆಯನ್ನು ಕೈ ಬಿಡುವಂತೆ ಕೋರಲಾಗಿದೆ.<br>ವೆಬ್ ಪೋರ್ಟಲ್ ಅನುಷ್ಠಾನದ ನಂತರ ವಿಶ್ವವಿದ್ಯಾನಿಲಯದಲ್ಲಿ ಸರ್ವರ್ ಕೊರತೆ ಇದ್ದುದರಿಂದ web portal ಗೆ ಹೊಂದಿಕೊಳ್ಳುವಂತಹ 2 ಸರ್ವರ್‌ಗಳನ್ನು ಸಿಂಡಿಕೇಟ್ ಸಭೆಯ ನಿರ್ಣಯದಂತೆ ಪೂರೈಕೆದಾರರಿಂದ ಮಾಸಿಕ ರೂ.70,000/– +ತೆರಿಗೆಯಂತೆ ಬಾಡಿಗೆಗೆ ಪಡೆಯಲಾಗಿರುತ್ತದೆ. ಸರ್ವರ್ ವೆಚ್ಚವು ಮೂಲ ಟೆಂಡರ್‌ನಲ್ಲಿ ಒಳಗೊಂಡಿರುವುದಿಲ್ಲ. ಸರ್ವರ್ ಬಾಡಿಗೆ ವೆಚ್ಚವನ್ನು ಕುಲಪತಿಯವರ ಅನುಮೋದನೆ ಮೇರೆಗೆ ಮಾಡಲಾಗಿದೆ. ಈ ಮೇಲಿನ ಎಲ್ಲಾ ವೆಚ್ಚಗಳೂ ಸೇರಿ ರೂ.51,00,478/ ಪಾವತಿಯಾಗಿರುತ್ತದೆ. ಮೇಲ್ಕಂಡ ಕಾರಣಗಳಿಂದಾಗಿ ಹೆಚ್ಚುವರಿ ಪಾವತಿ ಮಾಡಲಾಗಿದೆ. ಆಕ್ಷೇಪಣೆಯನ್ನು ಕೈಬಿಡಲು ಕೋರಲಾಗಿದೆ. |
| 24 | <u>ಹೊರಗುತ್ತಿಗೆಯ ಮಾನವ ಸಂಪನ್ಮೂಲ ಸೇವೆಯನ್ನು ಮುಂದುವರಿಸಿರುವ ಬಗ್ಗೆ :</u><br>2014-15ನೇ ಸಾಲಿನಲ್ಲಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ M/S Cannon Detective & Securtity Services, Bangalore ರವರಿಂದ ಹೊರಗುತ್ತಿಗೆಯ ಮೂಲಕ ಮಾನವ ಸಂಪನ್ಮೂಲ ಸೇವೆಯನ್ನು ಕೆ.ಟಿ.ಪಿ.ಪಿ-1999 ನಿಯಮಾನುಸಾರ ಪಡೆಯಲಾಗಿತ್ತು.ಟೆಂಡರ್ ದಸ್ತಾವೇಜುಗಳನ್ನು ಪರಿಶೀಲಿಸಲಾಗಿ ಸದರಿ ಸಂಸ್ಥೆಗೆ ಒಂದು ವರ್ಷದ ಅವಧಿಗೆ ಸೇವೆಯನ್ನು ಒದಗಿಸಲು ಅವಕಾಶವಿರುತ್ತದೆ. ಭದ್ರತಾ ಸೇವೆ, ಗ್ರೂಪ್-ಡಿ ಸೇವೆಯೆಂದು ಹುದ್ದೆವಾರು ವರ್ಗೀಕರಿಸಿ, ಅವರುಗಳ ಸೇವೆಯನ್ನು ಮಾಹೆವಾರು ವಿಭಜಿಸಿ, ಪ್ರತೀ ದ್ವೈಮಾಸಿಕವಾಗಿ ಪರಿಷ್ಕರಿಸಿ ಆದೇಶಿಸುತ್ತಿರುವುದು ಲೆಕ್ಕಪರಿಶೋಧನೆಯಲ್ಲಿ ಕಂಡು ಬಂದಿರುತ್ತದೆ. ಸದರಿ ಸಂಸ್ಥೆಯೇ 2014-15ನೇ ಸಾಲಿನಿಂದಲೂ ಮುಂದುವರಿಯುವಂತೆ ಅವಕಾಶ ಮಾಡಿಕೊಟ್ಟಿರುವುದು ಕೆ.ಟಿ.ಪಿ.ಪಿ ನಿಯಮಗಳ ಉಲ್ಲಂಘನೆಯಾಗಿರುತ್ತದೆ. ವಿಚಾರಣಾ ಪತ್ರ ಸಂಖ್ಯೆ:160/2018-19 ದಿ:31.01.2019 ರಂದು ಜಾರಿ ಮಾಡಲಾಗಿತ್ತು. ಈ ಸಂಬಂಧ ನೀಡಿರುವ ಉತ್ತರವು ಪರಿಗಣಿಸಲು ಅರ್ಹವಿಲ್ಲದ ಕಾರಣ 2016-17ನೇ ಸಾಲಿನಲ್ಲಿ M/S Cannon Detective & Securtity Services, Bangalore ರವರಿಗೆ ಪಾವತಿಸಿರುವ ಮೊತ್ತ ರೂ.2,28,11,103/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರಗಳನ್ನು <u>ಅನುಬಂಧ-11 ರಲ್ಲಿ</u> ಒದಗಿಸಲಾಗಿದೆ. | ಹೊರಗುತ್ತಿಗೆಯ ಸಂಪನ್ಮೂಲ ಸೇವೆಯನ್ನು ಪಡೆಯಲು 2014–15ರಲ್ಲಿ ಟೆಂಡರ್ ಕರೆದು ಕರಾರು ಮಾಡಿಕೊಂಡು ದಿನಾಂಕ 01.01.2015ರಿಂದ 31.12.2015ರ ವರೆಗೆ ಸೇವೆಗಳನ್ನು ಪಡೆಯಲಾಗಿತ್ತು. ಅದರ ನಂತರ ಕಾರಣಾಂತರದಿಂದ ಹೊಸ ಟೆಂಡರ್ ಕರೆಯದೇ ಚಾಲ್ತಿಯಲ್ಲಿದ್ದ ಗುತ್ತಿಗೆದಾರರನ್ನೇ ಮುಂದುವರೆಸಲಾಗಿದೆ. ಇದರಿಂದ ವಿವಿಗೆ ಲಾಭದಾಯಕವಾಗಿರುತ್ತದೆ. ಆದುದರಿಂದ ಆಕ್ಷೇಪಣೆಯನ್ನು ಕೈಬಿಡಲು ಕೋರಲಾಗಿದೆ. |

<table>
<tr>
<td>25</td>
<td>
<u>ಮೆ. ಕೆನಾನ್ ಡಿಟೆಕ್ಟೀವ್ & ಸೆಕ್ಯೂರಿಟಿ ಸರ್ವಿಸಸ್, ಬೆಂಗಳೂರು ರವರಿಗೆ ಪರಿಷ್ಕೃತ ವೇತನವನ್ನು ಪಾವತಿಸಿರುವ ಸಂಬಂಧ ಪೂರಕ ಲೆಕ್ಕಪತ್ರ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು :</u><br>
ವೋಚರ್ ಸಂಖ್ಯೆ: 3350/ ದಿ:01.09.2016 ರಲ್ಲಿ CANONDETECTIVE & SECURITY SERVICE ಬೆಂಗಳೂರು ರವರ ಬಿಲ್ಲು ಸಂಖ್ಯೆ:5374/ ದಿ:26.08.2016 ರಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಭದ್ರತಾ ಸಿಬ್ಬಂದಿ, ಗ್ರೂಪ್-ಡಿ ಸಿಬ್ಬಂದಿ ಮತ್ತು ಶುಚಿತ್ವ ಸಿಬ್ಬಂದಿಗಳ ಕನಿಷ್ಠ ವೇತನವನ್ನು ಪರಿಷ್ಕರಿಸಿ, ದಿನಾಂಕ:01.04.2015 ರಿಂದ ದಿ:31.07.2016 ರವರೆಗೆ ಒಟ್ಟು 16 ತಿಂಗಳ ಪರಿಷ್ಕೃತ ವೇತನ ಒಟ್ಟು ರೂ.24,13,578/-ಗಳನ್ನು ಧನಾದೇಶ ಸಂಖ್ಯೆ: 148136 ದಿನಾಂಕ:01.09.2016 ರಲ್ಲಿ ಮೇಲ್ಕಂಡ ಸಂಸ್ಥೆಯವರಿಗೆ ಪಾವತಿಸಿದೆ.<br>
ಈ ಪಾವತಿ ಸಂಬಂಧ, ಸರ್ಕಾರದ ಪರಿಷ್ಕೃತ ಆದೇಶದ ಮೂಲ ಪ್ರತಿಗಳು, ದಿನಾಂಕ:01.04.2015 ರಿಂದ ದಿ:31.07.2016 ರವರೆಗಿನ ಒಟ್ಟು 16 ತಿಂಗಳ ವೋಚರ್‌ಗಳು, ಈ ಹಿಂದೆ ಪಾವತಿಸಲಾದ ದರಗಳಿಗೆ ಸಂಬಂಧಿಸಿದಂತೆ, ಸರ್ಕಾರದ ಮತ್ತು ವಿಶ್ವವಿದ್ಯಾನಿಲಯದ ಆದೇಶದ ಪ್ರತಿಗಳು ಹಾಗೂ ಸಂಸ್ಥೆಯೊಂದಿಗೆ ಮಾಡಿಕೊಂಡ ಕರಾರು ಒಪ್ಪಂದಗಳ ಮೂಲ ಲೆಕ್ಕಪತ್ರ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.<br>
ಮೇಲ್ಕಂಡ ಎಲ್ಲಾ ಲೆಕ್ಕಪತ್ರ ದಾಖಲೆಗಳನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ: 100/2018-19 ನ್ನು ದಿನಾಂಕ:02.01.2019 ರಂದು ನೀಡದ್ದರೂ ಸಹ ಹಾಜರುಪಡಿಸದ ಕಾರಣ ಪಾವತಿ ಒಟ್ಟು ಮೊತ್ತ ರೂ.24,13,578/-ಗಳನ್ನು ಆಕ್ಷೇಪಣೆಗೆ ಸೂಚಿಸಲಾಗಿದೆ.
</td>
<td>
ಕರ್ನಾಟಕ ಸರಕಾರದ ಅಧಿಸೂಚನೆ ಸಂಖ್ಯೆ ಕಾ.ಇ.123ಎಲ್ಡ್ ಡಬ್ಲ್ಯೂಎ 2015 ದಿನಾಂಕ 29.02.2016ರಂತೆ ಭದ್ರತಾ ಏಜೆನ್ಸಿ ಉದ್ದಿಮೆಯಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ದಿನಾಂಕ 01.01.2016ರಿಂದ ಅನ್ವಯವಾಗುವಂತೆ ಕನಿಷ್ಠ ವೇತನ ನಿಗದಿಪಡಿಸಿರುವುದರಿಂದ ಕುಲಸಚಿವರ ಅಧಿಕೃತ ಜ್ಞಾಪನದ ಸಂಖ್ಯೆ ಮವಿ. ಸಾವಿ. ಬಿಲ್ಲು 65 2016-16/ಜಿ ದಿನಾಂಕ 26.08.2016 ರಲ್ಲಿ ಕನಿಷ್ಠ ವೇತನವನ್ನು ನಿಗದಿಪಡಿಸಿದ್ದು ಅದರಂತೆ ಪಾವತಿ ಮಾಡಲಾಗಿದೆ. ಲೆಕ್ಕ ಪತ್ರಗಳನ್ನು ಮುಂದಿನ ಲೆಕ್ಕ ತಪಾಸಣೆ ವೇಳೆ ಹಾಜರು ಪಡಿಸಲಾಗುವುದು.<br>
ಆಕ್ಷೇಪಣೆಯನ್ನು ಕೈ ಬಿಡುವಂತೆ ಕೋರಲಾಗಿದೆ.
</td>
</tr>
<tr>
<td>26</td>
<td>
<u>ಆದಾಯ ತೆರಿಗೆ ಕಟಾಯಿಸದೇ ಸರ್ವರ್ ಬಾಡಿಗೆ ಬಿಲ್ಲು ಪಾವತಿಸಿರುವುದು :</u><br>
2016-17ನೇ ಸಾಲಿನಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ web portal ಪ್ರಾಜೆಕ್ಟ್‌ಗೆ ಬಾಡಿಗೆ ಆಧಾರದಲ್ಲಿ ಸರ್ವರ್ ಸೇವೆಯನ್ನು M/S Q ventures pvt ltd Hydarbad ಇವರಿಂದ ಪಡೆಯಲಾದ ಸಂಬಂಧ ಜಿ.ಆರ್.ಎ ಖಾತೆಯಿಂದ ವೆಚ್ಚ ಭರಿಸಲಾದ ಪಾವತಿ ವೋಚರ್‌ಗಳನ್ನು ಪರಿಶೀಲಿಸಲಾಗಿ ಆದಾಯ ತೆರಿಗೆ ಕಟಾಯಿಸದೆ ಬಿಲ್ಲು ಪಾವತಿಸಿರುವುದು ಕಂಡು ಬಂದಿರುತ್ತದೆ. ಆದಾಯ ತೆರಿಗೆ ಕಾಯ್ದೆ 194 (ಸಿ) ಯಂತೆ ಶೇ 2 ರಂತೆ ಆದಾಯ ತೆರಿಗೆ ಕಟಾಯಿಸಬೇಕಾಗಿದ್ದು, ಅದರಂತೆ ಈ ಸಂಬಂಧ ಪಾವತಿಸಲಾದ ಒಟ್ಟು ಮೊತ್ತ ರೂ.8,86,900/-ಗಳಿಗೆ ಶೇ.2 ರಂತೆ ಆದಾಯ ತೆರಿಗೆ ರೂ.17,738/-ಗಳನ್ನು ಮೇಲಿನ ಸಂಸ್ಥೆಯಿಂದ ವಸೂಲಿಸಿ ಆದಾಯ ತೆರಿಗೆ ಇಲಾಖೆಗೆ ಜಮಾ ಮಾಡಿ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಸೂಚಿಸಿದೆ. ಪಾವತಿ ವಿವರಗಳು ಈ ಕೆಳಕಂಡಂತಿವೆ.
<table>
<tr><th>ಕ್ರ.ಸಂ</th><th>ವೋಚರ್ ಸಂಖ್ಯೆ</th><th>ಚೆಕ್ ಸಂಖ್ಯೆ/ ದಿನಾಂಕ</th><th>ಮೊತ್ತ</th><th>ಷರಾ</th></tr>
<tr><td>1</td><td>2702</td><td>926344/ 01.08.2016</td><td>3,20,600</td><td></td></tr>
<tr><td>2</td><td>3310</td><td>148113/ 01.09.2016</td><td>1,61,000</td><td></td></tr>
<tr><td>3</td><td>5195</td><td>147340/ 01.12.2016</td><td>80,850</td><td></td></tr>
<tr><td>4</td><td>5886</td><td>202957/ 04.01.2017</td><td>80,850</td><td></td></tr>
<tr><td>5</td><td>6470</td><td>878740/ 04.02.2017</td><td>2,43,600</td><td></td></tr>
<tr><td colspan="3">ಒಟ್ಟು</td><td>8,86,900</td><td></td></tr>
</table>
</td>
<td>
ಸದ್ರಿ ಸಂಸ್ಥೆಗೆ ಈ ಕಚೇರಿ ಸಂ ಮವಿ/ಎಫ್ಎಸ್ 2020-21ಎಫ್ 19/306 ದಿನಾಂಕ 10.06.2020ರಲ್ಲಿ ಪತ್ರ ಬರೆಯಲಾಗಿದೆ.
</td>
</tr>
</table>

| | | |
|---|---|---|
| 27 | <u>ಸರಬರಾಜು ಬಿಲ್ಲಿನಲ್ಲಿ (**Supply bill**) ಕಟಾಯಿಸಲಾದ ಮಾರಾಟ ತೆರಿಗೆ ಮೊಬಲಗನ್ನು ಸರಬರಾಜುದಾರರಿಗೆ ಹಿಂದಿರುಗಿಸಿರುವುದು</u><br>2016-17ನೇ ಸಾಲಿನ ಏಪ್ರಿಲ್-2016 ರ ಮಾಹೆಯ ವೋಚರ್ಸ್‌ಗಳನ್ನು ಪರಿಶೀಲಿಸಲಾಗಿ, ವೋಚರ್ ಸಂಖ್ಯೆ:648/ ಧನಾದೇಶ ಸಂಖ್ಯೆ:077206 ದಿನಾಂಕ:28.04.2016 ರನ್ವಯ M/S Lakshmi Systems ದಾವಣಗೆರೆ ಇವರಿಗೆ ಜನರೇಟರ್ಸ್‌ಗಳನ್ನು ಸರಬರಾಜು ಮಾಡಲಾದ ಒಟ್ಟು ಬಿಲ್ಲಿನ ಮೊತ್ತ ರೂ.8,93,250/-ಗಳ ಬಿಲ್ಲಿನಲ್ಲಿ ಶೇ.4 ರಂತೆ ಕಟಾಯಿಸಲಾದ ಮಾರಾಟ ತೆರಿಗೆಯ ಮೊತ್ತ ರೂ.35,730/-ಗಳನ್ನು ಸರಬರಾಜುದಾರರು ಈ ಸರಬರಾಜು ಬಿಲ್ಲಿಗೆ ಸಂಬಂಧಿಸಿದಂತೆ ಈಗಾಗಲೇ ವಾಣಿಜ್ಯ ತೆರಿಗೆ ಇಲಾಖೆಗೆ ಜಮೆ ಮಾಡಿರುತ್ತೇನೆ ಎಂದು ಪೂರಕ ದಾಖಲಾತಿಗಳನ್ನು ಸಲ್ಲಿಸಿ ಸರಬರಾಜು ಬಿಲ್ಲಿನಲ್ಲಿ ಕಟಾಯಿಸಲಾದ ಮೊತ್ತ ರೂ.35,730/-ಗಳನ್ನು ಹಿಂಪಡೆದಿರುತ್ತಾರೆ.<br>ಆದರೆ ಸದರಿ ಸರಬರಾಜುದಾರರ ಬಿಲ್ಲಿನಲ್ಲಿ ವಿಶ್ವವಿದ್ಯಾನಿಲಯದವರು ಕಟಾಯಿಸಿಕೊಳ್ಳಲಾದ ಮಾರಾಟ ತೆರಿಗೆ ಮೊತ್ತ ರೂ.35,730/-ಗಳನ್ನು ವಾಣಿಜ್ಯ ತೆರಿಗೆ ಇಲಾಖೆಗೆ ವಿವಿಧ ಸರಬರಾಜು ಬಿಲ್ಲುಗಳಲ್ಲಿ/ ಕಾಮಗಾರಿ ಬಿಲ್ಲುಗಳಲ್ಲಿ ಕಟಾಯಿಸಲಾದ ಮಾರಾಟ ತೆರಿಗೆ ಮೊಬಲಗುಗಳಿಗೆ ಸಂಬಂಧಪಟ್ಟಂತೆ ಧನಾದೇಶ ಸಂಖ್ಯೆ: 019025 ದಿನಾಂಕ:11.03.2016 ರಲ್ಲಿ ಜಮೆ ಮಾಡಲಾಗಿರುವ ಒಟ್ಟು ರೂ.2,33,540/-ಗಳ ಒಟ್ಟು ಮೊತ್ತದಲ್ಲಿ M/S Lakshmi System ದಾವಣಗೆರೆ ಇವರ ಜನರೇಟರ್ಸ್ ಸರಬರಾಜು ಬಿಲ್ಲಿನಲ್ಲಿ ಕಟಾಯಿಸಲಾದ ಮಾರಾಟತೆರಿಗೆ ಮೊತ್ತ ರೂ.35,730/-ಗಳು ಸಹ ಸೇರಿ ಕೊಂಡಿರುತ್ತದೆ.<br>ಈ ಕಟಾಯಿಸಲಾದ ಮಾರಾಟ ತೆರಿಗೆಯ ಮೊತ್ತವನ್ನು ಮಾರಾಟ ತೆರಿಗೆ ಇಲಾಖೆಗೆ ಜಮಾ ಮಾಡಿರುವುದನ್ನು ಹಣಕಾಸು ಶಾಖೆಯಲ್ಲಿ ಗಮನಿಸದೆ ಮತ್ತು ಸರಬರಾಜುದಾರರಿಗೆ ಕಟಾಯಿಸಲಾದ ಮಾರಾಟ ತೆರಿಗೆಯ ಮೊತ್ತವನ್ನು ಹಿಂದಿರುಗಿಸುವ ಸಂದರ್ಭದಲ್ಲಿ ಕುಲಸಚಿವರ ಆದೇಶವನ್ನು ಸಹ ಪಡೆಯದೇ ನೇರವಾಗಿ ಹಣಕಾಸು ಶಾಖೆಯಿಂದ ಕೇವಲ ಸರಬರಾಜುದಾರರ ಮನವಿಯ ಪತ್ರದ ಆಧಾರದ ಮೇಲೆ ಬಿಲ್ಲಿನಲ್ಲಿ ಕಟಾಯಿಸಲಾದ ಮಾರಾಟ ತೆರಿಗೆಯ ಮೊತ್ತವನ್ನು ಸರಬರಾಜುದಾರರಿಗೆ ಹಿಂದಿರುಗಿಸಿರುವುದರಿಂದ ವಿಶ್ವವಿದ್ಯಾನಿಲಯಕ್ಕೆ ರೂ.35,730/-ಗಳು ಆರ್ಥಿಕ ನಷ್ಟ ಉಂಟಾಗಿರುವುದು ಸ್ಪಷ್ಟವಾಗಿ ಕಂಡು ಬಂದಿರುತ್ತದೆ.<br>ವಾಸ್ತವವಾಗಿ ಸರಬರಾಜು ಬಿಲ್ಲಿನಲ್ಲಿ ಕಟಾಯಿಸಲಾದ ಮಾರಾಟ ತೆರಿಗೆ ಮೊತ್ತವಾಗಲೀ/ ಆದಾಯ ತೆರಿಗೆ ಮೊತ್ತವನ್ನಾಗಲೀ ನೇರವಾಗಿ ಸರಬರಾಜುದಾರರಿಗೆ ಹಿಂದಿರುಗಿಸುವ ನಿಯಮಗಳಿಲ್ಲ ಇದನ್ನು ಸಂಬಂಧಿಸಿದ ಇಲಾಖೆಗೆ ಜಮಾ ಮಾಡಬೇಕಾಗಿರುತ್ತದೆ. ಸರಬರಾಜುದಾರರಿಗೆ ಸರಬರಾಜು ಬಿಲ್ಲಿನಲ್ಲಿ ಕಟಾಯಿಸಿಕೊಳ್ಳಲಾಗಿರುವ ಮಾರಾಟ ತೆರಿಗೆ ಮೊಬಲಗು, ಬಿಲ್ಲಿನ ವಿವರ ಮತ್ತು ಕಟಾಯಿಸಲಾದ ಮಾರಾಟ ತೆರಿಗೆಯನ್ನು ವಾಣಿಜ್ಯ ತೆರಿಗೆ ಇಲಾಖೆಗೆ ಜಮ ಮಾಡಲಾಗಿರುವ ವಿವರಗಳನ್ನು ಮಾತ್ರ ಸರಬರಾಜುದಾರರಿಗೆ ಅರ್ಜಿಯನ್ನು ಪಡೆದು ನೀಡಬೇಕಾಗಿರುತ್ತದೆ. ನಂತರ ಈ ಮಾಹಿತಿಗಳ ಆಧಾರದ ಮೇಲೆ ಸರಬರಾಜುದಾರರು ಮಾರಾಟ ತೆರಿಗೆ ಇಲಾಖೆಗೆ ಪೂರಕ ದಾಖಲಾತಿಗಳನ್ನು ಸಲ್ಲಿಸಿ ಜಮಾ ಮಾಡಲಾದ ಮಾರಾಟ ತೆರಿಗೆಯ ಮೊತ್ತವನ್ನು ಹಿಂಪಡೆಯಬಹುದಾಗಿದೆ.<br>ಆದರೆ ವಿಶ್ವವಿದ್ಯಾನಿಲಯದ ಹಣಕಾಸು ಶಾಖೆಯಲ್ಲಿ ಇದ್ಯಾವುದೇ ಕ್ರಮಗಳನ್ನಾಗಲೀ, ಪಾವತಿ ನಿಯಮಗಳನ್ನಾಗಲೀ ಅನುಸರಿಸದೆ ಮಾರಾಟ ತೆರಿಗೆ ಮೊತ್ತವನ್ನು ಸರಬರಾಜುದಾರರಿಗೆ ಪಾವತಿಸಿ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ನಷ್ಟ ಉಂಟು ಮಾಡಿರುವ ಅಧಿಕಾರಿಗಳು/ ಸಿಬ್ಬಂದಿಯವರ ಮೇಲೆ ಆಡಳಿತಾತ್ಮಕ ಕ್ರಮ ಕೈಗೊಂಡು ರೂ.35,730/-ಗಳಿಗೆ 2 ವರ್ಷ 9 ತಿಂಗಳುಗಳಿಗೆ ಚಾಲ್ತಿಯಲ್ಲಿರುವ ಬ್ಯಾಂಕ್‌ನ ಸರಳ ಬಡ್ಡಿದರದಂತೆ ಲೆಕ್ಕ ಹಾಕಿ ಒಟ್ಟು ರೂ.35,730 + 11,792 = 47,522/-ಗಳನ್ನು ಸರಬರಾಜುದಾರರಿಂದ ವಸೂಲಿಗೆ ಸೂಚಿಸಿದೆ.<br>ಈ ವಸೂಲಾತಿಗೆ ಸಂಬಂಧಪಟ್ಟಂತೆ ಲೆಕ್ಕಪರಿಶೋಧನೆ ವಿಚಾರಣೆ ಸಂಖ್ಯೆ:61 ದಿನಾಂಕ:20.12.2018 ರನ್ವಯ ನೀಡಲಾಗಿ ಉತ್ತರ ಸಲ್ಲಿಸಿರುವುದಿಲ್ಲ. | ಸದ್ರಿ ಸಂಸ್ಥೆಗೆ ಪತ್ರ ಬರೆಯಲಾಗಿದೆ. ಸದ್ರಿ ಮೊತ್ತ ರೂ. 35730.00ನ್ನು ಚಲನ್ ಸಂಖ್ಯೆ 11964 ದಿನಾಂಕ 7.11.2020ರಂದು ವಿವಿ ಖಾತೆಗೆ ಜಮೆ ಮಾಡಲಾಗಿದೆ. ಆಕ್ಷೇಪಣೆಯನ್ನು ಕೈ ಬಿಡುವಂತೆ ಕೋರಲಾಗಿದೆ. |
| 28 | <u>ಶಾಸನಾತ್ಮಕ ಕಟಾವಣೆಗಳನ್ನು ಕಟಾಯಿಸದೇ ಕಾಮಗಾರಿ ಬಿಲ್ಲುಗಳನ್ನು ಪಾವತಿಸಿರುವುದು :</u><br>2016-17ನೇ ಸಾಲಿನಲ್ಲಿ ಪಾವತಿಸಲಾದ ಕಾಮಗಾರಿ ಬಿಲ್ಲುಗಳಲ್ಲಿ ಶಾಸನಾತ್ಮಕ ಕಟಾವಣೆಗಳಾದ 1% LWC, 4% ಮಾರಾಟ ತೆರಿಗೆ, 1% CBF ಕಟಾಯಿಸದೇ ಬಿಲ್ಲು ಪಾವತಿಸಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದ್ದು, ಸಂಬಂಧಿಸಿದವರಿಂದ ಸದರಿ ಕಟಾವಣೆಗಳನ್ನು ಕಟಾಯಿಸಿ, ಸಂಬಂಧಿಸಿದ ಖಾತೆ/ ಲೆಕ್ಕ ಶೀರ್ಷಿಕೆಗೆ ಜಮಾ ಮಾಡಿ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ: 133/2018-19 ದಿನಾಂಕ:28.01.2019 ಹಾಗೂ ವಿಚಾರಣಾ ಪತ್ರ ಸಂಖ್ಯೆ: 198/2018-19 ದಿನಾಂಕ:16.02.2019 ಗಳನ್ನು ಜಾರಿ ಮಾಡಲಾಗಿತ್ತು. | ಬಿಲ್ಲು ವೋಚರ್‌ಗಳನ್ನು ಪರಿಶೀಲಿಸಲಾಗಿದ್ದು ಎಲ್ಲಾ ಕೊಟೇಶನ್ ಮೂಲಕ ಮಾಡಿಸಿದ್ದು ಸಪ್ಲೈ ಬಿಲ್ಲುಗಳಿಗೆ ಪಾವತಿ ಮಾಡಿರುವುದರಂದ LWC,KST ಮತ್ತು CBF ಕಟಾವಣೆ ಮಾಡಿರುವುದಿಲ್ಲ. |

| | | |
|---|---|---|
| | ಆದರೆ ಈ ಸಂಬಂಧ ಯಾವುದೇ ವಿವರಗಳನ್ನು ಹಾಜರುಪಡಿಸದಿರುವುದರಿಂದ ಕೂಡಲೇ ಕ್ರಮವಹಿಸಿ ವಿವರಗಳನ್ನು ಹಾಜರುಪಡಿಸುವಂತೆ ಸೂಚಿಸಿದೆ. ವಿವರಗಳನ್ನು ಅನುಬಂಧ-12 ರಲ್ಲಿ ವರದಿಗೆ ಲಗತ್ತಿಸಿದೆ. ಹಾಗೂ ಶಾಸನಬದ್ಧ ಕಟಾವಣೆಗಳನ್ನು ಕಟಾಯಿಸಿಲ್ಲದ ವಿಷಯ ನಿರ್ವಾಹಕರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಸೂಚಿಸಿದೆ.<br>ಈ ಸಂಬಂಧ ಕಟಾವಣೆಗಳನ್ನು ಗುತ್ತಿಗೆದಾರರಿಂದ ವಸೂಲಿಸಿ ರೂ.32,027/-ಗಳನ್ನು ಸಂಬಂಧಿತ ಖಾತೆ/ ಲೆಕ್ಕ ಶಿರ್ಷಿಕೆಗಳಿಗೆ ಜಮಾ ಮಾಡಿ ವಿವರಗಳನ್ನು ಹಾಜರುಪಡಿಸುವಂತೆ ಸೂಚಿಸಿದೆ. | |
| 29 | <u>ಆದಾಯ ತೆರಿಗೆ ಕಟಾಯಿಸದಿರುವುದು :</u><br>2016-17ನೇ ಸಾಲಿನ ಏಪ್ರಿಲ್-2016 ರ ಮಾಹೆಯ ವೋಚರ್ಸ್‌ಗಳ ಪರಿಶೀಲನೆಯಲ್ಲಿ ವೋಚರ್ ಸಂಖ್ಯೆ: 77/ ದಿನಾಂಕ:02.04.2016 ರ ಧನಾದೇಶ ಸಂಖ್ಯೆ:066288/ ದಿ:02.04.2016 ರನ್ವಯ ದಿ:01.03.2016 ರಿಂದ 31.03.2016 ರವರೆಗೆ ಗಣಿತಶಾಸ್ತ್ರ ಸಂದರ್ಶಕ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸಿದ ಬಾಬ್ತು ರೂ.31,500/-ಗಳನ್ನು ಪಾವತಿ ಮಾಡಲಾಗಿದ್ದು, ಈ ಪಾವತಿಗೆ ಸಂಬಂಧಪಟ್ಟಂತೆ ಪಾವತಿ ಬಿಲ್ಲಿನಲ್ಲಿ ಶೇ.10 ರಂತೆ ಆದಾಯ ತೆರಿಗೆಯನ್ನು ಆದಾಯ ತೆರಿಗೆ ಕಾಯಿದೆಯ ನಿಯಮ 194C ರನ್ವಯ ರೂ.3,150/-ಗಳನ್ನು ಕಟಾಯಿಸಿರುವುದಿಲ್ಲ. ಆದಾಯ ತೆರಿಗೆ ಮೊತ್ತವನ್ನು ಸಂಬಂಧಿಸಿದ ಪ್ರಾಧ್ಯಾಪಕರಿಂದ ವಸೂಲಿಸಿ ಆದಾಯ ತೆರಿಗೆ ಇಲಾಖೆಗೆ ಜಮೆ ಮಾಡಿ ವರದಿ ಸಲ್ಲಿಸಲು ಸೂಚಿಸಲಾಗಿದೆ. | ಸಂದರ್ಶಕ ಪ್ರಾಧ್ಯಾಪಕರಾದ ಪ್ರೊ. ಎಂ.ಎಸ್. ಬಾಲಸುಬ್ರಹ್ಮಣಿ ಇವರು ನಿವೃತ್ತ ಪ್ರಾಧ್ಯಾಪಕರಾಗಿರುವುದರಿಂದ ಆದಾಯ ತೆರಿಗೆಯನ್ನು ಕಟಾಯಿಸಿರುವುದಿಲ್ಲ |
| 30 | <u>**DG S & D** ದರದಲ್ಲಿ 40 ಲ್ಯಾಪ್‌ಟಾಪ್‌ಗಳನ್ನು ಖರೀದಿಸಿ ಬಿಲ್ಲು ಪಾವತಿಸಿರುವ ಬಗ್ಗೆ :</u><br>2016-17ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ವೋಚರ್ ಸಂಖ್ಯೆ:920/ ದಿ:03.05.2016 ಧನಾದೇಶ ಸಂಖ್ಯೆ:077398/ ದಿ:06.05.2016 ರಲ್ಲಿ ರೂ.22,80,000/-ಗಳನ್ನು ಪಾವತಿಸಿ M/S Base computer ರವರಿಂದ ASUSಎಂಬ ಹೆಸರಿನ 40 ಲ್ಯಾಪ್ ಟಾಪ್‌ಗಳನ್ನು ಖರೀದಿಸಿರುವ ಕಡತವನ್ನು ಪರಿಶೀಲಿಸಲಾಗಿ, ಸದರಿ ಖರೀದಿ ಪ್ರಕ್ರಿಯೆಯಲ್ಲಿ schedule 'A' 24 (a) ರನ್ವಯ Purchase departmental charges at 1% ಎಂದು 40 x 57000 = 22,80,000 x 1% /100= ರೂ.22,800/-ಗಳನ್ನು ಹಾಗೂ inspection departmental charge ಎಂದು DGSSD Rate contract schedule 'A' ರ 24 (ಬಿ) ರನ್ವಯ 40x57000 = 22,80,000/100 x 1% = ರೂ.22,800/-ಗಳನ್ನು ಒಟ್ಟಾರೆ ರೂ.45,600/-ಗಳನ್ನು ಪಾವತಿಸಿದ್ದು ಈ ಮೊತ್ತವನ್ನು **M/S Base computer** ರವರಿಂದ ವಸೂಲಿ ಮಾಡಬೇಕಾಗಿರುತ್ತದೆ.Rate contract ಗೆ ಒಳಪಟ್ಟಿರುವ ASUSCompany ಯವರಿಂದ Base computer ಸಂಸ್ಥೆಯು ಅಧಿಕೃತ ಮಾರಾಟಗಾರರು ಎಂಬ ದೃಢೀಕರಣ ಪಡೆದಿರುವುದನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಆದುದರಿಂದ Base computer ರವರಿಂದ DGSSD Rate contract ನ ನಿಯಮಗಳನುಸಾರ Inspection charges ಮತ್ತು departmental chargeರೂ.45,600/-ಗಳನ್ನು ವಸೂಲಿಸಿ ವಿಶ್ವವಿದ್ಯಾನಿಲಯದ ಲೆಕ್ಕಶೀರ್ಷಿಕೆಗೆ ಜಮೆ ಮಾಡಿ, ಜಮೆ ಮಾಡಲಾದ ವಿವರಗಳನ್ನು ಹಾಗೂ M/S Base computer ರವರು ASUS companyಯವರ ಅಧಿಕೃತ ಸರಬರಾಜುದಾರರು ಎಂಬ ದೃಢೀಕರಣ ಪತ್ರವನ್ನು ಪಡೆದು ಲೆಕ್ಕ ತಪಾಸಣೆಗೆ ಹಾಜರುಪಡಿಸಲು ಸೂಚಿಸಿದೆ. | 40 ಲ್ಯಾಪ್ ಟಾಪ್‌ಗಳನ್ನು M/S Base Computer ಮಂಗಳೂರು ಇವರಿಂದ ವಿವಿಯ ಸಿಂಡಿಕೇಟ್ ಸಭೆ ದಿನಾಂಕ 20.11.2015ರಲ್ಲಿ ಅನುಮೋದಿಸಲಾದ ಟೆಂಡರ್ ದರ ಲ್ಯಾಪ್ ಟಾಪ್ ಒಂದರ ರೂ. 57000.00 ರಂತೆ ಖರೀದಿ ಮಾಡಲಾಗಿದ್ದು DGSSD ಇಲಾಖೆಗೆ Purchase department charges ಮತ್ತು inspection departmental charges ಪಾವತಿ ಮಾಡುವ ಪ್ರಮೇಯವಿರುವುದಿಲ್ಲ. ಆದುದರಿಂದ ಆಕ್ಷೇಪಣೆಯನ್ನು ಕೈ ಬಿಡಲು ಕೋರಿದೆ. |
| 31 | <u>**DGS & D** ದರದಲ್ಲಿ 100 ಲ್ಯಾಪ್‌ಟಾಪ್‌ಗಳನ್ನು ಖರೀದಿಸಿ ಬಿಲ್ಲು ಪಾವತಿಸಿರುವ ಬಗ್ಗೆ :</u><br>2016-17ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಧನಾದೇಶ ಸಂಖ್ಯೆ: 633769/ ದಿನಾಂಕ:16.07.2016 ರಲ್ಲಿ ರೂ.68,74,000/-ಗಳನ್ನು ಪಾವತಿಸಿ 100 ಲ್ಯಾಪ್‌ಟಾಪ್‌ಗಳನ್ನು M/S Total IT Solution ಬೆಂಗಳೂರು ರವರಿಂದ DGS & D ದರದಡಿ ಖರೀದಿಸಿದ್ದು, ಸದರಿ ಖರೀದಿ ಪ್ರಕ್ರಿಯೆಯಲ್ಲಿ DGS & D Rate contract- Schedule 'A' 24 (a)ರನ್ವಯ Purchase Departmental charges at 1.0%ರಂತೆ 100 X 56,000= 56,00,000 x1.0% /100 = 56,000/- ಗಳು ಹಾಗೂ Departmental Inspection charge ಎಂದು DGS & D Rate contract- schedule 'A' 24 (b)ರನ್ವಯ 100 X 56,000= 56,00,000 x 1.0% /100 = 56,000/- ಗಳನ್ನು ಒಟ್ಟಾರೆ ರೂ.1,12,000/- ಗಳನ್ನು ಹೆಚ್ಚುವರಿಯಾಗಿ M/S Total 1 + Solutionಬೆಂಗಳೂರು ರವರಿಗೆ ಪಾವತಿಸಲಾಗಿರುತ್ತದೆ. ವಾಸ್ತವವಾಗಿ ಸದರಿ ಮೊತ್ತವು ಮೇಲಿನ ಷರತ್ತಿಗೆ ಅನ್ವಯಿಸಿರುವುದರಿಂದ ಸದರಿ ಸಂಸ್ಥೆಯಿಂದ ರೂ.1,12,000/- ವಸೂಲಿಸಲು ಸೂಚಿಸಿದೆ. ವಸೂಲಿಯಾದ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಸೂಚಿಸಿದೆ. | 100 ಲ್ಯಾಪ್ ಟಾಪ್‌ಗಳನ್ನು M/S Total IT Solutions ಬೆಂಗಳೂರು ರವರಿಂದ DGS&D ದರದಡಿ ಖರೀದಿಸಿದ್ದು, DGS&D Rate contract- Schedule 'A' 24 (a) ರನ್ವಯ Purchase Departmental charge 1.0% ಮತ್ತು 24 (b)ರನ್ವಯ 1.0% ನಂತೆ Inspection charge ಗಳನ್ನು DGS&D ಗೆ ಸರಬರಾಜು ಸಂಸ್ಥೆಯು ಪಾವತಿ ಮಾಡಬೇಕಾಗಿದೆ. ಸದ್ರಿ ಮೊತ್ತವನ್ನು ಸರಬರಾಜು ಸಂಸ್ಥೆಯು 24 (d) ಯಂತೆ ಖರೀದಿ ಮಾಡಿರುವ ಇಲಾಖೆಯಿಂದ ಹಿಂಪಡೆಯಬಹುದು ಎಂದು ತಿಳಿಸಲಾಗಿದೆ. ಈ ಖರೀದಿ ಪ್ರಕ್ರಿಯೆಯಲ್ಲಿ ಈ ಶುಲ್ಕವನ್ನು ಸಂಸ್ಥೆಯವರು DGS&Dಗೆ ಪಾವತಿಸಿಲ್ಲ ಹಾಗೂ ವಿ.ವಿ.ಯಿಂದ ಸಂಸ್ಥೆಯವರು ಹಿಂಪಡೆದಿರುವುದಿಲ್ಲ. ಆದುದರಿಂದ ಸಂಸ್ಥೆ ಯಿಂದ ವಸೂಲು ಮಾಡುವ ಪ್ರಮೇಯ ಉದ್ಭವಿಸುವುದಿಲ್ಲ. ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ. |

32

**DGS & D ದರದಲ್ಲಿ 400 ಕಂಪ್ಯೂಟರ್‌ಗಳನ್ನು ಖರೀದಿಸಿ ರಿಯಾಯಿತಿ ಪಡೆಯದಿರುವ ಬಗ್ಗೆ :**

2016-17ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಧನಾದೇಶ ಸಂಖ್ಯೆ: 119019/ ದಿನಾಂಕ:28.06.2016 ರಲ್ಲಿ ಮೇ॥ ಟೋಟಲ್ ಐಟಿ ಸಲ್ಯೂಷನ್, ಬೆಂಗಳೂರು ಇವರಿಂದ ಡಿ.ಜಿ.ಎಸ್ & ಡಿ ದರದಲ್ಲಿ ಗಣಕಯಂತ್ರಗಳನ್ನು ಖರೀದಿಸಿದ್ದು ಒಟ್ಟು ರೂ.2,23,40,500/-ಗಳನ್ನು ಪಾವತಿಸಲಾಗಿರುತ್ತದೆ.

ಡಿ.ಜಿ.ಎಸ್ & ಡಿ ದರಪಟ್ಟಿಯ ಯನ್ವಯ ದರಗಳನ್ನು ಈ ಕೆಳಕಂಡಂತೆ ಪಾವತಿಸಬೇಕಾಗಿರುತ್ತದೆ

| | | |
|---|---|---|
| 1 | ಗಣಕಯಂತ್ರಗಳ ಖರೀದಿ ಮೊತ್ತ - 400x45,500 | 1,82,00,000 |
| 2 | $4^{th}$ & $5^{th}$ Year warrenty charges | 27,30,000 |
| 3 | Service Tax at 15% on warrenty charges | 4,09,500 |
| **TOTAL** | | **2,13,39,500** |

400 ಗಣಕಯಂತ್ರಗಳನ್ನು ಖರೀದಿಸಿ ರೂ.2,13,39,500/-ಗಳನ್ನು ವಾಸ್ತವವಾಗಿ ಪಾವತಿಸಬೇಕಾಗಿರುತ್ತದೆ. ಆದರೆ ಡಿ.ಜಿ.ಎಸ್ & ಡಿ Rate contract- Schedule 'A' 24 (c)ರನ್ವಯ ಮೂಲ ದರ (ಅಂದರೆ ಒಂದು ಗಣಕಯಂತ್ರದ ಬೆಲೆ ರೂ.45,500/-ಗಳಲ್ಲಿಯ ಎಲ್ಲಾ ತೆರಿಗೆಗಳನ್ನು ಸೇರಿಸಲಾಗಿರುತ್ತದೆ) ----- ಒಳಗೊಂಡಿರುವುದರಿಂದ VAT @5% ಹೆಚ್ಚುವರಿಯಾಗಿ ರೂ.10,01,000/-ಗಳನ್ನು ಪಾವತಿಸಿರುವುದು ಡಿ.ಜಿ.ಎಸ್ & ಡಿ Rate contract- Schedule 'B' ರ 24 (c)ಯನ್ನು ಉಲ್ಲಂಘಿಸಿ ಪಾವತಿಸಲಾಗಿರುತ್ತದೆ.

ಡಿ.ಜಿ.ಎಸ್ & ಡಿ Rate contract- Schedule 'B' ರ ಸಿ ಅನ್ವಯ ಸಂಖ್ಯೆ:251 ರಿಂದ 500 ರ ಸ್ಲಾಬ್ ರನ್ವಯ 0.25% ರಿಯಾಯಿತಿಯನ್ನು ನೀಡಬೇಕಾಗಿದ್ದು, 400 X 45,500 = 1,82,00,000 X 0.25 % /100 = 45,500. ರೂ.45,500/-ಗಳನ್ನು ರಿಯಾಯಿತಿ ದರವನ್ನು ಕಟಾಯಿಸಿ ಪಾವತಿಸದೇ ರಿಯಾಯಿತಿಯನ್ನು ಪಡೆಯದೇ ಪಾವತಿಸಿರುವ ಮೊತ್ತ ರೂ.45,500/-ಗಳನ್ನು M|| Total IT Solution ರವರಿಂದ ವಸೂಲಿಸಬೇಕಾಗಿರುತ್ತದೆ.

DGS & D Rate Contract – Schedule "A" ರ 24 (a) ರನ್ವಯ Purchase Departmental charges at 1.0% ರಂತೆ 400 X 45,500 = 1,82,00,000 X 1.0% /100 = 1,82,000/-.ರೂ.1,82,000/-ಗಳನ್ನು **Departmental charges** ಆಗಿ ಸರಬರಾಜುದಾರರಿಂದವಸೂಲಿ ಮಾಡಬೇಕಾಗಿರುತ್ತದೆ.

ಮುಂದುವರೆದು DGS & D Rate Contract – Schedule "A" ರ 24 (b) For Inspection-Departmental Charges at 1.0% ರಂತೆ 400 X 45,500 = 1,82,00,000 X 1.0% /100 = 1,82,000/-. ರೂ.1,82,000/-ಗಳನ್ನು For Inspection-Departmental Charges ಆಗಿ ಸರಬರಾಜುದಾರರಿಂದ ವಸೂಲಿ ಮಾಡಬೇಕಾಗಿರುತ್ತದೆ.

ವಿಶ್ವವಿದ್ಯಾನಿಲಯದ RUSA ಅನುದಾನದಡಿಯಲ್ಲಿ 400 ಗಣಕಯಂತ್ರಗಳನ್ನು ಮೆ॥ TOTAL IT Solution ರವರಿಂದ DGS&D ದರಪಟ್ಟಿಯನ್ವಯ ಖರೀದಿಸಲಾಗಿದ್ದು, ಸರಬರಾಜುದಾರರಿಂದ ಈ ಕೆಳಕಂಡ ಕಡಿತಗಳನ್ನು ಮಾಡದೇ ಪೂರ್ಣವಾಗಿ ಪಾವತಿಸಲಾಗಿದ್ದು ಈ ಕೆಳಗೆ ವಿವರಿಸಿರುವ ಮೊತ್ತಗಳನ್ನು ವಸೂಲಿ ಮಾಡಿ ವಿಶ್ವವಿದ್ಯಾನಿಲಯದ ಲೆಕ್ಕಶೀರ್ಷಿಕೆಗೆ ಜಮೆ ಮಾಡುವಂತೆ ಸೂಚಿಸಿದೆ.

400 ಕಂಪ್ಯೂಟರ್‌ಗಳನ್ನು M/S Total IT Solutions ಬೆಂಗಳೂರು ರವರಿಂದ DGS&D ದರದಡಿ ಖರೀದಿಸಿದ್ದು, DGS&D Rate contract- Schedule 'A' 24 (a) ರನ್ವಯ Purchase Departmental charges 1.0% ಮತ್ತು 24 (b)ರನ್ವಯ 1.0% ನಂತೆ Inspection charge ಗಳನ್ನು DGS&D ಗೆ ಸರಬರಾಜು ಸಂಸ್ಥೆಯು ಪಾವತಿ ಮಾಡಬೇಕಾಗಿದೆ. ಸದ್ರಿ ಮೊತ್ತವನ್ನು ಸರಬರಾಜು ಸಂಸ್ಥೆಯು 24 (d) ಯಂತೆ ಖರೀದಿ ಮಾಡಿರುವ ಇಲಾಖೆಯಿಂದ ಹಿಂಪಡೆಯಬಹುದು ಎಂದು ತಿಳಿಸಲಾಗಿದೆ. ಈ ಖರೀದಿ ಪ್ರಕ್ರಿಯೆಯಲ್ಲಿ ಈ ಶುಲ್ಕವನ್ನು ಸಂಸ್ಥೆಯವರು DGS&Dಗೆ ಪಾವತಿಸಿಲ್ಲ ಹಾಗೂ ವಿ.ವಿ.ಯಿಂದ ಸಂಸ್ಥೆಯವರು ಹಿಂಪಡೆದಿರುವುದಿಲ್ಲ. ಅಲ್ಲದೆ DGS&D ಯವರ ಶೆಡ್ಯೂಲ್ ಎ ಯಲ್ಲಿ ದರಗಳು ತೆರಿಗೆ ರಹಿತ (Excl.) ಎಂದು ತಿಳಿಸಿರುವುದರಿಂದ ಚಾಲ್ತಿಯಲ್ಲಿರುವ ತೆರಿಗೆಯನ್ನು ಸಂಸ್ಥೆಯವರು ಕ್ಲೇಮ್ ಮಾಡಿದ್ದನ್ನು ಪಾವತಿಸಲಾಗಿದೆ. ಪಾವತಿ ಸಮಂಜಸವಾಗಿರುತ್ತದೆ. Annexure B(c) ಲ್ಲಿ ತಿಳಿಸಿರುವ discount ಖರೀದಿದಾರರು CRC. ನೀಡದೆಯಿರುವ ಸಂದರ್ಭದಲ್ಲಿ DGS&Dಯವರು ಪಾವತಿ ಮಾಡುವ ಸಂದರ್ಭಕ್ಕಾಗಿರುತ್ತದೆ. ಆದುದರಿಂದ ಸರಬರಾಜು ಸಂಸ್ಥೆಗೆ ಯಾವುದೇ ಹೆಚ್ಚುವರಿ ಪಾವತಿಯಾಗಿರುವುದಿಲ್ಲ. ಆದುದರಿಂದ ಸಂಸ್ಥೆಯಿಂದ ವಸೂಲು ಮಾಡುವ ಪ್ರಮೇಯ ಉದ್ಭವಿಸುವುದಿಲ್ಲ. ಆಕ್ಷೇಪಣೆಯನ್ನು ಕೈ ಬಿಡಲು ಕೋರಿದೆ.

<table>
<tr>
<td></td>
<td>
<table>
<tr><th>ಕ್ರ.ಸಂ</th><th>ನ್ಯೂನ್ಯತೆಗಳ ವಿವರ</th><th>ವಸೂಲಾತಿ ಮೊತ್ತ</th><th>ಷರಾ</th></tr>
<tr><td>1</td><td>DGS & D Rate contract- Schedule “A” ರ 24 (c) ಉಲ್ಲಂಘಿಸಿ VAT @ 5.5% ಹೆಚ್ಚುವರಿಯಾಗಿ ಪಾವತಿಸಿರುವುದು.</td><td>10,01,000</td><td>ಮಂಗಳೂರು ವಿಶ್ವವಿದ್ಯಾನಿಲಯ ಲೆಕ್ಕ ಶೀರ್ಷಿಕೆ ಜಮೆ ಮಾಡಬೇಕು</td></tr>
<tr><td>2</td><td>DGS & D Rate contract- Schedule “A” ರc ಅನ್ವಯ 500 ರವರೆಗೆ ಗಣಕ ಯಂತ್ರ ಖರೀದಿಗೆ 0.25% ರಿಯಾಯಿತಿ ನೀಡಬೇಕಾದ ಮೊತ್ತ.</td><td>45,500</td><td>ಮಂಗಳೂರು ವಿಶ್ವವಿದ್ಯಾನಿಲಯ ಲೆಕ್ಕ ಶೀರ್ಷಿಕೆ ಜಮೆ ಮಾಡಬೇಕು</td></tr>
<tr><td>3</td><td>DGS & D Rate contract- Schedule “A” ರ 24 (a) ರನ್ವಯ Departmental charges @ 1.0% ರಂತೆ ಸರಬರಾಜುದಾರರಿಂದ ಪಡೆಯಬೇಕಾಗಿರುವುದು.</td><td>1,82,000</td><td></td></tr>
<tr><td>4</td><td>DGS & D Rate contract- Schedule “A” ರ 24 (b) ರನ್ವಯ Inspection charges @ 1.0% ರಂತೆ ಸರಬರಾಜುದಾರರಿಂದ ಪಡೆಯಬೇಕಾಗಿರುವುದು.</td><td>1,82,000</td><td></td></tr>
<tr><td colspan="2">TOTAL</td><td>14,10,500</td><td></td></tr>
</table>
ಈ ಮೇಲೆ ತಿಳಿಸಿರುವ ಕೋಷ್ಟಕದನ್ವಯ ರೂ.14,10,500/-ಗಳನ್ನು ಮೆ॥ ಟೊಟಲ್ ಸಲ್ಯೂಷನ್, ಬೆಂಗಳೂರು ರವರಿಂದ ವಸೂಲಿಸಿ ವಿಶ್ವವಿದ್ಯಾನಿಲಯದ ಸಂಬಂಧಿಸಿದ ಲೆಕ್ಕಶೀರ್ಷಿಕೆಗೆ ಜಮೆ ಮಾಡುವಂತೆ ಹಾಗೂ ಜಮೆ ಮಾಡಲಾದ ವಿವರಗಳನ್ನು ಲೆಕ್ಕಪರಿಶೋಧನಾ ಕಛೇರಿಗೆ ಸಲ್ಲಿಸುವಂತೆ ಸೂಚಿಸಿದೆ.
</td>
<td></td>
</tr>
<tr>
<td>33</td>
<td>ಉದ್ಯಾನವನಗಳ ನಿರ್ವಹಣೆಯ ಟೆಂಡರ್ ಕಡತವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು :<br>2016-17ನೇ ಸಾಲಿನಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಆವರಣಗಳಲ್ಲಿ ಇರುವ ಉದ್ಯಾನವನಗಳ ನಿರ್ವಹಣೆಯ ಸಂಬಂಧ M/S Star Employment Bureau, ಮೈಸೂರು ರವರಿಗೆ ಮಾಹೆಯಾನ ನಿರ್ವಹಣಾ ವೆಚ್ಚವನ್ನು ಭರಿಸಿರುವುದು ಲೆಕ್ಕಪರಿಶೋಧನೆ ವೇಳೆ ಕಂಡು ಬಂದಿದ್ದು, ಇದರ ಸಂಬಂಧ ಕರೆದಿರುವ ಟೆಂಡರ್ ಪ್ರಕ್ರಿಯೆ ಕಡತವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:160/2018-19 ದಿ:31.03.2019 ರಲ್ಲಿ ಜಾರಿ ಮಾಡಲಾಗಿತ್ತು. ಆದರೆ ಯಾವುದೇ ಕಡತ/ ದಾಖಲಾತಿಗಳನ್ನು ಹಾಜರುಪಡಿಸದ ಕಾರಣ, ಭರಿಸಲಾದ ಒಟ್ಟು ಮೊತ್ತ ರೂ.24,00,900/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರವನ್ನು ಅನುಬಂಧ-13 ರಲ್ಲಿ ಒದಗಿಸಲಾಗಿದೆ.</td>
<td>ವಿ.ವಿ.ಯ ಕ್ಯಾಂಪಸ್ಸಿನಲ್ಲಿರುವ ಉದ್ಯಾನವನದ ನಿರ್ವಹಣೆಗಾಗಿ ಟೆಂಡರ್ ಕರೆಯಲಾಗಿದ್ದು ದಿನಾಂಕ 01.01.15ರಿಂದ 31.12.15ರ ವರೆಗೆ ಗುತ್ತಿಗೆ ಯನ್ನು ನೀಡಲಾಗಿತ್ತು. ಸದ್ರಿ ಸಂಸ್ಥೆಯ ಗುತ್ತಿಗೆಯನ್ನು 2016-17ರಲ್ಲಿ ಯೂ ಮುಂದುವರೆಸಲಾಗಿದೆ. ಆಕ್ಷೇಪಣೆಯನ್ನು ಕೈ ಬಿಡಲು ಕೋರಿದೆ.</td>
</tr>
<tr>
<td>34</td>
<td>ಶುಚಿತ್ವ ಕೆಲಸದ (Cleaning Services) ಟೆಂಡರ್ ಕಡತವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವ ಕುರಿತು :<br>ಮಂಗಳೂರು ವಿಶ್ವವಿದ್ಯಾನಿಲಯದ ಅಧೀನಕ್ಕೊಳಪಟ್ಟಿರುವ ಮಂಗಳೂರು ವಿಶ್ವವಿದ್ಯಾನಿಲಯ ಕಾಲೇಜು ಹಾಗೂ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜು, (FMKMC) ಮಡಿಕೇರಿಯ ಆವರಣದ ಶುಚಿತ್ವ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಗುತ್ತಿಗೆದಾರರನ್ನು ನೇಮಿಸಿಕೊಂಡು ಶುಚಿತ್ವ ಸೇವೆಯ ನಿರ್ವಹಣಾ ವೆಚ್ಚವನ್ನು ಭರಿಸಿರುವುದು ಲೆಕ್ಕಪರಿಶೋಧನಾ ಅವಧಿಯಲ್ಲಿ ಕಂಡು ಬಂದಿದ್ದು, M/S Oshin security servicesವಿರಾಜಪೇಟೆ ಹಾಗೂ ಶ್ರೀ ಕಿಶೋರ್ ಕುಮಾರ ಬಂಟ್ವಾಳ ಎಂಬ ಗುತ್ತಿಗೆದಾರರು ಈ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ. ಈ ಕೆಲಸಕ್ಕೆ ಕರೆದಿರುವ ಟೆಂಡರ್ ಪ್ರಕ್ರಿಯೆ ಕಡತವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:182/2018-19 ದಿ:07.02.2019 ರಲ್ಲಿ ಜಾರಿ ಮಾಡಲಾಗಿತ್ತು. ಆದರೆ ಯಾವುದೇ ದಾಖಲೆಗಳನ್ನು ಹಾಜರುಪಡಿಸದ ಕಾರಣ, ನಿರ್ವಹಣೆಗೆ ಭರಿಸಿರುವ ಒಟ್ಟು ಮೊತ್ತ ರೂ.20,26,092/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರವನ್ನು ಅನುಬಂಧ-14 ರಲ್ಲಿ ಒದಗಿಸಲಾಗಿದೆ.</td>
<td>ಶುಚಿತ್ವ ಕೆಲಸಕ್ಕಾಗಿ ಟೆಂಡರ್ ಕರೆಯಲಾಗಿದೆ. ದಾಖಲೆಗಳನ್ನು ಮುಂದಿನ ಲೆಕ್ಕ ತಪಾಸಣೆ ವೇಳೆ ಹಾಜರುಪಡಿಸಲಾಗುವುದು.</td>
</tr>
</table>

35

**ಭದ್ರತಾ ಸೇವೆಯ ಟೆಂಡರ್ ಕಡತವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು :**

ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ವ್ಯಾಪ್ತಿಗೆ ಒಳಪಟ್ಟಿರುವ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜು, ಮಡಿಕೇರಿ ಹಾಗೂ ಸ್ನಾತಕೋತ್ತರ ಕೇಂದ್ರ ಚಿಕ್ಕಳುವಾರ ಕೇಂದ್ರಗಳಿಗೆ 2016-17ನೇ ಸಾಲಿನಲ್ಲಿ ಭದ್ರತಾ ಸೇವೆಯ ಸಂಬಂಧ M/S Gajmukh Security Bureau, ಮೈಸೂರು ರವರಿಗೆ ಮಾಹೆಯಾನ ಭದ್ರತಾ ವೆಚ್ಚವನ್ನು ಭರಿಸಿರುವುದು ಲೆಕ್ಕಪರಿಶೋಧನೆಯಲ್ಲಿ ಕಂಡು ಬಂದಿದ್ದು, ಈ ವಿಚಾರವಾಗಿ ವಿಶ್ವವಿದ್ಯಾನಿಲಯವು ಕರೆದಿರುವ ಟೆಂಡರ್ ಪ್ರಕ್ರಿಯೆ ಕಡತಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ: 23/2018-19 ದಿ:16.11.2018 ರಲ್ಲಿ ಜಾರಿ ಮಾಡಲಾಗಿ, ಯಾವುದೇ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಭದ್ರತಾ ಸೇವೆಯ ನಿಮಿತ್ತ ಭರಿಸಲಾದ ಒಟ್ಟು ವೆಚ್ಚ ರೂ.19,63,574/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರವನ್ನು ಅನುಬಂಧ-15 ರಲ್ಲಿ ಒದಗಿಸಲಾಗಿದೆ.

ಇದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಲೆಕ್ಕ ತಪಾಸಣೆಗೆ ಹಾಜರುಪಡಿಸಲಾಗಿದೆ. ಆದಾಗ್ಯೂ ಸದ್ರಿ ದಾಖಲೆಗಳನ್ನು ಮುಂದಿನ ಲೆಕ್ಕ ತಪಾಸಣೆ ವೇಳೆ ಹಾಜರು ಪಡಿಸಲಾಗುವುದು.

36

**ವಿದ್ಯುತ್ ಸ್ಥಾವರಗಳ ನಿರ್ವಹಣಾ ವೆಚ್ಚ ಭರಿಸಿರುವುದು :**

ಮಂಗಳೂರು ವಿಶ್ವವಿದ್ಯಾನಿಲಯದ 2016-17ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಮಂಗಳ ಗಂಗೋತ್ರಿ ಆವರಣದಲ್ಲಿ ನಂದಾ ದೀಪ ಮತ್ತು ಜ್ಞಾನ ದೀಪ ಎಂಬ 02 ವಿದ್ಯುತ್ ಸ್ಥಾವರಗಳನ್ನು ಸುಮಾರು 25 ವರ್ಷಗಳಿಗಿಂತ ಹಿಂದೆ ಸ್ಥಾಪಿಸಲಾಗಿರುತ್ತದೆ. ಈ ಸ್ಥಾವರಗಳ ನಿರ್ವಹಣೆ ಮಾಡಲು 2016-17ನೇ ಸಾಲಿನಲ್ಲಿ ಈ ಕೆಳಕಂಡ ಅಂಕಿ ಅಂಶಗಳಂತೆ ವೆಚ್ಚ ಭರಿಸುತ್ತಿರುವುದು ಕಂಡು ಬಂದಿರುತ್ತದೆ.

| | | |
|---|---|---|
| 1 | ಚೆಸ್ಕಾಂನಿಂದ ಸ್ಥಾವರಗಳಿಗೆ ಪಡೆಯಲಾಗುವ ವಿದ್ಯುತ್ ಪ್ರಮಾಣಕ್ಕೆ ಪಾವತಿಸಲಾಗಿರುವ ವಿದ್ಯುತ್ ಶುಲ್ಕ ಮೊತ್ತ | ರೂ.1,83,91,133 |
| 2 | 02 ಸ್ಥಾವರಗಳನ್ನು ನಿರ್ವಹಣೆ ಕಾರ್ಯಕ್ಕಾಗಿ ನಿಯೋಜಿಸಲಾಗುವ ಸಿಬ್ಬಂದಿಯವರ ವೇತನ ಪಾವತಿಗಾಗಿ | ರೂ.13,68,438 |
| 3 | ಚೆಸ್ಕಾಂ ಸಿಬ್ಬಂದಿಯವರು ವರ್ಷಕ್ಕೆ ಒಂದು ಬಾರಿ ಪರಿವೀಕ್ಷಣೆಗೆ ಬರುವುದಕ್ಕೆ ಶುಲ್ಕ ಪಾವತಿ | ರೂ.33,900<br>(+) 3,300 |
| ಒಟ್ಟು | | 1,97,96,771 |

ಮೇಲೆ ತಿಳಿಸಲಾದ ವೆಚ್ಚಗಳನ್ನು ವಾಸ್ತವವಾಗಿ ಕೊಣಜೆ ಗ್ರಾಮ ಪಂಚಾಯಿತಿಯು ಭರಿಸಬೇಕಿರುತ್ತದೆ. ಏಕೆಂದರೆ ಸದರಿ ವಿಶ್ವವಿದ್ಯಾನಿಲಯವು ಈ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿರುತ್ತದೆ. ಪ್ರತಿ ವರ್ಷ ಕಂದಾಯವನ್ನು ಸಹ ಗ್ರಾಮ ಪಂಚಾಯಿತಿಗೆ ಪಾವತಿಸಲಾಗುತ್ತಿದೆ. ಪ್ರಸ್ತುತ 2016-17ನೇ ಸಾಲಿನಲ್ಲಿ ರೂ.14,09,141/-ಗಳ ಕಂದಾಯ ಪಾವತಿಸಿರುವುದು ಕಂಡು ಬಂದಿರುತ್ತದೆ.

ಗ್ರಾಮ ಪಂಚಾಯಿತಿಯವರು ಕಂದಾಯವನ್ನು ಪಡೆದ ಮೇಲೆ ಗ್ರಾಮ ಪಂಚಾಯಿತಿ ವತಿಯಿಂದ ಬೀದಿ ದೀಪಗಳ ನಿರ್ವಹಣೆ ಮಾಡುವುದು ಗ್ರಾಮ ಪಂಚಾಯಿತಿಯವರ ಆದ್ಯ ಕರ್ತವ್ಯವಾಗಿರುತ್ತದೆ. ವಿಶ್ವವಿದ್ಯಾನಿಲಯದವರು ಗ್ರಾಮ ಪಂಚಾಯಿತಿಯ ವತಿಯಿಂದ ಬೀದಿ ದೀಪಗಳ ನಿರ್ವಹಣೆ ಸೌಲಭ್ಯವನ್ನು ಪಡೆಯದೆ, ವಿಶ್ವವಿದ್ಯಾನಿಲಯವು ಖರೀದಿಸಲಾಗುವ ವಿದ್ಯುತ್ ಸೌಲಭ್ಯವನ್ನು ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸಲಾಗಿರುವ ವಿದ್ಯುತ್ ಸ್ಥಾವರಗಳಿಂದ ವಿದ್ಯುತ್‌ನ ಮೂಲಕ ಬೀದಿ ದೀಪಗಳನ್ನು ನಿರ್ವಹಿಸುತ್ತಿರುವುದರಿಂದ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ಹೊರೆ ಉಂಟಾಗಿರುತ್ತದೆ.

ಇದು ಅಲ್ಲದೆ ಚೆಸ್ಕಾಂ ರವರಿಂದ ವಿದ್ಯುತ್ ಸ್ಥಾವರಗಳಿಗೆ ವಿದ್ಯುತ್ ಸರಬರಾಜು ಆಗುವ ಸ್ಥಳದಿಂದ ವಿಶ್ವವಿದ್ಯಾನಿಲಯದ ಸ್ಥಾವರಗಳು, ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿನ ವಿದ್ಯುತ್ ಕಂಬಗಳ ಅಳವಡಿಕೆ ಹಾಗೂ ಕಂಬಗಳ ನಿರ್ವಹಣೆ ಹಾಗೂ ವಿದ್ಯುತ್ ನಿರ್ವಹಣೆಗಾಗಿ ರೂ.82,35,764/-ಗಳ ವೆಚ್ಚದ ಮೊತ್ತವು ಸೇರಿಕೊಂಡಿರುತ್ತದೆ. ಹಾಗೂ ವಿಶ್ವವಿದ್ಯಾನಿಲಯದ ವಾಣಿಜ್ಯ ಸಂಕೀರ್ಣಗಳು, ವಸತಿ ಗೃಹಗಳಿಗೆ ಸ್ಥಾವರಗಳಿಂದ ವಿದ್ಯುತ್ ಸರಬರಾಜು ಮಾಡಿರುವುದಕ್ಕೆ ವಿಶ್ವವಿದ್ಯಾನಿಲಯದ ಸಿಬ್ಬಂದಿಯವರಿಂದ ವಿದ್ಯುತ್ ಶುಲ್ಕವನ್ನು ವಸೂಲಾತಿ ಮಾಡಲು ನಿಯೋಜಿಸಿರುವುದರಿಂದ ವಾಸ್ತವವಾಗಿ ವಿದ್ಯುತ್ ಉಪಯೋಗಿಸಲಾದ ಪ್ರಮಾಣಗಳಿಗೆ ವಿದ್ಯುತ್ ಶುಲ್ಕ ವಸೂಲಾತಿಯಾಗಿರುವುದಕ್ಕೆ ದೃಢಪಡಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ.

ವಿಶ್ವವಿದ್ಯಾನಿಲಯವು ಗ್ರಾಮಾಂತರ ಪ್ರದೇಶದಲ್ಲಿ ಸ್ಥಾಪನೆಯಾಗಿದ್ದು, ಆ ಸಂದರ್ಭದಲ್ಲಿ ಇಲ್ಲಿ ವಿದ್ಯುತ್ ಸಂಪರ್ಕ, ದಾರಿದೀಪ, ಕುಡಿಯುವ ನೀರಿನ ವ್ಯವಸ್ಥೆ ಮುಂತಾದ ಮೂಲಭೂತ ಸೌಕರ್ಯಗಳಿರಲಿಲ್ಲ. ವಿಶ್ವವಿದ್ಯಾನಿಲಯದ ವಿವಿಧ ಕಟ್ಟಡಗಳಿಗೆ, ಪ್ರಯೋಗಾಲಯದ ಸೌಲಭ್ಯಗಳಿಗೆ ಹಾಗೂ ಸಿಬ್ಬಂದಿ ವಸತಿ ಗೃಹಗಳಿಗೆ ಕುಡಿಯುವ ನೀರು, ವಿದ್ಯುತ್ ಪೂರೈಕೆ ಇತ್ಯಾದಿ ಮೂಲಭೂತ ಸೌಕರ್ಯ ಒದಗಿಸುವುದು ವಿಶ್ವವಿದ್ಯಾನಿಲಯದ ಆಡಳಿತಕ್ಕೆ ಅನಿವಾರ್ಯವಾದ ಹಿನ್ನಲೆಯಲ್ಲಿ ವಿಶ್ವವಿದ್ಯಾನಿಲಯ ದ ವತಿಯಿಂದ ಅಂದಿನ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಯೊಂದಿಗೆ ಪತ್ರ ವ್ಯವಹಾರ ನಡೆಸಿ, ಸರಕಾರದಿಂದ ಮಂಜೂರಾತಿ ಪಡೆದು ಕರ್ನಾಟಕ ವಿದ್ಯುತ್ ಮಂಡಳಿ ವತಿಯಿಂದಲೇ ಜ್ಞಾನದೀಪ ಮತ್ತು ನಂದಾದೀಪ ವಿದ್ಯುತ್ ಸ್ಥಾವರಗಳನ್ನು ಸ್ಥಾಪಿಸ ಲಾಗಿದೆ. ಸದರಿ ಸ್ಥಾವರಗಳಿಂದ ವಿಶ್ವವಿದ್ಯಾನಿಲಯ ಆವರಣದಲ್ಲಿ ಮಾತ್ರ ವಿದ್ಯುತ್ ಪೂರೈಕೆಯಾಗುತ್ತಿದೆ. ಸದರಿ ಸ್ಥಾವರಗಳ ನಿರ್ವಹಣೆಯನ್ನು ವಿಶ್ವವಿದ್ಯಾನಿಲಯದ ವತಿಯಿಂದಲೇ ಮಾಡಲಾಗುತ್ತಿದೆ. ಸ್ಥಾವರಗಳ ನಿರ್ವಹಣೆಗಾಗಿ ನೇಮಕವಾಗಿರುವ ಸಿಬ್ಬಂದಿಗಳು ಸರಕಾರದಿಂದ ಮಂಜೂರಾತಿ ಪಡೆದುದಾಗಿದೆ. ಉತ್ತಮ ಗುಣಮಟ್ಟದ ಮತ್ತು ನಿರಂತರ ವಿದ್ಯುತ್ ಸಂಪರ್ಕ ನೀಡಲಾಗುತ್ತದೆ. ಗ್ರಾಮ ಪಂಚಾಯತಿಗೆ ವಿಶ್ವವಿದ್ಯಾನಿಲಯದಿಂದ ವರದಿಯಲ್ಲಿ ತಿಳಿಸಿರುವಂತೆ ಕೇವಲ ವಸತಿ ನಿಲಯಗಳ ಬಾಬ್ತು ರೂ. 1409141.00 ವಾರ್ಷಿಕ ಕಂದಾಯ ಪಾವತಿಸಲಾಗಿದ್ದು ಗ್ರಾಮ ಪಂಚಾಯತಿಯವರು ವಸತಿ ನಿಲಯಗಳ ದಾರಿದೀಪಗಳ ನಿರ್ವಹಣೆ ಮಾಡಲು ಒಪ್ಪಿಕೊಂಡು ನಿರ್ವಹಿಸುತ್ತಿದ್ದಾರೆ. ಈ ಸ್ಥಾವರವನ್ನು ವಿಶೇಷ ಸಂದರ್ಭದಲ್ಲಿ ಸರಕಾರದ ಅನುಮತಿ ಮೇರೆಗೆ ಪಡೆದುಕೊಳ್ಳಲಾಗಿದೆ. ಸ್ಥಾವರಗಳು ಇಲ್ಲದಿದ್ದರೂ ಕಛೇರಿಗಳಿಗಾಗಿ ಮತ್ತು ಇತರ ಲ್ಯಾಬ್‌ಗಳಿಗಾಗಿ ಹಾಸ್ಟೆಲ್‌ಗಳಿಗಾಗಿ ವಿ.ವಿ.ಯ ವಿದ್ಯುತ್ ಶುಲ್ಕ ಭರಿಸಲೇಬೇಕಾಗಿತ್ತು. ಈಗಿನ ವಿದ್ಯುತ್ ಬೇಡಿಕೆ ಪ್ರಕಾರ ಇನ್ನೂ ಹೆಚ್ಚು ಸಾಮರ್ಥ್ಯದ ವಿದ್ಯುತ್ ಅಗತ್ಯವಿರುತ್ತದೆ. ವಿದ್ಯುತ್ ಬಳಕೆಗೆ ಈ ಪರಿಸರದ ವೈದ್ಯಕೀಯ ಕಾಲೇಜುಗಳು ಮತ್ತು ಆಸ್ಪತ್ರೆಗಳು ಈಗಿರುವ 11ಕೆವಿಎಯಿಂದ 33ಕೆವಿಎ ವಿದ್ಯುತ್ ಸರಬರಾಜು ವ್ಯವಸ್ಥೆಗೆ ಉನ್ನತೀಕರಿಸಿರುವಾಗ ಈ ವಿಶ್ವವಿದ್ಯಾನಿಲಯವು ಮೆಸ್ಕಾಂನಿಂದ ಕೇವಲ 440ವೋಲ್ಟ್ ವಿದ್ಯುತ್ ಪಡೆಯುವುದು ಸಮಂಜಸವಲ್ಲ. ಅಲ್ಲದೆ, ವಾಣಿಜ್ಯ ಸಂಕೀರ್ಣ ಕಟ್ಟಡ ಅಂಗಡಿ ಮಳಿಗೆ ಮತ್ತು

| | | |
|---|---|---|
| | ಮೇಲೆ ವಿವರಿಸಲಾಗಿರುವ ಎಲ್ಲಾ ವೆಚ್ಚಗಳನ್ನು ಮತ್ತು ಎಲ್ಲಾ ಅಂಶಗಳನ್ನು ಗಮನಿಸಿದಾಗ ವಿದ್ಯುತ್ ಸ್ಥಾವರಗಳನ್ನು ಸ್ಥಾಪಿಸಿ ನಿರ್ವಹಣೆ ಮಾಡುತ್ತಿರುವುದರ ಬದಲಾಗಿ ವಿಶ್ವವಿದ್ಯಾನಿಲಯವು ನೇರವಾಗಿ ವಿಶ್ವವಿದ್ಯಾನಿಲಯಕ್ಕೆ ಅವಶ್ಯವಿರುವ ವಿದ್ಯುತ್ ಪ್ರಮಾಣವನ್ನು ಸರಬರಾಜು ಚೆಸ್ಕಾಂನಿಂದ ಮಾಡಿಸಿಕೊಂಡು ವಿದ್ಯುತ್ ಪ್ರಮಾಣದ ಶುಲ್ಕವನ್ನು ಪಾವತಿಸುವ ಕ್ರಮವನ್ನು ಹಿಂದಿನಿಂದಲೂ ಪಾಲಿಸಿಕೊಂಡು ಬಂದಿದ್ದರೆ ವಿಶ್ವವಿದ್ಯಾನಿಲಯಕ್ಕೆ ಸ್ಥಾವರಗಳ ನಿರ್ವಹಣೆಗಾಗಿ ನಿಯೋಜಿಸಲಾಗಿರುವ ಸಿಬ್ಬಂದಿ ವೇತನ, ವಿದ್ಯುತ್ ಕಂಬಗಳ ನಿರ್ವಹಣೆ, ನಿರ್ವಹಣೆಗಾಗಿ ಬೇಕಾಗುವ ವಿದ್ಯುತ್ ಸಾಮಾಗ್ರಿಗಳ ಖರೀದಿ, ಗ್ರಾಮ ಪಂಚಾಯಿತಿಗೆ ಕಂದಾಯ ಪಾವತಿ ಮುಂತಾದವುಗಳಿಂದ ವಿಶ್ವವಿದ್ಯಾನಿಲಯಕ್ಕೆ ಕಳೆದ ಅನೇಕ ವರ್ಷಗಳಿಂದ ಮುಂದುವರೆದಿದ್ದು ಪ್ರತಿ ವರ್ಷ ಸುಮಾರು ಸರಾಸರಿ 2 ಕೋಟಿಯಷ್ಟು ವೆಚ್ಚ ಆಗುತ್ತಿರುವುದನ್ನು ತಡೆಯಬಹುದಾಗಿತ್ತು.<br>ಇನ್ನಾದರೂ ಈ ವಿದ್ಯುತ್ ಸ್ಥಾವರಗಳಿಂದ ವಿಶ್ವವಿದ್ಯಾನಿಲಯಕ್ಕೆ ಆಗುತ್ತಿರುವ ಆರ್ಥಿಕ ನಷ್ಟದ ಹೊರೆಯನ್ನು ತಪ್ಪಿಸಬಹುದಾಗಿದ್ದು, ಈ ಸ್ಥಾವರಗಳ ನಿರ್ವಹಣೆಯ ಬದಲಾಗಿ ಚೆಸ್ಕಾಂ ರವರಿಂದಲೇ ನೇರವಾಗಿ ವಿದ್ಯುತ್ ಸಂಪರ್ಕವನ್ನು ಪಡೆದು, ಅವಶ್ಯವಿರುವ ವಿದ್ಯುತ್ ಪ್ರಮಾಣವನ್ನು ಪಡೆದು ನಿರ್ವಹಿಸಿದಲ್ಲಿ ವಿಶ್ವವಿದ್ಯಾನಿಲಯಕ್ಕೆ ಆಗುತ್ತಿರುವ ಭಾರಿ ಆರ್ಥಿಕ ನಷ್ಟವನ್ನು ತಡೆಯಬಹುದಾಗಿದೆ ಎಂದು ತಪಾಸಣೆಯಲ್ಲಿ ಅಭಿಪ್ರಾಯವನ್ನು ತಿಳಿಸುತ್ತಾ. ಈ ಕುರಿತು ಶೀಘ್ರವಾಗಿ ಆಡಳಿತಾತ್ಮಕ ಕ್ರಮ ಕೈಗೊಂಡು ಸಮಂಜಸ ಅನುಪಾಲನಾ ವರದಿ ಸಲ್ಲಿಸುವವರೆಗೂ 2016-17ನೇ ಸಾಲಿನಲ್ಲಿ ಒಟ್ಟು ವೆಚ್ಚವಾಗಿರುವ ಮೊತ್ತ ರೂ.2,80,32,535/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. | ವಸತಿಗೃಹ ನಿವಾಸಿಗಳಿಂದ ವಿದ್ಯುತ್ ಶುಲ್ಕ ವಸೂಲಾತಿ ಮಾಡಿ ರೂ. 45,77,617.00ನ್ನು ವಿಶ್ವವಿದ್ಯಾನಿಲಯದ ನಿಧಿಗೆ ಜಮೆಗೊಳಿಸಲಾಗಿದೆ. ವಿದ್ಯುತ್ ವೆಚ್ಚವು ಸಮಂಜಸವಾಗಿರುವುದರಿಂದ ಈ ಆಕ್ಷೇಪಣೆಯನ್ನು ಕೈ ಬಿಡುವಂತೆ ಕೋರಲಾಗಿದೆ. |
| <u>37</u><br><u>(ಎ)</u> | <u>ಬೋಧಕೇತರ ನೌಕರರುಗಳಿಗೆ ನಿಯಮ ಉಲ್ಲಂಘಿಸಿ ವಿಶೇಷ ಭತ್ಯೆಗಳನ್ನು ಪಾವತಿಸಿರುವುದು :</u><br>2016-17ನೇ ಸಾಲಿನ ಮಂಗಳೂರು ವಿಶ್ವವಿದ್ಯಾನಿಲಯದ ಲೆಕ್ಕಪರಿಶೋಧನೆಯಲ್ಲಿ ಬೋಧಕೇತರ ನೌಕರರುಗಳಿಗೆ ನಿಯಮ ಉಲ್ಲಂಘಿಸಿ ವಿಶೇಷ ಭತ್ಯೆಗಳನ್ನು ಪಾವತಿಸಿರುವುದು ಕಂಡು ಬಂದಿರುತ್ತದೆ. ಶಾಸನಬದ್ಧ ಅಧಿಕಾರಿಗಳ ಆಪ್ತ ಶಾಖೆಯ ಸಿಬ್ಬಂದಿಗಳು ಮತ್ತು ಇತರೆ ಸಿಬ್ಬಂದಿ ವರ್ಗದವರಿಗೆ ಮೂಲ ವೇತನದ ಶೇ.5 ರಷ್ಟನ್ನು ವಿಶೇಷ ಭತ್ಯೆಯೆಂದು ಒಟ್ಟು ರೂ.1,24,526/-ಗಳನ್ನು ಪಾವತಿಸಲಾಗಿರುತ್ತದೆ.<br>ಕೆ.ಸಿ.ಎಸ್.ಆರ್ ನಿಯಮ 28 (ಬಿ) ಪ್ರಕಾರ ವಿಶೇಷ ಸಂದರ್ಭಗಳಲ್ಲಿ ಮತ್ತು ಸನ್ನಿವೇಶಗಳಲ್ಲಿ ಹೆಚ್ಚು ಸಮಯ ಕರ್ತವ್ಯ ನಿರ್ವಹಿಸುವುದು ಸರ್ಕಾರಿ ನೌಕರನ ಆದ್ಯ ಜವಾಬ್ದಾರಿಯಾಗಿರುತ್ತದೆ. ಸರ್ಕಾರಿ ಅಧಿಕೃತ ರಜಾ ದಿನಗಳಲ್ಲಿ ಕರ್ತವ್ಯ ನಿರ್ವಹಿಸಿರುವುದಕ್ಕೆ ಯಾವುದೇ ಗೌರವಧನ ಅಥವಾ ವಿಶೇಷ ಭತ್ಯೆಗಳನ್ನು ನೀಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. ಸರ್ಕಾರದ ಸಚಿವಾಲಯದ ಉನ್ನತ ಶಿಕ್ಷಣ ಇಲಾಖೆಯ ಆದೇಶ ಸಂಖ್ಯೆ: ಇಡಿ-34/ಯು.ಡಿ.ಎಸ್/2010 ದಿನಾಂಕ:28.07.2011 ರ ಆದೇಶದಲ್ಲಿ ತಿಳಿಸಿರುವಂತೆ ಶಾಸನ ಬದ್ಧ ಅಧಿಕಾರಿಗಳ ಆಪ್ತ ಶಾಖೆಯ ಸಿಬ್ಬಂದಿಗಳಿಗೆ/ ಇತರೆ ಸಿಬ್ಬಂದಿ ವರ್ಗಕ್ಕೆ ಯಾವುದೇ ವಿಶೇಷ ಭತ್ಯೆಗಳನ್ನು ನೀಡಿದ್ದಲ್ಲಿ ರದ್ದು ಪಡಿಸಲು ಸೂಚಿಸಲಾಗಿದೆ. ಸಿಂಡಿಕೇಟ್ ಕಾರ್ಯಸೂಚಿ ಸಂಖ್ಯೆ:ಸಿಬ್ಬಂದಿ/ಸಾನ/06/44/2011 ದಿನಾಂಕ:30.06.2011 ರ ಸಿಂಡಿಕೇಟ್ ಸಭೆಯ ನಿರ್ಣಯವನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ರ ನಿಯಮ 41(5)(6) ಹಾಗೂ (7) ರನ್ವಯ ಸರ್ಕಾರದ ಮುಖಾಂತರ ಮಾನ್ಯ ಕುಲಾಧಿಪತಿಗಳಿಂದ ಅನುಮೋದನೆಯನ್ನು ಪಡೆಯಬೇಕಾಗಿರುತ್ತದೆ.<br>ಮಂಗಳೂರು ವಿಶ್ವವಿದ್ಯಾನಿಲಯ ಕುಲಸಚಿವರ ಆದೇಶ ಸಂಖ್ಯೆ: ಎಂ.ಯು/55/ಇ.ಎಸ್.ಟಿ(4)/2005-06 ದಿನಾಂಕ: 11.07.2011ರ ಆದೇಶವು ಸರ್ಕಾರದ ಅಥವಾ ಮಾನ್ಯ ಕುಲಾಧಿಪತಿಗಳಿಂದ ಅನುಮೋದನೆ ಪಡೆಯದೆ ಸಿಂಡಿಕೇಟ್ ಸಭೆಯ ನಿರ್ಣಯದಂತೆ ಹೊರಡಿಸಲಾಗಿರುತ್ತದೆ. ಇದು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯಿದೆ 2000 ರ ನಿಯಮಗಳು ಮತ್ತು ಕೆ.ಸಿ.ಎಸ್.ಆರ್ ಉಲ್ಲಂಘನೆಯಾಗಿರುತ್ತದೆ. ವಿಶೇಷ ಭತ್ಯೆ ಮೊತ್ತ ರೂ.1,24,526/-ಗಳನ್ನು ಪಡೆದಿರುವ ಸಿಬ್ಬಂದಿ ವರ್ಗದ ವಿವರಗಳನ್ನು <u>ಅನುಬಂಧ-16 ರಲ್ಲಿ</u> ಒದಗಿಸಿದ್ದು, ಸದರಿ ಸಿಬ್ಬಂದಿಗಳಿಂದ ವಸೂಲಿ ಮಾಡಿ ಸಂಬಂಧಿಸಿದ ಖಾತೆಗೆ ಜಮೆಗೊಳಿಸಿ ಲೆಕ್ಕಪರಿಶೋಧನೆಗೆ ಮಾಹಿತಿ ನೀಡಲು ಸೂಚಿಸಿದೆ. ಹಾಗೂ ಮುಂದೆ ಇಂತಹ ಭತ್ಯೆಗಳ ಮಂಜೂರಾತಿ ಮಾಡುವ ಅಧಿಕಾರಿಗಳ ಮೇಲೆ ನಿಯಮ ಉಲ್ಲಂಘಿಸಿದ ಆರೋಪವೆಂದು ಪರಿಗಣಿಸಿ ಸೂಕ್ತ ಆಡಳಿತಾತ್ಮಕ ಕ್ರಮ ಜರುಗಿಸಲು ಸೂಚಿಸಿದೆ. | ಮಂಗಳೂರು ವಿಶ್ವವಿದ್ಯಾನಿಲಯದ ಶಾಸನಬದ್ಧ ಅಧಿಕಾರಿಗಳ ಆಪ್ತಶಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಮತ್ತು ಶಾಸನಬದ್ಧ ಅಧಿಕಾರಿಗಳ ವಾಹನ ಚಾಲಕರಿಗೆ ವಿಶೇಷ ಕರ್ತವ್ಯ ಭತ್ಯೆ ಮಂಜೂರು ಮಾಡಲಾಗಿದ್ದು, ಕುಲಸಚಿವರ ಕಛೇರಿ ಆದೇಶ ಸಂಖ್ಯೆ ಮಂವಿ/ಸಿಬ್ಬಂದಿ(4)/ಸಿ.ಆರ್ 11/99-2000 ದಿನಾಂಕ 15.02.2019ರಲ್ಲಿ ರದ್ದುಪಡಿಸಿ ಆದೇಶ ಹೊರಡಿಸಲಾಗಿದೆ. ಈಗಾಗಲೇ ಮಂಜೂರು ಮಾಡಲಾದ ವಿಶೇಷ ಭತ್ಯೆ ಮೊತ್ತವನ್ನು ಆಯಾ ಸಿಬ್ಬಂದಿಗಳಿಂದ ವಸೂಲಾತಿ ಮಾಡಿ ವಿಶ್ವವಿದ್ಯಾನಿಲಯ ನಿಧಿಗೆ ಜಮೆಗೊಳಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗಿದೆ. |
| <u>37</u><br><u>(ಬಿ)</u> | <u>ದಿನಭತ್ಯೆ ಮತ್ತು ರಸ್ತೆ ಮೈಲೇಜು ದರಗಳನ್ನು ಹೆಚ್ಚಾಗಿ ಪಾವತಿಸಿರುವುದು :</u><br>2016-17ನೇ ಸಾಲಿನ ಮಂಗಳೂರು ವಿಶ್ವವಿದ್ಯಾನಿಲಯದ ಅಧಿಕಾರಿ ವರ್ಗದವರು ಸದರಿ ವಿಶ್ವವಿದ್ಯಾನಿಲಯದ ಆದೇಶದಂತೆ ಪ್ರತ್ಯೇಕ ದಿನಭತ್ಯೆ ಮತ್ತು ರಸ್ತೆ ಮೈಲೇಜು ದರಗಳನ್ನು ನಿಗದಿಪಡಿಸಿಕೊಂಡಿರುತ್ತಾರೆ. ಆದರೆ, ಕರ್ನಾಟಕ ವಿಶ್ವವಿದ್ಯಾನಿಲಯ ಕಾಯಿದೆ-2000 ರ ರೀತ್ಯಾ ಸಂಸ್ಥೆಯ ಆರ್ಥಿಕ ವ್ಯವಹಾರಗಳನ್ನು ಕೆ.ಸಿ.ಎಸ್.ಆರ್, ಕೆ.ಎಫ್.ಸಿ ಮತ್ತು ಸರ್ಕಾರದ ಸುತ್ತೋಲೆ/ನಿಯಮಗಳ ಪ್ರಕಾರ | ಹೆಚ್ಚುವರಿ ಪ್ರಯಾಣಭತ್ತೆ ಪಾವತಿಯಾಗಿರುವ ಬಗ್ಗೆ ಪರಶೀಲಿಸಿ ವಸೂಲು ಕ್ರಮ ಕೈಗೊಳ್ಳಲಾಗುವುದು. |

| | | |
|---|---|---|
| | ನಿರ್ವಹಿಸಬೇಕಾಗಿರುತ್ತದೆ. ಅನುಬಂಧ-17 ರಲ್ಲಿ ತಿಳಿಸಲಾದ ಅಧಿಕಾರಿಗಳ ಪ್ರವಾಸ ಭತ್ಯೆಯ ಬಿಲ್ಲುಗಳನ್ನು ಪರಿಶೀಲಿಸಲಾಗಿ, ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ಆಇ/3/ಸೆನೀಸೇ/2012/ಬೆಂಗಳೂರು ದಿ:14.06.2012 ರನ್ವಯ ಮತ್ತು ಕೆ.ಸಿ.ಎಸ್.ಆರ್ ನಿಯಮ 514 ರಿಂದ 520 ರವರೆಗಿನ ನಿಯಮಗಳನ್ವಯ ಪ್ರವಾಸ ಕೈಗೊಳ್ಳಲಾಗುವ ಸರ್ಕಾರಿ ನೌಕರರುಗಳಿಗೆ ಮತ್ತು ಅಧಿಕಾರಿಗಳಿಗೆ ಅವರುಗಳ ವೇತನ ಶ್ರೇಣಿಗಳನ್ವಯ ನಿಗದಿಪಡಿಸಲಾಗಿರುವ ದಿನಭತ್ಯೆ ಮತ್ತು ರಸ್ತೆ ಮೈಲೇಜು ದರಗಳನ್ನು ಕ್ಲೈಂ ಮಾಡುವ ಬದಲಾಗಿ ಮಂಗಳೂರು ವಿಶ್ವವಿದ್ಯಾನಿಲಯವು ನಿಗದಿಪಡಿಸಿಕೊಳ್ಳಲಾಗಿರುವ ದರಗಳನ್ವಯ ಪಾವತಿಸಲಾಗಿದೆ. ಆದ್ದರಿಂದ ಹೆಚ್ಚುವರಿ ವ್ಯತ್ಯಾಸದ ಮೊತ್ತಗಳನ್ನು ಸದರಿ ಅಧಿಕಾರಿಗಳಿಂದ ವಸೂಲಿ ಮಾಡಲು ಸೂಚಿಸಲಾಗಿದೆ. | |
| 37 (ಸಿ) | ಪ್ರವಾಸ ಭತ್ಯೆ ನಿಯಮಗಳನ್ನು ಉಲ್ಲಂಘಿಸಿ ರಸ್ತೆ ಮೈಲೇಜು ದರವನ್ನು ಪಡೆದಿರುವುದು :<br>2016-17ನೇ ಸಾಲಿನ ಏಪ್ರಿಲ್-2016 ರ ಮಾಹೆಯ ವೋಚರ್ಸ್‌ಗಳ ಪರಿಶೀಲನೆಯಲ್ಲಿ ವೋಚರ್ ಸಂಖ್ಯೆ: 247 ದಿ:07.04.2016 ಧನಾದೇಶ ಸಂಖ್ಯೆ: 066423 ದಿ:07.04.2016 ರನ್ವಯ ಶ್ರೀಯುತ ಪುರುಷೋತ್ತಮ ನಾಯ್ಕ, ಉಪಕುಲಸಚಿವರು (D.R) ಇವರು ಮಂಗಳೂರಿನಿಂದ ಬೆಂಗಳೂರಿಗೆ ಪ್ರವಾಸ ಮಾಡಲಾಗಿರುವ ಬಿಲ್ಲಿನಲ್ಲಿ Taxi fare ಎಂದು ರಸ್ತೆ ದರ ರೂ.1,000/-ಗಳ ಒಟ್ಟು ಮೊತ್ತವನ್ನು (lumsum) ಪಡೆದಿರುತ್ತಾರೆ. ಆದರೆ ಕರ್ನಾಟಕ ಸರ್ಕಾರಿ ಸೇವಾ ನಿಯಮಾವಳಿ 490 ರಿಂದ 514 ರಂತೆ ಹಾಗೂ 2012 ರ 5ನೇ ವೇತನ ಆಯೋಗದ ನಿಯಮಗಳಂತೆ ಸದರಿ ಅಧಿಕಾರಿಯವರಿಗೆ ರಸ್ತೆ ಮೈಲೇಜು ದರವನ್ನು ರೂ.3/- ಗಳಂತೆ ಅವರು ಪ್ರವಾಸ ಮಾಡಲಾಗಿರುವ ಕಿ.ಮೀ ಗಳಿಗೆ ಲೆಕ್ಕ ಹಾಕಿ ಪಡೆದುಕೊಳ್ಳಬಹುದಾಗಿದೆ. ಆದ್ದರಿಂದ ಈ ಅಧಿಕಾರಿಯವರ ಪ್ರಕರಣದಲ್ಲಿ lumsumರೂ.1,000/-ಗಳನ್ನು ಪಡೆದಿರುವುದನ್ನು ವಸೂಲಿಸಿ, ಜಿ.ಆರ್.ಎ ಖಾತೆಗೆ ಜಮೆ ಮಾಡಿ ವರದಿ ಸಲ್ಲಿಸಲು ಸೂಚಿಸಲಾಗಿದೆ. | ಸದ್ರಿ ಅಧಿಕಾರಿಯವರಿಗೆ ನೀಡಿದ ಟ್ಯಾಕ್ಸಿ ಬಾಡಿಗೆ ಬಗ್ಗೆ ಪರಿಶೀಲಿಸಿ ಹೆಚ್ಚುವರಿ ಪಾವತಿ ಬಗ್ಗೆ ಕ್ರಮ ಕೈಗೊಳ್ಳಲಾಗುವುದು. |
| 37 (ಡಿ) | ಹೆಚ್ಚುವರಿ ಪ್ರಯಾಣಭತ್ಯೆ ಪಾವತಿಸಿರುವುದು :<br>2016-17ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ವಿವಿಧ ಕಾರ್ಯಕ್ರಮಗಳ ಸಂಬಂಧ ಆಗಮಿಸಿದ ಸಮಿತಿ/ ಮಂಡಳಿಗಳ ಸದಸ್ಯರುಗಳಿಗೆ ವಿಶ್ವವಿದ್ಯಾನಿಲಯದಿಂದ ನಿಗದಿಪಡಿಸಲಾದ ಮೊತ್ತಕ್ಕಿಂತ ಹೆಚ್ಚುವರಿಯಾಗಿ ಪ್ರಯಾಣ ಭತ್ಯೆಯನ್ನು ಪಾವತಿಸಿರುವುದನ್ನು ಗಮನಿಸಲಾಗಿದ್ದು. ಹೆಚ್ಚುವರಿ ಪಾವತಿಗೆ ಆದೇಶದ ಪ್ರತಿಗಳನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ: 56/2018-19 ದಿ:19.12.2018 ನ್ನು ಜಾರಿ ಮಾಡಲಾಗಿತ್ತು. ಆದರೆ ಈ ಸಂಬಂಧ ಯಾವುದೇ ಆದೇಶದ ದಾಖಲಾತಿಗಳನ್ನು ಹಾಜರುಪಡಿಸದಿರು ವುದರಿಂದ ಹೆಚ್ಚುವರಿ ಪಾವತಿಸಲಾದ ರೂ.21,260/-ಗಳನ್ನು ಅನುಬಂಧದಲ್ಲಿ ತಿಳಿಸಿರುವವರಿಂದ ವಸೂಲಿಸಿ ವಿಶ್ವವಿದ್ಯಾನಿಲಯದ ಖಾತೆಗೆ ಜಮಾ ಮಾಡಿ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಸೂಚಿಸಿದೆ. ವಿವರಗಳನ್ನು ಅನುಬಂಧ-18 ರಲ್ಲಿ ನೀಡಿದೆ. | ಹೆಚ್ಚುವರಿ ಪ್ರಯಾಣಭತ್ತೆ ಪಾವತಿಯಾಗಿರುವ ಬಗ್ಗೆ ಪರಿಶೀಲಿಸಿ ವಸೂಲು ಮಾಡಲು ಕ್ರಮ ಕೈಗೊಳ್ಳಲಾಗುವುದು. |
| 38. | ಮಾಹಿತಿ ತಂತ್ರಜ್ಞಾನ (I.T Consultant) ಸಂದರ್ಶಕರ ನೇಮಕಾತಿ ಮುಂದುವರೆಸುವ ಕುರಿತು:<br>2015-16ನೇ ಸಾಲಿನಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಮಾಹಿತಿ ತಂತ್ರಜ್ಞಾನ ವಿಭಾಗಕ್ಕೆ ಇಬ್ಬರು ಮಾಹಿತಿ ತಂತ್ರಜ್ಞಾನ ಸಂದರ್ಶಕರನ್ನಾಗಿ ಮಾಹೆಯಾನ ರೂ.22,000/-ದರದಲ್ಲಿ ಸಂಚಿತ ವೇತನದಡಿ ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳುವಂತೆ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಇಲಾಖೆಯ ಕೌನಿಲ್ಸ್ ಇವರ ಪತ್ರ ಸಂಖ್ಯೆ: KSHEC/IT Consultants/2015-16 ದಿನಾಂಕ:29.05.2015 ರಲ್ಲಿನ ಪತ್ರದಲ್ಲಿ 8(ಸಿ) ನಲ್ಲಿ ಸೂಚಿಸಲಾಗಿದೆ. ಆ ಪ್ರಕಾರ ಶ್ರೀ ಗಣೇಶ್ ಮತ್ತು ನಿತಿನ್.ವಿ ಇವರನ್ನು ದಿ:01.06.2015 ರಿಂದ 6 ತಿಂಗಳ ಅವಧಿಯವರೆಗೆ ನೇಮಕಾತಿ ಮಾಡಿಕೊಳ್ಳಲಾಗಿರುತ್ತದೆ. ನಂತರ ಸದರಿ ಆದೇಶದ ರೀತ್ಯಾ ಸಂದರ್ಶಕರುಗಳನ್ನು ಮುಂದುವರೆಸಬೇಕಾದಲ್ಲಿ ಅವರ ಕಾರ್ಯ ಕ್ಷಮತೆಯನ್ನು ಆಧರಿಸಿ ಉತ್ತಮವಾಗಿದ್ದಲ್ಲಿ, ಮುಂದುವರೆಸಬಹುದಾಗಿರುತ್ತದೆ.<br>ಉನ್ನತ ಶಿಕ್ಷಣ ಇಲಾಖೆಯು ಈ ಬಗ್ಗೆ ನಿಗದಿಪಡಿಸಲಾಗಿರುವ ಮಾನದಂಡದಂತೆ 6 ತಿಂಗಳ ಅವಧಿಯವರೆಗೆ ಅಂದರೆ ದಿ:01.06.2015 ರಿಂದ 31.11.2015 ರವರೆಗೆ ನೇಮಕಾತಿ ಮಾಡಿಕೊಳ್ಳಲು ಅವಕಾಶವಿರುತ್ತದೆ. ಆದರೆ, ದಿ:31.11.2015 ರ ನಂತರ ಮುಂದುವರೆಸಲು ಸರ್ಕಾರದಿಂದ ಪೂರ್ವಾನುಮತಿ ಪಡೆದಿರುವ ಆದೇಶಗಳು ಹಾಗೂ ಸದರಿ ತಾತ್ಕಾಲಿಕ ನೌಕರರ ಕಾರ್ಯ ಕ್ಷಮತೆಯ ದೃಢೀಕರಣ ಪತ್ರವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣೆ ಪತ್ರ ಸಂಖ್ಯೆ:17 ದಿನಾಂಕ:16.11.2018 ರಲ್ಲಿ ಜಾರಿ ಮಾಡಿದ್ದರೂ, ಕೋರಲಾಗಿರುವ ಕಡತಗಳನ್ನು ಹಾಜರುಪಡಿಸದ ಕಾರಣ ರೂ.5,26,534/-ಗಳನ್ನು ಆಕ್ಷೇಪಣೆಗೆ ಸೂಚಿಸಿದೆ. | ಈ ಕಚೇರಿ ಅಧಿಕೃತ ಜ್ಞಾಪನ ಸಂಖ್ಯೆ MU/10/EST/27/2015-16 ದಿನಾಂಕ 15.12.2015 ರಲ್ಲಿ ಶ್ರೀ ಗಣೇಶ್ ಮತ್ತು ನಿತಿನ್ ವಿ ಕಿದಿಯೂರು ಇವರಿಬ್ಬರನ್ನು I.T Consultants ಗಳಾಗಿ ನೇಮಕ ಮಾಡಲಾಗಿತ್ತು. ಅದರಲ್ಲಿ ಶ್ರೀ ನಿತಿನ್ ವಿ. ಕಿದಿಯೂರು ಇವರು ಸೇವೆಯಿಂದ ಬಿಡುಗಡೆಗೊಂಡಿರುತ್ತಾರೆ. ಈ ಕಡತವನ್ನು ಈಗಾಗಲೇ ಲೆಕ್ಕ ಪರಿಶೋಧಕರಿಗೆ ಹಾಜರು ಪಡಿಸಲಾಗಿರುತ್ತದೆ.<br>ಶ್ರೀ ಗಣೇಶ್ ಇವರು ತಮ್ಮ ಸಂಭಾವನೆಯನ್ನು ರೂ. 22,000/- ದಿಂದ ರೂ. 25,000/-ಕ್ಕೆ ಹೆಚ್ಚಿಸುವಂತೆ ಕೋರಿದ್ದು, ಈ ಸಂಬಂಧ (MU/10/EST(2)/2015-16 ದಿನಾಂಕ 29.08.2016ರಲ್ಲಿ) ಸರ್ಕಾರಕ್ಕೆ ಪತ್ರ ಬರೆಯಲಾಗಿತ್ತು. ಇದಕ್ಕೆ ಸಂಬಂಧಿಸಿ ಯಾವುದೇ ಅನುಮತಿ ಬಾರದಿರುವ ಕಾರಣ ದಿನಾಂಕ 12.04.2018 ರನ್ವಯ ವೇತನವನ್ನು ಪರಿಷ್ಕರಿಸಿ ರೂ. 22,000/- ದಿಂದ ರೂ. 25,000/- ಸರಕಾರದ ಅನುಮೋದನೆಯ ನಿರೀಕ್ಷೆಯಲ್ಲಿ ಮಾನ್ಯ ಕುಲಪತಿಯವರ ದಿನಾಂಕ 12.02.2018ರ ಆದೇಶದಂತೆ ಪಾವತಿಸಲಾಗಿರುತ್ತದೆ. ಆದರೂ ಈ ಬಗ್ಗೆ ಆಕ್ಷೇಪಣೆ ಇರುವ ಕಾರಣ ಮತ್ತೊಮ್ಮೆ ಸರಕಾರಕ್ಕೆ ನೆನಪೋಲೆಯನ್ನು ಸಲ್ಲಿಸುವ ಮೂಲಕ ಕ್ರಮ ಕೈಗೊಳ್ಳಲಾಗಿದೆ. |

| | | |
|---|---|---|
| 39 | <u>ಕಾನೂನು ವೆಚ್ಚದ ಪಾವತಿ ಸಂಬಂಧ ಪೂರಕ ದಾಖಲಾತಿಗಳನ್ನು ಹಾಜರುಪಡಿಸದಿರುವುದು :</u><br>2016-17ನೇ ಸಾಲಿನಲ್ಲಿ ಜುಲೈ ಮಾಹೆಯ ವೋಚರ್ ಸಂಖ್ಯೆ: 2271 ರಲ್ಲಿ ಚೆಕ್ ಸಂಖ್ಯೆ: 119213 ದಿನಾಂಕ: 08.07.2016 ರಲ್ಲಿ ರೂ.50,000/-ಗಳನ್ನು ಪಿ.ಎಸ್ ರಾಜಗೋಪಾಲ, ವಕೀಲರು ಬೆಂಗಳೂರು ಇವರಿಗೆ ಕಾನೂನು ವೆಚ್ಚವಾಗಿ ಪಾವತಿಸಿರುವುದನ್ನು ಗಮನಿಸಲಾಗಿದ್ದು, ಸದರಿ ಪಾವತಿಗೆ ಸಂಬಂಧಿಸಿದಂತೆ ಸರ್ಕಾರದ ಆದೇಶಗಳು, ವಿಶ್ವವಿದ್ಯಾನಿಲಯದ ಪರಿನಿಯಮಗಳು ಹಾಗೂ ಪೂರಕ ದಾಖಲಾತಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ: 32/2018-19 ದಿ:28.11.2018ನ್ನು ನೀಡಲಾಗಿದ್ದರೂ, ಸಹ ಈ ಸಂಬಂಧ ಯಾವುದೇ ಪೂರಕ ದಾಖಲಾತಿಗಳನ್ನು ಹಾಜರುಪಡಿಸದಿರುವುದರಿಂದ ಪಾವತಿಸಲಾದ ರೂ.50,000/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. | ಸದರಿ ಪಾವತಿಯು ಕಡತ ಸಂಖ್ಯೆ MU/23/EST(1)/2014-15/W.P ರಲ್ಲಿ ಆಗಿರುತ್ತದೆ. ಡಾ. ಯು. ವಿಜಯಮ್ಮ D/o ವೀರಣ್ಣ, ಮೈಸೂರು ಇವರು ಮಂಗಳೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜಿನ ಕನ್ನಡ ಸಹಾಯಕ ಪ್ರಾಧ್ಯಾಪಕ ಹುದ್ದೆಯ ನೇಮಕಾತಿಗೆ ಸಂಬಂಧಿಸಿ ಉಚ್ಛ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ಇದಕ್ಕೆ ಸಂಬಂಧಿಸಿ, ವಿಶ್ವವಿದ್ಯಾನಿಲಯದ ಪರವಾಗಿ ವಾದಿಸಲು ವಕೀಲರನ್ನು ನೇಮಕ ಮಾಡುವ ಬಗ್ಗೆ ಆದೇಶಕ್ಕೆ ಕಡತದಲ್ಲಿ ಮಂಡಿಸಿದ್ದು, ಮಂಗಳೂರು ವಿಶ್ವವಿದ್ಯಾನಿಲಯದ ವಕೀಲರ ಪಟ್ಟಿಯಿಂದ ಮಾನ್ಯ ಕುಲಪತಿಯವರು ಶ್ರೀ ಪಿ.ಎಸ್. ರಾಜಗೋಪಾಲ ಇವರ ಹೆಸರನ್ನು ಸೂಚಿಸಿರುತ್ತಾರೆ. ಸದರಿಯವರಿಗೆ ಈ ಕೇಸ್‌ನ್ನು ವಹಿಸಲಾಗಿದ್ದು, ಅದರಂತೆ ವಿಶ್ವವಿದ್ಯಾನಿಲಯದ ಪರವಾಗಿ ವಾದಿಸಿದ ವಕೀಲರಾದ ಶ್ರೀ ಪಿ.ಎಸ್. ರಾಜಗೋಪಾಲ್ ಅವರು ನೀಡಿದ ಬಿಲ್ಲಿನ ಮೊತ್ತ ರೂ.50,000/-ನ್ನು ಪಾವತಿಸಲಾಗಿದೆ.ಪ್ರಸ್ತುತ ನಿಯಮಾನುಸಾರ ವಕೀಲರ ಪಟ್ಟಿಯನ್ನು ಸಿಂಡಿಕೇಟು ಸಭೆಗೆ ಮಂಡಿಸಿ ಅನುಮೋದನೆ ಪಡೆಯಲಾಗುತ್ತದೆ. ಆದುದರಿಂದ ಸದರಿ ಲೆಕ್ಕ ಪರಿಶೋಧಕರು ಆಕ್ಷೇಪಣೆಯನ್ನು ಕೈಬಿಡುವಂತೆ ಕೋರಲಾಗಿದೆ. |
| 40 | <u>ಶ್ರೀ ನಿತೀಶ್.ಪಿ.ಬೈಂದೂರ್ ತಾತ್ಕಾಲಿಕ ಫೋಟೋಗ್ರಾಫರ್-ಕಂ-ಆರ್ಟಿಸ್ಟ್ ರವರಿಗೆ ತುಟ್ಟಿ ಭತ್ಯೆ ಮತ್ತು ಇತರೇ ಭತ್ಯೆಗಳನ್ನು ಪಾವತಿಸಿರುವುದು :</u><br>2016-17ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಶ್ರೀ ನಿತೀಶ್.ಪಿ.ಬೈಂದೂರ್ ಫೋಟೋಗ್ರಾಫರ್-ಕಂ-ಆರ್ಟಿಸ್ಟ್ (ತಾತ್ಕಾಲಿಕ) ಇವರನ್ನು ವಿ.ವಿ ಆದೇಶ ಸಂಖ್ಯೆ: ಮವಿ/23/ಸಿಬ್ಬಂದಿ(2)/2016-17 ದಿನಾಂಕ:01.08.2016 ರ ಆದೇಶದನ್ವಯ ತಾತ್ಕಾಲಿಕವಾಗಿ ನೇಮಕ ಮಾಡಿಕೊಂಡು ವೇತನ ಶ್ರೇಣಿ ರೂ.16,000 - 29,600 ರ ವೇತನ ಶ್ರೇಣಿಯನ್ನು ನಿಗದಿಪಡಿಸಿರುವ ಕ್ರಮ ನೇಮಕಾತಿ ಪ್ರಕ್ರಿಯೆಗೆ ವಿರುದ್ಧವಾಗಿರುತ್ತದೆ. ಈ ನೇಮಕಾತಿಯು ಅವೈಜ್ಞಾನಿಕವಾಗಿರುತ್ತದೆ. ಮುಂದುವರೆದು ತುಟ್ಟಿಭತ್ಯೆ, ಮನೆಬಾಡಿಗೆ ಭತ್ಯೆ, ವೈದ್ಯಕೀಯ ಭತ್ಯೆಗಳನ್ನು ಸಹ ಪಾವತಿಸಿರುವ ಕ್ರಮ ಖಾಯಂ ನೌಕರನೆಂದು ಪರಿಗಣಿಸಿರುವುದು ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಿರುತ್ತದೆ. ಆದರೆ, ನೇಮಕಾತಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ಸರ್ಕಾರದ ಅನುಮೋದನೆ, ಆರ್ಥಿಕ ಇಲಾಖೆ ಅನುಮೋದನೆ, ಜಾಹೀರಾತು, ಇತ್ಯಾದಿ ವಿವರಗಳನ್ನು ಹಾಜರುಪಡಿಸಿರುವುದಿಲ್ಲದ ಕಾರಣ ಈ ನೇಮಕಾತಿಯು ಸಕ್ಷಮ ಪ್ರಾಧಿಕಾರದ ಅನುಮೋದನೆಯಿಂದ ಆಗಿರುವುದಿಲ್ಲವೆಂದು ಭಾವಿಸಬೇಕಾಗುತ್ತದೆ. ಸದರಿ ತಾತ್ಕಾಲಿಕ ನೌಕರನಿಗೆ ನೀಡಿರುವ ತುಟ್ಟಿಭತ್ಯೆ, ಮನೆಬಾಡಿಗೆ ಭತ್ಯೆ, ವೈದ್ಯಕೀಯ ಭತ್ಯೆಗಳನ್ನು ವಸೂಲಿ ಮಾಡುವುದು ಹಾಗೂ ಈ ವೇತನ ಭತ್ಯೆಗಳನ್ನು ಪಾವತಿಸಿರುವವರ ವಿರುದ್ಧ ಆಡಳಿತಾತ್ಮಕ ಕ್ರಮ ಜರುಗಿಸಿ ಸರ್ಕಾರಕ್ಕೆ ವರದಿ ಸಲ್ಲಿಸುವುದು. ಪಾವತಿಸಿದ ಮೊಬಲಗು ರೂ.1,68,463/-ಗಳನ್ನು ವಸೂಲಾತಿಗೆ ಸೂಚಿಸಿದೆ. ವಿವರಗಳನ್ನು <u>ಅನುಬಂಧ-19 ರಲ್ಲಿ</u> ವರದಿಗೆ ಲಗತ್ತಿಸಿದೆ. ಮುಂದುವರೆದು ಪುನರ್ ಪರಿಶೀಲನಾ ವೇಳೆಯಲ್ಲಿ ಸದರಿಯವರಿಗೆ ನೀಡಲಾಗಿರುವ ಭತ್ಯೆಯನ್ನು ಹಿಂಪಡೆಯಲಾಗಿದೆ ಎಂದು ಮೌಖಿಕವಾಗಿ ತಿಳಿಸಿರುತ್ತಾರೆ. ಆದರೆ ವ್ಯತ್ಯಾಸದ ಮೊತ್ತವನ್ನು ವಸೂಲಿ ಮಾಡಿ ಸದರಿಯವರು ಸಂಚಿತ (Consolidated) ವೇತನದಡಿ ಕಾರ್ಯ ನಿರ್ವಹಿಸುತ್ತಿರುವುದನ್ನು ಲಿಖಿತವಾಗಿ ಸಲ್ಲಿಸುವವರೆಗೂ ಈ ಕಂಡಿಕೆಯನ್ನು ಮುಂದುವರೆಸಿದೆ. | ಶ್ರೀ ನಿತೀಶ್.ಪಿ.ಬೈಂದೂರ್, ಫೋಟೋಗ್ರಾಫರ್ ಇವರನ್ನು ದಿನಾಂಕ 01.08.2016 ರ ವಿಶ್ವವಿದ್ಯಾನಿಲಯದ ಆದೇಶದಲ್ಲಿ ತಾತ್ಕಾಲಿಕ ನೆಲೆಯಲ್ಲಿ ನೇಮಕ ಮಾಡಿ ವೇತನ ಶ್ರೇಣಿ ರೂ. 16,000-29,600/-ನಿಗದಿಪಡಿಸಿರುವ ಕ್ರಮ ನೇಮಕಾತಿ ಪ್ರಕ್ರಿಯೆಗೆ ವಿರುದ್ಧವಾಗಿರುತ್ತದೆ ಮತ್ತು ಸದರಿಯವರಿಗೆ ತುಟ್ಟಿ ಭತ್ಯೆ, ಮನೆ ಬಾಡಿಗೆ ಭತ್ಯೆ, ವೈದ್ಯಕೀಯ ಭತ್ಯೆ ಪಾವತಿಸಿ ಖಾಯಂ ನೌಕರನೆಂದು ಪರಿಗಣಿಸಲಾಗಿರುವ ನೇಮಕಾತಿಯನ್ನು ಲೆಕ್ಕ ತಪಾಸಣಾ ವರದಿಯಲ್ಲಿ ಆಕ್ಷೇಪಿಸಲಾಗಿದೆ. ಈ ಎಲ್ಲಾ ಭತ್ಯೆ ಹಾಗೂ ವೇತನ ಪಾವತಿಸಿರುವವರ ಮೇಲೆ ಆಡಳಿತಾತ್ಮಕ ಕ್ರಮ ಜರುಗಿಸಿ ರೂ.1,68,463/- ವಸೂಲಾತಿಗೆ ಸೂಚಿಸಲಾಗಿದೆ. ಈ ವಿಷಯವನ್ನು ಕಡತದಲ್ಲಿ ಮಂಡಿಸಿ ಆಕ್ಷೇಪಣೆಯಿರುವ ಮೊತ್ತವನ್ನು ನಿಯಮಾನುಸಾರ ಸದರಿಯವರಿಂದ ಹಿಂಪಡೆಯಲು ದಿನಾಂಕ 19.09.2019 ರಂದು ಈ ಕಚೇರಿಯಿಂದ ಸದರಿಯವರಿಗೆ ಪತ್ರ ಕಳುಹಿಸುವ ಮೂಲಕ ಕ್ರಮ ಕೈಗೊಳ್ಳಲಾಗಿರುತ್ತದೆ. ಪ್ರಸ್ತುತ ಸದರಿಯವರು ಫೋಟೋಗ್ರಾಫರ್‌ರಾಗಿ ಕರ್ತವ್ಯದಲ್ಲಿರುವುದಿಲ್ಲ ಎಂದು ಈ ಮೂಲಕ ತಿಳಿಸುತ್ತಾ ಆಕ್ಷೇಪಣೆಯನ್ನು ಕೈಬಿಡುವಂತೆ ಕೋರಲಾಗಿದೆ. |
| 41 | <u>ಡಾ॥ ಎಂ.ಕೆ ಭಂಡಿ ಗ್ರಂಥಪಾಲಕರು ರವರನ್ನು ವಯೋನಿವೃತ್ತಿಗೊಳಿಸದೇ 62 ವರ್ಷಗಳವರೆಗೆ ಸೇವೆಯಲ್ಲಿ ಮುಂದುವರೆಸಿರುವುದು :</u><br>2016-17ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಶ್ರೀ ಎಂ.ಕೆ.ಭಂಡಿ, ಗ್ರಂಥಪಾಲಕರು ರವರ ಸೇವಾ ವಹಿಯನ್ನು ಮತ್ತು ವೈಯಕ್ತಿಕ ಕಡತಗಳನ್ನು ಪರಿಶೀಲಿಸಲಾಗಿ ಶ್ರೀ ಎಂ.ಕೆ.ಭಂಡಿ ರವರ ಜನ್ಮ ದಿನಾಂಕ:13.10.1955 ರಲ್ಲಿ ಜನಿಸಿದ್ದು ಇವರನ್ನು ದಿನಾಂಕ:31.10.2015 ಕ್ಕೆ ಕೆ.ಸಿ.ಎಸ್.ಆರ್ ನಿಯಮ 95 ರ ಪ್ರಕಾರ ವಯೋ ನಿವೃತ್ತಿ ಮಾಡಬೇಕಾಗಿರುತ್ತದೆ.<br>ಸರ್ಕಾರದ ಕೆಳಕಂಡ ಆದೇಶದಲ್ಲಿ ಸ್ಪಷ್ಟೀಕರಣ ನೀಡಿದ್ದರೂ ಸಹ ದಿನಾಂಕ ಇದರಿಂದ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ನಷ್ಟ | |

ಉಂಟು ಮಾಡಲಾಗಿದೆ. 60 ರಿಂದ 62 ವರ್ಷಗಳ ವಯೋ ನಿವೃತ್ತಿಯ ಬಗ್ಗೆ ಸ್ಪಷ್ಟೀಕರಣ ಪಡೆಯಲು ಸಿಂಡಿಕೇಟ್, ವಿವಿಧ ವಿಶ್ವವಿದ್ಯಾನಿಲಯಗಳು ಮತ್ತು ಸರ್ಕಾರದೊಡನೆ ನಡೆಸಿರುವ ಪತ್ರ ವ್ಯವಹಾರಗಳ ವಿವರಗಳು ಮತ್ತು ನಿರ್ದೇಶನಗಳು ಈ ಕೆಳಕಂಡಂತಿವೆ:

1. ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಆದೇಶ ಸಂಖ್ಯೆ: ಇಡಿ254/ಯು.ಎನ್.ಇ/2014/ ಬೆಂಗಳೂರು ದಿನಾಂಕ: 28.09.2015 ರ ಆದೇಶದಲ್ಲಿ ಯು.ಜಿ.ಸಿ ವೇತನ ಪಡೆಯುತ್ತಿರುವ ಗ್ರಂಥಪಾಲಕರ ಹುದ್ದೆಯು ಬೋಧಕೇತರ ಹುದ್ದೆಯಾಗಿರುವುದರಿಂದ 60 ವರ್ಷಗಳಿಗೆ ವಯೋ ನಿವೃತ್ತಿ ಮಾಡಬೇಕಾಗಿರುತ್ತದೆ. ಈ ಆದೇಶವನ್ನು ಉಲ್ಲಂಘಿಸಿ ದಿನಾಂಕ: 19.12.2015 ರ ಸಿಂಡಿಕೇಟ್ ಸಭೆಯಲ್ಲಿ ಗ್ರಂಥಪಾಲಕರನ್ನು 60 ವರ್ಷದಿಂದ 62 ವರ್ಷಗಳಿಗೆ ಮುಂದುವರೆಸಲು ತೀರ್ಮಾನಿಸಲಾಗಿರುತ್ತದೆ. ಇದರಿಂದಾಗಿ ಸಂಸ್ಥೆಗೆ ಆರ್ಥಿಕ ನಷ್ಟ ಉಂಟಾಗಿರುತ್ತದೆ.
2. ಸರ್ಕಾರದ ಪತ್ರ ಸಂಖ್ಯೆ: ಇಡಿ94/ಯು.ಬಿ.ವಿ/2016 ದಿನಾಂಕ: 08.06.2016 ರ ಪತ್ರದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಪತ್ರ ದಿನಾಂಕ: 02.03.2016 ಕ್ಕೆ ಸ್ಪಷ್ಟೀಕರಣ ನೀಡುತ್ತಾ ಯು.ಜಿ.ಸಿ ವೇತನ ಶ್ರೇಣಿಗೆ ಒಳಪಡುವ ವಿಶ್ವವಿದ್ಯಾನಿಲಯಗಳ ಗ್ರಂಥಪಾಲಕರಿಗೆ ಬೋಧಕರು ಎಂಬ ಪರಿಭಾಷೆಗೆ ಒಳಪಡದ ಕಾರಣ 60 ವರ್ಷಕ್ಕೆ ವಯೋ ನಿವೃತ್ತಿಗೊಳಿಸಿರುವುದನ್ನು ಮತ್ತೊಮ್ಮೆ ಸ್ಪಷ್ಟೀಕರಣ ನೀಡಲಾಗಿದ್ದಾಗ್ಯೂ ಸಹ ದಿನಾಂಕ:31.08.2016 ರ ಸಿಂಡಿಕೇಟ್ ಸಭೆಯಲ್ಲಿ ಶ್ರೀ ಭಂಡಿಯವರಿಗೆ ಒಂದು ತಿಂಗಳ ಕಾಲಾವಕಾಶ ನೀಡಿ ನ್ಯಾಯಾಲಯದಲ್ಲಿ ದಾವೇ ಹೂಡಲು ಅನುವು ಮಾಡಿ ಕೊಡಲಾಗಿದೆ.
3. ಕುವೆಂಪು ವಿಶ್ವವಿದ್ಯಾನಿಲಯದ ಕುಲಸಚಿವರ ಅಭಿಪ್ರಾಯದ ಪತ್ರ ಸಂಖ್ಯೆ:ಕುವಿ/ಮಾಸನಿ/74/466/2016-17 ದಿನಾಂಕ: 02.05.2016 ರಲ್ಲಿ 60 ವರ್ಷಗಳಿಗೆ ವಯೋ ನಿವೃತ್ತಿಗೊಳಿಸಿರುವ ಬಗ್ಗೆ ತಿಳಿಸಲಾಗಿರುತ್ತದೆ.
4. ಬೆಂಗಳೂರು ವಿಶ್ವವಿದ್ಯಾನಿಲಯದ ಪತ್ರ ಸಂಖ್ಯೆ: ಬೆಂವಿವಿ/ಸಿಬ್ಬಂದಿ-01/ಇ2/ಇತರೆ/2013 ದಿನಾಂಕ:20.09.2013 ರ ಪತ್ರದಲ್ಲಿ 60 ವರ್ಷಕ್ಕೆ ವಯೋ ನಿವೃತ್ತಿ ಮಾಡಿರುವ ಬಗ್ಗೆ ಅಭಿಪ್ರಾಯ ತಿಳಿಸಲಾಗಿರುತ್ತದೆ.
5. ಕೆ.ಸಿ.ಎಸ್.ಆರ್ ನಿಯಮ-95 ರನ್ವಯ 60 ವರ್ಷಗಳಿಗೆ ವಯೋ ನಿವೃತ್ತಿಗೊಳಿಸಬೇಕಾಗಿರುತ್ತದೆ.
6. ಈ ಮೇಲೆ ತಿಳಿಸಿರುವ ಸರ್ಕಾರದ ಆದೇಶಗಳು ಹಾಗೂ ವಿವಿಧ ವಿಶ್ವವಿದ್ಯಾನಿಲಯಗಳು ಸ್ಪಷ್ಟೀಕರಣ ನೀಡಿದ್ದರೂ ದಿನಾಂಕ: 31.10.2015 ರ ಅಂತ್ಯಕ್ಕೆ ಶ್ರೀ ಎಂ.ಕೆ.ಭಂಡಿ ಯವರನ್ನು ವಯೋ ನಿವೃತ್ತಿ ಗೊಳಿಸದೆ ದಿ:28.09.2016 ರವರೆಗೆ ಸುಮಾರು 11 ತಿಂಗಳ ಕಾಲಾವಕಾಶವನ್ನು ಸದರಿ ನೌಕರರಿಗೆ ನೀಡಿ ನಂತರ ಮಾನ್ಯ ಉಚ್ಛ ನ್ಯಾಯಾಲಯಕ್ಕೆ ದಾವೆ ಹೂಡಿ ದಿನಾಂಕ:28.09.2016ರ ಮಧ್ಯಂತರ ಆದೇಶವನ್ನು ಪಡೆಯಲು ಅನುವು ಮಾಡಿಕೊಟ್ಟಿರುವ ಬಗ್ಗೆ ಸೂಕ್ತ ವಿವರಣೆಯನ್ನು ನೀಡುವಂತೆ ವಿಚಾರಣಾ ಪತ್ರ ಸಂಖ್ಯೆ:158/31.01.2019 ರಲ್ಲಿ ಕೋರಲಾಗಿತ್ತು. ಆದರೆ ಸಮಂಜಸ ವಿವರಣೆಯನ್ನು ನೀಡದಿರುವುದರಿಂದ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ನಷ್ಟ ಉಂಟಾಗಿರುತ್ತದೆ.

ಸದರಿ ಉದ್ಯೋಗಿಗೆ ಪಾವತಿಸಿರುವ ವೇತನ ವಿವರಗಳು ಈ ಕೆಳಕಂಡಂತಿದೆ:

| | |
|---|---|
| ದಿನಾಂಕ:01.11.2015 ರಿಂದ 12.10.2017 ರವರೆಗೆ ಪಾವತಿಸಿರುವ ವೇತನ ಭತ್ಯೆಗಳು | ರೂ.43,53,265 |
| ವಾಸ್ತವವಾಗಿ ಪಾವತಿಸಬೇಕಾಗಿರುವ ನಿವೃತ್ತಿವೇತನ ಭತ್ಯೆಗಳ ಮೊತ್ತ | ರೂ.13,41,842 |
| ಹೆಚ್ಚುವರಿ ಪಾವತಿಸಿರುವ ವೇತನ ಭತ್ಯೆಗಳ ಮೊತ್ತ | ರೂ.30,11,423 |

ಈ ಮೇಲೆ ತಿಳಿಸಿರುವಂತೆ ಕೆ.ಸಿ.ಎಸ್.ಆರ್ ನಿಯಮ-95 ರನ್ವಯ ಹಾಗೂ ಸರ್ಕಾರದ ಆದೇಶ ಸಂಖ್ಯೆ: ಇಡಿ/254/ಯು.ಎನ್.ಇ/2014/ಬೆಂಗಳೂರು ದಿನಾಂಕ:28.09.2015 ಮತ್ತು ಸರ್ಕಾರದ ಆದೇಶ ಸಂಖ್ಯೆ:ಇಡಿ/94/ ಯು.ಯು.ವಿ/2016 ದಿನಾಂಕ:08.06.2016 ಹಾಗೂ ಕುವೆಂಪು ವಿಶ್ವವಿದ್ಯಾನಿಲಯ, ಬೆಂಗಳೂರು ವಿಶ್ವವಿದ್ಯಾನಿಲಯಗಳಲ್ಲಿ ವಯೋ ನಿವೃತ್ತಿ 60 ವರ್ಷಗಳಾಗಿರುವುದರ ಬಗ್ಗೆ ಸ್ಪಷ್ಟವಾಗಿ ತಿಳಿಸಿದ್ದರೂ ಸಹ ಸದರಿ ಆದೇಶಗಳನ್ನು ಉಲ್ಲಂಘಿಸಿ ದಿನಾಂಕ:01.11.2015 ರಿಂದ 12.10.2017 ರವರೆಗೆ ಮುಂದುವರೆಸಿ ರೂ.30,11,423/-ಗಳನ್ನು ಹೆಚ್ಚುವರಿ ವೇತನ ಭತ್ಯೆಗಳನ್ನು ಭರಿಸುವ ಮೂಲಕ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ನಷ್ಟ ಉಂಟು ಮಾಡಿರುವುದಕ್ಕೆ ಕಾರಣರಾಗಿರುವ ಕುಲಸಚಿವರು ಮತ್ತು ಸಂಬಂಧಿಸಿದ ಎಲ್ಲಾ ಅಧಿಕಾರಿಗಳ

ಈ ಬಗ್ಗೆ ಪತ್ರ ಸಮಸಂಖ್ಯೆ ದಿನಾಂಕ 14.03.2019ರಲ್ಲಿ ಈಗಾಗಲೇ ಸ್ಪಷ್ಟೀಕರಣವನ್ನು ಒದಗಿಸಲಾಗಿರುತ್ತದೆ.

ಸದರಿ ಪತ್ರದಲ್ಲಿ ತಿಳಿಸಿದಂತೆ ಕರ್ನಾಟಕ ರಾಜ್ಯ ಉಚ್ಛ ನ್ಯಾಯಾಲಯದ ಮಧ್ಯಂತರ ಆದೇಶದಂತೆ ಡಾ. ಎಂ.ಕೆ. ಭಂಡಿ ಇವರನ್ನು ದಿನಾಂಕ 12.10.2017ರವರೆಗೆ ಸೇವೆಯಲ್ಲಿ ಮುಂದುವರೆಸಲಾಗಿದೆ. ಕೆಲಸ ಮಾಡಿದ ಅವಧಿಗೆ ಸಂಬಳ ನೀಡಬೇಕಾಗಿರುವುದರಿಂದ ಸದರಿಯವರಿಗೆ ವೇತನ ಭತ್ಯೆ ಇತ್ಯಾದಿಗಳನ್ನು ಪಾವತಿಸಲಾಗಿದೆ.

2016-17ನೇ ಸಾಲಿನ ಲೆಕ್ಕ ತಪಾಸಣಾ ವರದಿಯ ಆಕ್ಷೇಪಣೆಯಲ್ಲಿ ಸೂಚಿಸಿದಂತೆ ಘನ ಉಚ್ಛ ನ್ಯಾಯಾಲಯದ ರಿಟ್ ಪಿಟಿಶನ್ ನಂಬ್ರ 13051/2016 (ಎಸ್‌ಆರ್/ಸಿ.ಡಬ್ಲ್ಯೂ ರಿಟ್ ಪಿಟಿಶನ್ ನಂಬ್ರ 33239/2016 ಮತ್ತು 51521/2016 (ಎಸ್‌ಆರ್‌ಎಎಸ್)ರ ತೀರ್ಪಿನ ಪ್ರಕಾರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಅನುಮೋದನೆ ಪಡೆದು ಲೆಕ್ಕ ತಪಾಸಣೆಗೆ ಹಾಜರುಪಡಿಸಲು ಕ್ರಮಕೈಗೊಳ್ಳಲಾಗುವುದು.

| | | |
|---|---|---|
| | ಮೇಲೆ ಆಡಳಿತಾತ್ಮಕ ಕ್ರಮ ವಹಿಸುವ ಮೂಲಕ ರೂ.30,11,423/-ಗಳನ್ನು ಆರ್ಥಿಕ ನಷ್ಟಕ್ಕೆ ಹೊಣೆಯಾಗಿರುವವರಿಂದ ವಸೂಲಾತಿ ಮಾಡಿ ವಿಶ್ವವಿದ್ಯಾನಿಲಯದ ಲೆಕ್ಕಶೀರ್ಷಿಕೆಗೆ ಜಮೆ ಮಾಡಿ ಜಮೆ ಮಾಡಿರುವ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಸೂಚಿಸಿದೆ. ವಿವರಗಳನ್ನು ಅನುಬಂಧ- 20ರಲ್ಲಿ ವರದಿಗೆ ಲಗತ್ತಿಸಿದೆ.<br>ದಿನಾಂಕ:10.05.2019 ರ ಪುನರ್ ಪರಿಶೀಲನಾ ವೇಳೆಯಲ್ಲಿ ಚರ್ಚಿಸಿದಂತೆ ಘನ ಉಚ್ಚ ನ್ಯಾಯಾಲಯದ ರಿಟ್ ಪಿಟೀಶನ್ ನಂಬರ್:13051/2016(ಎಸ್-ಆರ್) ಸಿ/ಡಬ್ಲ್ಯೂ, ರಿಟ್ ಪಿಟೀಶನ್ ನಂಬರ್: 33239/2016 & 51521/2016 (ಎಸ್-ಆರ್.ಎ.ಎಸ್) ರ ತೀರ್ಪಿನ ಪ್ರಕಾರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಅನುಮೋದನೆ ಪಡೆದು ಲೆಕ್ಕತಪಾಸಣೆಗೆ ಹಾಜರುಪಡಿಸುವವರೆಗೆ ಸದರಿ ಕಂಡಿಕೆಯನ್ನು ಮುಂದುವರೆಸಲಾಗಿದೆ. | |
| 42 | <u>2006 ರ 6ನೇ ಯು.ಜಿ.ಸಿ ವೇತನ ಶ್ರೇಣಿಯ ಹಿಂಬಾಕಿ ಮೊತ್ತವನ್ನು ದಿನಾಂಕ:01.01.2006 ರ ನಂತರ ನೇಮಕಗೊಂಡಿರುವ ಬೋಧಕರಿಗೆ ಪಾವತಿಸಿರುವುದು :</u><br>2016-17ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಬೋಧಕ ವೃಂದದವರಿಗೆ 2006 ರ ಯು.ಜಿ.ಸಿ 6ನೇ ಪರಿಷ್ಕೃತ ವೇತನವನ್ನು ಪಾವತಿಸಿರುವ ಕಡತಗಳನ್ನು ಪರಿಶೀಲಿಸಲಾಗಿ-<br>ದಿನಾಂಕ: 01.01.2006 ರಿಂದ 24.12.2009 ರವರೆಗೆ ಹಿಂಬಾಕಿ ಮೊತ್ತವನ್ನು ಪಾವತಿಸುವಾಗ ತುಟ್ಟಿ ಭತ್ಯೆ ಹಾಗೂ ಇತರೆ ಭತ್ಯೆಗಳನ್ನು ಪಾವತಿಸುವಂತಿಲ್ಲ. ದಿನಾಂಕ:01.01.2006 ರ ನಂತರ ನೇಮಕಗೊಂಡ ಬೋಧಕ ವೃಂದದವರಿಗೆ ಹಿಂಬಾಕಿ ಮೊತ್ತವನ್ನು ಪಡೆಯಲು ಅವಕಾಶವಿರುವುದಿಲ್ಲವೆಂದು ಕೇಂದ್ರ ಮಾನವ ಸಂಪನ್ಮೂಲ ಮಂತ್ರಾಲಯದ ಪತ್ರ ಸಂಖ್ಯೆ: NO/F-1-7/201/-U/11/ ದಿನಾಂಕ:11.05.2010 ರ ಆದೇಶ ಹಾಗೂ ಸರ್ಕಾರಿ ಆದೇಶ ಸಂಖ್ಯೆ: ಇಡಿ480/ಯು.ಎನ್.ಇ/2014/ಬೆಂಗಳೂರು ದಿನಾಂಕ:07.06.2016 ರ ಆದೇಶಗಳಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ. ಅದಾಗ್ಯೂ ಸಹ ಬೋಧಕ ವೃಂದದವರಿಗೆ ಹಿಂಬಾಕಿ ಮೊತ್ತ ಪಾವತಿಸಿರುವುದು ಲೆಕ್ಕತಪಾಸಣೆಯಲ್ಲಿ ಕಂಡು ಬಂದಿರುತ್ತದೆ. ಲೆಕ್ಕತಪಾಸಣಾ ವಿಚಾರಣಾ ಪತ್ರ ಸಂಖ್ಯೆ:147 ದಿ:30.01.2019 ರಲ್ಲಿ ಈ ಬಗ್ಗೆ ಸ್ಪಷ್ಟನೇ ಕೋರಲಾಗಿ, ಯಾವುದೇ ವಿವರಣೆಯನ್ನು ನೀಡದಿರುವುದರಿಂದ ಸದರಿ ಬೋಧಕ ವೃಂದದವರಿಂದ ರೂ.18,94,313/-ಗಳನ್ನು ವಸೂಲಾತಿ ಮಾಡಿ ವಿಶ್ವವಿದ್ಯಾನಿಲಯದ ಸಂಬಂಧಪಟ್ಟ ಲೆಕ್ಕ ಶೀರ್ಷಿಕೆಗೆ ಜಮೆ ಮಾಡಿ ವಿವರಗಳನ್ನು ಸಲ್ಲಿಸುವಂತೆ ಸೂಚಿಸುತ್ತಾ, ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ನಷ್ಟ ಉಂಟಾಗಲು ಕಾರಣರಾದ ಅಧಿಕಾರಿಗಳು/ ಸಿಬ್ಬಂದಿಗಳ ಮೇಲೆ ಸೂಕ್ತ ಆಡಳಿತಾತ್ಮಕ ಕ್ರಮವಹಿಸಬಹುದಾಗಿರುತ್ತದೆ. ವಿವರಗಳನ್ನು ಅನುಬಂಧ-21 ರಲ್ಲಿ ವರದಿಗೆ ಲಗತ್ತಿಸಿದೆ. | ಮಂಗಳೂರು ವಿಶ್ವವಿದ್ಯಾನಿಲಯ ಹಾಗೂ ಘಟಕ ಕಾಲೇಜುಗಳಲ್ಲಿ ದಿನಾಂಕ 01.01.2006 ರಿಂದ ದಿನಾಂಕ 31.10.2009 ರ ಅವಧಿಯಲ್ಲಿ ನೇಮಕಗೊಂಡು ಯುಜಿಸಿ ವೇತನ ಪಡೆಯುತ್ತಿರುವ ಸಿಬ್ಬಂದಿಗಳಿಗೆ ಪಾವತಿಸಿರುವ 6ನೇ ಪರಿಷ್ಕೃತ ವೇತನ ಶ್ರೇಣಿಯ ಹಿಂಬಾಕಿ ಮೊತ್ತವನ್ನು ಸಂಬಂಧಪಟ್ಟವರ ವೇತನ/ನಿವೃತ್ತ ವೇತನದಿಂದ ಮರು ವಸೂಲಿ ಮಾಡಿ ವಿಶ್ವವಿದ್ಯಾನಿಲಯ ನಿಧಿಗೆ ಜಮೆ ಮಾಡುವಂತೆ ಈ ಕಚೇರಿ ಆದೇಶ ಸಂಖ್ಯೆ ಮವಿ/15/ಸಿಬ್ಬಂದಿ(1)/2012-13 ದಿನಾಂಕ 13.11.2019 ರಲ್ಲಿ ಆದೇಶಿಸಲಾಗಿದೆ. (ಪ್ರತಿ ಲಗತ್ತಿಸಲಾಗಿದೆ) ಇತರ ಭೋದಕ ವೃಂದದವರಿಗೆ ದಿನಾಂಕ 01.01.2006 ರಿಂದ ದಿನಾಂಕ 24.12.2009 ರವರೆಗೆ ಹಿಂಬಾಕಿ ಮೊತ್ತವನ್ನು ಪಾವತಿಸುವಾಗ ತುಟ್ಟಿಭತ್ಯೆಯನ್ನು ಪಾವತಿಸಿರುವುದನ್ನು ಹಿಂಪಡೆಯುವ ಬಗ್ಗೆ ಕ್ರಮ ಕೈಗೊಳ್ಳಲಾಗಿದೆ. ಆದುದರಿಂದ ಈ ಸಂಬಂಧದ ಲೆಕ್ಕ ಪರಿಶೋಧನಾ ಆಕ್ಷೇಪಣೆಯನ್ನು ಕೈಬಿಡುವಂತೆ ಕೋರಲಾಗಿದೆ. |
| 43 | <u>ಗ್ರಂಥಾಲಯ ಸಹಾಯಕರುಗಳಿಗೆ ಸಹಾಯಕ ಗ್ರಂಥಪಾಲಕರುಗಳ ಹುದ್ದೆಗೆ ನಿಯಮ ಉಲ್ಲಂಘಿಸಿ ಪದೋನ್ನತಿ ನೀಡಿರುವುದು :</u><br>2016-17ನೇ ಸಾಲಿನ ಲೆಕ್ಕತಪಾಸಣೆಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಗ್ರಂಥಾಲಯ ಸಹಾಯಕರುಗಳ ಸೇವಾ ವಹಿಯನ್ನು ಪರಿಶೀಲಿಸಲಾಗಿ- ಸಿಂಡಿಕೇಟ್ ಸಭೆಯ ಅನುಮೋದನೆಯಂತೆ ಐದು ಜನ ಗ್ರಂಥಾಲಯ ಸಹಾಯಕರುಗಳಿಗೆ ಸಹಾಯಕ ಗ್ರಂಥಪಾಲಕರಾಗಿ ಪದೋನ್ನತಿ ನೀಡಿ ಯು.ಜಿ.ಸಿ ವೇತನವನ್ನು ನಿಗದಿಪಡಿಸಲಾಗಿದೆ.<br>ಶ್ರೀಮತಿ ಕೆ.ಪುಷ್ಪಲತಾ ರವರಿಗೆ ದಿನಾಂಕ:30.11.2013 ರಿಂದ ಯು.ಜಿ.ಸಿ ವೇತನ ಶ್ರೇಣಿಯನ್ನು ಕಾಲ್ಪನಿಕವಾಗಿ ನಿಗದಿಪಡಿಸಿ ದಿನಾಂಕ:14.01.2015 ರಿಂದ 07.02.2017 ರವರೆಗೆ ಆರ್ಥಿಕ ಸೌಲಭ್ಯವನ್ನು ನೀಡಲಾಗಿರುತ್ತದೆ. ಶ್ರೀ ಕೆ.ಕೆ.ಬಾದಾಮಿ, ಶ್ರೀಮತಿ ಸುಮಂಗಳ.ಕೆ.ಎಸ್, ಶ್ರೀಮತಿ ಜಯಲಕ್ಷ್ಮಿ, ಶ್ರೀ ಜಯಪ್ಪ.ಎಂ.ಸಿ, ರವರುಗಳಿಗೆ ದಿನಾಂಕ:14.01.2015 ರಂದು ಜರುಗಿದ ಸಿಂಡಿಕೇಟ್ ಸಭೆಯ ಅನುಮೋದನೆಯೊಂದಿಗೆ ಸರ್ಕಾರದ ಅನುಮೋದನೆಯನ್ನು ಕಾಯ್ದಿರಿಸಿ, ಕುಲಸಚಿವರ ಆದೇಶ ಸಂಖ್ಯೆ:ಮವಿವಿ/52/ಸಿಬ್ಬಂದಿ(2)/ 2010-11/ ದಿ:16.04.2015 ರ ಆದೇಶದಲ್ಲಿ ದಿನಾಂಕ:14.01.2015 ರಿಂದ ಪೂರ್ವಾನ್ವಯವಾಗುವಂತೆ ಗ್ರಂಥಾಲಯ ಸಹಾಯಕರ ಹುದ್ದೆಯಿಂದ ಸಹಾಯಕ ಗ್ರಂಥಪಾಲಕರ ಹುದ್ದೆಗೆ ಪದೋನ್ನತಿಯನ್ನು ನೀಡಿ ದಿನಾಂಕ:14.01.2015 ರಿಂದ ಅನ್ವಯವಾಗುವಂತೆ ಯು.ಜಿ.ಸಿ ವೇತನ ಶ್ರೇಣಿಯನ್ನು ನಿಗದಿಪಡಿಸಿ ವೇತನವನ್ನು ಪಾವತಿಸಲಾಗಿರುತ್ತದೆ. | ಮಂಗಳೂರು ವಿಶ್ವವಿದ್ಯಾನಿಲಯದ ಪರಿನಿಯಮದ ಪ್ರಕಾರವೇ ಗ್ರಂಥಾಲಯ ಸಹಾಯಕರುಗಳಿಗೆ ರಾಜ್ಯ ವೇತನ ಶ್ರೇಣಿಯ ಸಹಾಯಕ ಗ್ರಂಥಪಾಲಕರ ಹುದ್ದೆಗೆ ಪದೋನ್ನತಿ ನೀಡಲಾಗಿರುತ್ತದೆ. ಆದರೆ ದಿನಾಂಕ 14.01.2015ರಂದು ನಡೆದ ಸಿಂಡಿಕೇಟು ಸಭೆಯ ನಿರ್ಣಯದಂತೆ ಸದರಿ ಸಿಬ್ಬಂದಿಗಳಿಗೂ ಯುಜಿಸಿ ವೇತನ ಶ್ರೇಣಿಯನ್ನು ವಿಸ್ತರಿಸಲಾಗಿರುತ್ತದೆ.<br>ಈ ವಿಷಯಕ್ಕೆ ಸಂಬಂಧಿಸಿಂತೆ, ಈ ಕಚೇರಿ ಟಿಪ್ಪಣಿ ಸಮ ಸಂಖ್ಯೆ ದಿನಾಂಕ 14.02.2019ರಲ್ಲಿ ಅನುಸರಣಾ ವರದಿಯನ್ನು ಸಲ್ಲಿಸಲಾಗಿದೆ. ಸದರಿ ವರದಿಯಲ್ಲಿ ತಿಳಿಸಿರುವಂತೆ ಮಂಗಳೂರು ವಿಶ್ವವಿದ್ಯಾನಿಲಯದ 5 ಮಂದಿ ರಾಜ್ಯ ವೇತನ ಶ್ರೇಣಿಯ ಸಹಾಯಕ ಗ್ರಂಥಪಾಲಕರುಗಳಿಗೆ ವಿಸ್ತರಿಸಲಾದ ಯು.ಜಿ.ಸಿ. ವೇತನಶ್ರೇಣಿಯನ್ನು ಹಾಗೂ ಈಗಾಗಲೇ ಪಾವತಿಸಲಾದ ಹೆಚ್ಚುವರಿ ವೇತನ ಮೊತ್ತವನ್ನು ವಸೂಲಾತಿ ಮಾಡಲು ಆದೇಶಿಸಲಾಗಿರುತ್ತದೆ. ಆದರೆ ಸದರಿ |

ಆದರೆ ಯು.ಜಿ.ಸಿ 6ನೇ ವೇತನ ಆಯೋಗದ ಪರಿಷ್ಕೃತ ನಿಯಮಾವಳಿಯನ್ವಯ ಗ್ರಂಥಾಲಯ ಸಹಾಯಕರುಗಳ ಹುದ್ದೆಯಿಂದ ಸಹಾಯಕ ಗ್ರಂಥಪಾಲಕರುಗಳ ಹುದ್ದೆಗೆ ಯು.ಜಿ.ಸಿ Regulations on minimum qualifications for appointment of teachers and other Academic staff in universities & colleges & other academic staff in universities, colleges and measures for the maintenance of standards in higher education 2010 ರ ನಿಯಮ 4, 5, 3 ರಲ್ಲಿ ಗೊತ್ತು ಪಡಿಸಲಾಗಿರುವ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಯನ್ನು ನೇರ ನೇಮಕಾತಿ ವಿಧಾನದ ಮೂಲಕ ಮಾತ್ರ ಸಹಾಯಕ ಗ್ರಂಥಪಾಲಕರ ಹುದ್ದೆಗೆ ನೇಮಿಸಬಹುದಾಗಿರುತ್ತದೆ. ಅಂತಹ ಪೋಷಕ ವೃಂದದಲ್ಲಿ ಗ್ರಂಥಾಲಯ ಸಹಾಯಕರ ವೃಂದದಿಂದ ಸಹಾಯಕ ಗ್ರಂಥಪಾಲಕರ ಹುದ್ದೆಗೆ ನೇಮಕ ಮಾಡಲು ಅವಕಾಶವಿರುವುದಿಲ್ಲ ಎಂಬ ಯು.ಜಿ.ಸಿ ಯ ನಿಯಮಗಳನ್ನು ಅಳವಡಿಸಿಕೊಂಡು ರಾಜ್ಯ ಸರ್ಕಾರದ ಆದೇಶ ಸಂಖ್ಯೆ:ಇಡಿ31/ಯು.ಎನ್.ಇ/2009/ ದಿ:24.12.2009 ರಲ್ಲಿ ಅಳವಡಿಸಿಕೊಂಡು ಕಾರ್ಯನೀತಿಯನ್ನು ರೂಪಿಸಲಾಗಿರುತ್ತದೆ.

ಅಲ್ಲದೆ ವಿಶ್ವವಿದ್ಯಾನಿಲಯದ ಧನಸಹಾಯ ಆಯೋಗದ ಪತ್ರ ಸಂಖ್ಯೆ: ಎಫ್2-16/2002 (ಪಿ.ಎಸ್) ಪಿ.ಟಿ, ಈ ೨-೩ ದಿನಾಂಕ:02.05.2017 ರ ಪತ್ರದಲ್ಲೂ ಸಹ ಗ್ರಂಥಾಲಯ ಸಹಾಯಕರ ವೃಂದದಿಂದ ಸಹಾಯಕ ಗ್ರಂಥಪಾಲಕರ ಹುದ್ದೆಗೆ ಪದೋನ್ನತಿ ನೀಡಲು ಅವಕಾಶವಿರುವುದಿಲ್ಲವೆಂದು ಸ್ಪಷ್ಟಪಡಿಸಲಾಗಿದೆ. ಇಂತಹ ಆದೇಶಗಳು ಸ್ಪಷ್ಟವಾಗಿದ್ದರೂ ಸಹ ಗ್ರಂಥಾಲಯ ಸಹಾಯಕರುಗಳಿಗೆ ಸಹಾಯಕ ಗ್ರಂಥಪಾಲಕರುಗಳ ಹುದ್ದೆಗೆ ಪದೋನ್ನತಿ ನೀಡಲಾಗಿರುವ ಕುರಿತು ಸೂಕ್ತ ವಿವರಣೆಯನ್ನು ನೀಡುವಂತೆ ಲೆಕ್ಕತಪಾಸಣಾ ವಿಚಾರಣಾ ಪತ್ರ ಸಂಖ್ಯೆ:149/ ದಿ:30.01.2019 ರಲ್ಲಿ ನೀಡಲಾಗಿ ನ್ಯಾಯಾಲಯದಲ್ಲಿ ದಾವೆ ಹೂಡಲಾಗಿದೆ ಎಂದು ದಿನಾಂಕ:14.02.2019 ರ ಪತ್ರದಲ್ಲಿ ವಿವರಣೆ ಒದಗಿಸಲಾಗಿದೆ. ಆದರೆ ನ್ಯಾಯಾಲಯಕ್ಕೆ ದಾವೆ ಹೂಡಿರುವ ಪ್ರತಿಯನ್ನು ಒದಗಿಸಿ ಕೊಟ್ಟಿರುವುದಿಲ್ಲ

ರಾಜ್ಯ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ಆದೇಶ ಸಂಖ್ಯೆ: ಇಡಿ/85/ಯು.ಡಿ.ವಿ/2017 ದಿನಾಂಕ:16.09.2017 ರ ಆದೇಶದಲ್ಲಿ ಗ್ರಂಥಾಲಯ ಸಹಾಯಕರುಗಳಿಗೆ ಸಹಾಯಕ ಗ್ರಂಥಪಾಲಕರ ಹುದ್ದೆಗೆ ಪದೋನ್ನತಿ ನೀಡಿರುವುದನ್ನು ಹಿಂಪಡೆಯುವಂತೆ ಆದೇಶವಿರುವುದರಿಂದ ದಿನಾಂಕ:14.01.2015 ರಿಂದ ದಿ:07.02.2017 ರವರೆಗೆ ಶ್ರೀ ಕೆ.ಕೆ.ಬಾದಾಮಿ, ಶ್ರೀಮತಿ ಸುಮಂಗಳ.ಕೆ.ಎಸ್, ಶ್ರೀಮತಿ ಜಯಲಕ್ಷ್ಮಿ, ಶ್ರೀ ಜಯಪ್ಪ.ಎಂ.ಸಿ, ಹಾಗೂ ಡಾ॥ ಕೆ.ಪುಷ್ಪಲತಾ ರವರಿಗೆ ದಿನಾಂಕ:30.11.2013 ರಿಂದ 13.01.2015 ರವರೆಗೆ ಯು.ಜಿ.ಸಿ ವೇತನವನ್ನು ಕಾಲ್ಪನಿಕವಾಗಿ ನಿಗದಿಪಡಿಸಿ ದಿ:14.01.2015 ರಿಂದ 07.02.2017 ರವರೆಗೆ ಹೆಚ್ಚುವರಿ ವೇತನ ಮೊತ್ತವನ್ನು ಈ ಕೆಳಗಿನಂತೆ ಪಾವತಿಸಲಾಗಿರುವ ಮೊತ್ತವನ್ನು ವಸೂಲಿಸಬೇಕಾಗಿರುತ್ತದೆ.

| ಕ್ರ.ಸಂ | ಹೆಸರು | ಮೊತ್ತ (ರೂ.) |
|---|---|---|
| 1 | ಡಾ॥ ಕೆ.ಪುಷ್ಪಲತಾ ರವರಿಗೆ ರೂ. | 3,95,555 |
| 2 | ಶ್ರೀ ಕೆ.ಕೆ.ಬಾದಾಮಿ ರವರಿಗೆ ರೂ. | 81,257 |
| 3 | ಶ್ರೀಮತಿ ಜಯಲಕ್ಷ್ಮಿ, ರವರಿಗೆ ರೂ. | 2,75,316 |
| 4 | ಶ್ರೀ ಜಯಪ್ಪ.ಎಂ.ಸಿ, ರವರಿಗೆ ರೂ. | 2,81,702 |
| 5 | ಶ್ರೀಮತಿ ಸುಮಂಗಳ.ಕೆ.ಎಸ್, ರವರಿಗೆ ರೂ. | 81,257 |
| ಒಟ್ಟು ಮೊತ್ತ | | 11,15,087 |

ಈ ಮೇಲೆ ತಿಳಿಸಿರುವ 5 ಜನ ಗ್ರಂಥಾಲಯ ಸಹಾಯಕರುಗಳಿಗೆ ಯು.ಜಿ.ಸಿ ವೇತನ ಶ್ರೇಣಿಯನ್ನು ರದ್ದುಪಡಿಸಿ ರಾಜ್ಯ ವೇತನ ಶ್ರೇಣಿಯಲ್ಲಿ ವೇತನವನ್ನು ಮರುನಿಗದಿಪಡಿಸುವಂತೆ ಹಾಗೂ ಹೆಚ್ಚುವರಿ ಪಾವತಿಸಿರುವ ಒಟ್ಟು ಮೊತ್ತ ರೂ.11,15,087/-ಗಳನ್ನು ವಸೂಲಿಸಿ ವಿಶ್ವವಿದ್ಯಾನಿಲಯದ ಲೆಕ್ಕಶೀರ್ಷಿಕೆಗೆ ಜಮೆ ಮಾಡಿ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಸೂಚಿಸಿದೆ.

ದಿನಾಂಕ:10.05.2019 ರ ಪುನರ್ ಪರಿಶೀಲನಾ ವೇಳೆಯಲ್ಲಿ ಘನ ಉಚ್ಚ ನ್ಯಾಯಾಲಯದಲ್ಲಿ ಹೂಡಿರುವ ದಾವೆಯ ಪ್ರತಿಯನ್ನು ಸಲ್ಲಿಸಿರುವುದಿಲ್ಲ. ರಿಟ್ ಪಿಟಿಶನ್ ಸಂಖ್ಯೆ:11317/2018 (ಎಸ್.ಆರ್.ಇ.ಎಸ್) ರ ಅಂತಿಮ ತೀರ್ಮಾನದಂತೆ ಕ್ರಮ ಕೈಗೊಳ್ಳಲು ಸೂಚಿಸಿದೆ.

ಸಿಬ್ಬಂದಿಗಳು ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ನ್ಯಾಯಾಲಯದ ಮಧ್ಯಂತರ ತಡೆಯಾಜ್ಞೆಯನುಸಾರ ಹೆಚ್ಚುವರಿ ವೇತನ ಮೊತ್ತವನ್ನು ವಸೂಲಾತಿ ಮಾಡುವುದನ್ನು ತಡೆಹಿಡಿಯಲಾಗಿದೆ.

ಪ್ರಸ್ತುತ ಸದರಿ ಸಿಬ್ಬಂದಿಗಳಿಗೆ ರಾಜ್ಯ ವೇತನ ಶ್ರೇಣಿಯನ್ನು ನೀಡಲಾಗುತ್ತಿದೆ.

| | | |
|---|---|---|
| 44 | 17 ಜನ ಬೋಧಕೇತರ ನೌಕರರನ್ನು ತಾತ್ಕಾಲಿಕವಾಗಿ ಸೇರಿದ ದಿನಾಂಕದಿಂದ ಎಲ್ಲಾ ಸೌಲಭ್ಯಗಳನ್ನು ವಿಸ್ತರಿಸಿರುವ ಬಗ್ಗೆ :<br>ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ತಾತ್ಕಾಲಿಕವಾಗಿ ಕರ್ತವ್ಯ ನಿರ್ವಹಿಸುತ್ತಿದ್ದ 17 ಮಂದಿ ವಿವಿಧ ಪದನಾಮದ ಬೋಧಕೇತರ ಸಿಬ್ಬಂದಿಗಳನ್ನು ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ: ಎಂ.ಯು/33/ಸಿ2/97-98 ದಿ:28.09.2005 ರಲ್ಲಿ ತಾತ್ಕಾಲಿಕ ನೆಲೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಹುದ್ದೆಯ ಸಮಾನ ಹುದ್ದೆಗೆ ಖಾಯಂಗೊಳಿಸಲಾಗಿರುತ್ತದೆ. ವಿಶ್ವವಿದ್ಯಾಲಯದ ಆದೇಶದಲ್ಲಿ ತಾತ್ಕಾಲಿಕ ನೆಲೆಯಲ್ಲಿ ಕಾರ್ಯ ನಿರ್ವಹಿಸಿರುವ ಅವಧಿಯ ಸೇವೆಯನ್ನು ಖಾಯಂಗೆ ಪರಿಗಣಿಸಲಾಗುವುದಿಲ್ಲವೆಂದು ಆದೇಶದಲ್ಲಿ ತಿಳಿಸಲಾಗಿರುತ್ತದೆ. ನಂತರ ಖಾಯಂಗೊಂಡ ನೌಕರರ ತಾತ್ಕಾಲಿಕ ಸೇವೆಯನ್ನು ಪಿಂಚಣಿ ಸೌಲಭ್ಯಕ್ಕಾಗಿ ಪರಿಗಣಿಸಲು ಮನವಿ ಸಲ್ಲಿಸಿದ್ದ ಮೇರೆಗೆ ವಿಶ್ವವಿದ್ಯಾನಿಲಯದ ವತಿಯಿಂದ ಪರಿನಿಯಮ ರಚಿಸಿ ಸರ್ಕಾರದ ಅನುಮೋದನೆಗೆ ಸಲ್ಲಿಸಿದ್ದು, ಸರ್ಕಾರದ ಆದೇಶ ಸಂಖ್ಯೆ: ಇಡಿ/63/ಯು.ಡಿ.ಇ/2009 ದಿ:30.11.2010 ರಲ್ಲಿ 17 ಮಂದಿ ಸಿಬ್ಬಂದಿಯನ್ನು ಖಾಯಂಗೊಳಿಸಿರುವ ವಿಶ್ವವಿದ್ಯಾಲಯ ಕ್ರಮವನ್ನು ರದ್ದುಪಡಿಸಿ ಸಿಬ್ಬಂದಿಗೆ ಪಾವತಿಯಾದ ವೇತನ ಬಾಕಿ ವ್ಯತ್ಯಾಸದ ಮೊತ್ತವನ್ನು ವಸೂಲು ಮಾಡಿ ಕಾನೂನಿಗೆ ವಿರುದ್ಧವಾಗಿ ನಿರ್ಧಾರ ಕೈಗೊಂಡ ಅಧಿಕಾರಿಗಳು/ ನೌಕರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಸೂಚಿಸಲಾಗಿರುತ್ತದೆ.<br>ನಂತರ 17 ಸಿಬ್ಬಂದಿಗಳು ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದ ರಿಟ್ ಅರ್ಜಿ ಸಂಖ್ಯೆ: 40264-40279/2010 ರಲ್ಲಿ ದಿ:07.12.2011 ರ ಉಚ್ಚ ನ್ಯಾಯಾಲಯದ ಆದೇಶದಲ್ಲಿ ಸರ್ಕಾರದ ಆದೇಶ ಸಂಖ್ಯೆ: ಇಡಿ/63/ಯು.ಡಿ.ಇ/2009 ದಿನಾಂಕ: 30.11.2010 ರ ಆದೇಶವನ್ನು ರದ್ದುಪಡಿಸಿ, ಖಾಯಂಗೊಳಿಸಿರುವ ವಿಶ್ವವಿದ್ಯಾಲಯದ ಕ್ರಮವನ್ನು ಎತ್ತಿ ಹಿಡಿದಿದ್ದಾರೆ. ದಿನಾಂಕ:26.02.2014 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಸದರಿ ನೌಕರರಿಗೆ ಸೇವಾ ಸವಲತ್ತುಗಳನ್ನು ಯಾವ ದಿನಾಂಕದಿಂದ ವಿಸ್ತರಿಸಬೇಕೆಂಬ ಬಗ್ಗೆ ಸರ್ಕಾರದ ಸ್ಪಷ್ಟನೆ ಕೋರಲು ನಿರ್ಧರಿಸಿದ್ದು, ಅದರಂತೆ ಸರ್ಕಾರಕ್ಕೆ ಪತ್ರ ಬರೆಯಲಾಗಿದ್ದು, ಸರ್ಕಾರದ ಪತ್ರ ಸಂಖ್ಯೆ: ಇಡಿ73/ಯು.ಡಿ.ವಿ/2013/ ದಿ:04.08.2014 ರಲ್ಲಿ ಉಚ್ಚ ನ್ಯಾಯಾಲಯದ ಆದೇಶದಂತೆ ಕ್ರಮ ಕೈಗೊಳ್ಳಲು ಸೂಚಿಸಲಾಗಿರುತ್ತದೆ.<br>ದಿನಾಂಕ:03.12.2014 ರಲ್ಲಿ ನಡೆದ ಸಿಂಡಿಕೇಟ್ ಸಭೆಯಲ್ಲಿ ತಾತ್ಕಾಲಿಕ ನೆಲೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಖಾಯಂಗೊಂಡ 17 ಜನ ಸಿಬ್ಬಂದಿಗೆ ತಾತ್ಕಾಲಿಕ ನೆಲೆಯಲ್ಲಿ ಸೇರಿದ ದಿನಾಂಕದಿಂದ ಎಲ್ಲಾ ಸೌಲಭ್ಯಗಳನ್ನು ವಿಸ್ತರಿಸಲು ನಿರ್ಧರಿಸಿದ್ದು ಸಿಂಡಿಕೇಟ್ ಅನುಮೋದನೆಯೊಡನೆ ಪರಿನಿಯಮವನ್ನು ರಚಿಸಿ ಅದಕ್ಕೆ ಮಾನ್ಯ ರಾಜ್ಯಪಾಲರ ಅನುಮೋದನೆ ದೊರೆತಿರುವುದಿಲ್ಲ. ಆದರೆ ಮಾನ್ಯ ರಾಜ್ಯಪಾಲರ ಆದೇಶ ಸಂಖ್ಯೆ:ಜಿಎಸ್/04/ಎಂ.ಎಲ್.ಎಂ/2017 ದಿನಾಂಕ:23.09.2017 ರನ್ವಯ ಸಿಂಡಿಕೇಟ್ ಸಭೆಯಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ಅವಶ್ಯಕತೆ ಇದ್ದರೆ ಹಿರಿಯ ನ್ಯಾಯವಾದಿಗಳಿಂದ ಕಾನೂನು ಸಲಹೆ ಪಡೆದು ಅದರನ್ವಯ ಕ್ರಮ ಕೈಗೊಳ್ಳುವಂತೆ ತಿಳಿಸಲಾಗಿದ್ದು, ಅದರನ್ವಯ ಕ್ರಮ ಕೈಗೊಂಡ ಬಗೆಗಿನ ಕಡತಗಳನ್ನು ಮುಂದಿನ ಲೆಕ್ಕತಪಾಸಣೆಗೆ ಹಾಜರುಪಡಿಸುವಂತೆ ಸೂಚಿಸಿದೆ. | ಮಂಗಳೂರು ವಿಶ್ವವಿದ್ಯಾನಿಲಯದ 17 ಮಂದಿ ಬೋಧಕೇತರ ಸಿಬ್ಬಂದಿಗಳಿಗೆ ಖಾಯಂ ಪೂರ್ವದ ಸೇವಾ ಸೌಲಭ್ಯಗಳನ್ನು ನೀಡುವುದಕ್ಕಾಗಿ ರಚಿಸಲಾದ ಪರಿನಿಯಮದ ಬಗ್ಗೆ ದಿನಾಂಕ 15.05.2019ರ ಪತ್ರದಲ್ಲಿ ಮಾಹಿತಿಯನ್ನು ಸಲ್ಲಿಸಲಾಗಿರುತ್ತದೆ. ಸದರಿ ಪತ್ರದ ಪ್ರತಿಯನ್ನು ಲಗತ್ತಿಸಲಾಗಿದೆ. ಅಲ್ಲದೆ, ಮಾನ್ಯ ರಾಜ್ಯಪಾಲರ ಆದೇಶ ಸಂಖ್ಯೆ ಜಿಎಸ್/04/ಎಂ.ಎಲ್.ಎಂ./2017 ದಿನಾಂಕ 23.09.2017ರನ್ವಯ ಹಿರಿಯ ನ್ಯಾಯವಾದಿಗಳಿಂದ ಕಾನೂನು ಸಲಹೆ ಪಡೆದುಕೊಂಡು ಸಿಂಡಿಕೇಟು ಸಭೆಗೆ ಮಂಡಿಸಿ, ಸಿಂಡಿಕೇಟು ನಿರ್ಣಯದಂತೆ ಸದರಿ ಮೊತ್ತವನ್ನು ಸಿಬ್ಬಂದಿಗಳಿಂದ ವಸೂಲಾತಿ ಮಾಡಲು ದಿನಾಂಕ 31.05.2018 ರಂದು ಆದೇಶಿಸಲಾಗಿರುತ್ತದೆ.<br>ಸಿಬ್ಬಂದಿಗಳು ಮಾನವೀಯ ನೆಲೆಯಲ್ಲಿ ವಸೂಲಾತಿ ಮಾಡಬಾರದಾಗಿ ಮನವಿ ಸಲ್ಲಿಸಿರುವ ಹಿನ್ನೆಲೆಯಲ್ಲಿ ದಿನಾಂಕ04.06.2018 ರಂದು ನಡೆದ ಸಿಂಡಿಕೇಟು ಸಭೆಯ ನಿರ್ಣಯದಂತೆ ಅಪರ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆ ಇವರಿಗೆ ಪತ್ರ ಬರೆದು ಅಭಿಪ್ರಾಯವನ್ನು ನೀಡುವಂತೆ ಕೋರಲಾಗಿರುತ್ತದೆ. ಈ ಮಾಹಿತಿಯನ್ನು ಈ ಕಚೇರಿ ಟಿಪ್ಪಣಿ ದಿನಾಂಕ 12.12.2018ರಲ್ಲಿ ಒದಗಿಸಲಾಗಿದೆ. ಸರ್ಕಾರದ ಸೂಚನೆ ಪ್ರಕಾರ ರಚಿಸಲಾದ ಪರಿನಿಯಮವನ್ನು ವಿಶ್ವವಿದ್ಯಾನಿಲಯದ ಅಗತ್ಯ ಪ್ರಾಧಿಕಾರಗಳ ಅನುಮೋದನೆ ಪಡೆದುಕೊಂಡು ಸರ್ಕಾರದ ಅನುಮೋದನೆಗೆ ಸಲ್ಲಿಸಲು ಕ್ರಮಕೈಗೊಳ್ಳಲಾಗುತ್ತಿದೆ. ಸಂಬಂಧಪಟ್ಟ ಕಡತಗಳನ್ನು ಈಗಾಗಲೇ ಲೆಕ್ಕ ತಪಾಸಣೆಗೆ ಹಾಜರುಪಡಿಸ ಲಾಗಿರುತ್ತದೆ. |
| 45 (ಎ). | ಅತಿಥಿ ಉಪನ್ಯಾಸಕರುಗಳ ನೇಮಕಾತಿ ಪ್ರಕ್ರಿಯೆಗಳ ಕಡತಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು :<br>2016-17ನೇ ಸಾಲಿನಲ್ಲಿ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಂಡು ರೂ.5,46,25,302/-ಗಳ ವೇತನ ಪಾವತಿಸಲಾಗಿದೆ. ಅತಿಥಿ ಉಪನ್ಯಾಸಕರುಗಳನ್ನು ನೇಮಕ ಮಾಡಿಕೊಳ್ಳುವಾಗ ವಿಷಯವಾರು, ತರಗತಿವಾರು, ಪಠ್ಯಕ್ರಮದನ್ವಯ, ಪಠ್ಯಕ್ರಮ ರಚನಾ ತಜ್ಞರ ಸಮಿತಿ ಮತ್ತು ಯು.ಜಿ.ಸಿ ನಿಗದಿಪಡಿಸಿರುವ ಬೋಧನಾ ಅವಧಿ, ಖಾಯಂ ಬೋಧಕರ ಲಭ್ಯ ಬೋಧನಾ ಅವಧಿ-ಇತ್ಯಾದಿ ಮಾನದಂಡಗಳಡಿ ನೇಮಕ ಮಾಡಿಕೊಳ್ಳಬೇಕಿರುತ್ತದೆ. ಈ ಸಂಬಂಧ ವಿಚಾರಣಾ ಪತ್ರ ಸಂಖ್ಯೆ: 19/2018-19/ ದಿ:16.11.2018, 55/2018-19 ದಿ:19.12.2018 ಹಾಗೂ 78/2018-19 ದಿ:27.12.2018 ರಲ್ಲಿ ಜಾರಿ ಮಾಡಲಾಗಿತ್ತು. ಸಲ್ಲಿಸಿರುವ ದಾಖಲೆಗಳಲ್ಲಿ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ-2000ನಿಯಮ 55, 56 ರನ್ವಯ ನೇಮಕಗೊಂಡಿರುವುದು ಕಡತಗಳಲ್ಲಿ ಕಂಡು ಬಂದಿರುವುದಿಲ್ಲ. ಈ ಸಂಬಂಧ ಅತಿಥಿ ಉಪನ್ಯಾಸಕರುಗಳಿಗೆ ಪಾವತಿಸಿರುವ ವೇತನ ಮೊತ್ತ ರೂ.5,46,25,302/-ಗಳನ್ನು ಆಕ್ಷೇಪಣೆಗೆ ಸೂಚಿಸಿದೆ. ವಿವರಗಳನ್ನು ಅನುಬಂಧ-22 ರಲ್ಲಿ ವರದಿಗೆ ಲಗತ್ತಿಸಿದೆ. | 2016-17ನೇ ಸಾಲಿನಲ್ಲಿ ಅತಿಥಿ ಉಪನ್ಯಾಸಕರ ನೇಮಕಾತಿಗೆ ಸಂಬಂಧಪಟ್ಟ ಕಡತಗಳನ್ನುಹಾಗೂ ನೇಮಕಗೊಂಡ ಅತಿಥಿ ಉಪನ್ಯಾಸಕರ ವಿವರವನ್ನೊಳಗೊಂಡ ತಃಖ್ತೆಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲಾಗಿದೆ. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆ 2000ರ ಸೆಕ್ಷನ್ 56ರಂತೆ ಒಂದು ವರ್ಷದ ಅವಧಿಯವರೆಗಿನ ತಾತ್ಕಾಲಿಕ ನೇಮಕಾತಿಗೆ ಕುಲಪತಿಯವರಿಗೆ ಪ್ರದತ್ತವಾದ ಅಧಿಕಾರದಂತೆ ಖಾಯಂ ಅಧ್ಯಾಪಕರಿಗೆ ಹಂಚಿಕೆ ಮಾಡಿ ಉಳಿಕೆಯಾದ ಕಾರ್ಯಭಾರಕ್ಕೆ ಅನುಗುಣವಾಗಿ ಅತಿಥಿ ಉಪನ್ಯಾಸಕರ ನೇಮಕಾತಿ ಪ್ರಕ್ರಿಯೆ ಕೈಗೊಳ್ಳಲಾಗಿದೆ. ಅದರಂತೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿದ್ದು, ಆಯ್ಕೆ ಸಮಿತಿಯು ಸಂದರ್ಶನ ನಡೆಸಿದ್ದು, ಆಯ್ಕೆಯಾದ ಅಭ್ಯರ್ಥಿಗಳನ್ನು ಅತಿಥಿ ಉಪನ್ಯಾಸಕರಾಗಿ ನೇಮಕ ಮಾಡಲಾಗಿದೆ. ಅತಿಥಿ ಉಪನ್ಯಾಸಕರ ನೇಮಕಾತಿಯನ್ನು ನಿಯಮಾನುಸಾರ ಮಾಡಿರುವುದರಿಂದ ಈ ಆಕ್ಷೇಪಣೆಯನ್ನು ಕೈಬಿಡುವಂತೆ ಕೋರಲಾಗಿದೆ. |

| | | |
|---|---|---|
| 45 (ಬಿ). | <u>ತಾತ್ಕಾಲಿಕ/ ಸಂಚಿತ ವೇತನದಡಿಯಲ್ಲಿ ನೇಮಕಾತಿ ಮಾಡಿಕೊಂಡಿರುವ ಬೋಧಕೇತರ ನೌಕರರುಗಳ ನೇಮಕಾತಿಯ ಬಗ್ಗೆ :</u><br>2016-17ನೇ ಸಾಲಿನಲ್ಲಿ ತಾತ್ಕಾಲಿಕ ಬೋಧಕೇತರ ನೌಕರರು/ ಸಂಚಿತ ವೇತನದಡಿ ನೇಮಕ ಮಾಡಿಕೊಳ್ಳಲಾಗಿರುತ್ತದೆ. ನೇಮಕ ಮಾಡಿಕೊಳ್ಳುವ ಪೂರ್ವದಲ್ಲಿ ವಿಶ್ವವಿದ್ಯಾನಿಲಯದಲ್ಲಿ ಮಂಜೂರಾಗಿರುವ ಹುದ್ದೆಗಳು, ವೇತನ ಶ್ರೇಣಿ, ಕರ್ತವ್ಯ ನಿರ್ವಹಿಸುತ್ತಿರುವ ಸಂಖ್ಯೆ, ಖಾಲಿ ಹುದ್ದೆಗಳ ಸಂಖ್ಯೆ, ಅವಶ್ಯಕವಾಗಿ ಬೇಕಾಗಿರುವ ಹೆಚ್ಚುವರಿ ಹುದ್ದೆಗಳ ಸಂಖ್ಯೆ ವಿವರಗಳನ್ನು ಒದಗಿಸಿ ಸರ್ಕಾರದಿಂದ ಪೂರ್ವಾನುಮೋದನೆ ಪಡೆಯಬೇಕಾಗಿರುತ್ತದೆ. ಈ ಸಂಬಂಧ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ: 54/2018-19 ದಿ:19.12.2018 ಹಾಗೂ 77/2018-19 ದಿ:27.12.2018 ರಲ್ಲಿ ವಿವರಣೆ ಒದಗಿಸುವಂತೆ ಕೋರಲಾಗಿತ್ತು. ವಿಶ್ವವಿದ್ಯಾನಿಲಯವು ಸಲ್ಲಿಸಿರುವ ಲಭ್ಯ ದಾಖಲೆಗಳ ಪ್ರಕಾರ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ-2000 ರ ನಿಯಮ 56 ಮತ್ತು 57 ರನ್ವಯ ನೇಮಕಾತಿ ಪ್ರಕ್ರಿಯೆ ಕೈಗೊಂಡಿರುವುದಿಲ್ಲ. ಆದ್ದರಿಂದ ಈ ಸಂಬಂಧ ಪಾವತಿಸಿರುವ ರೂ.2,37,21,510/-ಗಳನ್ನು ಆಕ್ಷೇಪಣೆಗೆ ಸೂಚಿಸಿದೆ. ವಿವರಗಳನ್ನು <u>ಅನುಬಂಧ-23 ರಲ್ಲಿ</u> ವರದಿಗೆ ಲಗತ್ತಿಸಿದೆ. | ಇದಕ್ಕೆ ಸಂಬಂಧಿಸಿದ ನೇಮಕಾತಿ ಪ್ರಕ್ರಿಯೆ ಎಲ್ಲಾ ಕಡತಗಳನ್ನು ಹಾಗೂ ವಿವರಗಳನ್ನು ಈಗಾಗಲೇ ಲೆಕ್ಕ ಪರಿಶೋಧಕರಿಗೆ ನೀಡಲಾಗಿರುತ್ತದೆ. ವಿಶ್ವವಿದ್ಯಾನಿಲಯದಲ್ಲಿ ಸುಮಾರು 80 ಗ್ರೂಪ್ 'ಸಿ' ಮತ್ತು 100 ಗ್ರೂಪ್ 'ಡಿ' ಹುದ್ದೆಗಳು ಖಾಲಿ ಇರುವ ಕಾರಣ ಮತ್ತು ಇದಕ್ಕೆ ಸಂಬಂಧಿಸಿ ಹುದ್ದೆಗಳನ್ನು ತುಂಬಲು ಸರಕಾರದಿಂದ ಅನುಮತಿ ಪಡೆಯದೇ ಇರುವ ಕಾರಣ ವಿಶ್ವವಿದ್ಯಾನಿಲಯದ ದೈನಂದಿನ ಕೆಲಸಕಾರ್ಯಗಳನ್ನು ಕ್ಲಪ್ತ ಸಮಯದಲ್ಲಿ ನಿರ್ವಹಿಸಲು ತಾತ್ಕಾಲಿಕ ವ್ಯವಸ್ಥೆ ಮಾಡಲಾಗಿದೆ. Job Typist, Lab Technician, ಗ್ರೂಪ್ 'ಡಿ' ಸೇವೆಯನ್ನು ಬಳಸಿಕೊಳ್ಳಲಾಗಿರುತ್ತದೆ. ಯಾರನ್ನು ತಾತ್ಕಾಲಿಕವಾಗಿ ನೇಮಕಾತಿ ಮಾಡಿರುವುದಿಲ್ಲ. ಆದುದರಿಂದ ಆಕ್ಷೇಪಣೆಯನ್ನು ಕೈಬಿಡುವಂತೆ ಕೋರಲಾಗಿದೆ. |
| 46 | <u>ಬೋಧಕ ವರ್ಗದವರಿಗೆ ಪಿ.ಹೆಚ್.ಡಿ ಪದವಿ ಪಡೆದಿದ್ದಾಕ್ಕಾಗಿ ಮುಂಗಡ ವೇತನ ಬಡ್ತಿ ಹಾಗೂ ಸಿ.ಎ.ಎಸ್ ಸ್ಕೀಂ ಸೌಲಭ್ಯಗಳೆರಡನ್ನು ನೀಡಿರುವುದು :</u><br>2016-17ನೇ ಸಾಲಿನ ಲೆಕ್ಕತಪಾಸಣೆಯಲ್ಲಿ ಬೋಧಕವರ್ಗದ ಸೇವಾ ವಹಿಗಳನ್ನು ಪರಿಶೀಲಿಸಲಾಗಿ ಬೋಧಕ ವರ್ಗದವರು ಸೇವೆಗೆ ಸೇರುವ ಮೊದಲು ಅಥವಾ ಸೇವೆಗೆ ಸೇರಿದ ನಂತರ ಪಿ.ಹೆಚ್.ಡಿ ಪದವಿಯನ್ನು ಪಡೆದುಕೊಂಡಿದ್ದರೆ, ಅಂತಹವರಿಗೆ 2 ಅಥವಾ 3 ಮುಂಗಡ ವೇತನ ಬಡ್ತಿಗಳನ್ನು ನೀಡಲು ಸರ್ಕಾರದ ಆದೇಶ ಸಂಖ್ಯೆ:ಇಡಿ/100/ಯು.ಎನ್.ಇ/99 ದಿ:15.11.1999 ಮತ್ತು ಸರ್ಕಾರಿ ಆದೇಶ ಸಂಖ್ಯೆ: ಇಡಿ37/ಯು.ಎನ್.ಇ/2009 ದಿ:24.12.2009 ರ ರೀತ್ಯಾ ಅವಕಾಶ ಕಲ್ಪಿಸಿದೆ. ಆದರೆ ಸರ್ಕಾರಿ ಆದೇಶ ಸಂಖ್ಯೆ: ಇಡಿ100/ಯು.ಎನ್.ಇ/99 ದಿ:15.11.99 ರ ಪ್ಯಾರಾ 12 ಮತ್ತು ಸರ್ಕಾರಿ ಆದೇಶ ಸಂಖ್ಯೆ: ಇಡಿ37/ಯು.ಎನ್.ಇ/2009/ 24.12.2009 ರ ಅಪೆಂಡಿಕ್ಸ್-IV ರ XXVI ರೀತ್ಯಾ ಪಿ.ಹೆಚ್.ಡಿ ಪದವಿ ಪಡೆದಿದ್ದಕ್ಕಾಗಿ ಮುಂಗಡ ವೇತನ ಬಡ್ತಿ ಸೌಲಭ್ಯ ಪಡೆದವರು ಸಿ.ಎ.ಎಸ್ ಸ್ಕೀಂನಡಿಯಲ್ಲಿ ಮುಂಗಡ ವೇತನ ಬಡ್ತಿಯನ್ನು 6 ವರ್ಷಗಳಿಗೆ ನೀಡಬೇಕಾಗಿರುತ್ತದೆ. ಪಿ.ಹೆಚ್.ಡಿ ಪದವಿಗಳಿಸಿದ್ದಕ್ಕಾಗಿ ಮುಂಗಡ ವೇತನ ಬಡ್ತಿಗಳನ್ನು ಪಡೆಯದಿದ್ದಲ್ಲಿ ಅಂತಹವರಿಗೆ 4 ವರ್ಷಗಳಿಗೆ ಸಿ.ಎ.ಎಸ್ ಸ್ಕೀಂನಡಿಯಲ್ಲಿ ಮುಂಗಡ ವೇತನ ಬಡ್ತಿಗಳನ್ನು ನೀಡಲು ಸರ್ಕಾರಿ ಆದೇಶಗಳಲ್ಲಿ ಅವಕಾಶವಿರುತ್ತದೆ. ಸರ್ಕಾರಿ ಆದೇಶಗಳನ್ನು ಉಲ್ಲಂಘಿಸಿ ಎರಡು ಸೌಲಭ್ಯಗಳನ್ನು ನೀಡಿರುವ ಬಗ್ಗೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ: 189/2018-19 ದಿ:11.02.2019 ರಲ್ಲಿ ಕೋರಲಾಗಿ ಯಾವುದೇ ಸೂಕ್ತ ವಿವರಣೆಯನ್ನು ನೀಡಿರುವುದಿಲ್ಲ. <u>ಅನುಬಂಧ-24</u> ರಲ್ಲಿ ತಿಳಿಸಿರುವ ಬೋಧಕರುಗಳಿಗೆ ಸರ್ಕಾರಿ ಆದೇಶಗಳನ್ವಯ ಸಿ.ಎ.ಎಸ್ ಸ್ಕೀಂನಡಿ 4 ವರ್ಷಗಳಿಗೆ ಮುಂಗಡ ವೇತನ ಬಡ್ತಿ (ಸ್ಟೇಜ್-2_ ಅಥವಾ ಪಿ.ಹೆಚ್.ಡಿ ಪದವಿ ಪಡೆದಿರುವುದಕ್ಕೆ ಮುಂಗಡ ವೇತನ ಬಡ್ತಿಗಳಲ್ಲಿ ಯಾವುದಾದರೂ ಒಂದು ಸೌಲಭ್ಯವನ್ನು ನೀಡಿ ವೇತನ ಭತ್ಯೆಗಳನ್ನು ಮರು ನಿಗದಿಪಡಿಸಿ ಹೆಚ್ಚುವರಿಯಾಗಿ ಪಾವತಿಸಿರುವ ಮೊತ್ತವನ್ನು ಲೆಕ್ಕಚಾರ ಮಾಡಿ ವಸೂಲಿಸಿ ವಿಶ್ವವಿದ್ಯಾನಿಲಯ ಖಾತೆಗೆ ಜಮೆ ಮಾಡುವಂತೆ ಹಾಗೂ ವಿಶ್ವವಿದ್ಯಾನಿಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ಬೋಧಕ ವರ್ಗದವರ ಸೇವಾ ವಹಿಗಳನ್ನು ಪರಿಶೀಲಸಿ ಮೇಲೆ ತಿಳಿಸಿರುವ ಸರ್ಕಾರಿ ಆದೇಶಗಳನ್ವಯ ಮುಂಗಡ ವೇತನ ಸೌಲಭ್ಯಗಳನ್ನು ನೀಡದಿದ್ದರೆ ತುರ್ತು ಕ್ರಮ ಕೈಗೊಳ್ಳುವಂತೆ ಸೂಚಿಸಿದೆ.<br>ದಿನಾಂಕ:10.05.2019 ರ ಪುನರ್ ಪರಿಶೀಲನಾ ವೇಳೆಯಲ್ಲಿ ಕುಲಸಚಿವರು, ಹಣಕಾಸು ಅಧಿಕಾರಿಯವರಿಗೆ ಸೂಚಿಸಿರುವ ಪತ್ರ ಸಂಖ್ಯೆ:ಮವಿ/ಸಿಬ್ಬಂದಿ/32/2018-19/ಇ1 ದಿನಾಂಕ:04.05.2019 ನ್ನು ಪರಿಶೀಲಿಸಲಾಯಿತು. ಈ ಬಗ್ಗೆ ಕೂಡಲೇ ಕ್ರಮವಹಿಸಿದ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಸೂಚಿಸುತ್ತಾ ಅಲ್ಲಿಯವರೆಗೂ ಈ ಕಂಡಿಕೆಯನ್ನು ಮುಂದುವರೆಸಲಾಗಿದೆ. | ಮಂಗಳೂರು ವಿಶ್ವವಿದ್ಯಾನಿಲಯದ 2014-15ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯಲ್ಲಿ ಬೋಧಕ ವರ್ಗದವರಿಗೆ ಪಿಹೆಚ್.ಡಿ ಪದವಿ ಪಡೆದಿದ್ದಕ್ಕಾಗಿ ಮುಂಗಡ ವೇತನ ಬಡ್ತಿ ಅಥವಾ ಸಿ.ಎ.ಎಸ್. ನಡಿಯಲ್ಲಿ ಅರ್ಹತಾದಾಯಕ ಸೇವೆಗೆ ವಿನಾಯಿತಿ ಇವೆರಡರಲ್ಲಿ ಯಾವುದಾದರೂ ಒಂದನ್ನು ನೀಡಿ ಇನ್ನೊಂದನ್ನು ರದ್ದುಪಡಿಸುವಂತೆ ಲೆಕ್ಕ ಪರಿಶೋಧಕರು ಈಗಾಗಲೇ ಸೂಚಿಸಿರುತ್ತಾರೆ. ಅದರಂತೆ ಸದರಿ ಲೆಕ್ಕ ಪರಿಶೋಧನಾ ಆಕ್ಷೇಪಣೆಯ ಪ್ರಸ್ತಾವನೆಯನ್ನು ದಿನಾಂಕ 05.12.2017ರಂದು ನಡೆದ ಸಿಂಡಿಕೇಟು ಸಭೆಗೆ ಮಂಡಿಸಿದ್ದು, ಸದರಿ ಸಿಂಡಿಕೇಟು ಸಭೆಯ ನಿರ್ಣಯದಲ್ಲಿ ಮುಂಗಡ ವೇತನ ಭಡ್ತಿ ಅಥವಾ ಮುಂಗಡ ವಾರ್ಷಿಕ ಭಡ್ತಿ ಇವೆರಡರಲ್ಲಿ ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳಲು ಸಂಬಂಧಿತ ಬೋಧಕರಿಗೆ ಸೂಚಿಸಲು ನಿರ್ಣಯಿಸಲಾಯಿತು. ಅದರಂತೆ ಈ ಕಚೇರಿ ಅಧಿಕೃತ ಜ್ಞಾಪನ ಪತ್ರ ದಿನಾಂಕ 01.01.2018ರಲ್ಲಿ ಸಂಬಂಧಪಟ್ಟ ಬೋಧಕರಿಗೆ ತಿಳಿಸಲಾಗಿರುತ್ತದೆ ಹಾಗೂ ಆಯ್ಕೆಯನ್ನು ಸೂಚಿಸದಿದ್ದಲ್ಲಿ, ಮುಂಗಡ ವೇತನ ಭಡ್ತಿಯನ್ನು ರದ್ದುಪಡಿಸಲಾಗುವುದು ಎಂದು ತಿಳಿಸಲಾಗಿರುತ್ತದೆ. ಅದರಂತೆ ಮಾನ್ಯ ಕುಲಪತಿಯವರ ಅನುಮೋದನೆ ಪಡೆದು ಲೆಕ್ಕ ಪರಿಶೋಧಕರ ಆಕ್ಷೇಪಣೆಯಂತೆ ಎಂ.ಫಿಲ್/ಪಿಹೆಚ್.ಡಿ ಪದವಿಗೆ ನೀಡಿರುವ ಮುಂಗಡ ವೇತನ ಭಡ್ತಿಯನ್ನು ರದ್ದುಪಡಿಸಿ, ವೇತನ ಮರುನಿಗದಿಪಡಿಸಲು ಹಣಕಾಸು ಅಧಿಕಾರಿಯವರಿಗೆ ಸೂಚಿಸುವ ಬಗ್ಗೆ ಕಡತವನ್ನು ಮಂಡಿಸಲಾಗಿತ್ತು. ಈ ಮಧ್ಯೆ ದಿನಾಂಕ 07.12.2018ರ ಯುಜಿಸಿ Public Notice ನಲ್ಲಿ (ಪ್ರತಿ ಲಗತ್ತಿಸಿದೆ) ಪಿಹೆಚ್.ಡಿ ಪದವಿಗೆ ಮುಂಗಡ ವೇತನ ಭಡ್ತಿ ಹಾಗೂ ಸಿ.ಎ.ಎಸ್.ನಲ್ಲಿ ಅರ್ಹತಾದಾಯಕ ಸೇವೆಯಲ್ಲಿ ವಿನಾಯಿತಿ ಸೌಲಭ್ಯ ಇವೆರಡೂ ಸೌಲಭ್ಯಗಳನ್ನು ನೀಡಬಹುದೆಂದು ತಿಳಿಸಿರುವುದರಿಂದ ಈ ಬಗ್ಗೆ ಸರ್ಕಾರದ ಸ್ಪಷ್ಟೀಕರಣವನ್ನು ಈ ಕಚೇರಿ ಪತ್ರ ದಿನಾಂಕ 22.12.2018ರಲ್ಲಿ (ಪ್ರತಿ ಲಗತ್ತಿಸಿದೆ) ಕೋರಲಾಗಿದೆ ಹಾಗೂ ಸದರಿ ಮಾಹಿತಿಯನ್ನು ಲೆಕ್ಕ ಪರಿಶೋಧಕರಿಗೆ ನೀಡಲಾಗಿದೆ (ಪ್ರತಿ ಲಗತ್ತಿಸಿದೆ). ಸರ್ಕಾರದಿಂದ ಈ ಬಗ್ಗೆ ಸ್ಪಷ್ಟೀಕರಣ ಬಂದ ನಂತರ ಸೂಕ್ತ ಕ್ರಮಕೈಗೊಳ್ಳಲಾಗುವುದು ಎಂಬ ಮಾಹಿತಿಯನ್ನು ನೀಡಲಾಗಿದೆ. |

| | | |
|---|---|---|
| 47 | <u>ಶ್ರೀ ಚಂದ್ರಶೇಖರ್.ಆರ್ ಸಹಾಯಕ ಪ್ರಾಧ್ಯಾಪಕರು ಇವರು ಜಾತಿ ಸಿಂಧುತ್ವ ಪ್ರಮಾಣ ಪತ್ರವನ್ನು ಹಾಜರುಪಡಿಸದಿರುವುದು :</u><br>2016-17ನೇ ಸಾಲಿನಲ್ಲಿ ಶ್ರೀ ಚಂದ್ರಶೇಖರ್.ಆರ್, ಸಹಾಯಕ ಪ್ರಾಧ್ಯಾಪಕರು ಇವರ ಸೇವಾ ವಹಿ ಮತ್ತು ವೈಯಕ್ತಿಕ ಕಡತಗಳನ್ನು ಪರಿಶೀಲಿಸಲಾಗಿ- ಇವರು ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಹಾಯಕ ಪ್ರಾಧ್ಯಾಪಕರಾಗಿ ಕುಲಸಚಿವರ ಆದೇಶ ಸಂಖ್ಯೆ:ಎಂ.ಯು/9/ಇ.ಎಸ್.ಟಿ1/01/02 ದಿನಾಂಕ:28.01.2003 ರ ಆದೇಶದನ್ವಯ ನೇಮಕಾತಿ ಹೊಂದಿರುತ್ತಾರೆ. ದಿನಾಂಕ: 28.01.2003 ರ ಪೂರ್ವಾಹ್ನ ಕೆಲಸಕ್ಕೆ ವರದಿ ಮಾಡಿಕೊಂಡಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ. ಯಾವುದೇ ಅಭ್ಯರ್ಥಿ ಸಿಂಧುತ್ವ ಪ್ರಮಾಣ ಪತ್ರವನ್ನು ಹಾಜರುಪಡಿಸಿದ ನಂತರವಷ್ಟೇ ನೇಮಕಾತಿ ಆದೇಶವನ್ನು ನೀಡಬೇಕಿರುತ್ತದೆ. ಆನಂತರವಷ್ಟೇ ಆತ ಸರ್ಕಾರಿ ನೌಕರನಾಗಲು ಅರ್ಹನಾಗುತ್ತಾನೆ.<br>ಸರ್ಕಾರಿ, ನಿಗಮ ಮಂಡಳಿಗಳು, ವಿಶ್ವವಿದ್ಯಾನಿಲಯಗಳು ಹಾಗೂ ಇನ್ನಿತರೆ ಸರ್ಕಾರಿ ಸ್ವಾಮ್ಯಕ್ಕೊಳಪಡುವ ಕಛೇರಿಗಳಿಗೆ ನೌಕರರನ್ನು ನೇಮಕಾತಿ ಪ್ರಕ್ರಿಯೆ ಕೈಗೊಂಡು ನೇಮಕಾತಿ ಪಡೆದ ಅಭ್ಯರ್ಥಿಗಳು ಆಯ್ಕೆಯಾಗಿರುವ ಮೀಸಲಾತಿಗನುಗುಣವಾಗಿ ಸಿಂಧುತ್ವ ಪ್ರಮಾಣ ಪತ್ರವನ್ನು ಸಲ್ಲಿಸಿದ ನಂತರ ನೇಮಕಾತಿ ಆದೇಶವನ್ನು ನೀಡುವ ಮೂಲಕ ಅಭ್ಯರ್ಥಿಯನ್ನು ಕೆಲಸಕ್ಕೆ ವರದಿ ಮಾಡಿಸಿಕೊಳ್ಳುವಂತೆ ಸರ್ಕಾರದ ಆದೇಶ ಸಂಖ್ಯೆ: ಸಕಕಾ/247/ಎಸ್.ಎ.ಡಿ/90 ದಿ:22.02.1993 ರ ಆದೇಶದಲ್ಲಿ ತಿಳಿಸಿದ್ದರೂ ಸಹ ಇಲ್ಲಿ ಶ್ರೀ ಚಂದ್ರಶೇಖರ್ ರವರಿಗೆ ಜಾತಿ ಸಿಂಧುತ್ವ ಪ್ರಮಾಣ ಪತ್ರವನ್ನು ಪಡೆಯದೇ ಕೇವಲ ಷರತ್ತು ವಿಧಿಸಿ ನೇಮಕಾತಿಯ ಆದೇಶ ನೀಡಲಾಗಿದೆ.<br>ಆದರೆ, ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು ಜಿಲ್ಲಾ ಜಾತಿ ಪರಿಶೀಲನಾ ಸಮಿತಿ ದಕ್ಷಿಣ ಕನ್ನಡ ಜಿಲ್ಲೆ ರವರ ಪತ್ರ ಸಂಖ್ಯೆ: ಜಿ.ಸ.ಕ/ಅತಸ/ಸಿ.ಆರ್-16/2003-04 ದಿನಾಂಕ:02.08.2004 ರಲ್ಲಿ ಸಿಂಧುತ್ವ ಪ್ರಮಾಣ ಪತ್ರ ನೀಡಲು ನಿರಾಕರಿಸಿದ್ದು, ನಂತರ ಮೇಲ್ಮನವಿ ಪ್ರಾಧಿಕಾರವಾದ ಆಯುಕ್ತರು ಹಾಗೂ ಮೇಲ್ಮನವಿ ಪ್ರಾಧಿಕಾರಿಗಳು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಆದೇಶ ಸಂಖ್ಯೆ: ಸಕನಿ/G&v/ಸಿ.ಆರ್10/2004-05 ಬೆಂಗಳೂರು ದಿನಾಂಕ:26.08.2005 ರಲ್ಲಿ ಜಾತಿ ಸಿಂಧುತ್ವ ಪ್ರಮಾಣ ಪತ್ರವನ್ನು ನೀಡಲು ನಿರಾಕರಿಸಿರುವ ಆದೇಶವನ್ನು ಎತ್ತಿ ಹಿಡಿದಿದ್ದರೂ ಸಹ (ಇವರು ನೇಮಕಾತಿ ಹೊಂದಿ ಇಲ್ಲಿಯವರೆಗೆ ಅಂದರೆ 16 ವರ್ಷಗಳು, 1 ತಿಂಗಳೂ, 14 ದಿನಗಳಾಗಿದ್ದರೂ ಸಹ) ಯಾವುದೇ ಆಡಳಿತಾತ್ಮಕ ಕ್ರಮ ವಹಿಸದಿರುವುದು ಲೆಕ್ಕಪರಿಶೋಧನೆಯಲ್ಲಿ ಕಂಡು ಬಂದಿರುತ್ತದೆ. ಈ ಬಗ್ಗೆ ಸ್ಪಷ್ಟನೆಯನ್ನು ನೀಡುವಂತೆ ಲೆಕ್ಕತಪಾಸಣಾ ವಿಚಾರಣಾ ಪತ್ರ ಸಂಖ್ಯೆ:179/ ದಿ:06.02.2019 ರಲ್ಲಿ ಜಾರಿ ಮಾಡಿದ್ದರೂ ಸಹ ಯಾವುದೇ ಸೂಕ್ತ ವಿವರಣೆಯನ್ನು ನೀಡಿರುವುದಿಲ್ಲ. ಆದುದರಿಂದ ಸದರಿ ನೌಕರರ ನೇಮಕಾತಿಯನ್ನು ರದ್ದುಪಡಿಸಲು ಸರ್ಕಾರದ ನಿರ್ದೇಶನಗಳ ಹಿನ್ನೆಲೆಯಲ್ಲಿ ಪರಿಶೀಲಿಸಿ ಸೂಕ್ತ ಆಡಳಿತಾತ್ಮಕ ಕ್ರಮ ವಹಿಸುವಂತೆ ಸೂಚಿಸಿದೆ. | ಶ್ರೀ ಚಂದ್ರಶೇಖರ್, ಸಹಾಯಕ ಪ್ರಾಧ್ಯಾಪಕರು, ವ್ಯವಹಾರ ಆಡಳಿತ ವಿಭಾಗ ಇವರು ಪರಿಶಿಷ್ಟ ಜಾತಿಗೆ ಸೇರಿದ ಪಲ್ಲನ್ ಉಪಜಾತಿಗೆ ಸೇರಿದವರಾಗಿರುತ್ತಾರೆ ಎಂದು ಜಾತಿ ಪ್ರಮಾಣ ಪತ್ರದಲ್ಲಿ ನಮೂದಿಸಿರುತ್ತಾರೆ. ಸದರಿಯವರು 2003ರಲ್ಲಿ ನೇರ ನೇಮಕಾತಿಗೊಂಡಿದ್ದು, ದಿನಾಂಕ 28.01.2003ರ ಪೂವಾಹ್ನ ಕರ್ತವ್ಯಕ್ಕೆ ಹಾಜರಾಗಿರುತ್ತಾರೆ. ಆ ಸಮಯದಲ್ಲಿ ಜಾತಿ ಪ್ರಮಣ ಪತ್ರದ ಆಧಾರದಲ್ಲಿ ನೇಮಕಾತಿ ಆದೇಶ ನೀಡಿ ತದನಂತರ ಸಿಂಧುತ್ವ ಪ್ರಮಾಣ ಪತ್ರವನ್ನು ಪಡೆಯಲಾಗುತ್ತಿತ್ತು. ಶ್ರೀ ಚಂದ್ರಶೇಖರ ಇವರ ಸಿಂಧುತ್ವ ಪ್ರಮಾಣ ಪತ್ರಕ್ಕೆ ಸಂಬಂಧಿಸಿ 2014-15ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯಲ್ಲಿ ಆಕ್ಷೇಪಣೆಯಾಗಿರುವುದರಿಂದ ಸದರಿ ಪ್ರಮಾಣ ಪತ್ರವನ್ನು ಸಲ್ಲಿಸುವಂತೆ ಸದರಿಯವರಿಗೆ ತಿಳಿಸಲಾಗಿರುತ್ತದೆ ಹಾಗೂ ಜಿಲ್ಲಾಧಿಕಾರಿ / ಅಧ್ಯಕ್ಷರು, ಜಿಲ್ಲಾ ಜಾತಿ ಪರಿಶೀಲನಾ ಸಮಿತಿ ಇವರಿಗೆ ಈ ಕಚೇರಿಯಿಂದ ದಿನಾಂಕ 19.11.2016ರಂದು ಪತ್ರ ಕಳುಹಿಸಿ ಸದರಿಯವರ ಸಿಂಧುತ್ವ ಪ್ರಮಾಣ ಪತ್ರವನ್ನು ನೀಡುವಂತೆ ಕೋರಲಾಗಿತ್ತು. ಶ್ರೀ ಚಂದ್ರಶೇಖರ್ ಇವರ ಸಿಂಧುತ್ವ ಪ್ರಮಾಣ ಪತ್ರದ ಸ್ವೀಕೃತಿಯಾಗಿರದೇ ಇರುವುದರಿಂದ ಸದರಿಯವರ ಪರಿವೀಕ್ಷಣಾ ಅವಧಿಯನ್ನು ಘೋಷಿಸಿರುವುದಿಲ್ಲ ಹಾಗೂ ಸದರಿಯವರ ವಾರ್ಷಿಕ ವೇತನ ಭಡ್ತಿಯನ್ನು ತಡೆಹಿಡಿಯಲಾಗಿದೆ. ತಾಲೂಕು ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ, ಸುಳ್ಯ ಹಾಗೂ ತಹಶೀಲ್ದಾರ್, ಸುಳ್ಯ ಇವರು ದಿನಾಂಕ 08.05.2015ರಂದು ಮಹಜರು ನಡೆಸಿ ಶ್ರೀ ಚಂದ್ರಶೇಖರ್ ಇವರಿಗೆ ಜಾತಿ ಸಿಂಧುತ್ವ ಪ್ರಮಾಣ ಪತ್ರ ನೀಡಬಹುದು ಎಂದು ದೃಢೀಕರಿಸಿರುತ್ತಾರೆ<br>ಸಹಾಯಕ ನಿರ್ದೇಶಕರು (ಗ್ರೇಡ್-2) ರವರ ಕಚೇರಿ, ಸಮಾಜ ಕಲ್ಯಾಣ ಇಲಾಖೆ, ಸುಳ್ಯ ತಾಲೂಕು ಇವರ ಪತ್ರ ದಿನಾಂಕ 15.09.2018ರಲ್ಲಿ ತಹಶೀಲ್ದಾರರು ತಾಲೂಕು ಕಚೇರಿ, ಸುಳ್ಯ ಇವರಿಗೆ ಶ್ರೀ ಚಂದ್ರಶೇಖರ್ ಇವರ ಜಾತಿಯ ಬಗ್ಗೆ ದಿನಾಂಕ 15.12.2017ರಂದು ದಾಖಲೆಗಳ ಪರಿಶೀಲನೆ ನಡೆಸಲಾಗಿ ಸದರಿಯವರು ಪರಿಶಿಷ್ಟ ಜಾತಿಗೆ ಸೇರಿದ ಪಲ್ಲನ್ ಉಪಜಾತಿಗೆ ಸೇರಿರುವುದು ದೃಢಪಟ್ಟಿದೆ. ಅದರಂತೆ ಅರ್ಜಿದಾರರಿಗೆ ಜಾತಿ ಸಿಂಧುತ್ವ ನೀಡಬಹುದೆಂದು ಶಿಫಾರಸ್ಸು ಮಾಡಿರುತ್ತಾರೆ.<br>ತಹಶೀಲ್ದಾರರು, ಸುಳ್ಯ ತಾಲೂಕು ಇವರು ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆ ಇವರಿಗೆ ಕಳುಹಿಸಿದ ಪತ್ರ ದಿನಾಂಕ 23.09.2018ರಲ್ಲಿ ಕಂದಾಯ ನಿರೀಕ್ಷಕರು, ಸುಳ್ಯ ಹೋಬಳಿಯವರ ಹಾಗೂ ಸಹಾಯಕ ನಿರ್ದೇಶಕರು (ಗ್ರೇಡ್-2) ಸಮಾಜ ಕಲ್ಯಾಣ ಇಲಾಖೆ ಇವರು ನೀಡಿರುವ ವರದಿಯನ್ನು ಅನುಸರಿಸಿ ಶ್ರೀ ಚಂದ್ರಶೇಖರ್ ಇವರು ಪರಿಶಿಷ್ಟ ಜಾತಿಗೆ ಸೇರಿದ ಪಲ್ಲನ್ ಉಪಜಾತಿಗೆ ಸೇರಿದ್ದು, ಸದರಿಯವರಿಗೆ ನೀಡಿದ ಜಾತಿ ದೃಢ ಪತ್ರವು ನೈಜತೆಯಿಂದ ಕೂಡಿದೆ. ಇವರ ಜಾತಿ ಪ್ರಮಾಣದ ಪಟ್ಟಿಯನ್ನು ಪರಿಶೀಲಿಸಲಾಗಿದೆ. ಈ ಪಟ್ಟಿಯಲ್ಲಿ ಸದರಿಯವರ ಜಾತಿಯು ಪಲ್ಲನ್ ಉಪಜಾತಿಗೆ ಸೇರಿರುವುದಾಗಿ ತಿಳಿದು ಬರುತ್ತದೆ ಎಂದು ದೃಢೀಕರಿಸಿರುತ್ತಾರೆ.<br>ಆದುದರಿಂದ ಕುಲಸಚಿವರ ಕಚೇರಿ ಪತ್ರ ದಿನಾಂಕ 04.12.2018ರಲ್ಲಿ ಶ್ರೀ ಚಂದ್ರಶೇಖರ್ ಇವರ ಜಾತಿ ಸಿಂಧುತ್ವ ಪ್ರಕರಣವನ್ನು ಜರೂರು ಎಂದು ಪರಿಗಣಿಸಿ, ಇವರ ಸಿಂಧುತ್ವ ಪ್ರಮಾಣ ಪತ್ರವನ್ನು ಶೀಘ್ರವಾಗಿ ನೀಡಬೇಕೆಂದು ಉಪನಿರ್ದೇಶಕರು, ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆ ಇವರನ್ನು ಕೋರಲಾಗಿದೆ.<br>ಪ್ರಸ್ತುತ ಆಗಿರುವ ಲೆಕ್ಕ ಪರಿಶೋಧನಾ ಆಕ್ಷೇಪಣೆಯನ್ನು ಶ್ರೀ ಚಂದ್ರಶೇಖರ ಇವರಿಗೆ ತಿಳಿಸಲಾಗಿದ್ದು, ಶೀಘ್ರದಲ್ಲಿಯೇ ಸಿಂಧುತ್ವ ಪ್ರಮಾಣ ಪತ್ರವನ್ನು ತಂದು ಒಪ್ಪಿಸುವುದಾಗಿ ತಿಳಿಸಿರುತ್ತಾರೆ. |

| | | |
|---|---|---|
| 48 | <u>ಶ್ರೇಣಿ ವಹಿ (Scale register) ಯನ್ನು ನಿಯಮಾನುಸಾರ ನಿರ್ವಹಿಸದಿರುವ ಕುರಿತು:</u><br>ಮಂಗಳೂರು ವಿಶ್ವವಿದ್ಯಾನಿಲಯದ 2016-17ನೇ ಸಾಲಿನ ಲೆಕ್ಕಪರಿಶೋಧನೆ ಕೈಗೊಂಡ ಅವಧಿಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಹಾಗೂ ವಿಶ್ವವಿದ್ಯಾನಿಲಯದ ವಿವಿಧ ಅಧ್ಯಯನ ವಿಭಾಗಗಳು, ಪ್ರಾದೇಶಿಕ ಕೇಂದ್ರಗಳು, ಎಲ್ಲಾ ಕಾಲೇಜುಗಳು, ಕಛೇರಿಗಳಿಗೆ ಸಂಬಂಧಿಸಿದಂತೆ, ವಿವಿಧ ವೃಂದಗಳು/ ವಿವಿಧ ಶ್ರೇಣಿಗಳಿಗೆ ಸರ್ಕಾರದಿಂದ ಮಂಜೂರಾಗಿರುವ ಹುದ್ದೆಗಳು, ಮಂಜೂರಾದ ಹುದ್ದೆಗಳಿಗೆ ಎದುರಾಗಿ ಕಾರ್ಯ ನಿರ್ವಹಿಸುತ್ತಿರುವ ವಿವರಗಳು, ಖಾಲಿ ಇರುವ ಹುದ್ದೆಗಳ ವಿವರಗಳು ಹಾಗೂ ವಿವಿಧ ವೃಂದದ ವೇತನ ಶ್ರೇಣಿಯ ವಿವರಕ್ಕೆ ಸಂಬಂಧಿಸಿದಂತೆ ನಿರ್ವಹಿಸುವ ಶ್ರೇಣಿ ವಹಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ: 26/2018-19 ದಿ:21.11.2018 ರಲ್ಲಿ ಕೋರಲಾಗಿ, ಹಾಜರುಪಡಿಸಿರುವ ಶ್ರೇಣಿ ವಹಿಯನ್ನು ಕರ್ನಾಟಕ ಖಜಾನೆ ಸಂಹಿತೆ (KTC)-1963 ರ ಅನುಚ್ಛೇದ-93(4) ರಲ್ಲಿ ಸೂಚಿಸಿದಂತೆ ನಮೂನೆ-19 ಹಾಗೂ ನಮೂನೆ-20 ರನ್ವಯ ನಿರ್ವಹಿಸದಿರುವುದು ಕಂಡು ಬಂದಿದ್ದು, ವಿಶ್ವವಿದ್ಯಾನಿಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹಾಗೂ ಖಾಲಿ ಉಳಿದಿರುವ ವಿವಿಧ ವೃಂದಗಳ ಒಟ್ಟು ಹುದ್ದೆಗಳ ಬಗ್ಗೆ ನಿಖರ ಮಾಹಿತಿಯನ್ನು ತಿಳಿದುಕೊಳ್ಳಲು ಸಾಧ್ಯವಾಗಿರುವುದಿಲ್ಲ. ಆದುದರಿಂದ ನಿಯಮಾನುಸಾರ ಶ್ರೇಣಿವಹಿಯನ್ನು ನಿರ್ವಹಿಸಿ ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಸೂಚಿಸಿದೆ. | ಶ್ರೇಣಿ ವಹಿಯನ್ನು ಕರ್ನಾಟಕ ಖಜಾನೆ ಸಂಹಿತೆ 1963ರ ಅನುಚ್ಛೇದ 93(4)ರಲ್ಲಿ ಸೂಚಿಸಿದಂತೆ ನಮೂನೆ 19 ಮತ್ತು 20ರಲ್ಲಿ ನಿರ್ವಹಿಸಲು ಕ್ರಮಕೈಗೊಳ್ಳಲಾಗುವುದು. ಆದುದರಿಂದ ಆಕ್ಷೇಪಣೆಯನ್ನು ಕೈಬಿಡುವಂತೆ ಕೋರಲಾಗಿದೆ. |
| 49 | <u>ನೌಕರರು/ ಅಧಿಕಾರಿಗಳ ತಂದೆ ಮತ್ತು ತಾಯಿಯವರ ವೈದ್ಯಕೀಯ ಬಿಲ್ಲುಗಳನ್ನು ಪಾಸು ಮಾಡುವಾಗ ನಿಯಮಗಳನ್ನು ಉಲ್ಲಂಘಿಸಿರುವುದು :</u><br>2016-17ನೇ ಸಾಲಿನ ಏಪ್ರಿಲ್-2016 ಮತ್ತು ಏಪ್ರಿಲ್-16 ರ ವೋಚರ್ಸ್‌ಗಳ ಪರಿಶೀಲನೆಯಲ್ಲಿ ಕೆಲವು ನೌಕರರುಗಳ ತಂದೆ ಹಾಗೂ ತಾಯಿಯವರ ವೈದ್ಯಕೀಯ ವೆಚ್ಚದ ಮರುಭರಿಕೆ ಬಿಲ್ಲುಗಳನ್ನು ಪಾಸು ಮಾಡುವ ಸಂದರ್ಭದಲ್ಲಿ ಈ ಕೆಳಗೆ ವಿವರಿಸಲಾಗಿರುವ ವೈದ್ಯಕೀಯ ಬಿಲ್ಲುಗಳನ್ನು ವೈದ್ಯಕೀಯ ನಿಯಮಗಳ 1963 ರ ನಿಯಮಗಳನ್ನು ಉಲ್ಲಂಘಿಸಿ ಪಾಸು ಮಾಡಿರುವುದು ಕಂಡು ಬಂದಿರುತ್ತದೆ.<br>1) ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ/26/ಎಸ್.ಎಂ.ಆರ್/2011 ದಿನಾಂಕ:27.03.2012 ರ ಪ್ರಕಾರ ಸರ್ಕಾರಿ ನೌಕರರ ತಂದೆ ತಾಯಿಯವರ ತಿಂಗಳ ಒಟ್ಟು ಆದಾಯ ರೂ.6,000/- ಕ್ಕಿಂತ ಕಡಿಮೆ ಇರುತ್ತದೆಂದು ತಹಸೀಲ್ದಾರ್ ಕಛೇರಿಯಿಂದ ನೀಡಲಾಗಿರುವ ವರಮಾನ ಪ್ರಮಾಣ ಪತ್ರವನ್ನು ಪಡೆಯದೆ ಬಿಲ್ಲು ಪಾಸು ಮಾಡಲಾಗಿದೆ.<br>2) ಸರ್ಕಾರದ ಅಧಿಸೂಚನೆ ಸಂಖ್ಯೆ: GAD/07/OMR/63 ದಿ:25.03.1963 ರಲ್ಲಿನ ನಿಯಮದಂತೆ ತಂದೆ ತಾಯಿಯವರು ನೌಕರರ ಜೊತೆಯಲ್ಲಿ ವಾಸವಾಗಿರುವುದಕ್ಕೆ ದೃಢೀಕರಣ ಪತ್ರ ಪಡೆಯದೆ ಬಿಲ್ಲು ಪಾಸು ಮಾಡಲಾಗಿದೆ.<br>3) ತಂದೆ/ ತಾಯಿಯವರು ನೌಕರರ ಆದಾಯದ ಮೇಲೆಯೇ ಅವಲಂಬಿತರಾಗಿರುತ್ತಾರೆಂದು ಬೇರೆ ಯಾವುದೇ ಪ್ರಕಾರದ ಆದಾಯ ಮೂಲಗಳು ತಂದೆ/ತಾಯಿಯವರಿಗೆ ಇರುವುದಿಲ್ಲ ಎಂಬ ಬಗ್ಗೆ ದೃಢೀಕರಣ ಪಡೆಯದೇ ಬಿಲ್ಲು ಪಾಸು ಮಾಡಲಾಗಿದೆ.<br>4) ತಂದೆ/ ತಾಯಿಯರು ನೌಕರರ ಜೊತೆಯಲ್ಲಿಯೇ ವಾಸವಾಗಿರುತ್ತಾರೆ ಎಂಬುವುದಕ್ಕೆ ವೋಟರ್/ ಆಧಾರ್ ಕಾರ್ಡ್, ಐ.ಡಿ ಕಾರ್ಡ್ ಅಥವಾ ರೇಷನ್ ಕಾರ್ಡ್‌ಗಳ ಜೆರಾಕ್ಸ್ ಪ್ರತಿಗಳನ್ನು ಪಡೆಯದೇ ಬಿಲ್ಲು ಪಾಸು ಮಾಡಲಾಗಿದೆ.<br>ಮೇಲೆ ವಿವರಿಸಲಾಗಿರುವ ಯಾವುದೇ ದಾಖಲಾತಿಗಳನ್ನು ಪಡೆಯದೆ ಈ ಕೆಳಗೆ ಪಾವತಿಸಲಾಗಿರುವ ವೈದ್ಯಕೀಯ ಬಿಲ್ಲುಗಳ ವೆಚ್ಚದ ಒಟ್ಟು ಮೊತ್ತ ರೂ.72,083/-ಗಳನ್ನು ಸಂಬಂಧಪಟ್ಟವರಿಂದ ವಸೂಲಿಸಿ ವರದಿ ಸಲ್ಲಿಸಲು ಸೂಚಿಸಲಾಗಿದೆ. ಹಾಗೂ ವಿಷಯ ನಿರ್ವಹಕರುಗಳು ಇನ್ನು ಮುಂದೆ ನಿಯಮಗಳನ್ನು ಪಾಲಿಸಿ ಬಿಲ್ಲುಗಳನ್ನು ಪಾಸು ಮಾಡಲು ನಿಯಮಾನುಸಾರ ಗಮನ ನೀಡಬೇಕೆಂದು ಸೂಚಿಸಲಾಗಿದೆ. | ಸದ್ರಿ ಬಿಲ್ಲುಗಳನ್ನು ಪಾವತಿಸುವಾಗ ನೌಕರರ ತಂದೆ ತಾಯಿಯವರು ನೌಕರರ ಅವಲಂಬಿತರು ಎಂದು ಪರಿಶೀಲಿಸಿ ಪಾವತಿಸಲಾಗಿದೆ. ಮುಂದಿನ ದಿನಗಳಲ್ಲಿ ಆಕ್ಷೇಪಣೆಯಲ್ಲಿ ಸೂಚಿಸಿದಂತೆ ಕ್ರಮ ಕೈಗೊಳ್ಳಲಾಗುವುದು. ಆಕ್ಷೇಪಣೆಯನ್ನು ಕೈಬಿಡಲು ಕೋರಲಾಗಿದೆ. |

| ಕ್ರ.ಸಂ | ನೌಕರರುಗಳ ಹೆಸರು | ಪದನಾಮ | ವೋಚರ್ ಸಂಖ್ಯೆ | ಧನಾದೇಶ ಸಂಖ್ಯೆ/ ದಿನಾಂಕ | ಬಿಲ್ಲುಗಳ ಮೊತ್ತ |
|---|---|---|---|---|---|
| 1 | ಶ್ರೀಮತಿ ಭಾರತಿವಿಲಾಸ್ | ಸಹ ಪ್ರಾಧ್ಯಾಪಕರು | 1012/ 4.3.16 | 998417/ 10.5.16 | 33,595 |
| 2 | ದಾಮೋದರ್ ಗೋಪಾಲ್ | ಡಿ-ಗ್ರೂಪ್ | 1108/11.5.16 | 494291/ 17.05.2016 | 31,634 |
| 3 | ವಿಶ್ವನಾಥನಾಯ್ಕ | ಡಿ-ಗ್ರೂಪ್ | 2611/26.7.16 | 232658/ 26.07.2016 | 1.155 |
| | | | 2611/26.7.16 | 232658/ 26.07.2016 | 1,155 |
| | | | 2611/26.7.16 | 232658/ 26.07.2016 | 1,155 |
| | | | 2611/26.7.16 | 232658/ 26.07.2016 | 1,155 |
| | | | 3842/28.9.18 | 235243/ 28.09.2018 | 2,234 |
| ಒಟ್ಟು ರೂ. | | | | | 72,083 |

50 <u>ವೈದ್ಯಕೀಯ ಮುಂಗಡ ಹುಂಡಿಯ ಧನಾದೇಶವನ್ನು ರೋಗಿಯ ಹೆಸರಿಗೆ ನೀಡಿರುವುದು:</u>

ಮಂಗಳೂರು ವಿಶ್ವವಿದ್ಯಾನಿಲಯದ 2016-17ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಸಾಮಾನ್ಯ ನಿಧಿಯಲ್ಲಿ ಡಿಸೆಂಬರ್-2016ರ ಮಾಹೆಯಲ್ಲಿ ವೆಚ್ಚ ಭರಿಸಿ ಹಾಜರುಪಡಿಸಿದ ವೋಚರ್ ಸಂಖ್ಯೆ: 5341 ಅನ್ನು ಪರಿಶೀಲಿಸಲಾಗಿ ವೈದ್ಯಕೀಯ ವೆಚ್ಚ ಭರಿಸಲು ಶ್ರೀ ಪರಮೇಶ್ವರ, ವಿಶೇಷಾಧಿಕಾರಿಗಳು ಇವರ ಹೆಸರಿಗೆ ಧನಾದೇಶ ಸಂಖ್ಯೆ:202466 ಮುಂಗಡ ಹುಂಡಿಯ ಮೂಲಕ ರೂ.2,25,000/-ಗಳನ್ನು ಪಾವತಿಸಿರುವುದನ್ನು ಗಮನಿಸಲಾಗಿದೆ.

Karnataka Government Servant's (Medical Attendance) Rules-1963 ರನ್ವಯ ವೈದ್ಯಕೀಯ ವೆಚ್ಚ ಭರಿಸಲು ನೀಡುವ ಮುಂಗಡ ಠೇವಣಿ ಹಣದ ಧನಾದೇಶವನ್ನು ಸಂಬಂಧಪಟ್ಟ ಆಸ್ಪತ್ರೆಯ ಹೆಸರಿನಲ್ಲೇ ನೀಡಬೇಕಾಗಿರುತ್ತದೆ ಹಾಗೂ ವೆಚ್ಚಕ್ಕಾಗಿ ಉಳಿದ ಹಣವನ್ನು ಆಸ್ಪತ್ರೆಯಿಂದಲೇ ನೇರವಾಗಿ ಹಣ ಮಂಜೂರು ಮಾಡುವ ಇಲಾಖೆಗೆ ಮರುಜಮೆ ಮಾಡಬೇಕಾಗಿರುತ್ತದೆ. ಆದರೆ ಆ ಸಂದರ್ಭದಲ್ಲಿ ಮುಂಗಡ ಹಣದ ಧನಾದೇಶವನ್ನು ನೇರವಾಗಿ ರೋಗಿಯ ಹೆಸರಿಗೆ ನೀಡಿರುವುದರಿಂದ ಕರ್ನಾಟಕ ವೈದ್ಯಕೀಯ ಹಾಜರಾತಿ ನಿಯಮಗಳು 1963 ರ ಉಲ್ಲಂಘನೆಯಾಗಿರುತ್ತದೆ. ಆದ್ದರಿಂದ ವೈದ್ಯಕೀಯ ವೆಚ್ಚ ಭರಿಸಲು ನೀಡಲಾಗಿರುವ ಮುಂಗಡ ಹುಂಡಿಯ ಒಟ್ಟು ಮೊತ್ತ ರೂ.2,25,000/-ಗಳನ್ನು ಆಕ್ಷೇಪಣೆಗೆ ಸೂಚಿಸಲಾಗಿದೆ. (ವಿಚಾರಣಾ ಪತ್ರ ಸಂಖ್ಯೆ: 27/2018-19 ದಿ:21.11.2018 ರಂದು ನೀಡಲಾಗಿತ್ತು.)

ಶ್ರೀ ಪರಮೇಶ್ವರ, ವಿಶೇಷಾಧಿಕಾರಿಗಳು ಇವರ ತುರ್ತು ಚಿಕಿತ್ಸೆಗಾಗಿ ಅನಿವಾರ್ಯ ಕಾರಣದಿಂದಾಗಿ ಮಾಡಿದ ಮುಂಗಡವನ್ನು ಹೊಂದಾಣಿಕೆ ಮಾಡಲಾಗಿದೆ. ಮುಂದೆ ಇಂತಹ ಪ್ರಕರಣಗಳು ನಡೆಯದಂತೆ ನಿಗಾ ವಹಿಸಲಾಗುವುದು. ಆಕ್ಷೇಪಣೆಯನ್ನು ಕೈಬಿಡಲು ಕೋರಲಾಗಿದೆ.

51 <u>ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ವಿದ್ಯಾರ್ಥಿ ವೇತನ ಮಂಜೂರಾತಿಯ ವಿವರಗಳು :</u>

2016-17ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಪರಿಶಿಷ್ಟ ಜಾತಿ/ಪಂಗಡ ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನಕ್ಕೆ ಸಂಬಂಧಪಟ್ಟ ಕಡತಗಳನ್ನು ಪರಿಶೀಲಿಸಲಾಗಿ 2015-16 ಮತ್ತು 2016-17ನೇ ಸಾಲಿನ ಬೇಡಿಕೆ, ಮಂಜೂರಾತಿ ಮತ್ತು ಬಾಕಿಯ ವಿವರಗಳು ಈ ಕೆಳಕಂಡಂತಿವೆ.

| ವರ್ಷ | ವರ್ಗ | ಬೇಡಿಕೆ | ಮಂಜೂರಾದದ್ದು | ಬಾಕಿ ಉಳಿದಿರುವುದು |
|---|---|---|---|---|
| 2015-16 | ಎಸ್.ಸಿ | 37,08,265 | 32,94,940 | 4,13,325 |
| | ಎಸ್.ಟಿ | 23,33,333 | 20,75,000 | 2,58,333 |
| 2016-17 | ಎಸ್.ಸಿ | 47,64,888 | 45,66,300 | 1,98,588 |
| | ಎಸ್.ಟಿ | 28,93,087 | 26,19,860 | 2,73,227 |
| ಒಟ್ಟು | | 1,36,99,573 | 1,25,56,100 | 11,43,473 |

ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ವೇತನದ ಬೇಡಿಕೆ ತ:ಖ್ತೆಯಲ್ಲಿ ಹಾಸ್ಟೆಲ್ ನಿರ್ವಹಣಾ ವೆಚ್ಚ ಅಲ್ಲದೆ Tuition Fee/ Exam Fee/ Lab Fee/ Development Fee/ Library Fee/ Reading Room/ Special Fee/ Internet & magazine Fee/ Medical Fee/other fee ಶುಲ್ಕಗಳನ್ನು ಮರು ಭರಿಸಲು ಬೇಡಿಕೆ ಸಲ್ಲಿಸಲಾಗುತ್ತದೆ. ಸಮಾಜ ಕಲ್ಯಾಣ ಇಲಾಖೆಯಿಂದ ಹಾಸ್ಟೆಲ್ ನಿರ್ವಹಣಾ ವೆಚ್ಚದೊಂದಿಗೆ ಬೇಡಿಕೆ ಸಲ್ಲಿಸಿದ ಶುಲ್ಕಗಳಲ್ಲಿ ಕೇವಲ Tuition Fee/ Exam Fee/ Lab Fee/ other fee ಮಾತ್ರ ವಿದ್ಯಾರ್ಥಿ ವೇತನದ ಮೊತ್ತದಲ್ಲಿ ಮರುಭರಣೆಯಾಗುವುದರಿಂದ ಬೇಡಿಕೆ ಮತ್ತು ಮಂಜೂರಾದ ಮೊತ್ತದಲ್ಲಿ 11,43,473.00 ವ್ಯತ್ಯಾಸ (ಕೊರತೆ) ವಾಗಿರುತ್ತದೆ.

2016-17ನೇ ಸಾಲಿನಲ್ಲಿ ಒಟ್ಟು ರೂ.11,43,473/-ಗಳು ಸರ್ಕಾರದಿಂದ ಬಾಕಿ ಮೊತ್ತ ಮಂಜೂರಾಗಬೇಕಾಗಿದ್ದು, ಕೂಡಲೇ ಸರ್ಕಾರದಿಂದ ಮರುಭರಿಕೆ ಮಾಡಿಕೊಳ್ಳಲು ಸೂಚಿಸಿದೆ. ಆದರೆ ಸರ್ಕಾರದಿಂದ ಮರುಭರಿಕೆಯಾಗದಿದ್ದಲ್ಲಿ ಸದರಿ ವಿದ್ಯಾರ್ಥಿಗಳಿಂದ ವಸೂಲಿಸಿ ವಿಶ್ವವಿದ್ಯಾನಿಲಯದ ಖಾತೆಗೆ ಜಮೆ ಮಾಡಿ, ಜಮೆ ಮಾಡಲಾದ ವಿವರಗಳನ್ನು ಲೆಕ್ಕತಪಾಸಣಾ ಕಛೇರಿಗೆ ಹಾಜರುಪಡಿಸುವಂತೆ ಸೂಚಿಸಿದೆ. ಈ ಕುರಿತು ವಿಚಾರಣಾ ಪತ್ರ ಸಂಖ್ಯೆ:135/2018-19 ದಿನಾಂಕ:29.01.2019 ರಲ್ಲಿ ಜಾರಿ ಮಾಡಲಾಗಿ ಶೀಘ್ರವಾಗಿ ಸರ್ಕಾರದೊಂದಿಗೆ ಪತ್ರ ವ್ಯವಹಾರ ಮಾಡಿ ಬಾಕಿ ವಿದ್ಯಾರ್ಥಿ ವೇತನವನ್ನು ಮರುಭರಿಕೆ ಮಾಡಿಕೊಳ್ಳುವುದಾಗಿ ಉತ್ತರ ಒದಗಿಸಲಾಗಿದೆ.

ಮುಂದುವರಿಕೆಯಾಗಿ, ವಿವಿ ಅಧೀನದಲ್ಲಿರುವ ಹಾಸ್ಟೆಲ್‌ಗಳಲ್ಲಿರುವ ವಿದ್ಯಾರ್ಥಿಗಳ ಊಟೋಪಚಾರ ಖರ್ಚು ವೆಚ್ಚಗಳನ್ನು ವಿವಿ ವತಿಯಿಂದ ಪೂರ್ಣವಾಗಿ ಭರಿಸುತ್ತಿರುವುದರಿಂದ ಸಮಾಜಕಲ್ಯಾಣ ಇಲಾಖೆಯಿಂದ ಮಂಜೂರಾಗುವ ವಿದ್ಯಾರ್ಥಿ ವೇತನದ ಮೊತ್ತದಲ್ಲಿ ಸೇರಿರುವ ಹಾಸ್ಟೆಲ್ ನಿರ್ವಹಣಾ ಮೊತ್ತವನ್ನು ವಿವಿಯ ಸಾಮಾನ್ಯ ಖಾತೆಗೆ ಜಮೆ ಮಾಡಿಕೊಳ್ಳಲಾಗುತ್ತದೆ. ಹೀಗೆ ಮಂಜೂರಾದ ವೆಚ್ಚಕ್ಕಿಂತ ಹೆಚ್ಚುವರಿ ಆಗಿರುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ 1434 ಪರಿಶಿಷ್ಟ ಜಾತಿ/ಪಂಗಡದ ವಿದ್ಯಾರ್ಥಿಗಳ ಕ್ಷೇಮಾಭ್ಯುದಯ ನಿಧಿಯಿಂದ ಭರಿಸಲು ಪರಿನಿಯಮದಲ್ಲಿರುವ ಅವಕಾಶದಂತೆ ಭರಿಸಲಾಗುತ್ತಿದೆ.
ಆದುದರಿಂದ ಮೇಲಿನ ಆಕ್ಷೇಪಣೆಯನ್ನು ಕೈ ಬಿಡುವಂತೆ ಕೋರಲಾಗಿದೆ.

---

52

ನಿಯಮಾನುಸಾರ ನಿಗದಿಪಡಿಸಲಾಗಿರುವ ಗ್ರಂಥಾಲಯದ ಪುಸ್ತಕಗಳ ಸಂಖ್ಯೆಗಳಿಗಿಂತ ಹೆಚ್ಚುವರಿ ಪುಸ್ತಕಗಳನ್ನು ಪಡೆದಿರುವುದು

2016-17ನೇ ಸಾಲಿನ ಮಂಗಳೂರು ವಿಶ್ವವಿದ್ಯಾನಿಲಯದ ಕೇಂದ್ರ ಗ್ರಂಥಾಲಯದ ವತಿಯಿಂದ ಬೋಧಕೇತರ ನೌಕರರುಗಳಿಗೆ ನಿಯಮಾನುಸಾರ ಎರಡು ಪುಸ್ತಕಗಳನ್ನು ಮಾತ್ರ ನೀಡಬೇಕಾಗಿರುತ್ತದೆ. 15 ದಿನಗಳ ವರೆಗೆ ಆ ಪುಸ್ತಕಗಳನ್ನು ಇಟ್ಟುಕೊಳ್ಳಲು ಅವಕಾಶವಿರುತ್ತದೆ.15 ದಿನಗಳ ನಂತರ ಹಿಂದಿರುಗಿಸಿದ್ದಲ್ಲಿ ದಂಡ ಶುಲ್ಕ ವಿಧಿಸಲಾಗುತ್ತದೆ.

ಆದರೆ ಶ್ರೀಯುತ ಟಿ.ವೈ.ಮಲ್ಲಯ್ಯ ಇವರಿಗೆ 201 ಪುಸ್ತಕಗಳನ್ನು ವಿತರಿಸಲಾಗಿದೆ. ಇವುಗಳಲ್ಲಿ ಸದರಿಯವರು 65 ಪುಸ್ತಕಗಳನ್ನು ಮಾತ್ರ ಗ್ರಂಥಾಲಯಕ್ಕೆ ಹಿಂದಿರುಗಿಸಲಾಗಿದ್ದು, ಉಳಿಕೆ 136 ಪುಸ್ತಕಗಳನ್ನು ಈವರೆವಿಗೂ ಹಿಂದಿರುಗಿಸಿರುವುದಿಲ್ಲ. ಈ ಬಗ್ಗೆ ಲೆಕ್ಕಪರಿಶೋಧನೆ ವಿಚಾರಣಾ ಸಂಖ್ಯೆ:155/18-19/ ದಿ:30.01.2019 ರಲ್ಲಿ ನೀಡಲಾಗಿದ್ದು ಯಾವುದೇ ಉತ್ತರವನ್ನು ಸಲ್ಲಿಸಿರುವುದಿಲ್ಲ. ಮೂಲ ದಾಸ್ತಾನು ವಹಿ ಪರಿಶೀಲಿಸಲಾಗಿ ಹಿಂದಿನ ಸಾಲುಗಳಲ್ಲಿ ಪುಸ್ತಕಗಳ ಖರೀದಿ ಮೊತ್ತ ದಾಖಲಿಸದಿರುವುದರಿಂದ ಅಷ್ಟು ಸಂಖ್ಯೆಯ ಪುಸ್ತಕಗಳ ಇತ್ತೀಚಿನ ಮುದ್ರಣದ ದರದಂತೆ ಅಥವಾ 7 ಪಟ್ಟು ಲೆಕ್ಕಚಾರ ಹಾಕಿ 136 ಪುಸ್ತಕಗಳ ಬೆಲೆಯನ್ನು ಒಟ್ಟುಗೂಡಿಸಿ ಸಂಬಂಧಪಟ್ಟ ಗ್ರಂಥಪಾಲಕಾರಾದ ಶ್ರೀಯುತ ಮಲ್ಲಯ್ಯ ರವರಿಂದ ವಸೂಲಿ ಮಾಡಿ ವರದಿಯನ್ನು ಲೆಕ್ಕತಪಾಸಣೆಗೆ ಹಾಜರುಪಡಿಸಲು ಸೂಚಿಸಿದೆ. ದಿನಾಂಕ:10.05.2019 ರ ಪುನರ್ ಪರಿಶೀಲನಾ ಅವಧಿಯಲ್ಲಿ ಟಿ.ವೈ.ಮಲ್ಲಯ್ಯ ಇವರಿಗೆ ದಿನಾಂಕ:21.03.2019 ರಲ್ಲಿ ನೋ ಡ್ಯೂ ಸರ್ಟಿಫಿಕೇಟ್ ವಿತರಿಸಿರುವುದನ್ನು ಹಾಜರುಪಡಿಸಲಾಗಿರುವುದನ್ನು ಸಹ ಪರಿಶೀಲಿಸಲಾಗಿದ್ದು. ನೀರಾಪೇಕ್ಷಣಾ ಪತ್ರ ನೀಡಿದ ಅಧಿಕಾರಿಗೆ ಜವಾಬ್ದಾರಿ ನೀಗದಿಪಡಿಸಿ ನಷ್ಟವನ್ನು ವಸೂಲಿಸಲು ಸೂಚಿಸಿದೆ.

ಶ್ರೀ ಮಲ್ಲಯ್ಯನವರು ಪಡಕೊಂಡಿದ್ದ ಪುಸ್ತಕಗಳಲ್ಲಿ 56 ಪುಸ್ತಕಗಳನ್ನು ಬಿಟ್ಟು ಉಳಿದ ಎಲ್ಲಾ ಪುಸ್ತಕಗಳನ್ನು ಹಿಂದಿರುಗಿಸುರುತ್ತಾರೆ. 56 ಪುಸ್ತಕಗಳ ದ್ವಿಗುಣ ಮೌಲ್ಯ ರೂ. 25517.00 ಮತ್ತು ದಂಡ ರೂ. 43.00 ಸೇರಿಸಿ ಒಟ್ಟು ರೂ. 25560.00ನ್ನು ರಶೀದಿ ಸಂಖ್ಯೆ 82219/3.19ರಲ್ಲಿ ಪಡೆದುಕೊಂಡು ಚಲನ್ ಸಂಖ್ಯೆ 10580 ದಿನಾಂಕ 22.03.2019ರಲ್ಲಿ ವಿ.ವಿ. ಖಾತೆಗೆ ಜಮೆ ಮಾಡಲಾಗಿದೆ. ಆದುದರಿಂದ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ.

---

53

ಎ.ಸಿ ಬಿಲ್ಲುಗಳಿಗೆ ಎನ್.ಡಿ.ಸಿ ಬಿಲ್ಲುಗಳನ್ನು ಸಲ್ಲಿಸದಿರುವುದು ಮತ್ತು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು:

(ಎ) ಎನ್.ಡಿ.ಸಿ ವೋಚರ್‌ಗಳನ್ನು ಈವರೆವಿಗೂ ಸಲ್ಲಿಸದಿರುವುದು :

ಸಾದಿಲ್ವಾರು ವೆಚ್ಚ ಕೈಪಿಡಿ (ಎಂ.ಸಿ.ಇ) ನಿಯಮ 36 ಮತ್ತು 37 ರ ರೀತ್ಯಾ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಮೂಲಕ ಹಣ ತೆಗೆಯಲು ಅಧಿಕಾರ ಹೊಂದಿರುವ ಎಲ್ಲಾ ಕಛೇರಿ ಮುಖ್ಯಸ್ಥರು ತಮ್ಮ ಸವಿವರ ಸಾದಿಲ್ವಾರು ಬಿಲ್ಲನ್ನು ಯಾವ ತಿಂಗಳಿಗೆ ಆ ಬಿಲ್ಲು ಸಂಬಂಧಪಟ್ಟಿದೆಯೋ ಆ ನಂತರದ ತಿಂಗಳಿನ ಮೊದಲ ವಾರ ಮುಗಿಯುವುದಕ್ಕೆ ಮುಂಚೆ ಮೇಲು ರುಜು ಮಾಡುವ ತಮ್ಮ ಅಧಿಕಾರಿಗಳಿಗೆ ಕಳುಹಿಸಿಕೊಡತಕ್ಕದ್ದು.

| ಕ್ರ.ಸಂ | ಎ.ಸಿ ಬಿಲ್ ಪಡೆದಿರುವವರ ವಿವರ | ಪದನಾಮ | ವೋಚರ್ ಸಂಖ್ಯೆ | ಮೊತ್ತ (ರೂ.) | ಎನ್.ಡಿ.ಸಿ ಸಲ್ಲಿಸುವ ಅಂತಿಮ ದಿನಾಂಕ |
|---|---|---|---|---|---|
| 1 | ಶ್ರೀ ದಿನೇಶ್ ಭಟ್, | (ಪ್ರ.ದ.ಸ (ಎಫ್-10) | 22/16-17 | 42,500 | ಹಣ ಸ್ವೀಕರಿಸಿದ ದಿನಾಂಕದಿಂದ ಒಂದು ತಿಂಗಳ ಅವಧಿ, |
| | | | 23/16-17 | 12,500 | |
| | | | 24/16-17 | 30,000 | |
| | | | 40/16-17 | 5,00,000 | |
| | | | 45/16-17 | 1,25,000 | |
| 2 | ಶ್ರೀಮತಿ ಶ್ವೇತಾ | ಜಾಬ್ ಟೈಪಿಸ್ಟ್, (ಎಫ್-16) | 43/16-17 | 30,000 | |
| ಒಟ್ಟು | | | | 7,40,000 | |

ಎ)

| ಕ್ರ.ಸಂ | ವೋಚರ್ ಸಂಖ್ಯೆ | ಮೊತ್ತ (ರೂ.) | ಹೊಂದಾಣಿಕೆಯಾದ ದಿನಾಂಕ |
|---|---|---|---|
| 1 | 22/16-17 | 42,500.00 | ದಿ.23..01.2019 |
| 2 | 23/16-17 | 12,500.00 | ದಿ.02.02.2019 |
| 3 | 24/16-17 | 30,000.00 | ದಿ.15.04.2019 |
| 4 | 40/16-17 | 5,00,000.00. | ವಸೂಲಾತಿಗೆ ಕ್ರಮ ಕೈಗೊಳ್ಳಲಾಗುತ್ತಿದೆ. |
| 5 | 45/16-17 | 1,25,000.00 | 16.10.2017 |
| 6 | 43/16-17 | 30,000.000 | 3.09.2019 |
| | ಒಟ್ಟು | **740000.00** | |

ತಡ ಮಾಡಿ ಸಲ್ಲಿಸಿದ ಬಗ್ಗೆ ಜ್ಞಾಪನ ಪತ್ರ ನೀಡಲಾಗಿದೆ.

2 ವರ್ಷಗಳು ಕಳೆದರೂ ಸಹ ಎನ್.ಡಿ.ಸಿ ವೋಚರ್‌ಗಳನ್ನು ಸಲ್ಲಿಸಿರುವುದಿಲ್ಲ. ಆದುದರಿಂದ ಕರ್ನಾಟಕ ಆರ್ಥಿಕ ಸಂಹಿತೆ-1958 ಸಂಪುಟ-1 ರ ಅನುಚ್ಛೇದ 63 ರ ರೀತ್ಯಾ ಕ್ರಮ ಕೈಗೊಂಡು ಎನ್.ಡಿ.ಸಿ ಬಿಲ್ಲು ಪಡೆದುಕೊಂಡು ಹೊಂದಾಣಿಕೆ ಮಾಡಿದ ವಿವರಗಳನ್ನು ಹಾಜರುಪಡಿಸುವವರೆಗೆ ರೂ.7,40,000/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರಗಳನ್ನು ಅನುಬಂಧ-25 ರಲ್ಲಿ ವರದಿಗೆ ಲಗತ್ತಿಸಿದೆ.

| ಕ್ರ.ಸಂ | ಪೀಠಗಳ ವಿವರ | ಬ್ಯಾಂಕ್ ಖಾತೆ ಸಂಖ್ಯೆ/ ಬ್ಯಾಂಕ್ | ಎ.ಸಿ ಬಿಲ್ಲುಗಳ ಮೂಲಕ ನಗದಿ ಕರಿಸಿರುವ ಮೊತ್ತ | ಧನಾದೇಶ ಸಂಖ್ಯೆ/ ದಿನಾಂಕ |
|---|---|---|---|---|
| 1 | ಅಂಬಿಗರ ಚೌಡಯ್ಯ ಪೀಠ | ಎಸ್.ಬಿ.ಐ 30358813697 | 8,000 | 481768/ 21.07.2016 |
| 2 | ಅಂಬಿಗರ ಚೌಡಯ್ಯ ಪೀಠ | ಎಸ್.ಬಿ.ಐ 30358813697 | 5,000 | 481776/ 16.01.2017 |
| 3 | ಯಕ್ಷಗಾನ ಅಧ್ಯಯನ ಕೇಂದ್ರ | ಎಸ್.ಬಿ.ಐ 30654992305 | 50,000 | 081963/ 19.05.2016 |
| 4 | ಯಕ್ಷಗಾನ ಅಧ್ಯಯನ ಕೇಂದ್ರ | ಎಸ್.ಬಿ.ಐ 30654992305 | 25,000 | 081997/ 19.08.2016 |
| ಒಟ್ಟು ರೂ. | | | 88,000 | |

2016-17ನೇ ಸಾಲಿನಲ್ಲಿ ಪೀಠಗಳ ವೆಚ್ಚಗಳಿಗೆ ಸಂಬಂಧಪಟ್ಟಂತೆ ಹಾಜರುಪಡಿಸಲಾದ 17 ಪೀಠಗಳ ಪೂರಕ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಈ ಮೇಲೆ ತಿಳಿಸಲಾದ ಪೀಠಗಳಿಗೆ ಎನ್.ಡಿ.ಸಿ ವೋಚರ್ಸ್‌ಗಳನ್ನು ಹಾಜರುಪಡಿಸಿರುವುದಿಲ್ಲ. ಇದಕ್ಕಾಗಿ ಲೆಕ್ಕತಪಾಸಣೆ ವಿಚಾರಣೆ ಪತ್ರ ಸಂಖ್ಯೆ:169/18-19 ದಿ:05.02.2019 ಕ್ಕೆ ವಿವರಣೆ ಒದಗಿಸದ ಕಾರಣ ಎ.ಸಿ ಬಿಲ್ಲುಗಳ ಒಟ್ಟು ಮೊತ್ತ ರೂ.8,28,000/-ಗಳನ್ನು ಶಾಲಿಯಾನ ಶೇ% 8 ರಂತೆ ಬಡ್ಡಿಯೊಂದಿಗೆ ಕೂಡಲೇ ವಸೂಲಾತಿ ಮಾಡಲು ಸೂಚಿಸಿದೆ.

(ಬಿ) ಎನ್.ಡಿ.ಸಿ ವೋಚರ್‌ಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು :

2016-17ನೇ ಸಾಲಿನಲ್ಲಿ ಪಾವತಿಸಲಾಗಿರುವ ಎ.ಸಿ ಬಿಲ್ಲುಗಳಿಗೆ ಎದುರಾಗಿ ಹೊಂದಾಣಿಕೆಯಾಗಿರುವ ಎನ್.ಡಿ.ಸಿ ವೋಚರ್‌ಗಳಲ್ಲಿ ಭಾಗಶಃ ಮಾತ್ರ ಲೆಕ್ಕಪರಿಶೋಧನೆಗೆ ಹಾಜರುಪಡಿಸಲಾಗಿದೆ. ಇದರಲ್ಲಿ ಶ್ರೀಮತಿ ಶಾಂಭವಿ, ಬೆರಳಚ್ಚುಗಾರರು (ಎಫ್-6) ರವರ ಕಾರ್ಯಭಾರದಲ್ಲಿರುವ ರೂ.16,35,874/-ಗಳು ಶ್ರೀ ತ್ರಿಶೂಲ್, ದ್ವಿ.ದ.ಸ (ಎಫ್-11) ರವರ ಕಾರ್ಯಭಾರದಲ್ಲಿರುವ ರೂ.34,56,350/-ಗಳು ಹಾಗೂ ಶ್ರೀಮತಿ ಶ್ರೀಲತಾ, ದ್ವಿ.ದ.ಸ (ಎಫ್-14) ರವರ ಕಾರ್ಯಭಾರದಲ್ಲಿರುವ ರೂ.14,04,507/-ಗಳಿಗೆ ಎನ್.ಡಿ.ಸಿ ಓಚರ್‌ಗಳನ್ನು ಹಾಜರುಪಡಿಸುವಂತೆ ಕೋರಿ ವಿಚಾರಣಾ ಪತ್ರ ಸಂಖ್ಯೆ:01/2018-19 ದಿನಾಂಕ:13.11.2018, 14/2018-19 ದಿ:14.11.2018, 114/2018-19 ದಿ:10.01.2019 ಹಾಗೂ 197/2018-19 ದಿ:12.02.2019 ರಂದು ನೀಡಲಾಗಿತ್ತಾದರೂ ಸಕಾಲದಲ್ಲಿ ವೋಚರ್‌ಗಳನ್ನು ಹಾಜರುಪಡಿಸದೆ ಲೆಕ್ಕಪರಿಶೋಧನಾ ಕಾರ್ಯವು ಮುಕ್ತಾಯಗೊಳ್ಳುವ ಸಂದರ್ಭದಲ್ಲಿ ಹಾಜರುಪಡಿಸಿರುವುದನ್ನು ಪರಿಶೋಧಿಸಲು ಸಾಧ್ಯವಾಗಿರುವುದಿಲ್ಲ. ಆದುದರಿಂದ ಲೆಕ್ಕಪರಿಶೋಧನಾ ಸಂದರ್ಭದಲ್ಲಿ ಹಾಜರುಪಡಿಸದ ಕಾರಣ ಒಟ್ಟು ಮೊತ್ತ ರೂ.64,96,731/-ಗಳನ್ನು ಆಕ್ಷೇಪಣೆಗೆ ಸೂಚಿಸಿದೆ. ವಿವರಗಳನ್ನು ಅನುಬಂಧ-26 ರಲ್ಲಿ ಒದಗಿಸಿದೆ. ದಿನಾಂಕ:10.05.2019 ರ ಪುನರ್ ಪರಿಶೀಲನಾ ವೇಳೆಯಲ್ಲಿ ಹಾಜರುಪಡಿಸಲು ಅವಕಾಶ ಕೋರಲಾಗಿ, ಅನುಪಾಲನಾ ವರದಿಯೊಂದಿಗೆ ಹೊಂದಾಣಿಕೆ ವಿವರಗಳನ್ನು ಸಲ್ಲಿಸಲು ಸೂಚಿಸಲಾಯಿತು.

**ಘೋಷ್ವಾರೆ**

ದಿನಾಂಕ:31.03.2017 ಕ್ಕೆ ಬಾಕಿ ಎನ್.ಡಿ.ಸಿ ಬಿಲ್ಲುಗಳ (ಘೋಷ್ವಾರೆ) ವಿವರ ತಃಖ್ತೆ:

2016-17ನೇ ಸಾಲಿನಲ್ಲಿ ಡ್ರಾ ಮಾಡಲಾದ ಎನ್.ಡಿ.ಸಿ ಬಿಲ್ಲುಗಳಲ್ಲಿ ರೂ.7,40,000/-ಗಳಿಗೆ ಬಾಕಿ ಉಳಿದಿವೆ.

| ಕ್ರ.ಸಂ | ವೋಚರ್ ಸಂಖ್ಯೆ | ಮೊತ್ತ (ರೂ.) | ಹೊಂದಾಣಿಕೆಯಾದ ದಿನಾಂಕ |
|---|---|---|---|
| 1 | 481768/ 21.07.2016 | 8000.00 | ದಿ. 3.11.16ರಂದು ಹೊಂದಾಣಿಕೆ ಮಾಡಲಾಗಿದೆ. |
| 2 | 481776/ 16.01.2017 | 5000.00 | ದಿ. 22.08.17ರಂದು ಹೊಂದಾಣಿಕೆ ಮಾಡಲಾಗಿದೆ. |
| 3 | 081963/ 19.05.2016 | 50000.00 | ದಿ. 14.02.19ರಂದು ಹೊಂದಾಣಿಕೆ ಮಾಡಲಾಗಿದೆ. |
| 4 | 081997/ 19.08.2016 | 25000.00 | ದಿ. 14.02.19ರಂದು ಹೊಂದಾಣಿಕೆ ಮಾಡಲಾಗಿದೆ. |
| | | **88000.00** | |

ವೋಚರ್‌ಗಳನ್ನು ಹಾಜರುಪಡಿಸಲಾಗಿದೆ.
ಆದಾಗ್ಯೂ ಅದರ ಪ್ರತಿಗಳನ್ನು ಲಗ್ತೀಕರಿಸಲಾಗಿದೆ.

ಬಿ)

| ಕ್ರ.ಸಂ | ವಿಷಯ ನಿರ್ವಾಹಕರು | ಮೊತ್ತ (ರೂ.) | ಹೊಂದಾಣಿಕೆಯಾದ ದಿನಾಂಕ |
|---|---|---|---|
| 1 | ಶ್ರೀಮತಿ ಶಾಂಭವಿ ಎಫ್ 6 | ರೂ. 1635874.00 | ದಿನಾಂಕ 23.01.19ರಂದು ಹೊಂದಾಣಿಕೆಯಾಗಿರುತ್ತದೆ. |
| 2 | ಶ್ರೀ ತ್ರಿಶೂಲ್ ಎಫ್ 11 | ರೂ. 3456350.00 | 2016-17 ಮತ್ತು 17-18ರಲ್ಲಿ |
| 3 | ಶ್ರೀಮತಿ ಶ್ರೀಲತಾ ಎಫ್14 | ರೂ. 1404507.00 | 2016-17 ಮತ್ತು 2017-18ರಲ್ಲಿ |
| | ಒಟ್ಟು | ರೂ. 6496731.00 | |

ಮೇಲ್ಕಂಡ ಎಲ್ಲಾ ಎನ್ ಡಿ.ಸಿ. ಬಿಲ್ಲುಗಳು ಹೊಂದಾಣಿಕೆಯಾಗಿರುತ್ತವೆ.
ಆಕ್ಷೇಪಣೆಯನ್ನು ಕೈಬಿಡಲು ಕೋರಲಾಗಿದೆ.

| | |
|---|---|
| ಪ್ರಾರಂಭಿಕ ಶಿಲ್ಕು (2015-16 ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಕಂಡಿಕೆ ಸಂಖ್ಯೆ:25 ರಲ್ಲಿದ್ದಂತೆ) | 2,55,82,875 |
| (+) 2016-17ನೇ ಸಾಲಿನಲ್ಲಿ ಡ್ರಾ ಮಾಡಲಾದ ಎ.ಸಿ ಬಿಲ್ ವೋಚರ್‌ಗಳ ಒಟ್ಟು ಮೊತ್ತ | 4,33,20,068 |
| ಒಟ್ಟು ರೂ. | 6,89,02,943 |
| (-) ಸಲ್ಲಿಸಲಾದ ಹೊಂದಾಣಿಕೆ (ಎನ್.ಡಿ.ಸಿ) ವೋಚರ್‌ಗಳ ಒಟ್ಟು ಮೊತ್ತ | 4,25,80,068 |
| ದಿನಾಂಕ:31.03.2017 ಕ್ಕೆ ಬಾಕಿ ಉಳಿದಿರುವ ಎನ್.ಡಿ.ಸಿ ಬಿಲ್ಲುಗಳ ಮೊತ್ತ | 2,63,22,875 |

| | | |
|---|---|---|
| • ಹಿಂದಿನ ಸಾಲಿನ ಬಾಕಿ | 2,55,82,875 | |
| • 2016-17ನೇ ಸಾಲಿನ ಬಾಕಿ | 7,40,000 | |
| ಒಟ್ಟು ಬಾಕಿ ಮೊತ್ತ ರೂ. | 2,63,22,875 | |

ಬಾಕಿ ಇರುವ ಮೊತ್ತದ ಎನ್.ಡಿ.ಸಿ ಬಿಲ್ಲುಗಳಲ್ಲಿ 2015-16ನೇ ಸಾಲಿನಲ್ಲಿ ಡ್ರಾ ಮಾಡಿದ ಹಣವೇ ಅಧಿಕವಿದ್ದು ಎ.ಸಿ ಬಿಲ್ಲುಗಳ ಮೂಲಕ ಡ್ರಾ ಮಾಡಿದ ಹಣಕ್ಕೆ 30 ದಿವಸಗಳೊಳಗಾಗಿ ಎನ್.ಡಿ.ಸಿ ಬಿಲ್ಲುಗಳನ್ನು ಸಲ್ಲಿಸಿ ಲೆಕ್ಕ ಮುಕ್ತಾಯಗೊಳಿಸಬೇಕಾಗಿರುತ್ತದೆ. ಎನ್.ಡಿ.ಸಿ ಬಿಲ್ಲುಗಳನ್ನು ಸಲ್ಲಿಸದ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದೆ ಹಾಗೂ ಈ ಬಗ್ಗೆ ಮೇಲ್ವಿಚಾರಣೆ ನಡೆಸಿ ಲೆಕ್ಕ ಪಡೆಯಬೇಕಾಗಿದ್ದ ಹಣಕಾಸು ವಿಭಾಗದ ಸಿಬ್ಬಂದಿಗಳ ವಿರುದ್ಧವು ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದೆ.

| | | | |
|---|---|---|---|
| 1 | ಶ್ರೀಮತಿ ಶ್ವೇತಾ | 8699.00 | ವಿವರಣೆ ನೀಡಲಾಗಿದೆ |
| 2 | ಕನಕದಾಸ ಸಂಶೋಧನಾ ಪೀಠ | 100000.00 | ಪರಿಶೀಲನೆಯಲ್ಲಿದೆ. |
| | | 108699.00 | |

(ಸಿ) ಅಪಹೊಂದಾಣಿಕೆಯಾಗಿರುವ (**Non Admissible**) ಎನ್.ಡಿ.ಸಿ ವೋಚರ್ ಬಗ್ಗೆ :

| ಕ್ರ.ಸಂ | ಹೆಸರು/ಪೀಠ | ಎ.ಸಿ ವೋಚರ್ ವಿವರ | | ಎನ್.ಡಿ.ಸಿ ವೋಚರ್‌ನ ವಿವರ | |
|---|---|---|---|---|---|
| | | ಸಂಖ್ಯೆ | ಮೊತ್ತ (ರೂ.) | ಸಂಖ್ಯೆ | ಮೊತ್ತ (ರೂ.) |
| 1 | ಶ್ರೀಮತಿ ಶ್ವೇತಾ, ಜಾಬ್ ಟೈಪಿಸ್ಟ್ | 28/ :12.07.2016 | 8,699 | 7321/ 08.06.2016 | 8,699 |
| 2 | ಕನಕದಾಸ ಸಂಶೋಧನಾ ಪೀಠ | ಧನಾದೇಶ ಸಂಖ್ಯೆ: 084259/22.03.2016 | 1,00,000 | ಜೆರಾಕ್ಸ್ ಬಿಲ್ಲುಗಳು | 1,00,000 |
| ಒಟ್ಟು | | | 1,08,699 | | 1,08,699 |

ಶ್ರೀಮತಿ ಶ್ವೇತಾ, ಜಾಬ್ ಟೈಪಿಸ್ಟ್ (ಹ-16) ರವರು ಎ.ಸಿ ವೋಚರ್ ಸಂಖ್ಯೆ:28/ ದಿ:12.07.2016 ರಲ್ಲಿ ರೂ.8,699/-ಗಳನ್ನು ಪಡೆದಿರುತ್ತಾರೆ. ಇದಕ್ಕೆ ಎದುರಾಗಿ ಎನ್.ಡಿ.ಸಿ ವೋಚರ್‌ನ ಬಿಲ್ ಸಂಖ್ಯೆ:7321 ದಿನಾಂಕ: 08.06.2016 ರಂದು ಪಾಲ್ಗುಣಿ ಕ್ಯಾಶ್ಯೂ ಸೆಂಟರ್ ರವರಿಂದ ಗೋಡಂಬಿ ಖರೀದಿಸಿದ ಬಾಬ್ತು ಎಂದು ಸಲ್ಲಿಸಿರುವುದು ಅಪಹೊಂದಾಣಿಕೆಯಾಗಿರುತ್ತದೆ. ಏಕೆಂದರೆ ಸದರಿ ಗೋಡಂಬಿ ಖರೀದಿಯ ಈ ವೋಚರ್ ದಿನಾಂಕ:08.06.2016 ರಂದು ಖರೀದಿಸಲಾಗಿರುತ್ತದೆ. ಅಂದರೆ ಎ.ಸಿ ಬಿಲ್ ಪಡೆಯುವ ಮುನ್ನವೇ ಗೋಡಂಬಿ ಖರೀದಿಯಾಗಿರುತ್ತದೆ. ಆದ್ದರಿಂದ ಇವರ ಈ ಎನ್.ಡಿ.ಸಿ ಬಿಲ್ಲನ್ನು ಸದರಿ ಎ.ಸಿ ಬಿಲ್ ಮೊತ್ತಕ್ಕೆ ಹೊಂದಾಣಿಕೆ ಮಾಡಲು ಸಾಧ್ಯವಿಲ್ಲ. ಸದರಿ ಮೊತ್ತ ರೂ.8,699/-ಗಳನ್ನು ಆಕ್ಷೇಪಿಸಲಾಗಿದೆ.

ಕನಕದಾಸ ಸಂಶೋಧನಾ ಪೀಠದಲ್ಲಿ ಕುಲಸಚಿವರ ಆದೇಶ ಸಂಖ್ಯೆ:ಮಂವಿ/ಡಿ.ಇ.ವಿ/42/2015-16/ಡಿ-5/ ದಿ:17.03.2016 ರ ಆದೇಶದಂತೆ ಕನಕ ಚಿಂತನೆ ಎಂಬ ವಿಷಯದ ಮೇಲೆ ಪ್ರಚಾರ ಉಪನ್ಯಾಸ ಮಾಲಿಕೆಯ ಉಪನ್ಯಾಸ ಕಾರ್ಯಕ್ರಮಗಳನ್ನು ನಡೆಸುವುದಕ್ಕಾಗಿ ಹಣಕಾಸು ಶಾಖೆಯಿಂದ ಈ ಪೀಠದ ಬ್ಯಾಂಕ್ ಖಾತೆ ಸಂಖ್ಯೆ:30366636821 ರಲ್ಲಿ ಧನಾದೇಶ ಸಂಖ್ಯೆ:084259 ದಿನಾಂಕ:22.03.2016 ರಂದು ರೂ.1,00,000/-ಗಳನ್ನು ಎ.ಸಿ ಬಿಲ್ ಮೂಲಕ ನಗದಿಕರಿಸಿ ಸಂಬಂಧಪಟ್ಟ ಸಂಯೋಜನಾಧಿಕಾರಿಗೆ ನೀಡಿರುತ್ತಾರೆ. ಈ ಮೊತ್ತಕ್ಕೆ ಸಲ್ಲಿಸಿರುವ ಎನ್.ಡಿ.ಸಿ ವೋಚರ್‌ಗಳು ಪೂರ್ಣ ಪ್ರಮಾಣದಲ್ಲಿ ಜೆರಾಕ್ಸ್ ಪ್ರತಿಗಳಾಗಿರುತ್ತವೆ. ಹಾಗೂ 2015-16ನೇ ಸಾಲಿನ ಎನ್.ಡಿ.ಸಿ ವೋಚರ್‌ಗಳನ್ನು ಸಹ ಇದರೊಂದಿಗೆ ಲಗತ್ತಿಸಿರುವುದನ್ನು ಪರಿಗಣಿಸಲು ಸಾಧ್ಯವಿಲ್ಲ. ಈ ಬಗ್ಗೆ ವಿಚಾರಣೆ ಸಂಖ್ಯೆ:156/18-19 ದಿ:30.01.2019 ರನ್ವಯ ನೀಡಲಾಗಿ ಸಲ್ಲಿಸಲಾಗಿರುವ ಉತ್ತರ ಸಮಂಜಸವಾಗಿರುವುದಿಲ್ಲ. ಆದ್ದರಿಂದ ಸದರಿ ಮೊತ್ತ ರೂ.1,00,000/-ಗಳನ್ನು ಆಕ್ಷೇಪಿಸಲಾಗಿದೆ.

ಸಿ) 1. ಈ ಬಗ್ಗೆ ಸಂಬಂಧಪಟ್ಟ ರೂಸಾ ಸಂಯೋಜಕರು ತಾವು ದಿ. 6.6.2016ರಂದು ನಡೆದ ಬೇರೆ ಸಭೆಗಾಗಿ ಸದ್ರಿ ಗೋಡಂಬಿಯನ್ನು ಖರೀದಿಸಿದ್ದು ಆ ಸಭೆಗೆ ಉಪಯೋಗಿಸದೆಯಿದ್ದುದರಿಂದ 12.07.16ರಂದು ನಡೆದ ಸಭೆಗೆ ಉಪಯೋಗಿಸಿಕೊಳ್ಳಲಾಗಿದೆಯೆಂದು ವಿವರಣೆ ಕೊಟ್ಟಿದ್ದಾರೆ. ವಿವರಣೆಯನ್ನು ಒಪ್ಪಬಹುದಾಗಿದೆ.

| | | |
|---|---|---|
| 54 | ದರಪಟ್ಟಿ ಆಹ್ವಾನಿಸದೇ (ಕೊಟೇಶನ್) ಸರಕು/ ಸೇವೆಯನ್ನು ನೇರವಾಗಿ ಖರೀದಿ ಮಾಡಿರುವುದು :<br>ರೂ.5 (ಐದು) ಸಾವಿರಕ್ಕಿಂತ ಮೇಲ್ಪಟ್ಟು ಸರಕುಗಳನ್ನು ಖರೀದಿಸಬೇಕಾದ್ದಲ್ಲಿ/ ಸೇವೆ ಪಡೆಯಬೇಕಾದ್ದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಕಾಯ್ದೆ-1999 ಮತ್ತು ಅಧಿನಿಯಮ-2000 ದನ್ವಯ ಹಾಗೂ ಸರ್ಕಾರಿ ಆದೇಶ ಸಂಖ್ಯೆ:ಆಇ01/ಟಿ.ಸಿ.ಇ/2012, ಬೆಂಗಳೂರು ದಿನಾಂಕ:21.06.2012 ರನ್ವಯ ದರಪಟ್ಟಿಯನ್ನು ಆಹ್ವಾನಿಸಬೇಕಿರುತ್ತದೆ. ರೂ.1.00 (ಒಂದು) ಲಕ್ಷ ಮೇಲ್ಪಟ್ಟಲ್ಲಿ ಟೆಂಡರ್ ಅವಶ್ಯಕವಾಗಿರುತ್ತದೆ.<br>2016-17ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಎ.ಸಿ/ಎನ್.ಡಿ.ಸಿ ವೋಚರ್‌ಗಳನ್ನು ಪರಿಶೀಲಿಸಲಾಗಿ, ರೂ.3,06,828/-ಗಳನ್ನು ಯಾವುದೇ ದರಪಟ್ಟಿ ಕರೆಯದೇ/ ಟೆಂಡರ್ ಮಾಡದೆ ಸರಕುಗಳನ್ನು ಖರೀದಿಸಿರುವ ಸಂಬಂಧ ವಿಚಾರಣಾ ಪತ್ರ ಸಂಖ್ಯೆ:197/2018-19 ದಿ:12.02.2019 ಅನ್ನು ನೀಡಲಾಗಿ, ಯಾವುದೇ ವಿವರಣೆ ಒದಗಿಸಿಲ್ಲದ ಕಾರಣ ರೂ.3,06,828/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರಗಳನ್ನು ಅನುಬಂಧ-27 ರಲ್ಲಿ ನೀಡಲಾಗಿದೆ. | ಅನುಪಾಲನಾ ವರದಿ ಕೆಳಕಂಡಂತೆ ನೀಡಲಾಗಿದೆ. |

ಕಂಡಿಕೆ-54

| ಕ್ರ. ಸಂ. | ವಿಷಯ ನಿರ್ವಾಹಕರು | ಎ.ಸಿ.ಬಿಲ್ ಸಂಖ್ಯೆ ಮತ್ತು ದಿನಾಂಕ | ಬಿಲ್ಲು ಸಂಖ್ಯೆ ಮತ್ತು ದಿನಾಂಕ | ಪಾವತಿ ಯಾರಿಗೆ? | ಉದ್ದೇಶ | ಮೊತ್ತ | ವಿಶ್ವವಿದ್ಯಾಲಯದ ಅನುಪಾಲನಾ ವರದಿ |
|---|---|---|---|---|---|---|---|
| 1 | ಎಫ್‌–02 | 16/13.2.17 | 1.12.16 | ಮಂಗಳ ಉಪಹಾರ ಗೃಹ (ಶ್ರೀ ದುರ್ಗಾಕ್ಯಾಂಟೀನ್) | ಉಪಹಾರ ವೆಚ್ಚ | 7390 | ವಿವಿಧ ತರದ ಉಪಹಾರ ವಸ್ತುಗಳನ್ನು ಖರೀದಿ ಮಾಡಿದ್ದು ಯಾವುದೂ ರೂ. 5000/- ಮೀರಿರುವುದಿಲ್ಲ. ಸಮಯಾವಕಾಶದ ಕೊರತೆಯಿಂದ ದರ ಪಟ್ಟಿ ಕರೆಯಲಾಗಿದೆ |
| 2 | ಎಫ್‌–02 | 07/19.1.16 | 151/18.10.16 | M/s Current Science Association | ಜಾಹಿರಾತು ವೆಚ್ಚ | 5000 | ರೂ.5000/-ದ ವರೆಗಿನ ವಸ್ತುವಿನ ಖರೀದಿ ಮಾಡಿರುವುದರಿಂದ ದರ ಪಟ್ಟಿ ಕರೆದಿಲ್ಲ. |
| 3 | ಎಫ್‌–08 | 15/13.8.16 | 687/15.8.16 | ಬೃಂದಕ್ಯಾಂಟೀನ್ | ಚಹಾ ಮತ್ತುತಿಂಡಿ ವೆಚ್ಚ | 7500 | ಸಮಯಾವಕಾಶದ ಕೊರತೆಯಿಂದ ದರ ಪಟ್ಟಿ ಕರೆಯಲಾಗಿಲ್ಲ. ದರಗಳು ಕನಿಷ್ಟ ವಾಗಿದ್ದು ಸಮಂಜಸವಾಗಿದೆ. ಮುಂದಿನ ದಿನಗಳಲ್ಲಿ ದರಪಟ್ಟಿ ಕರೆಯಲಾಗುವುದು. |
| 4 | ಎಫ್‌–08 | 12/9.8.16 | – | ಮಂಗಳ ಕ್ಯಾಂಟೀನ್ | ಉಪಹಾರ/ ಭೋಜನ ವೆಚ್ಚ | 25218 | ಸಮಯಾವಕಾಶದ ಕೊರತೆಯಿಂದ ದರ ಪಟ್ಟಿ ಕರೆಯಲಾಗಿಲ್ಲ. ದರಗಳು ಕನಿಷ್ಟ ವಾಗಿದ್ದು ಸಮಂಜಸವಾಗಿದೆ. ಮುಂದಿನ ದಿನಗಳಲ್ಲಿ ದರಪಟ್ಟಿ ಕರೆಯಲಾಗುವುದು. |
| 5 | ಎಫ್‌–08 | 33/24.1.17 | 560/28.01.17 | ಮಂಗಳ ಕ್ಯಾಂಟೀನ್ | ಉಪಹಾರ ವೆಚ್ಚ | 37075 | ಸಮಯಾವಕಾಶದ ಕೊರತೆಯಿಂದ ದರ ಪಟ್ಟಿ ಕರೆಯಲಾಗಿಲ್ಲ. ದರಗಳು ಕನಿಷ್ಟ ವಾಗಿದ್ದು ಸಮಂಜಸವಾಗಿದೆ. ಮುಂದಿನ ದಿನಗಳಲ್ಲಿ ದರಪಟ್ಟಿ ಕರೆಯಲಾಗುವುದು. |
| 6 | ಎಫ್‌–16 | 11/18.5.16 | 359/21.5.16 | ಶಂಕರ ಹಾಂಡಿಕ್ರಾಫ್ಟ್ | ಗಣೇಶ ವಿಗ್ರಹಗಳು (ಸ್ಮರಣಿಕೆಖರೀದಿ) | 18568 | ಸಮಯಾವಕಾಶದ ಕೊರತೆಯಿಂದ ದರ ಪಟ್ಟಿ ಕರೆಯಲಾಗಿಲ್ಲ. ದರಗಳು ಕನಿಷ್ಟ ವಾಗಿದ್ದು ಸಮಂಜಸವಾಗಿದೆ. ಮುಂದಿನ ದಿನಗಳಲ್ಲಿ ದರಪಟ್ಟಿ ಕರೆಯಲಾಗುವುದು. |
| 7 | ಎಫ್‌–16 | 2/5.4.16 | 04.5.16 | ಮಂಗಳ ಕ್ಯಾಂಟೀನ್ | ಉಪಹಾರ ವೆಚ್ಚ | 7975 | ಸಮಯಾವಕಾಶದ ಕೊರತೆಯಿಂದ ದರ ಪಟ್ಟಿ ಕರೆಯಲಾಗಿಲ್ಲ. ದರಗಳು ಕನಿಷ್ಟ ವಾಗಿದ್ದು ಸಮಂಜಸವಾಗಿದೆ. ಮುಂದಿನ ದಿನಗಳಲ್ಲಿ ದರಪಟ್ಟಿ ಕರೆಯಲಾಗುವುದು. |
| 8 | ಎಫ್‌–16 | 11/18.5.16 | 348/14.5.16 | ಶಂಕರ ಹಾಂಡಿಕ್ರಾಫ್ಟ್ | ಎಲಚಿಹಾರ ಮತ್ತು ಶಾಲ್‌ಖರೀದಿ ಬಾಬ್ತು | 22155 | ಸಮಯಾವಕಾಶದ ಕೊರತೆಯಿಂದ ದರ ಪಟ್ಟಿ ಕರೆಯಲಾಗಿಲ್ಲ. ದರಗಳು ಕನಿಷ್ಟ ವಾಗಿದ್ದು ಸಮಂಜಸವಾಗಿದೆ. ಮುಂದಿನ ದಿನಗಳಲ್ಲಿ ದರಪಟ್ಟಿ ಕರೆಯಲಾಗುವುದು. |
| 9 | ಎಫ್‌–16 | 11/18.5.16 | 1132/21.5.16 | ರವಿ ಕ್ಯಾಟರರ್ಸ್ | ಭೋಜನ ವೆಚ್ಚ | 60000 | ಸಮಯಾವಕಾಶದ ಕೊರತೆಯಿಂದ ದರ ಪಟ್ಟಿ ಕರೆಯಲಾಗಿಲ್ಲ. ದರಗಳು ಕನಿಷ್ಟ ವಾಗಿದ್ದು ಸಮಂಜಸವಾಗಿದೆ. ಮುಂದಿನ ದಿನಗಳಲ್ಲಿ ದರಪಟ್ಟಿ ಕರೆಯಲಾಗುವುದು. |
| 10 | ಎಫ್‌–16 | 11/18.5.16 | 181/24.5.16 | ರೈಟ್‌ಆಗಲ್ | Flex Print wite mounting | 11150 | ಸಮಯಾವಕಾಶದ ಕೊರತೆಯಿಂದ ದರ ಪಟ್ಟಿ ಕರೆಯಲಾಗಿಲ್ಲ. ದರಗಳು ಕನಿಷ್ಟ ವಾಗಿದ್ದು ಸಮಂಜಸವಾಗಿದೆ. ಮುಂದಿನ ದಿನಗಳಲ್ಲಿ ದರಪಟ್ಟಿ ಕರೆಯಲಾಗುವುದು. |
| 11 | ಎಫ್‌–16 | 21/14.6.16 | 21.6.16 | LM Electricals & Sound Systems | DG Set | 6500 | ಸಮಯಾವಕಾಶದ ಕೊರತೆಯಿಂದ ದರ ಪಟ್ಟಿ ಕರೆಯಲಾಗಿಲ್ಲ. ದರಗಳು ಕನಿಷ್ಟ ವಾಗಿದ್ದು ಸಮಂಜಸವಾಗಿದೆ. ಮುಂದಿನ ದಿನಗಳಲ್ಲಿ ದರಪಟ್ಟಿ ಕರೆಯಲಾಗುವುದು. |

| | | | | | | | |
|---|---|---|---|---|---|---|---|
| 12 | ಎಫ್‌–16 | 37/9.8.16 | 17.8.16 | LM Electricals & Sound Systems | DG set ಬಾಡಿಗೆ ಬಾಬ್ತು | 39672 | ಸಮಯಾವಕಾಶದ ಕೊರತೆಯಿಂದ ದರ ಪಟ್ಟಿ ಕರೆಯಲಾಗಿಲ್ಲ. ದರಗಳು ಕನಿಷ್ಟ ವಾಗಿದ್ದು ಸಮಂಜಸವಾಗಿದೆ. ಮುಂದಿನ ದಿನಗಳಲ್ಲಿ ದರಪಟ್ಟಿ ಕರೆಯಲಾಗುವುದು. |
| 13 | ಎಫ್‌–16 | 37/9.8.16 | 85/17.8.16 | ಶ್ರೀ ಸಾಯಿ ಶಾಮಿಯಾನ | ಪ್ಲಾಸ್ಟಿಕ್ ಚೇರು, ಟೇಬಲ್ ಮತ್ತು ಶಾಮಿಯಾನ ಬಾಡಿಗೆ ಬಾಬ್ತು | 33250 | ಸಮಯಾವಕಾಶದ ಕೊರತೆಯಿಂದ ದರ ಪಟ್ಟಿ ಕರೆಯಲಾಗಿಲ್ಲ. ದರಗಳು ಕನಿಷ್ಟ ವಾಗಿದ್ದು ಸಮಂಜಸವಾಗಿದೆ. ಮುಂದಿನ ದಿನಗಳಲ್ಲಿ ದರಪಟ್ಟಿ ಕರೆಯಲಾಗುವುದು. |
| 14 | ಎಫ್‌–16 | 39/18.8.16 | 970/22.8.16 | ಮಂಗಳ ಕ್ಯಾಂಟೀನ್ | ಉಪಹಾರ ವೆಚ್ಚ | 12140 | ಸಮಯಾವಕಾಶದ ಕೊರತೆಯಿಂದ ದರ ಪಟ್ಟಿ ಕರೆಯಲಾಗಿಲ್ಲ. ದರಗಳು ಕನಿಷ್ಟ ವಾಗಿದ್ದು ಸಮಂಜಸವಾಗಿದೆ. ಮುಂದಿನ ದಿನಗಳಲ್ಲಿ ದರಪಟ್ಟಿ ಕರೆಯಲಾಗುವುದು. |
| 15 | ಎಫ್‌–16 | 58/1.12.16 | 3701/1.12.16 | Print Shoppe | Invitations & certificates | 6108 | ಸಮಯಾವಕಾಶದ ಕೊರತೆಯಿಂದ ದರ ಪಟ್ಟಿ ಕರೆಯಲಾಗಿಲ್ಲ. ದರಗಳು ಕನಿಷ್ಟ ವಾಗಿದ್ದು ಸಮಂಜಸವಾಗಿದೆ. ಮುಂದಿನ ದಿನಗಳಲ್ಲಿ ದರಪಟ್ಟಿ ಕರೆಯಲಾಗುವುದು. |
| 16 | ಎಫ್‌–16 | 58/1.12.16 | 22399/7.12.16 | S. L. Shet Diamond House | Fancy Plate | 7127 | ಸಮಯಾವಕಾಶದ ಕೊರತೆಯಿಂದ ದರ ಪಟ್ಟಿ ಕರೆಯಲಾಗಿಲ್ಲ. ದರಗಳು ಕನಿಷ್ಟ ವಾಗಿದ್ದು ಸಮಂಜಸವಾಗಿದೆ. ಮುಂದಿನ ದಿನಗಳಲ್ಲಿ ದರಪಟ್ಟಿ ಕರೆಯಲಾಗುವುದು. |
| | | | | | | **3,06,828/-** | |

| | | |
|---|---|---|
| 55 | <u>1507 ಲೆಕ್ಕಶೀರ್ಷಿಕೆಯಡಿ ಹಾಜರುಪಡಿಸಲಾದ ಓಚರ್‌ಗಳಲ್ಲಿ ಕಂಡು ಬಂದ ನ್ಯೂನ್ಯತೆಗಳ ವಿವರ :</u><br>2016-17ನೇ ಸಾಲಿನಲ್ಲಿ ಕಾರ್ಯಕಾರಿ ಅಭಿಯಂತರರ ಕಛೇರಿಯಿಂದ 4 ಸಂಖ್ಯೆ ಎ.ಸಿ ಬಿಲ್ಲುಗಳ ಮೂಲಕ ಒಟ್ಟು ರೂ.2,50,000/-ಗಳನ್ನು ಡ್ರಾ ಮಾಡಿದ್ದು ವಿಳಂಬವಾಗಿ ಎನ್.ಡಿ.ಸಿ ಬಿಲ್ಲುಗಳನ್ನು ಸಲ್ಲಿಸಿದ್ದು, ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲಾಗಿದ್ದು ಪರಿಶೀಲಿಸಲಾಗಿ ಕೆಳಕಂಡ ನ್ಯೂನ್ಯತೆಗಳನ್ನು ಗಮನಿಸಲಾಗಿದೆ.<br>1) ವಾರ್ಷಿಕ ಅಂದಾಜು (ಅನುಮೋದಿತ) ಪಟ್ಟಿಯಲ್ಲಿ ನಿರ್ವಹಣೆ ಬಗ್ಗೆ ಅನುದಾನ ಲಭ್ಯವಿರಿಸಿಕೊಂಡಿಲ್ಲ.<br>2) ವೋಚರ್‌ಗಳನ್ನು 'ಅಳತೆ ಮಸ್ತಕದಲ್ಲಿ' ದಾಖಲಿಸಿಲ್ಲ.<br>3) ಸಂಬಂಧಿತ ವಿಭಾಗಗಳಿಂದ/ ಸಾರ್ವಜನಿಕರಿಂದ ಅಂದರೇ ಗಿಡಗಂಟಿ ತೆರೆವು ಮಾಡಿದ ಸ್ಥಳದಲ್ಲಿ ಹಾಜರಿದ್ದ ಅಧಿಕಾರಿ/ ಸಿಬ್ಬಂದಿಗಳ ಸಹಿ ಇರುವುದಿಲ್ಲ.<br>4) ಶೇಕಡ 30 void (ಸವಕಳಿ) ಕಳೆಯದೇ ಶೇ.100 ಹಣ ಪಾವತಿಸಲಾಗಿದೆ.<br>ಹಾಗಾಗಿ ಈ ಬಗ್ಗೆ ಸೂಕ್ತ ಸಮಜಾಯಿಷಿ ನೀಡಲು ವಿಚಾರಣಾ ಪತ್ರ: 183/18-19 ಕ್ಕೆ ದಿ:07.02/19 ಕ್ಕೆ ನೀಡಲಾಗಿದ್ದು ಯಾವುದೇ ಉತ್ತರ ಬಂದಿಲ್ಲ.<br>ಆದ ಕಾರಣ ಒಟ್ಟು ರೂ.2,50,000/-ಗಳನ್ನು ಆಕ್ಷೇಪಣೆಯಲ್ಲಿಟ್ಟಿದೆ. | 1) ಇಂತಹ ತುರ್ತು ಕಾಮಗಾರಿಗಳ ವೆಚ್ಚವನ್ನು ಲೆಕ್ಕಶೀರ್ಷಿಕೆ 1507 ರಡಿಯಲ್ಲಿ ಭರಿಸಲು ಅವಕಾಶವನ್ನು ಇರಿಸಲಾಗಿದ್ದು, ಎಲ್ಲಾತುರ್ತು ಕೆಲಸಗಳನ್ನು ಈ ಲೆಕ್ಕಶೀರ್ಷಿಕೆಯಡಿ ನಿರ್ವಹಿಸಲಾಗಿರುತ್ತದೆ.<br>2) ಮುಂಗಡವನ್ನು ಪಡೆದು ನಿರ್ವಹಿಸಿದ ಕಾಮಗಾರಿಗಳ ಬಗ್ಗೆ ಈವರೆಗೆ ಅಳತೆ ಪುಸ್ತಕಗಳಲ್ಲಿ ದಾಖಲಿಸಿರುವುದಿಲ್ಲ. ಅದಲ್ಲದೆರೂ. 50,000/-ದಂತೆ ಮೂರು ಬಾರಿ ಪಡೆದ ಮುಂಗಡದಒಟ್ಟು ಮೊತ್ತ 1,50,000/- ದಿಂದ ಕಟ್ಟಡಗಳಿಗೆ ಸಣ್ಣಪುಟ್ಟ ನಿರ್ವಹಣೆ ಕೆಲಸಗಳನ್ನು ಮಾಡಿದ್ದು, ಅದರ ಬಗ್ಗೆ ಸೂಕ್ತ ಅಳತೆ ದಾಖಲಿಸಲು ಸಾಧ್ಯವಾಗುವುದಿಲ್ಲ.ಇದು ಸಣ್ಣಪುಟ್ಟ ದುರಸ್ತಿ/ನಿರ್ವಹಣೆ ಕೆಲಸವಾಗಿರುವುದರಿಂದ ಇದನ್ನು ಅಳತೆ ಪುಸ್ತಕದಲ್ಲಿ ದಾಖಲಿಸಿರುವುದಿಲ್ಲ.<br>3) ಗಿಡಗಂಟೆತೆರವು ಮಾಡಿದ ಸ್ಥಳದಲ್ಲಿ ಹಾಜರಿದ್ದಕಿರಿಯಅಭಿಯಂತರರು ಹಾಗೂ ಕಾರ್ಯಕಾರಿಅಭಿಯಂತರರು ನಿರ್ವಹಿಸಿದ ಕಾಮಗಾರಿಯನ್ನು ದೃಢೀಕರಿಸಿ ಸಹಿ ಮಾಡಿರುತ್ತಾರೆ.<br>4) ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿ 'ಎ' ಮತ್ತು'ಬಿ' ಮಾದರಿ ವಸತಿಗೃಹಗಳಲ್ಲಿ ಗಿಡಗಂಟಿಗಳನ್ನು ತೆರವುಗೊಳಿಸುವ ಕಾಮಗಾರಿಯ (ಜೆ.ಸಿ.ಬಿ. ಯಂತ್ರ ಹಾಗೂ ಕೆಲಸಗಾರರಿಗೆ ಪಾವತಿಸಲು) ವೆಚ್ಚವನ್ನು ಭರಿಸಲು ಕುಲಸಚಿವರ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಮಂವಿ/ಡಿಇವಿ/74/2016-17/ಡಿ1 ದಿನಾಂಕ 28.10.2016ರಲ್ಲಿ ರೂ. 1,00,000.00 ಮೊತ್ತವನ್ನು ಲೆಕ್ಕಶೀರ್ಷಿಕೆ 1507ರಡಿಯಲ್ಲಿ ಭರಿಸಲು ಮಂಜೂರಾತಿ ನೀಡಲಾಗಿರುತ್ತದೆ. ಅದರಂತೆಚೆಕ್ ಸಂಖ್ಯೆ 195979 ದಿನಾಂಕ 09.12.2016ರಲ್ಲಿ ರೂ. 56,000/-ವನ್ನು ಶ್ರೀ. ಭೀಮ ಶರ್ಮ ಹಾಗೂ ಚೆಕ್ ಸಂಖ್ಯೆ 195980 ದಿನಾಂಕ 09.12.2016ರಲ್ಲಿ ರೂ. 44,000/- ವನ್ನು ಶ್ರೀ ಪ್ರಸನ್ನಕುಮಾರ್ ಇವರಿಗೆ ಪಾವತಿಸಲಾಗಿರುತ್ತದೆ. |

| | | |
|---|---|---|
| | | ಮುಂದುವರಿದು, ವಿಸ್ತೀರ್ಣವಾರು ಗಿಡಗಂಟಿ ಇತ್ಯಾದಿಗಳನ್ನು ತೆಗೆದು ಶುಚಿಗೊಳಿಸುವಲ್ಲಿ ಮಾತ್ರ ನಿರ್ಧಾರಿತ ಪ್ರಮಾಣ ಸವಕಳಿಯನ್ನು ಕಳೆಯಬೇಕಾಗಿರುತ್ತದೆ. ಮಾನ್ಯ ಕುಲಪತಿಯವರ ಆದೇಶದ ಮೇರೆಗೆ 'ಎ' ಮತ್ತು'ಬಿ' ಮಾದರಿ ವಸತಿ ಗೃಹದ ಬಳಿಯಲ್ಲಿದ್ದ ಗಿಡಗಂಟಿಗಳನ್ನು ಜೆ.ಸಿ.ಬಿ. ಯಂತ್ರದ ಮೂಲಕ 2015-16ರ ಲೋಕೋಪಯೋಗಿ ಇಲಾಖಾ ಅನುಮೋದಿತ ಗಂಟೆ ಒಂದರ ದರದಲ್ಲಿ ನಿರ್ವಹಿಸಿ ಪಾವತಿಸಿರುವುದರಿಂದ ಇಲ್ಲಿ ಸವಕಳಿ ಕಳೆಯುವ ಪ್ರಮೇಯ ಬರುವುದಿಲ್ಲ.<br>ಅಂತೆಯೇ ಈ ಕಚೇರಿಯಲ್ಲಿ ಗಿಡಗಂಟಿಗಳನ್ನು ತೆರವುಗೊಳಿಸಲು ರೂ. 1,00,000.00 ಹಾಗೂ ಕಟ್ಟಡ ನಿರ್ವಹಣೆಗಾಗಿರೂ. 1,50,000.00ಅಂದರೆ ಪಡೆದಒಟ್ಟು ಮುಂಗಡ ಮೊತ್ತರೂ. 2,50,000/- ಗಳ ಹೊಂದಾಣಿಕೆ ಬಿಲ್ಲುಗಳನ್ನು ಕಳುಹಿಸುವಲ್ಲಿ ಸ್ವಲ್ಪ ವಿಳಂಬವಾಗಿದ್ದು, ಮೇಲೆ ನೀಡಿರುವ ಸಮಜಾಯಿಷಿಕೆಗಳನ್ನು ಪರಿಶೀಲಿಸಿ ಲೆಕ್ಕ ಪರಿಶೋಧನಾ ಆಕ್ಷೇಪಣೆಯನ್ನು ಕೈಬಿಡಲು ಕೋರಲಾಗಿದೆ. |
| 56 | **Microtron ಸೇವಾ ಶುಲ್ಕ ಪಾವತಿಸಿರುವ ಬಗ್ಗೆ :**<br>ಶ್ರೀಯುತ ಸುನೀಲ್ ಭಟ್, ಚಾರ್ಟೆಡ್ ಅಕೌಂಟೆಂಟ್ ಇವರಿಗೆ ವೋಚರ್ ಸಂಖ್ಯೆ:133/ ಧನಾದೇಶ ಸಂಖ್ಯೆ:77614/ ದಿ:19.05.2016 ರನ್ವಯ ರೂ.3,48,513/-ಗಳನ್ನು ಕೇಂದ್ರ ಸೇವಾ ಶುಲ್ಕ ಇಲಾಖೆಗೆ ಪಾವತಿಸಲು ನೀಡಲಾಗಿದೆ. ಇಂತಹ ಸೇವಾ ಶುಲ್ಕವನ್ನು ಪಾವತಿಸಲು ಕರಾರು ಮಾಡಿಕೊಂಡಿರುವ ಪತ್ರಗಳು ಮತ್ತು ಪಾವತಿ ವಿವರವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ವಿಚಾರಣೆ ಸಂಖ್ಯೆ:92/18-19 ದಿ:01.01.2019 ರಲ್ಲಿ ಕೋರಲಾಗಿ ದಾಖಲಾತಿಗಳನ್ನು ತಪಾಸಣೆಗೆ ಹಾಜರುಪಡಿಸಿರುವುದಿಲ್ಲ. ಇದರಿಂದಾಗಿ ಸೇವಾ ಶುಲ್ಕದ ಪಾವತಿಯನ್ನು ಹೇಗೆ ಕಟಾಯಿಸಲಾಗುತ್ತಿದೆ ಹಾಗೂ ಇನ್ನಿತರೆ ಮಾನದಂಡಗಳ ವಿವರಗಳನ್ನು ಸಹ ಲೆಕ್ಕಪರಿಶೋಧನೆಗೆ ಹಾಜರುಪಡಿಸಿಲ್ಲದಿರುವುದರಿಂದ ಸದರಿ ಮೊತ್ತ ರೂ.3,48,513/-ಗಳನ್ನು ಆಕ್ಷೇಪಿಸಿದೆ. | ಸದ್ರಿ ಮೊತ್ತವನ್ನು ಸಂಬಂಧಪಟ್ಟ ಇಲಾಖೆಗೆ ಪಾವತಿಸಿ ಅದರ ರಶೀದಿಯನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ.<br>1. ಚಲನ್ ಸಂಖ್ಯೆ:50594 ದಿನಾಂಕ 31.05.2016=ರೂ.38917.00<br>2. ಚಲನ್ ಸಂಖ್ಯೆ:50606 ದಿನಾಂಕ 31.05.2016=ರೂ.153214.00<br>3. ಚಲನ್ ಸಂಖ್ಯೆ:50620 ದಿನಾಂಕ 31.05.2016=ರೂ.156382.00<br>ಒಟ್ಟು.................................................................. **ರೂ.348513.00** |
| 57 | **ಬ್ಯಾಂಕ್ ಖಾತೆಯಲ್ಲಿ ನಿಗದಿತ ಮೊತ್ತಕ್ಕಿಂತ ಹೆಚ್ಚುವರಿ debitಆಗಿರುವುದು :**<br>2016-17ನೇ ಸಾಲಿನ ತಪಾಸಣೆಯಲ್ಲಿ ಸುಮಾರು 17 ಪೀಠಗಳ ಪೈಕಿ ಎನ್.ಜಿ.ಪವನ್ ಪೀಠಕ್ಕೆ ಸಂಬಂಧಪಟ್ಟ ಬ್ಯಾಂಕ್ ಖಾತೆ ಸಂಖ್ಯೆ:10094966605 ರ ಪಾಸ್ ಪುಸ್ತಕವನ್ನು ಪರಿಶೀಲಿಸಲಾಗಿ, ಈ ಪೀಠದಡಿಯಲ್ಲಿ ಹೂಡಿಕೆ ಮಾಡಲಾಗಿರುವ ಹೂಡಿಕೆ ಪ್ರಮಾಣ ಪತ್ರ ಸಂಖ್ಯೆ:32266193413/24/11/16 ರನ್ವಯ ರೂ.5,00,000/-ಗಳ ಹೂಡಿಕೆ ಮೊತ್ತಕ್ಕೆ ಪಾಸ್ ಪುಸ್ತಕದಲ್ಲಿ ರೂ.5,10,938/-ಗಳಿಗೆ Debit ಆಗಿರುವುದು ಕಂಡು ಬಂದಿರುತ್ತದೆ. ಈ 5,10,938/- ಗಳಲ್ಲಿ ರೂ.5,00,000/-ಗಳ ಹೂಡಿಕೆ ಮೊತ್ತವನ್ನು ಹೊರತುಪಡಿಸಿ ಬಾಕಿ ರೂ.10,938/-ಗಳ ಮೊತ್ತವನ್ನು ಹೆಚ್ಚುವರಿಯಾಗಿ ಡೆಬಿಟ್ ಮಾಡಿರುವುದಕ್ಕೆ ಸ್ಪಷ್ಟೀಕರಣವನ್ನು ಹಾಜರುಪಡಿಸದೆ ಇರುವುದರಿಂದ ವ್ಯತ್ಯಾಸದ ಮೊತ್ತ ರೂ.10,938/-ಗಳನ್ನು ವಸೂಲಾತಿಗೆ ಸೂಚಿಸಲಾಗಿದೆ. | ರೂ. 10938.00ರ ವ್ಯತ್ಯಾಸದ ಬಗ್ಗೆ ಸದ್ರಿ ಬ್ಯಾಂಕ್‌ನವರು ಪತ್ರ ಸಂ.ಎಂಯು/ 2020-21/64 ದಿನಾಂಕ 11.09.2020ರಂದು ಸ್ಪಷ್ಟೀಕರಣವನ್ನು ನೀಡಿದ್ದು ದಿನಾಂಕ 24.11.2016ರಂದು ರೂ. 510938.00ಕ್ಕೆ ಮರು ಹೂಡಿಕೆ ಮಾಡಲಾಗಿ ರುವುದಾಗಿ ಹೂಡಿಕೆ ಪ್ರಮಾಣ ಪತ್ರದ ಪ್ರತಿಯನ್ನು ಕಳುಹಿಸಿರುತ್ತಾರೆ. ಆದುದರಿಂದ ಯಾವುದೇ ವ್ಯತ್ಯಾಸವಿರುವುದಿಲ್ಲ. ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ. |
| 58 | **ಪೀಠಗಳ ಆರ್ಥಿಕ ಪರಿಸ್ಥಿತಿ :**<br>ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಒಟ್ಟು 17 ಪೀಠಗಳಿವೆ. ಇವುಗಳಿಗೆ ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳ ಅನುದಾನಗಳು ಮತ್ತು ಇತರೆ ಸಂಸ್ಥೆ/ವ್ಯಕ್ತಿಗಳ ಕೊಡುಗೆಗಳಿಂದ ಹಣ ಸ್ವೀಕೃತಿಯಾಗುತ್ತದೆ. ಒಟ್ಟು 17 ಬ್ಯಾಂಕ್ ಖಾತೆಗಳು ಹಾಲಿ ಚಾಲ್ತಿಯಲ್ಲಿರುತ್ತವೆ. ಇವುಗಳ ಆರ್ಥಿಕ ಪರಿಸ್ಥಿತಿಯನ್ನು ಅನುಬಂಧ-28 ರಲ್ಲಿ ವರದಿಗೆ ಲಗತ್ತಿಸಿದೆ. | ಸಾಮಾನ್ಯ ಮಾಹಿತಿ |

| | | |
|---|---|---|
| 59 | <u>ಯು.ಜಿ.ಸಿ ವೇತನ ಶ್ರೇಣಿಯಲ್ಲಿ ಸಂಭಾವನೆ ಪಡೆಯುತ್ತಿರುವ ಬೋಧಕ ವೃಂದ ಹಾಗೂ ಖಾಯಂ ಗ್ರೂಪ್-ಡಿ ನೌಕರರಿಗೆ ಪರೀಕ್ಷಾ ಸಂಭಾವನೆ ಪಾವತಿಸಿರುವುದು:</u><br>2016-17ನೇ ಸಾಲಿಗೆ ಸಂಬಂಧಿಸಿದಂತೆ, ಹಾಜರುಪಡಿಸಲಾದ ಪರೀಕ್ಷಾಂಗ ವಿಭಾಗದ ಟಿ.ಎ/ ಡಿ.ಎ ಹಾಗೂ ಸಂಭಾವನೆ ವೋಚರ್‌ಗಳನ್ನು ಪರಿಶೀಲಿಸಲಾಗಿ, ಮಂಗಳೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಟ್ಟ ಹಾಗೂ ಅದರ ಸಂಯೋಜನೆಗೆ (affiliation) ಒಳಪಟ್ಟ ಕಾಲೇಜುಗಳಲ್ಲಿ ಯು.ಜಿ.ಸಿ ವೇತನ ಶ್ರೇಣಿಯಲ್ಲಿ ವೇತನ ಪಡೆಯುತ್ತಿರುವ ಬೋಧಕ ವೃಂದದವರಿಗೆ ಹಾಗೂ ಖಾಯಂ ಗ್ರೂಪ್-ಡಿ ನೌಕರರಿಗೆ ಪರೀಕ್ಷಾ ಸಂಭಾವನೆ ನೀಡಿರುವುದು ಕಂಡು ಬಂದಿರುತ್ತದೆ. ಮತ್ತು ಆ ವಿವರಗಳನ್ನು <u>ಅನುಬಂಧ-29 ಮತ್ತು 29(ಎ)</u> ರಲ್ಲಿ ಒದಗಿಸಿದೆ. (ಈ ಕುರಿತು ವಿಚಾರಣಾ ಪತ್ರ ಸಂಖ್ಯೆ:196/2018-19/ ದಿ:12.02.2019 ಅನ್ನು ನೀಡಿದೆ) ಆದರೆ, ಇದು ಮಂಗಳೂರು ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:MU/ACC/TA/DA/Exam/99-99/2010-11/o8 ದಿನಾಂಕ:02.02.2011 ರ ಪ್ಯಾರಾ 3(i) (ii) ಹಾಗೂ ಕೆ.ಸಿ.ಎಸ್.ಆರ್ ನಿಯಮಾವಳಿಗಳಿಗೆ ವಿರುದ್ಧವಾಗಿರುತ್ತದೆ. ಆದಕಾರಣ, ಸದರಿ ಅನುಬಂಧಗಳಲ್ಲಿ ಪಟ್ಟಿ ಮಾಡಲಾಗಿರುವ ಒಟ್ಟು ಮೊತ್ತ ರೂ.5,67,072/- (2,86,607+2,80,465) ಗಳನ್ನು ಸಂಬಂಧಪಟ್ಟವರಿಂದ ವಸೂಲಿಸಿ ವಿಶ್ವವಿದ್ಯಾನಿಲಯದ ನಿಧಿಗೆ ಜಮೆ ಮಾಡಿ ಅನುಪಾಲನಾ ವರದಿ ಸಲ್ಲಿಸಲು ಸೂಚಿಸಿದೆ. | ಮಂಗಳೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಟ್ಟ ಹಾಗೂ ಸಂಯೋಜನೆಗೊಳಪಟ್ಟ ಖಾಸಗಿ ಕಾಲೇಜುಗಳಲ್ಲಿ ಪರೀಕ್ಷಾ ಕಾರ್ಯಗಳಿಗೆ ವಿಶ್ವವಿದ್ಯಾನಿಲಯದ ಪರೀಕ್ಷಾ ಕಾರ್ಯಗಳನ್ನು ಖಾಸಗಿ ಕಾಲೇಜಿನ ಸಿಬ್ಬಂದಿಗಳು ರಜಾದಿನಗಳಲ್ಲಿ ನಿರ್ವಹಿಸಿರುವು ದರಿಂದ ವಿದ್ಯಾರ್ಥಿಗಳಿಂದ ಸ್ವೀಕರಿಸುವ ಪರೀಕ್ಷಾ ಶುಲ್ಕದ ನಿಧಿಯಿಂದ ಯುಜಿಸಿ ವೇತನ ಪಡೆಯದ ಸಿಬ್ಬಂದಿಗಳಿಗೆ ಸಂಭಾವನೆ ಪಾವತಿಸಲಾಗಿರುತ್ತದೆ. ಸದರಿ ಖಾಸಗಿ ಕಾಲೇಜಿನ ಸಿಬ್ಬಂದಿಗಳು ರಜಾಕಾಲದಲ್ಲಿ ಪರೀಕ್ಷಾ ಕಾರ್ಯವನ್ನು ಹೆಚ್ಚುವರಿ ಕರ್ತವ್ಯವೆಂದು ನಿರ್ವಹಿಸಿರುವುದರಿಂದ ಸಂಭಾವನೆ ಪಾವತಿಸಲಾಗಿರುತ್ತದೆ. ಯುಜಿಸಿ ವೇತನ ಶ್ರೇಣಿ ಪಡೆಯುವ ಶಿಕ್ಷಕರಿಗೆ ಯಾವುದೇ ಸಂಭಾವನೆಯನ್ನು ನೀಡುವುದನ್ನು ನಿಲ್ಲಿಸಲಾಗಿದೆ. |
| 60 | <u>ಪರೀಕ್ಷಾ ವಿಭಾಗ</u><br><u>ಪರೀಕ್ಷಾ ವಿಭಾಗದ ವೋಚರ್‌ಗಳಲ್ಲಿ ಕಂಡು ಬಂದ ನ್ಯೂನ್ಯತೆಗಳು :</u><br>2016-17ನೇ ಸಾಲಿಗೆ ಸಂಬಂಧಿಸಿದಂತೆ, ಹಾಜರುಪಡಿಸಲಾದ ಪರೀಕ್ಷಾ/ ಮೌಲ್ಯಮಾಪನ ವಿಭಾಗದ ಟಿ.ಎ/ ಡಿ.ಎ ಹಾಗೂ ಸಂಭಾವನೆ ವೋಚರ್‌ಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ನ್ಯೂನ್ಯತೆಗಳು ಇಂತಿವೆ.<br>1) ಟಿ.ಎ/ ಡಿ.ಎ ಹಾಗೂ ಸಂಭಾವನೆ ವೋಚರ್‌ಗಳಲ್ಲಿ ಪರೀಕ್ಷಕರ ಮೂಲ ವೇತನವನ್ನು ದಾಖಲಿಸಿರುವುದಿಲ್ಲ.<br>2) ಪರೀಕ್ಷಾ/ ಮೌಲ್ಯಮಾಪನ ಕಾರ್ಯಗಳಿಗೆ ಹಾಜರಾಗಿರುವುದರ ಸಂಬಂಧ ಹಾಜರಾತಿ ಪ್ರಮಾಣ ಪತ್ರಗಳನ್ನು ಹಾಜರುಪಡಿಸಿರುವುದಿಲ್ಲ. (ಹಾಜರುಪಡಿಸಲಾದ ಕೆಲವು ಪ್ರಮಾಣ ಪತ್ರಗಳಲ್ಲಿ ಈ ಸಂಬಂಧ ಅಗತ್ಯ)<br>3) U.G.C/ Non U.G.C ಪ್ರಮಾಣ ಪತ್ರಗಳನ್ನು ಹಾಜರುಪಡಿಸಿರುವುದಿಲ್ಲ. (ಹಾಜರುಪಡಿಸಲಾದ ಕೆಲವು ಪ್ರಮಾಣ ಪತ್ರಗಳಲ್ಲಿ ಅಗತ್ಯ ವಿವರಗಳನ್ನು ನಮೂದಿಸಿ ದೃಢೀಕರಿಸಿರುವುದಿಲ್ಲ)<br>4) ತಾತ್ಕಾಲಿಕ ಅತಿಥಿ ಉಪನ್ಯಾಸಕರುಗಳನ್ನು ಪರೀಕ್ಷಾ/ ಮೌಲ್ಯಮಾಪನ ಕಾರ್ಯಗಳಿಗೆ ನಿಯೋಜಿಸಬೇಕಾದರೆ ನಿಯಮಗಳನ್ವಯ ಅವರು ಕನಿಷ್ಠ ಮೂರು ವರ್ಷಗಳ ಬೋಧನಾ ಸೇವಾವಧಿಯನ್ನು ಪೂರೈಸಿರಬೇಕಾಗಿರುತ್ತದೆ. ಈ ಸಂಬಂಧ ಸದರಿ ಕಾಲೇಜು ಪ್ರಾಂಶುಪಾಲರಿಂದ ದೃಢೀಕರಿಸಲ್ಪಟ್ಟ ಬೋಧನಾ ಸೇವಾನುಭವ ಪ್ರಮಾಣ ಪತ್ರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. (ಹಾಜರುಪಡಿಸಲಾದ ಕೆಲವು ಪ್ರಮಾಣ ಪತ್ರಗಳಲ್ಲಿ 3 ವರ್ಷಗಳಿಗಿಂತಲೂ ಕಡಿಮೆ ಸೇವಾನುಭವ ಹೊಂದಿರುವುದಾಗಿ ದೃಢೀಕರಿಸಿರುತ್ತಾರೆ.)<br>ಈ ಮೇಲಿನ ನ್ಯೂನ್ಯತೆಗಳ ಕುರಿತು ವಿಚಾರಣಾ ಪತ್ರ ಸಂಖ್ಯೆ:37/2018-19/ ದಿ:04.12.2018 ಹಾಗೂ 97/2018-19 ದಿ:02.01.2019 ಜಾರಿ ಮಾಡಲಾಗಿತ್ತು.<br>ಲೆಕ್ಕಪರಿಶೋಧನೆಗೆ ಅಗತ್ಯವಿರುವ ಪೂರಕ ದಾಖಲೆ ಪತ್ರಗಳನ್ನು ಪೂರ್ಣ ಪ್ರಮಾಣದಲ್ಲಿ ಹಾಜರುಪಡಿಸಿಲ್ಲದ ಕಾರಣ <u>ಅನುಬಂಧ-30ರಲ್ಲಿ</u> ಪಟ್ಟಿ ಮಾಡಲಾಗಿರುವ ಒಟ್ಟು ಸಂಭಾವನೆ ಪಾವತಿ ಮೊತ್ತ ರೂ.4,90,855/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. | 1) ಟಿ.ಎ/ ಡಿ.ಎ ಹಾಗೂ ಸಂಭಾವನೆ ವೋಚರುಗಳಲ್ಲಿ ಪರೀಕ್ಷಕರ ಮೂಲ ವೇತನವನ್ನು ಕಡ್ಡಾಯವಾಗಿ ನಮೂದಿಸಲು ಕ್ರಮಕೈಗೊಳ್ಳಲಾಗುತ್ತದೆ.<br>2) ಪ್ರಯಾಣ ಭತ್ಯೆ ಬಿಲ್ಲುಗಳನ್ನು ಹಾಜರಾತಿ ಪ್ರಮಾಣ ಪತ್ರದ ಆಧಾರದಲ್ಲಿ ಪಾವತಿಸಲಾಗುತ್ತದೆ ಮತ್ತು ವೋಚರುಗಳೊಂದಿಗೆ ಅದನ್ನು ಲಗತ್ತಿಸಲಾಗುತ್ತದೆ.<br>3) ಸಂಭಾವನೆ ಬಿಲ್ಲುಗಳನ್ನು ಪಾವತಿಸುವಾಗ Non U.G.C ಪ್ರಮಾಣ ಪತ್ರಗಳನ್ನು ಕಡ್ಡಾಯವಾಗಿ ಲಗತ್ತಿಸಲು ಕ್ರಮ ಕೈಗೊಳ್ಳಲಾಗುತ್ತದೆ.<br>4) ಪರೀಕ್ಷಾ ಕರ್ತವ್ಯಕ್ಕೆ ನೇಮಕಾತಿ ಮಾಡುವಾಗ ಕನಿಷ್ಟ ಮೂರು ವರ್ಷಗಳ ಬೋಧನಾ ಸೇವಾವಧಿಯನ್ನು ಪರಿಶೀಲಿಸಿಯೇ ನೇಮಕಾತಿ ಮಾಡಲಾಗುತ್ತದೆ. ಉಪನ್ಯಾಸಕರ ಜೇಷ್ಠತಾ ಪಟ್ಟಿ (Gradation List) ನ ಆಧಾರದಲ್ಲಿ ಪರೀಕ್ಷಾ ಕಾರ್ಯಕ್ಕೆ ನಿಯೋಜನೆ ಮಾಡಲಾಗುತ್ತದೆ. |
| 61 | <u>2016-17ನೇ ಸಾಲಿನಲ್ಲಿ ಪರೀಕ್ಷಾ ವಿಭಾಗದಲ್ಲಿ ನಿರ್ವಹಿಸಲಾದ ಚಿನ್ನದ ಪದಕ/ ಉತ್ತರ ಪತ್ರಿಕೆ/ ಅಂಕಪಟ್ಟಿ/ ಪದವಿ ಪ್ರಮಾಣ ಪತ್ರಗಳ/ ದಾಸ್ತಾನು ಸ್ವೀಕೃತಿ/ ವಿತರಣೆ/ ಅಂತಿಮ ಶಿಲ್ಕಿನ ವಿವರಗಳ ಬಗ್ಗೆ:</u><br>2016-17ನೇ ಸಾಲಿನಲ್ಲಿ ಹಿಂದಿನ ಸಾಲಿನ ಬಾಕಿ ಉಳಿದಿದ್ದ ಚಿನ್ನದ ಪದಕ/ ಅಂಕಪಟ್ಟಿ/ ಪದವಿ ಪ್ರಮಾಣ ಪತ್ರಗಳು ಹಾಗೂ ಉತ್ತರ ಪತ್ರಿಕೆಗಳ ದಾಸ್ತಾನು ವಿವರ ಹಾಗೂ 2016-17 ರಲ್ಲಿ ಮುದ್ರಿಸಿದ ಸಂಖ್ಯೆ ಹಾಗೂ ಒಟ್ಟಾರೆ 2016-17ನೇ ಸಾಲಿನಲ್ಲಿ ವಿತರಣೆ ವಿವರ ಮತ್ತು ದಿನಾಂಕ:31.03.2017 ಕ್ಕೆ ಬಾಕಿ ಉಳಿದಿದ್ದ ದಾಸ್ತಾನು ಶಿಲ್ಕುಗಳ ವಿವರಗಳನ್ನು <u>ಅನುಬಂಧ-31 ರಲ್ಲಿ</u> ವರದಿಗೆ ಲಗತ್ತಿಸಿದೆ. | ಸಾಮಾನ್ಯ ಮಾಹಿತಿ ಆಕ್ಷೇಪಣೆ ಇರುವುದಿಲ್ಲ. |

| | | |
|---|---|---|
| 62 | <u>ಮೆ. ಆಟ್ರಿಸ್ ಟೆಕ್ನಾಲಜೀಸ್, ಬೆಂಗಳೂರು ರವರಿಂದ ವಸೂಲು ಮಾಡಬೇಕಾಗಿದ್ದ ಬಾಕಿ ಮೊತ್ತ ರೂ.5,40,875/- ಗಳನ್ನು ಈವರೆವಿಗೂ ವಸೂಲಾತಿ ಮಾಡದಿರುವ ಬಗ್ಗೆ :</u><br>2016-17ನೇ ಸಾಲಿನಲ್ಲಿ 2015-16 ರ ಯಶಸ್ವೀ ಟೆಂಡರ್‌ದಾರರಾದ (2015-16 ರ ಟೆಂಡರ್‌ದಾರರು) ಮೆ. ಆಟ್ರಿಸ್ ಟೆಕ್ನಾಲಜೀಸ್ ಪ್ರೈವೇಟ್ (ಲಿ) ಬೆಂಗಳೂರು ರವರಿಗೆ 2016-17ನೇ ಸಾಲಿನಲ್ಲಿ ಪರೀಕ್ಷಾ ಗಣಕೀಕರಣ ಕಾರ್ಯವನ್ನು ನಿರ್ವಹಿಸಲು ಕಾರ್ಯದೇಶ ನೀಡಿದ್ದು, ಕಾರ್ಯದೇಶದೊಂದಿಗೆ ವಿಶ್ವವಿದ್ಯಾನಿಲಯದ ಈ ಹಿಂದೆ ಮುದ್ರಿಸಿದ್ದ ದಾಸ್ತಾನಿನಲ್ಲಿ ಉಳಿದಿದ್ದ ಉತ್ತರ ಪತ್ರಿಗಳು/ ಸ್ಟೇಷನರಿ ಪದಾರ್ಥಗಳನ್ನು ಉಪಯೋಗಿಸಿಕೊಂಡು ಬಿಲ್ಲಿನಲ್ಲಿ ಸದರಿ ಐಟಂಗಳ ಬಾಬ್ತು ಒಟ್ಟು ರೂ.46,12,546/-ಗಳನ್ನು ಕಟಾಯಿಸಿಕೊಂಡು ಬಾಕಿ ಹಣ ಪಾವತಿಸುವ ಷರತ್ತಿನೊಂದಿಗೆ ಕರಾರು ಮಾಡಿಕೊಳ್ಳಲಾಗಿತ್ತು.<br>ತದನಂತರ ಆಟ್ರಿಸ್ ಕಂಪೆನಿಯ ಬಿಲ್ಲಿನಲ್ಲಿ ರೂ.29,46,877/-ಗಳನ್ನು ಮಾತ್ರ ಕಟಾವಣೆ ಮಾಡಿದ್ದು ಉಳಿದ ರೂ.16,65,669/-ಗಳನ್ನು ಕಟಾವಣೆ ಮಾಡಲಾಗಿರುವುದಿಲ್ಲ.<br>ದಿನಾಂಕ:07.10.2016 ರ ಪಾವತಿ ಬಿಲ್ಲಿನಲ್ಲಿ ಸದರಿ ಮೊತ್ತವನ್ನು ಬಾಕಿ ಉಳಿದಿದ್ದ ಮೊತ್ತ ಎಂದು ಬರೆದು ಕಟಾಯಿಸಲಾಗಿತ್ತು. ಪುನಃ ಸದರಿ ಬಾಕಿ ಮೊತ್ತ ರೂ.16,65,669/-ಗಳನ್ನು ಮೆ. ಆಟ್ರಿಸ್ ಟೆಕ್ನಾಲಜೀಸ್ ರವರಿಗೆ ಚೆಕ್ ನಂ:148800 ರಲ್ಲಿ ಪಾವತಿಸಲಾಗಿದೆ.<br>ಹಾಗಾಗಿ ರೂ.16,65,669/-ಗಳು ಕಟಾವಣೆ ಬಾಕಿ ಇರುತ್ತದೆ. ಈ ದಿವಸದವರೆವಿಗೆ ಸಾಲಿಯಾನ ಕನಿಷ್ಠ ಶೇ. 8 ಬಡ್ಡಿಯೊಂದಿಗೆ ಅಂದರೇ ರೂ.3,99,768/-ಗಳ ಬಡ್ಡಿ ಸೇರಿ ಒಟ್ಟಾರೆ ರೂ.20,65,467/-ಗಳನ್ನು ವಸೂಲಿ ಮಾಡಲು ಸೂಚಿಸಿ ಲೆಕ್ಕತಪಾಸಣಾ ವಿಚಾರಣಾ ಪತ್ರ ಸಂಖ್ಯೆ:173 ದಿ:05.02.2019 ಜಾರಿ ಮಾಡಲಾಗಿದೆ.<br>ಈ ಬಗ್ಗೆ ಯಾವುದೇ ವಸೂಲಾತಿ ಮಾಡಿದ ವಿವರ ಹಾಜರುಪಡಿಸದ ಕಾರಣ ಒಟ್ಟು ರೂ.20,65,467/-ಗಳನ್ನು ಮೆ. ಆಟ್ರಿಸ್ ಟೆಕ್ನಾಲಜೀಸ್ ಪ್ರೈವೇಟ್ (ಲಿ) ಬೆಂಗಳೂರು ರವರಿಂದ ವಸೂಲಾತಿಗೆ ಸೂಚಿಸಲಾಗಿತ್ತು, ದಿನಾಂಕ:10.05.2019 ರ ಪುನರ್ ಪರಿಶೀಲನಾ ವೇಳೆಯಲ್ಲಿ ರೂ.11,24,794/-ಗಳಿಗೆ ಮಾಹಿತಿ ನೀಡಿರುವುದನ್ನು ಅಂಗೀಕರಿಸಲಾಗಿದ್ದು, ಬಾಕಿ ರೂ.5,40,875/-ಗಳಿಗೆ ನೀಡಿರುವ ವಿವರಣೆಯು ಸಮರ್ಪಕವಾಗಿಲ್ಲದ ಕಾರಣ ಈ ಮೊತ್ತಕ್ಕೆ ಕಡಿತಗೊಳಿಸಿದ ಬಿಲ್ಲುಗಳ ವಿವರಗಳನ್ನು ಒದಗಿಸಲು ಸೂಚಿಸುತ್ತಾ, ತಪ್ಪಿದಲ್ಲಿ ರೂ.5,40,875/-ಗಳನ್ನು ವಸೂಲಿಸಲು ಕ್ರಮವಹಿಸುವುದು. | ಆಟ್ರಿಸ್ ಟೆಕ್ನೋಲೊಜಿಸ್‌ರೊಂದಿಗೆ ಆಗಿರುವ ಒಪ್ಪಂದದಂತೆ ವಿಶ್ವವಿದ್ಯಾನಿಲಯದಲ್ಲಿ ಬಾಕಿ ಉಳಿದಿದ್ದ ಮತ್ತು ಸದ್ರಿ ಸಂಸ್ಥೆಗೆ ನೀಡಬೇಕಾದ ಖಾಲಿ ಉತ್ತರ ಪತ್ರಿಕೆ ಮತ್ತು ಪರೀಕ್ಷಾ ಸಾಮಾಗ್ರಿಗಳ ಮೌಲ್ಯ ಕೆಳಕಂಡಂತಿದೆ.<br>1. ಖಾಲಿ ಉತ್ತರ ಪತ್ರಿಕೆಗಳ ಮೌಲ್ಯ = ರೂ. 4072653.00<br>2. ಪರೀಕ್ಷಾ ಸಾಧನಗಳ ಮೌಲ್ಯ = ರೂ. 526736.00<br>ಒಟ್ಟು = ರೂ. 4599389.00<br>**3. <u>ಕಳೆ:</u>**<br>ಇದರಲ್ಲಿ ಕಾಲೇಜಿನಲ್ಲಿ ಉಪಯೋಗಿಸದೆ ಬಾಕಿ ಇದ್ದ ಸಾಮಾಗ್ರಿಗಳನ್ನು ಹಿಂದೆ ತಂದಿರುವ ಬಗ್ಗೆ.<br>ಅ) ಖಾಲಿ ಉತ್ತರ ಪತ್ರಕೆಗಳ ಮೌಲ್ಯ = ರೂ. 851665.00<br>ಆ) ಪರೀಕ್ಷಾ ಸಾಮಾಗ್ರಿಗಳ ಮೌಲ್ಯ = ರೂ. 273129.00<br>ಒಟ್ಟು = ರೂ. **1124794.00**<br><u>ವಸೂಲಾತಿ ಮಾಡಬೇಕಾದ ಮೊತ್ತ</u> = 4599389–1124794 = ರೂ. **3474595.00**<br>ಸೇರಿಸು: ಕಾಲೇಜಿನಿಂದ ಸಾಮಾಗ್ರಿಗಳನ್ನು ಸಾಗಿಸಿದ ಬಾಬ್ತು ಸಾಗಣಿಕೆ ವೆಚ್ಚ = ರೂ. 11000.00<br>ಒಟ್ಟು ವಸೂಲಾತಿ ಮೊತ್ತ ರೂ. 3485595.00<br><u>ವಸೂಲಾದ ಮೊತ್ತ</u><br>1. ಒಂದನೇ ಬಿಲ್ಲಿನಲ್ಲಿ ರೂ. 2946877.00<br>2. ಎರಡನೇ ಬಿಲ್ಲಿನಲ್ಲಿ ರೂ. 538718.00<br>ಒಟ್ಟು ವಸೂಲಾತಿ ರೂ. 3485595.00<br>ವಸೂಲಾತಿಗಾಗಿ ಬಾಕಿ ರೂ. ಇಲ್ಲ<br>ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ. |
| 63 | <u>ಮೆ\|\| **Cerbrera integrated Tech. Ltd** ಬೆಂಗಳೂರು ರವರಿಂದ ಖರೀದಿ ಪ್ರಕ್ರಿಯೆಯಲ್ಲಿರುವ ನ್ಯೂನ್ಯತೆಗಳು :</u><br>ಪರೀಕ್ಷಾ ಗಣಕೀಕರಣ ದತ್ತಾಂಶಗಳನ್ನು ಸುರಕ್ಷಿತವಾಗಿ ಕಾಪಾಡುವ ಸಂಬಂಧವಾಗಿ 2 ಸರ್ವರ್‌ಗಳನ್ನು ಮೆ॥ Cerbrera integrated Tech.Ltd ಬೆಂಗಳೂರು ರವರಿಂದ ಖರೀದಿಸಲಾಗಿರುತ್ತದೆ. ಒಟ್ಟು ರೂ.13,86,880/-ಗಳನ್ನು ಪಾವತಿಸಲಾಗಿದೆ.<br>ಇ ಪೋರ್ಟಲ್ ಮೂಲಕ 2 ಸರ್ವರ್‌ಗಳ ಖರೀದಿಗಾಗಿ ಟೆಂಡರ್ ಕರೆದು ದಿನಾಂಕ:26.04.2016 ರ ತಾಂತ್ರಿಕ ಟೆಂಡರ್ ಪರಿಶೀಲನಾ ಸಮಿತಿಯ ಸಭೆ (ಟಿ.ಎಸ್.ಇ) ನಡವಳಿ ರೀತ್ಯಾ 2 ಟೆಂಡರ್‌ಗಳನ್ನು ಮಾತ್ರ ಅಂಗೀಕರಿಸಿ, ಅದರಲ್ಲಿ ಒಂದನ್ನು ತಿರಸ್ಕರಿಸಲಾಗಿರುತ್ತದೆ. ಇದು ಕೆ.ಟಿ.ಪಿ.ಪಿ ಕಾಯಿದೆ-PWD/1359/SO/FC 2001(P-2) ಬೆಂಗಳೂರು ದಿ:03.12.2002 ರ ರೀತ್ಯಾ ಸಿಂಗಲ್ ಟೆಂಡರ್ ಆದಲ್ಲಿ ಮೊದಲ ಆದ್ಯತೆ ಟೆಂಡರ್‌ನ್ನು ರದ್ದುಪಡಿಸಬೇಕಿರುತ್ತದೆ. ನಂತರ ಅದರ ಅವಶ್ಯಕತೆಯ ಮೇಲೆ ದರ ಸಂದಾನಕ್ಕೆ ಆಹ್ವಾನಿಸಬೇಕಿರುತ್ತದೆ. | ಪರೀಕ್ಷಾ ಗಣಕೀಕರಣ ದತ್ತಾಂಶಗಳನ್ನು ಸುರಕ್ಷಿತವಾಗಿ ಕಾಪಾಡುವ ಸಲುವಾಗಿ ಸರ್ವರ್‌ಗಳನ್ನು ಅತೀ ತುರ್ತಾಗಿ ಖರೀದಿಸಬೇಕಾಗಿದ್ದು ಟೆಂಡರ್ ಕರೆದಾಗ ತಾಂತ್ರಿಕ ಬಿಡ್‌ನಲ್ಲಿ ಇಬ್ಬರು ಟೆಂಡರ್‌ದಾರರು ಭಾಗವಹಿಸಿದ್ದು ಒಬ್ಬ ಟೆಂಡರ್‌ದಾರರಾದ ಮೆ॥ Cerbrera integrated Tech.Ltd ಬೆಂಗಳೂರು ಇವರ ಟೆಂಡರ್ ದರವು ಮಾರುಕಟ್ಟೆ ದರದಲ್ಲಿ ಕನಿಷ್ಟವಾಗಿದ್ದುದರಿಂದ ಸಿಂಡಿಕೇಟ್ ಸಭೆಯಲ್ಲಿ ಅನುಮೋದಿಸಲಾಗಿದೆ.ಇವರಿಂದ ಖರೀದಿಸಿರುವ ಸರ್ವರ್‌ಗಳು ಸರಿಯಾಗಿ ಕಾರ್ಯ ನಿರ್ವಹಿಸುತ್ತಿವೆ ಮತ್ತು ಉಪಕರಣದ ಕಾರ್ಯನಿರ್ವಹಣೆ ಗುಣಮಟ್ಟದ ಬಗ್ಗೆ ತಾಂತ್ರಿಕ ತಜ್ಞರಿಂದ ಪ್ರಮಾಣ ಪತ್ರವನ್ನು ಪಡೆಯಲಾಗಿದೆ. ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ. |

<table>
<tr><td></td><td>ಕೆ.ಟಿ.ಪಿ.ಪಿ ನಿಯಮ 2000 ರ ರೀತ್ಯಾ ಅತೀ ತುರ್ತು ಎಂದು ನಮೂದಿಸಿರುವ ಐಟಂಗಳನ್ನು ಒಂದು ಟೆಂಡರ್‌ಗೆ ಮುಕ್ತಾಯ ಮಾಡಿ, ಮರು ಟೆಂಡರ್ ಕರೆಯದೇ, NOA ಷರತ್ತುಗಳನ್ನು ಕರಾರಿಗೆ ಅಳವಡಿಸಿಕೊಳ್ಳದೆ ಸರಬರಾಜು ಆದೇಶ ನೀಡಿ, ಸಿಂಡಿಕೇಟ್ ನಿರ್ಣಯದ ಆಧಾರದ ಮೇಲೆ 2 ಸರ್ವರ್‌ಗಳನ್ನು ಖರೀದಿಸಲಾಗಿದೆ.<br>ಹಾಗೂ ಸದರಿ ಸರ್ವರ್‌ಗಳ Installation ಮಾಡಲಾಗಿದೆ ಎಂದು ವರದಿ ನೀಡಿರುವುದು ಸರಿಯಷ್ಟೇ. ಆದರೆ, ತಾಂತ್ರಿಕ ತಜ್ಞರ ಗುಣಮಟ್ಟದ ಪ್ರಮಾಣ ಪತ್ರ, ಸದರಿ ಉಪಕರಣದ Accessories ಗುಣಮಟ್ಟ, ದಾಸ್ತಾನು ಸ್ವೀಕೃತಿ, ಉಪಕರಣದ ಕಾರ್ಯ ನಿರ್ವಹಣೆ ಇತ್ಯಾದಿ ವಿವರಗಳನ್ನು ಪರೀಕ್ಷಿಸಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸುವಂತೆ ಲೆಕ್ಕತಪಾಸಣಾ ವಿಚಾರಣಾ ಪತ್ರ ಸಂಖ್ಯೆ:174 ದಿ:05.02.2019 ಕ್ಕೆ ನೀಡಿದ್ದು ಸೂಕ್ತ ಸಮಜಾಯಿಷಿ ನೀಡಿರುವುದಿಲ್ಲ. ಈ ಕಾರಣದಿಂದ ಮೆ॥ Cerbrera integrated Tech. Ltd ಬೆಂಗಳೂರು ರವರಿಗೆ ಪಾವತಿಸಿರುವ ಮೊತ್ತ ರೂ.13,86,880/-ಗಳನ್ನು ಆಕ್ಷೇಪಿಸಲಾಗಿದೆ.</td><td></td></tr>
<tr><td>64</td><td><u>ಚಿನ್ನದ ಪದಕಗಳ ಖರೀದಿ ನ್ಯೂನ್ಯತೆಗಳು :</u><br>2016-17ನೇ ಸಾಲಿನಲ್ಲಿ ಮೆ॥ ಸನಾತನ ಜ್ಯೂವೆಲರಿ ವರ್ಕ್ಸ್ ಮಂಗಳೂರು ರವರಿಂದ 43 ಸಂಖ್ಯೆ ಚಿನ್ನದ ಪದಕಗಳನ್ನು ಖರೀದಿಸಲಾಗಿದೆ.<br>ರೂ.2,00,000/-ಗಳನ್ನು ಮುಂಗಡ ಹಣ ನೀಡಲಾಗಿದೆ. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಮುಂಗಡ ನೀಡಲು ನಿಯಮಗಳಲ್ಲಿ ಅವಕಾಶವಿರದಿದ್ದರೂ ಸಹ ಮುಂಗಡ ನೀಡಲಾಗಿದೆ. ಪ್ರತಿ ಪದಕಕ್ಕೆ ರೂ.6,670/-ಗಳಂತೆ 43 ಸಂಖ್ಯೆ ಚಿನ್ನದ ಪದಕಗಳ ಬಾಬ್ತು ಒಟ್ಟ ರೂ.2,86,810/-ಗಳಾಗಿದ್ದು, ಬಾಕಿ ಹಣವನ್ನು ಚೆಕ್ ನಂ:195168 ದಿ:'23.03.2017 ಕ್ಕೆ ರೂ.81,074/- ಪಾವತಿಸಲಾಗಿದೆ.<br>ಕರಾರು ಒಪ್ಪಂದಕ್ಕೆ ಮುನ್ನ ಚಿನ್ನದ ಪದಕಗಳ ಮಾದರಿ ತರಿಸಿ ಪರಿಶೀಲಿಸಲು ಒಂದು ಕಮಿಟಿ ಸ್ಥಾಪಿಸಿ ಪರಿಣಿತ ಅಕ್ಕಸಾಲಿಗರನ್ನು ಒಳಗೊಂಡಂತೆ ಕಮಿಟಿಯಲ್ಲಿ ಚಿನ್ನದ ಅಂಶದ ಬಗ್ಗೆ ನಿಖರತೆ/ ಗುಣಮಟ್ಟ ಪರಿಶೀಲಿಸಿ, ನಂತರ ಚಿನ್ನದ ಪದಕ ತಯಾರಿಕಾ ಅಂಗಡಿಗೆ ಸರಬರಾಜು ಆದೇಶ ನೀಡಬೇಕಾಗಿರುತ್ತದೆ. ಹಾಗೂ ಖರೀದಿ ನಂತರ ಎಲ್ಲಾ ಪದಕಗಳನ್ನು ಮತ್ತೆ ಪರೀಕ್ಷೆಗೆ ಒಳಪಡಿಸಿ ಗುಣಮಟ್ಟ ಹೊಂದಿರುವ ಬಗ್ಗೆ ಖಾತರಿಗೊಳಿಸಬೇಕಿದೆ. ಈ ಸಂಬಂಧದ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರು ಪಡಿಸಿರುವುದಿಲ್ಲ.<br>ಮೆ॥ ಸನಾತನ ಜ್ಯೂವೆಲರಿ ವರ್ಕ್ಸ್ ಮಂಗಳೂರು ರವರಿಗೆ ನಿಯಮಬಾಹಿರವಾಗಿ ಮುಂಗಡ ಪಾವತಿಸಿರುವ ಬಗ್ಗೆ ಹಾಗೂ ಖರೀದಿ ಪ್ರಕ್ರಿಯೆಯಲ್ಲಿ ಉಂಟಾಗಿರುವ ನಷ್ಟದ ಬಗ್ಗೆ ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ಆಡಳಿತಾತ್ಮಕ ಕ್ರಮ ವಹಿಸಲು ಸೂಚಿಸಲಾಗಿದೆ. ಈ ಬಗ್ಗೆ ಸೂಕ್ತ ಸಮಜಾಯಿಷಿ ನೀಡುವವರೆವಿಗೆ ಪಾವತಿ ಮೊತ್ತ ರೂ.2,86,810/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.</td><td>ಮಂಗಳೂರು ವಿಶ್ವವಿದ್ಯಾಲಯ ಸ್ಥಾಪನೆಯಾದಂದಿನಿಂದಲೂ ವಾರ್ಷಿಕ ಘಟಿಕೋತ್ಸವದಂದು ಚಿನ್ನದ ಪದಕ ವಿಜೇತ ವಿದ್ಯಾರ್ಥಿಗಳಿಗೆ ನೀಡುವ ಚಿನ್ನದ ಪದಕಗಳ ಬಗ್ಗೆ ಚಿನ್ನದ ಪದಕಗಳ ಪರೀಕ್ಷಕರ ಕಮಿಟಿಯನ್ನು ರಚಿಸಿರುವುದಿಲ್ಲ. ಚಿನ್ನದ ಕ್ರಯವು ದಿನವಹಿ ದರಗಳಾಗಿರುವುದರಿಂದ ಚಿನ್ನದ ಪದಕಗಳ ತಯಾರಕರು ಪದಕಗಳ ಆದೇಶ ನೀಡಿದಾಗಲೇ ಮುಂಗಡಕ್ಕೆ ಬೇಡಿಕೆಯಿಡುತ್ತಿದ್ದರು. ಈ ಬಗ್ಗೆ ಕುಲಪತಿಗಳ ಅನುಮೋದನೆ ಪಡೆದು ಮುಂಗಡ ನೀಡಲಾಗುತ್ತಿದೆ. ಆಕ್ಷೇಪಣೆಯಲ್ಲಿ ಸೂಚಿಸಿರುವ ಸೂಚನೆಯಂತೆ ಮುಂದಿನ ಘಟಿಕೋತ್ಸವದಲ್ಲಿ ಕ್ರಮ ಕೈಗೊಳ್ಳಲಾಗುವುದು. ಆಕ್ಷೇಪಣೆಯನ್ನು ಕೈ ಬಿಡುವಂತೆ ಕೋರಲಾಗಿದೆ.</td></tr>
<tr><td>65</td><td><u>ಪ್ರಶ್ನೆಪತ್ರಿಕೆ ಮುದ್ರಣಕ್ಕೆ ಸಂಬಂಧಿಸಿದ ಟೆಂಡರ್ ಪ್ರಕ್ರಿಯೆ ಕೈಗೊಳ್ಳದಿರುವುದು :</u><br>2016-17ನೇ ಸಾಲಿನಲ್ಲಿ ಪ್ರಶ್ನೆ ಪತ್ರಿಕೆಗಳನ್ನು ಮೆ॥ Quick Fix Printers ಮಣಿಪಾಲ ರವರಿಂದ ಮುದ್ರಿಸಿದ್ದು ಒಟ್ಟು ರೂ.39,11,415/-ಗಳನ್ನು ಪಾವತಿಸಲಾಗಿದೆ. ಪಾವತಿ ವಿವರ ಕೆಳಕಂಡಂತಿದೆ:<br><table><tr><th>ಕ್ರ.ಸಂ</th><th>ಒಟ್ಟು ಬಿಲ್ಲಿನ ಮೊತ್ತ</th><th>ಆದಾಯ ತೆರಿಗೆ ಕಟಾವಣೆ</th><th>ಪಾವತಿ</th><th>ಚೆಕ್ ನಂ/ ದಿನಾಂಕ</th></tr><tr><td>1</td><td>19,94,015</td><td>38,300</td><td>19,55,715</td><td>148402/ 20.09.2016</td></tr><tr><td>2</td><td>1,12,648</td><td>2,164</td><td>1,10,484</td><td>146516/ 24.10.2016</td></tr><tr><td>3</td><td>14,70,630</td><td>28,247</td><td>14,42,383</td><td>203256/ 23.01.2017</td></tr><tr><td>4</td><td>3,34,122</td><td>6,418</td><td>3,27,704</td><td>294502/ 27.03.2017</td></tr><tr><td>ಒಟ್ಟು ರೂ.</td><td>39,11,415</td><td>75,129</td><td>38,36,286</td><td></td></tr></table></td><td>ಪರೀಕ್ಷಾ ಮುದ್ರಣಕ್ಕೆ ಸಂಬಂಧಿಸಿ ಸರಕಾರದಿಂದ 4 ಜಿ ವಿನಾಯಿತಿಯನ್ನು ಪ್ರತಿ ವರ್ಷ ಪಡೆಯುವ ಬಗ್ಗೆ ಕ್ರಮ ವಹಿಸಲಾಗುವುದು ಹಾಗೂ 2016-17ನೇ ಸಾಲಿಗೆ ಕೆ.ಟಿ.ಪಿ.ಪಿ ಕಾಯಿದೆ-2000 ರ ಕಲಂ 4(ಜಿ) ವಿನಾಯಿತಿಯನ್ನು ಪಡೆದು ಮುಂದಿನ ಲೆಕ್ಕ ಪರಿಶೋಧನಾ ಸಂದರ್ಭದಲ್ಲಿ ಒದಗಿಸಲಾಗುವುದು. ಆದುದರಿಂದ ಆಕ್ಷೇಪಣೆಯನ್ನು ಕೈ ಬಿಡಲು ಕೋರಲಾಗಿದೆ</td></tr>
</table>

| | | |
|---|---|---|
| | ಕರ್ನಾಟಕ ಪಾರದರ್ಶಕದ ಸಾರ್ವಜನಿಕ ಸಂಗ್ರಹಣೆ ನಿಯಮ 1999 ಹಾಗೂ ಅಧಿನಿಯಮ 2000 ರ ರೀತ್ಯಾ ಯಾವುದೇ ಒಡಂಬಡಿಕೆ ಅವಧಿ 1 (ಒಂದು) ವರ್ಷಕ್ಕೆ ಸೀಮಿತವಾಗಿರಬೇಕು.<br>ಸರ್ಕಾರದ ಆದೇಶ 2003 ರಲ್ಲಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ 4(ಜಿ) ವಿನಾಯಿತಿ ನೀಡಲಾಗಿದೆ. ಸದರಿ ವಿನಾಯಿತಿಯು ಕೇವಲ 1 ವರ್ಷದ ಅವಧಿಗೆ ಮಾತ್ರ ಸೀಮಿತವಾಗಿದೆ. 4(ಜಿ) ವಿನಾಯಿತಿಯನ್ನು ಸರ್ಕಾರದಿಂದ ಪ್ರತಿ ವರ್ಷ ಪಡೆಯಬೇಕಾಗಿರುತ್ತದೆ. ಆದರೆ 2003 ರ ಸಾಲಿಗೆ ಸರ್ಕಾರದಿಂದ ಕೆ.ಟಿ.ಪಿ.ಪಿ ಕಾಯಿದೆ-2000 ರ ಕಲಂ 4(ಜಿ) ವಿನಾಯಿತಿ ಪಡೆದಿರುವುದನ್ನು ಪರಿಗಣಿಸಿ 2016-17 ನೇ ಸಾಲಿಗೂ ವಿನಾಯಿತಿಯನ್ನು ಮುಂದುವರೆಸಿಕೊಂಡು ಬಂದಿರುವುದು ಆಕ್ಷೇಪಾರ್ಹವಾಗಿದೆ.<br>ಪ್ರಶ್ನೆ ಪತ್ರಿಕೆ ಮುದ್ರಣ ಕಾರ್ಯವೂ ಗೌಪ್ಯ ಎಂದು ಷರಾ ಬರೆದು M/S Quick Fix Printers ಮಣಿಪಾಲರವರಿಗೆ ಕಾರ್ಯದೇಶ ನೀಡಿರುವ ಕ್ರಮ ಗೌಪ್ಯತೆಯನ್ನು ಕಾಪಾಡುವಲ್ಲಿ ಸಂಸ್ಥೆಯು ವಿಫಲವಾಗಿದೆ. ಅದರ ಸಾಧಕ ಬಾದಕಗಳಿಗೂ ಸಹ ಸಂಸ್ಥೆಯೇ ಜವಾಬ್ದಾರಿಯಾಗಿರುತ್ತದೆ. ಈ ಕಾರ್ಯಕ್ಕೆ ಅಗತ್ಯವಿರುವ 4(ಜಿ) ವಿನಾಯಿತಿಯನ್ನು ಇನ್ನು ಮುಂದೆ ಪ್ರತಿ ವರ್ಷ ಪಡೆದುಕೊಂಡು, ಲೆಕ್ಕಪರಿಶೋಧನೆಗೆ ಹಾಜರುಪಡಿಸುವವರೆಗೂ ರೂ.39,11,415/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. | |
| 66 | <u>ಸರ್ಕಾರದ ಆದೇಶ ಉಲ್ಲಂಘನೆ ಮಾಡಿ ಹೊರ ಸಂಸ್ಥೆಗಳಿಂದ ಅಂಕಪಟ್ಟಿ/ ಪದವಿ ಪ್ರಮಾಣ ಪತ್ರಗಳನ್ನು ಮುದ್ರಿಸಿ ಹಣ ಪಾವತಿಸಿರುವ ಬಗ್ಗೆ</u><br>2016-17ನೇ ಸಾಲಿನಲ್ಲಿ ಈ ಹಿಂದೆ ಮಂಗಳೂರು ವಿಶ್ವವಿದ್ಯಾನಿಲಯದ ಕರಾರು ಒಪ್ಪಂದವನ್ನು ಮಾಡಿಕೊಂಡಿದ್ದ ಮೆ॥ ಮದ್ದಾಲ ಇಂಡಸ್ಟ್ರೀಸ್ ಗುಂಟೂರು ರವರಿಂದಲೇ ಅಂಕಪಟ್ಟಿ/ ಪದವಿ ಪ್ರಮಾಣ ಪತ್ರಗಳನ್ನು ಮುದ್ರಣ ಮಾಡಿಸಿ ಹಣ ಪಾವತಿಸಲಾಗಿದೆ.<br>ಕರಾರು ಒಪ್ಪಂದವನ್ನು ಕೆ.ಟಿ.ಪಿ.ಪಿ ಕಾಯ್ದೆ 1999 ನಿಯಮಗಳು 2000 ರ ಪ್ರಕಾರ ಕರಾರು ಪತ್ರ ಒಂದು ವರ್ಷದವರೆವಿಗೆ ಮಾತ್ರ ಚಾಲ್ತಿಯಲ್ಲಿರುತ್ತದೆ. ಆದರೆ, ಕಾಯ್ದೆ ನಿಯಮಗಳನ್ನು ಉಲ್ಲಂಘಿಸಿ ಅವೈಜ್ಞಾನಿಕವಾಗಿ ದಿ;07.05.2015 ರಿಂದ 5 ವರ್ಷಗಳವರೆವಿಗೆ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕರಾರು ಒಪ್ಪಂದ ಮಾಡಿಕೊಂಡಿರುವ ಕ್ರಮ ಅಸ್ವಾಭಾವಿಕ ಪ್ರಕ್ರಿಯೆ ಆಗಿರುತ್ತದೆ.<br>ತದನಂತರ ಸರ್ಕಾರದಿಂದದಿ;29.09.2016 ಕ್ಕೆ ಆದೇಶ ಸಂಖ್ಯೆ:ಇಡಿ/386/ಯು.ಎನ್.ಇ/2016 ರಲ್ಲಿಅಂಕಪಟ್ಟಿ/ ಪದವಿ ಪ್ರಮಾಣ ಪತ್ರಗಳನ್ನು ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಸಂಸ್ಥೆಯಿಂದ ಮುದ್ರಿಸಲು ಸೂಚನೆ ನೀಡಲಾಗಿದೆ.<br>ಅದಾಗ್ಯೂ ಸಹ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ 2016-17 ರ ಅಂತ್ಯದವರೆವಿಗಿನ ಎಲ್ಲಾ ಪರೀಕ್ಷೆಗಳ ಅಂಕಪಟ್ಟಿ/ ಪದವಿ ಪ್ರಮಾಣ ಪತ್ರ ಮುದ್ರಣವನ್ನು ಮೆ॥ ಮದ್ದಾಲ ಇಂಡಸ್ಟ್ರೀಸ್ ಗುಂಟೂರುರವರಿಂದಲೇ ಕರಾರು ಒಪ್ಪಂದ 5 ವರ್ಷಗಳಿಗೆ ಮಾಡಿಕೊಂಡಿರುವು ದರಿಂದ ಎಂದು ಷರಾ ಬರೆದು ಮತ್ತು ಸರ್ಕಾರಕ್ಕೆ ಪುನಃ ಸ್ಪಷ್ಟೀಕರಣ ಕೋರಿ ಪತ್ರ ಬರೆಯಲಾಗಿದೆ. ಮೆ॥ ಮದ್ದಾಲ ಇಂಡಸ್ಟ್ರೀಸ್ ಗುಂಟೂರು ರವರಿಂದಲೇ ಮುದ್ರಣ ಮಾಡಿಸಿ ಹಣ ಪಾವತಿಸಲಾಗಿದೆ.<br>ಇದು ಸರ್ಕಾರಿ ಆದೇಶದ ಸ್ಪಷ್ಟ ಉಲ್ಲಂಘನೆ ಆಗಿದ್ದು ಸೂಕ್ತ ಸಮಜಾಯಿಷಿ ನೀಡಲು ಕೋರಿ ಲೆಕ್ಕತಪಾಸಣಾ ವಿಚಾರಣಾ ಪತ್ರ ಸಂಖ್ಯೆ; 184 ದಿ:07.02.2019 ರಂದು ಜಾರಿ ಮಾಡಲಾಗಿದ್ದು, ಇದಕ್ಕೆ ಅನುಸರಣಾ ವರದಿ ನೀಡಿದ್ದು, ಸರ್ಕಾರಿ ಆದೇಶ ಜಾರಿಯಾದ ದಿನಾಂಕದಲ್ಲಿ ಅತಿ ಸಮೀಪದಲ್ಲಿ ಪರೀಕ್ಷಾ ಕಾರ್ಯಗಳು ನಡೆಸಬೇಕಾದ್ದರಿಂದ ಈ ಆದೇಶವನ್ನು ತಕ್ಷಣ ಪಾಲಿಸಲು ಸಾಧ್ಯವಾಗಿರುವುದಿಲ್ಲ ಎಂದು ಉತ್ತರಿಸಲಾಗಿದೆ. ಈ ಬಗ್ಗೆ ನಿಯಮಗಳಿಗೆ ವಿರುದ್ಧವಾಗಿ ಹಾಗೂ ಸರ್ಕಾರದ ನಿರ್ದೇಶನವನ್ನು ಪಾಲಿಸದೆ ಮುಂದಿನ ಪರೀಕ್ಷೆಗಳಿಗೆ ಅಂಕಪಟ್ಟಿಯನ್ನು ಮೆ॥ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಸಂಸ್ಥೆಯಿಂದ ಮುದ್ರಿಸಲು ಕ್ರಮಕೈಗೊಳ್ಳುವುದು. ಇಲ್ಲದಿದ್ದಲ್ಲಿ ಈ ಬಗ್ಗೆ ಆಡಳಿತಾತ್ಮಕವಾಗಿ ಪರಿಶೀಲಿಸಿ, ಅಧಿಕಾರಿ/ ಸಿಬ್ಬಂದಿಗಳ ವಿರುದ್ಧ ಸೂಕ್ತ ಕ್ರಮ ಜರುಗಿಸಲು ಸೂಚಿಸಿದೆ. | ಮೆ॥ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಸಂಸ್ಥೆಯಿಂದ ಮುದ್ರಣ ಕಾರ್ಯ ನಿರ್ವಹಿಸುವ ಬಗ್ಗೆ ಈಗಾಗಲೇ ಕ್ರಮ ವಹಿಸಲಾಗಿದೆ. |
| 67 | <u>ಹಾಸ್ಟೆಲ್ ವಿಭಾಗ</u><br><u>ಆರ್ಥಿಕ ಪರಿಸ್ಥಿತಿ :</u><br>ಪುರುಷ/ ಮಹಿಳೆಯರ ವಸತಿನಿಲಯ, ಮಂಗಳೂರು, ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯ, ಮಂಗಳೂರು, ಪುರುಷ/ ಮಹಿಳೆಯರ ವಸತಿ ನಿಲಯ, ಮಡಿಕೇರಿ ಹಾಗೂ ಪುರುಷರ ವಸತಿ ನಿಲಯ ಚಿಕ್ಕಳುವಾರ ಇಲ್ಲಿನ ವಸತಿ ನಿಲಯಗಳ ಆರ್ಥಿಕ ಪರಿಸ್ಥಿತಿಯನ್ನು ಪರಿಶೀಲಿಸಲಾಗಿದ್ದು ವಿವರಗಳನ್ನು <u>ಅನುಬಂಧ-32 ರಲ್ಲಿ</u> ವರದಿಗೆ ಲಗತ್ತಿಸಿದೆ. ಅನುಬಂಧದಲ್ಲಿ ವಿವರಿಸಿರುವಂತೆ ಕೆಳಕಂಡ ವಸತಿ ನಿಲಯಗಳಲ್ಲಿ ನಗದು ವಹಿಯನ್ನು ಕರ್ನಾಟಕ ಆರ್ಥಿಕ ಸಂಹಿತೆಯಲ್ಲಿ ಸೂಚಿಸಿರುವ ಪ್ರಕಾರ ನಿರ್ವಹಿಸಿರುವುದಿಲ್ಲ. ಈ ಬಗ್ಗೆ ನಿಲಯಪಾಲಕರ ಮೇಲೆ ಆಡಳಿತ್ಮಾಕ ಕ್ರಮ ಕೈಗೊಳ್ಳುವಂತೆ ಸೂಚಿಸಿದೆ. | |

| | |
|---|---|
| 1 | Canara Bank<br>ಮಹಿಳೆಯರ ವಸತಿ ನಿಲಯ ಮಡಿಕೇರಿ |
| 2 | Canara Bank<br>ಪುರುಷರ ವಸತಿ ನಿಲಯ ಚಿಕ್ಕಳುವಾರು |
| 3 | ಪುರುಷರ ವಸತಿ ನಿಲಯ ಮಡಿಕೇರಿ |

ನಗದು ವಹಿಯನ್ನು ನಿರ್ವಹಿಸಲಾಗುತ್ತಿದೆ. ಮುಂದಿನ ಲೆಕ್ಕತಪಾಸಣೆ ವೇಳೆ ಹಾಜರು ಪಡಿಸಲಾಗುವುದು.

68

ನಗದು ಶಿಲ್ಕಿನ ಪರಿಶೀಲನೆ :

ಮಂಗಳೂರು ವಿಶ್ವವಿದ್ಯಾನಿಲಯದ ಅಧೀನಕ್ಕೊಳಪಡುವ ವಸತಿನಿಲಯಗಳ 2016-17ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ನಗದು ಪುಸ್ತಕವನ್ನು ಪರಿಶೀಲಿಸಲಾಗಿ ನಗದು ರೂಪದಲ್ಲಿರುವ ಶಿಲ್ಕು ಈ ಕೆಳಗಿನಂತಿವೆ ಈ ಮೊತ್ತವು ಭೌತಿಕವಾಗಿ ತಾಳೆಯಾಗಿರುತ್ತದೆ.

| ಕ್ರ.ಸಂ | ವಸತಿ ನಿಲಯಗಳ ಹೆಸರು | ಲೆಕ್ಕಪರಿಶೋಧನೆ ಪ್ರಾರಂಭದ ದಿನಾಂಕ | ನಗದು ಶಿಲ್ಕು |
|---|---|---|---|
| 1 | ಮಹಿಳೆಯರ ವಸತಿ ನಿಲಯ | 17.01.2019 | 35,888 |
| 2 | ಪುರುಷರ ವಸತಿ ನಿಲಯ | 01.02.2019 | 2,293 |
| 3 | ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯ | 29.01.2019 | 23,778 |

ಸಾಮಾನ್ಯ ಮಾಹಿತಿ

69

ಮಂಗಳೂರು ವಿಶ್ವವಿದ್ಯಾನಿಲಯದ ವಸತಿ ನಿಲಯಗಳಿಗೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ವಿವರಗಳು :

ಮಂಗಳೂರು ವಿಶ್ವವಿದ್ಯಾನಿಲಯದ ಅಧೀನಕ್ಕೊಳಪಡುವ ವಸತಿ ನಿಲಯಗಳಿಗೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಂದ ವಸೂಲಾತಿ ಮಾಡಿದ ಪ್ರವೇಶಾತಿ ಶುಲ್ಕ ಹಾಗೂ ಬಾಕಿ ಇರುವ ಪ್ರವೇಶಾತಿ ಶುಲ್ಕದ ವರ್ಗವಾರು ವಿವರಗಳನ್ನು ಅನುಬಂಧ-33 ರಲ್ಲಿ ವರದಿಗೆ ಲಗತ್ತಿಸಿದೆ. ಬಾಕಿ ವಸೂಲಾಗಬೇಕಾದ ಪ್ರವೇಶಾತಿ ಶುಲ್ಕ ರೂ.20,03,100/- ಗಳಾಗಿದ್ದು ಸಂಬಂಧಿಸಿದವರಿಂದ ವಸೂಲಿಸಿ ವಿಶ್ವವಿದ್ಯಾನಿಲಯದ ಖಾತೆಗೆ ಜಮೆ ಮಾಡಿ ವಿವರಗಳನ್ನು ಲೆಕ್ಕತಪಾಸಣೆಗೆ ಹಾಜರುಪಡಿಸಲು ಸೂಚಿಸಿದೆ.

ವಿದ್ಯಾರ್ಥಿಗಳಿಂದ ಪ್ರವೇಶಾತಿ ಶುಲ್ಕ ವಸೂಲು ಮಾಡುವ ಕ್ರಮ ಇರುವುದಿಲ್ಲ. ಆದರೆ ಭದ್ರತಾ ಶುಲ್ಕವನ್ನು ಪಡೆಯಲಾಗುತ್ತಿದ್ದು ಸದ್ರಿ ವಿದ್ಯಾರ್ಥಿಗಳು ವಿದ್ಯಾಭ್ಯಾಸವನ್ನು ಮುಗಿಸಿ ಮರಳುವಾಗ ಹಿಂತಿರುಗಿಸಲಾಗುತ್ತಿದೆ. ಎಲ್ಲವೂ ಬ್ಯಾಂಕ್ ಮೂಲಕ ವ್ಯವಹರಿಸಲಾಗುತ್ತಿದೆ. ಆದುದರಿಂದ ಆಕ್ಷೇಪಣೆಯನ್ನು ಕೈ ಬಿಡಲು ಕೋರಲಾಗಿದೆ.

70

ವಸತಿ ನಿಲಯಗಳಲ್ಲಿ ಹೂಡಿಕೆ ಮಾಡಲಾಗಿರುವ ನಿಶ್ಚಿತ ಠೇವಣಿಗಳ ಬಗ್ಗೆ :

2016-17ನೇ ಸಾಲಿನ ಮಂಗಳೂರು ವಿಶ್ವವಿದ್ಯಾನಿಲಯದ ಅಧೀನಕ್ಕೊಳಪಡುವ ವಸತಿನಿಲಯಗಳಲ್ಲಿ ಹೂಡಿಕೆ ಮಾಡಿರುವ ದಾಖಲೆಗಳನ್ನು ಒದಗಿಸುವ ಸಂಬಂಧವಾಗಿ ವಿಚಾರಣಾ ಪತ್ರ ಸಂಖ್ಯೆ:142/18-19 ದಿ:30.01.2019 ರಲ್ಲಿ ನೀಡಲಾಗಿ, ಹಾಜರುಪಡಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ, ಇಲ್ಲಿನ ನಿಶ್ಚಿತ ಠೇವಣಿಗಳನ್ನು ನಿಲಯಪಾಲಕರ ಹೆಸರಿನಲ್ಲಿ ಹೂಡಿಕೆ ಮಾಡಲಾಗಿದೆ. ಅವುಗಳನ್ನು ವಿವಿಧ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ, ಸಹಕಾರಿ ಬ್ಯಾಂಕುಗಳಲ್ಲಿ, ಖಾಸಗಿ ಹಣಕಾಸು ಸಂಸ್ಥೆಗಳಲ್ಲಿ ಹೂಡಿಕೆ ಮಾಡಲಾಗಿದೆ. ವಾಸ್ತವವಾಗಿ ವಿಶ್ವವಿದ್ಯಾನಿಲಯದ ಹಣಕಾಸು ಅಧಿಕಾರಿಗಳ ಹೆಸರಿನಲ್ಲಿ ಹೂಡಿಕೆ ಮಾಡಬೇಕಿರುತ್ತದೆ. ಪ್ರತ್ಯೇಕವಾಗಿ ಹೂಡಿಕೆ ಮಾಡಿರುವುದಕ್ಕೆ ವಿಶ್ವವಿದ್ಯಾನಿಲಯದಿಂದ ಅನುಮತಿಯನ್ನು ಪಡೆದಿರುವುದಿಲ್ಲ. ವಿವರಗಳನ್ನು ಅನುಬಂಧ-34 ರಲ್ಲಿ ವಿವರಿಸಲಾಗಿದ್ದು ವರದಿಗೆ ಲಗತ್ತಿಸಿದೆ.

ಈ ಹೂಡಿಕೆಗಳಲ್ಲಿ ಅತಿ ಹೆಚ್ಚಿನ ಬಡ್ಡಿ ನೀಡುವ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಹೂಡಿಕೆ ಮಾಡದ ಕಾರಣ ರೂ.56,095/-ಗಳ ಬಡ್ಡಿ ನಷ್ಟವಾಗಿರುತ್ತದೆ. ಆದ್ದರಿಂದ ರೂ.56,095/-ಗಳನ್ನು ಕಡಿಮೆ ಬಡ್ಡಿ ನೀಡುವ ಬ್ಯಾಂಕುಗಳಲ್ಲಿ ಹೂಡಿಕೆ ಮಾಡಲು ಕಾರಣರಾದವರಿಂದ ವಸೂಲಾತಿಗೆ ಸೂಚಿಸಿದೆ.

ಮಂಗಳೂರು ವಿಶ್ವವಿದ್ಯಾನಿಲಯದ ಅಧೀನಕ್ಕೊಳಪಡುವ ವಸತಿನಿಲಯಗಳಲ್ಲಿ ವಿದ್ಯಾರ್ಥಿಗಳು ದಾಖಲಾಗುವ ಸಮಯದಲ್ಲಿ ಅರ್ಜಿ ಶುಲ್ಕ, ನೋಂದಣಿ ಶುಲ್ಕ, ಕೊಠಡಿ ಬಾಡಿಗೆ, ನಿರ್ವಹಣಾ ಶುಲ್ಕ, ಪ್ರವೇಶ ಶುಲ್ಕ, ವಸ್ತು ಸವಕಳಿ ಶುಲ್ಕ, ಕ್ರೀಡೆ ಮತ್ತು ವಾಚನಾಲಯ ಶುಲ್ಕ, ಸಾಂಸ್ಕೃತಿಕ ಚಟುವಟಿಕೆಗಳ ಶುಲ್ಕ, ನೀರಿನ ಶುಲ್ಕ, ವೈದ್ಯಕೀಯ ಶುಲ್ಕ ಮತ್ತು ಹಿಂದಿರುಗಿಸಲಾಗುವ ಭದ್ರತಾ ಠೇವಣಿ ಗಳನ್ನು ಪಡೆಯಲಾಗುತ್ತದೆ. ಇದರಲ್ಲಿ ಕೊಠಡಿ ಬಾಡಿಗೆಯನ್ನು ವಿಶ್ವವಿದ್ಯಾನಿಲಯಕ್ಕೆ ಪಾವತಿಸಲಾಗುತ್ತದೆ. ಭದ್ರತಾ ಠೇವಣಿಯನ್ನು ವಿದ್ಯಾರ್ಥಿಗಳು ವಸತಿನಿಲಯದಿಂದ ಮರಳಿ ಹೋಗುವ ವೇಳೆ ಹಿಂದಿರುಗಿಸಲಾಗುತ್ತದೆ. ಉಳಿದಂತೆ ಎಲ್ಲಾ ಶುಲ್ಕಗಳು ವಸತಿನಿಲಯದ ನಿಧಿಯಲ್ಲಿ ಜಮಾವಣೆಗೊಂಡಿರುತ್ತದೆ.

ವಸತಿನಿಲಯದ ನಿಧಿಯಲ್ಲಿ ಜಮಾವಣೆಗೊಂಡ ಮೊತ್ತದಲ್ಲಿ ಪ್ರಥಮ ತಿಂಗಳ ವಿದ್ಯಾರ್ಥಿಗಳ ಊಟೋಪಚಾರದ ಶುಲ್ಕ ಮತ್ತು ನಿರ್ವಹಣಾ ಶುಲ್ಕವನ್ನು ಭರಿಸಲಾಗುತ್ತದೆ. ತದನಂತರ ತಿಂಗಳ ಊಟೋಪಚಾರದ ಖರ್ಚನ್ನು ಸಮನಾಗಿ

| | | |
|---|---|---|
| | ಮಾಹೆವಾರು ಠೇವಣಿಗಳ ವಿವರ ಹಾಗೂ ಅತ್ಯಂತ ಹೆಚ್ಚಿನ ಬಡ್ಡಿದರ ನೀಡಿರುವ ಠೇವಣಿ ಮೊತ್ತಗಳಿಗೆ ತುಲನಾತ್ಮಕ ಪಟ್ಟಿ ತಯಾರಿಸಿ ಅನುಬಂಧ-35 ರಲ್ಲಿ ಲಗತ್ತಿಸಲಾಗಿದೆ. ಈ ಬಗ್ಗೆ ಸಂಬಂಧಿಸಿದವರಿಂದ ಆಗಿರುವ ಆರ್ಥಿಕ ನಷ್ಟಕ್ಕೆ ಹೊಣೆ ನಿಗದಿಪಡಿಸಿ ಆಡಳಿತಾತ್ಮಕ ಕ್ರಮ ತೆಗೆದುಕೊಳ್ಳಲು ಸೂಚಿಸಿದೆ.<br>ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ: DPE/30/ARU/2010 ದಿನಾಂಕ:19.06.2012 ಮತ್ತು ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: FD/38/TAR/2018 ದಿ:27.08.2018 ರ ಕ್ರ.ಸಂ 4 ರ (i) ರಲ್ಲಿ ನಿರ್ದೇಶಿಸಿರುವಂತೆ ಹೂಡಿಕೆ ಮಾಡುವಾಗ ನಿಧಿಯ ಸಂರಕ್ಷಣೆಗೆ ಮೊದಲ ಆದ್ಯತೆ ನೀಡಬೇಕಿರುತ್ತದೆ. ಹಾಗೂ ಆದೇಶ ಸಂಖ್ಯೆ: FDS/TAR/2017 ದಿ:30.01.2017 ರ ಆದೇಶದನ್ವಯ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿಯೇ ಹೂಡಿಕೆ ಮಾಡಬೇಕಿರುತ್ತದೆ. ಈ ಆದೇಶಗಳನ್ನು ಉಲ್ಲಂಘಿಸಿ ಹೂಡಿಕೆ ಮಾಡಿರುವುದನ್ನು ತಡೆಹಿಡಿದು ಇನ್ನು ಮುಂದೆ ವಿಶ್ವವಿದ್ಯಾನಿಲಯದ ಹಣಕಾಸು ಅಧಿಕಾರಿಗಳ ಸಮನ್ವಯದೊಂದಿಗೆ ರಚಿಸಲು ಸೂಚಿಸಿದಂತೆ ಇನ್ವೆಸ್ಟ್‌ಮೆಂಟ್ ಕಮಿಟಿಯನ್ನು ರಚಿಸಿ ಅದರ ಅನುಮೋದನೆ ಮೇರೆಗೆ ರಾಷ್ಟ್ರೀಕೃತ ಬ್ಯಾಂಕುಗಳಿಂದ ದರಪಟ್ಟಿ ಅಥವಾ ಒಚುಟ ಮೂಲಕ ಬಡ್ಡಿ ದರಗಳನ್ನು ಆಹ್ವಾನಿಸಿ ಹೂಡಿಕೆ ಮಾಡಲು ತಿಳಿಸಿದೆ. | ಹಂಚಿ ಖರ್ಚನ್ನು ವಿದ್ಯಾರ್ಥಿಗಳಿಂದ ವಸತಿನಿಲಯದ ನಿಧಿಗೆ ಮರುಭರಿಸಿ ಕೊಳ್ಳಲಾಗುತ್ತದೆ.<br>ಪ್ರತಿ ತಿಂಗಳ ಊಟೋಪಚಾರದ ಖರ್ಚು(ವಿದ್ಯುತ್ ಶುಲ್ಕ, ನಿರ್ವಹಣಾ ಶುಲ್ಕ ಮತ್ತು ಊಟೋಪಚಾರದ ಶುಲ್ಕ)ನಲ್ಲಿ ನಿರ್ವಹಣಾ ಶುಲ್ಕವನ್ನು ವಸತಿನಿಲಯದ ಸಿಬ್ಬಂದಿ (ಕಚೇರಿ ಸಿಬ್ಬಂದಿ, ಭದ್ರತಾ ಸಿಬ್ಬಂದಿ, ಸ್ವಚ್ಛತಾ ಸಿಬ್ಬಂದಿ, ಗಾರ್ಡನರ್ ಮತ್ತು ಅಡುಗೆ ಸಿಬ್ಬಂದಿ)ಗಳ ವೇತನ, ದಿನನಿತ್ಯದ ನಿರ್ವಹಣಾ ಖರ್ಚುಗಳನ್ನು ಭರಿಸಲಾ ಗುತ್ತದೆ.<br>ಸದ್ರಿ ಮೊತ್ತದಲ್ಲಿ ವಸತಿನಿಲಯದ ನಿರ್ವಹಣಾ ಖರ್ಚನ್ನು ಕಳೆದು ಉಳಿದ ಮೊತ್ತ ಮತ್ತು ವಿದ್ಯಾರ್ಥಿಗಳ ಹಿಂದಿರುಗಿಸಲಾಗುವ ಭದ್ರತಾ ಠೇವಣಿಯನ್ನು ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಮತ್ತು ಕೆಲವು ಸಲ ಹೆಚ್ಚಿಗೆ ಬಡ್ಡಿ ನೀಡುವ ಮಂಗಳೂರು ವಿಶ್ವವಿದ್ಯಾನಿಲಯದ ನೌಕರರ ಪತ್ತಿನ ಸಹಕಾರಿ ಸಂಘ(ರಿ)ದಲ್ಲಿಯೂ ನಿಶ್ಚಿತ ಠೇವಣಿ ಇಡಲಾಗುತ್ತದೆ.<br>ವಸತಿನಿಲಯದ ವಿದ್ಯಾರ್ಥಿಗಳು ಪಾವತಿಸಿದ ಪ್ರತಿಯೊಂದು ಮೊತ್ತಗಳು ವಸತಿನಿಲಯದ ನಿಧಿಯಲ್ಲಿ ಜಮಾವಣೆಯಾಗುವುದರಿಂದ ನಿಲಯಪಾಲಕರ ಹೆಸರಿನಲ್ಲಿ ಯೇ ನಿಶ್ಚಿತ ಠೇವಣಿಯನ್ನು ಹೂಡಿಕೆ ಮಾಡಲಾಗುತ್ತಿದೆ. ಈ ವ್ಯವಸ್ಥೆಯು ಮೊದಲಿ ನಿಂದಲೂ ನಡೆದು ಬಂದುದಾಗಿದೆ. ಆದುದರಿಂದ ಹಣಕಾಸು ಅಧಿಕಾರಿಗಳ ಹೆಸರಲ್ಲಿ ಠೇವಣಿ ಇಟ್ಟಿರುವುದಿಲ್ಲ. ಈ ವಿಷಯವನ್ನು ವಿಶ್ವವಿದ್ಯಾನಿಲಯದ ಅಧಿಕಾರಿ ವರ್ಗದ ವರಲ್ಲಿ ಚರ್ಚಿಸಲಾಗಿದೆ.<br>ಇನ್ನು ಮುಂದಕ್ಕೆ ವಿಶ್ವವಿದ್ಯಾನಿಲಯದ ಅಧಿಕಾರಿಗಳ ಸಮನ್ವಯದೊಂದಿಗೆ ಅನುಮೋದನೆ ಮೇರೆಗೆ ರಾಷ್ಟ್ರೀಕೃತ ಬ್ಯಾಂಕುಗಳಿಂದ ದರಪಟ್ಟಿ ಮತ್ತು ಬಡ್ಡಿ ದರಗಳನ್ನು ಆಹ್ವಾನಿಸಿ ಹೂಡಿಕೆ ಮಾಡಲಾಗುವುದು. |
| 71 | <u>ವಸತಿ ನಿಲಯಗಳಲ್ಲಿ ಪ್ರವೇಶಾತಿ ಪಡೆದಿರುವ ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳಿಗೆ ನೀಡಲಾಗಿರುವ ಶುಲ್ಕ ವಿನಾಯಿತಿ ಮತ್ತು ಅಧಿಕ ಭೋಜನ ವೆಚ್ಚವನ್ನು ಸರ್ಕಾರದಿಂದ ಮರುಭರಿಕೆ ಮಾಡಿಕೊಳ್ಳದಿರುವುದು :</u><br>ಮಂಗಳೂರು ವಿಶ್ವವಿದ್ಯಾನಿಲಯದ ಅಧೀನಕ್ಕೊಳಪಡುವ ಮಹಿಳೆಯರ ವಸತಿ ನಿಲಯ, ಮಂಗಳೂರು, ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯ, ಮಂಗಳೂರು, ಪುರುಷರ ವಸತಿ ನಿಲಯ, ಮಂಗಳೂರು, ಪುರುಷ/ ಮಹಿಳೆಯರ ವಸತಿ ನಿಲಯ, ಮಡಿಕೇರಿ, ಪುರುಷರ/ ಮಹಿಳೆಯರ ವಸತಿ ನಿಲಯ, ಚಿಕ್ಕಳುವಾರ ಇಲ್ಲಿನ ವಸತಿ ನಿಲಯಗಳಿಗೆ ಪ್ರವೇಶಾತಿ ಪಡೆದಿರುವ ಎಸ್.ಸಿ/ ಎಸ್.ಟಿ ವಿದ್ಯಾರ್ಥಿಗಳಿಗೆ ಪ್ರವೇಶಾತಿ ಶುಲ್ಕದಲ್ಲಿ ವಿನಾಯಿತಿ ನೀಡಲು ಹಾಗೂ ಅಧಿಕ ಭೋಜನ ವೆಚ್ಚ ಭರಿಸಲು ವಿಶ್ವವಿದ್ಯಾನಿಲಯದ ವತಿಯಿಂದ ಮಂಜೂರು ಮಾಡಲಾಗಿದ್ದು ಸದರಿ ವೆಚ್ಚವು ಸರ್ಕಾರದಿಂದ ವಿಶ್ವವಿದ್ಯಾನಿಲಯಕ್ಕೆ ಮರುಭರಿಕೆಯಾಗಬೇಕಾಗಿರುತ್ತದೆ. ಮರುಭರಿಕೆ ಮಾಡಿಕೊಂಡಿರುವ ವ್ಯವಹಾರಗಳ ಬಗ್ಗೆ ಲೆಕ್ಕಪತ್ರ ದಾಖಲೆಗಳನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:131/ ದಿ:25.01.2019 ರಂದು ಜಾರಿ ಮಾಡಲಾಗಿದ್ದು, ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ವಿಶ್ವವಿದ್ಯಾನಿಲಯದಿಂದ ವೆಚ್ಚವಾಗಿರುವ ಮೊತ್ತದ ವಿವರಗಳು ಈ ಕೆಳಗಿನಂತಿದ್ದು ಈ ಮೊತ್ತವನ್ನು ಶೀಘ್ರವಾಗಿ ಸರ್ಕಾರದಿಂದ ಮರುಭರಿಕೆ ಮಾಡಿಕೊಳ್ಳಲು ಸೂಕ್ತ ಕ್ರಮ ವಹಿಸುವಂತೆ ಸೂಚಿಸಿದೆ. ಹಾಗೂ ಮರುಭರಿಕೆ ಮಾಡಿಕೊಂಡ ವಿವರಗಳನ್ನು ಮುಂದಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಸೂಚಿಸಿದೆ. | ಮಹಿಳಾ ವಿದ್ಯಾರ್ಥಿನಿ ನಿಲಯಕ್ಕೆ ಪ್ರವೇಶಾತಿ ಪಡೆದಿರುವ SC/ST ವಿದ್ಯಾರ್ಥಿಗಳಲ್ಲಿ ಶುಲ್ಕ ವಿನಾಯಿತಿಯನ್ನು ಪಡೆದ ವಿದ್ಯಾರ್ಥಿನಿಯರು ಸರ್ಕಾರದ (ಸಮಾಜ ಕಲ್ಯಾಣ ಇಲಾಖೆ)ಯ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸುವುದು ಕಡ್ಡಾಯವಾಗಿದ್ದು, ಸಮಾಜ ಕಲ್ಯಾಣ ಇಲಾಖೆಯಿಂದ ಮಂಜೂರಾಗುವ ವಿದ್ಯಾರ್ಥಿ ವೇತನದ ಮೊತ್ತ ಸೇರಿರುವ ಹಾಸ್ಟೆಲ್ ನಿರ್ವಹಣಾ ಮೊತ್ತವನ್ನು ವಿಶ್ವವಿದ್ಯಾನಿಲಯದ ಸಾಮಾನ್ಯ ನಿಧಿಗೆ ವರ್ಗಾಯಿಸಿ ವಿವಿಯಿಂದ ಭರಿಸಲಾದ ಶುಲ್ಕ ವಿನಾಯಿತಿಯನ್ನು ಮರುಭರಿಸಿಕೊಳ್ಳಲಾಗುತ್ತದೆ. |

| | | |
|---|---|---|
| | <table><tr><th>ಕ್ರ.ಸಂ</th><th>ವಸತಿ ನಿಲಯಗಳ ಹೆಸರು</th><th>ಮೊತ್ತ</th></tr><tr><td>1</td><td>ಮಹಿಳೆಯರ ವಸತಿ ನಿಲಯ</td><td>30,26,970</td></tr><tr><td>2</td><td>ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯ</td><td>8,90,532</td></tr><tr><td>3</td><td>ಮಹಿಳೆಯರ ವಸತಿ ನಿಲಯ, ಚಿಕ್ಕಳುವಾರ</td><td>3,50,000</td></tr><tr><td>4</td><td>ಪುರುಷರ ವಸತಿ ನಿಲಯ</td><td>47,42,800</td></tr><tr><td>5</td><td>ಪುರುಷರ ವಸತಿ ನಿಲಯ, ಚಿಕ್ಕಳುವಾರ</td><td>1,53,000</td></tr></table> | ಮಹಿಳಾ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿನಿಯರ ಊಟೋಪಚಾರದ ಎಲ್ಲಾ ವೆಚ್ಚವನ್ನು ವಿವಿ ವತಿಯಿಂದಲೇ ಭರಿಸಲಾಗುತ್ತಿದೆ. ಸಮಾಜ ಕಲ್ಯಾಣ ಇಲಾಖೆಯಿಂದ ಮಂಜೂರಾಗುವ ವಿದ್ಯಾರ್ಥಿ ವೇತನದ ಮೊತ್ತದಲ್ಲಿ ಸೇರಿರುವ ಹಾಸ್ಟೆಲ್ ನಿರ್ವಹಣಾ ಮೊತ್ತಕ್ಕಿಂತ ಹೆಚ್ಚುವರಿ ಆದ ವೆಚ್ಚವನ್ನು ವಿವಿಯ ಲೆಕ್ಕ ಶೀರ್ಷಿಕೆ 1434 ಪರಿಶಿಷ್ಟ ಜಾತಿ/ಪಂಗಡದ ವಿದ್ಯಾರ್ಥಿಗಳ ಕ್ಷೇಮಾಭ್ಯುದಯ ನಿಧಿಯಿಂದ ಭರಿಸಲು ಪರಿನಿಯಮದಲ್ಲಿ ಅವಕಾಶವಿರುವುದರಿಂದ ಭರಿಸಲಾಗುತ್ತಿದೆ. ಆದಾಗ್ಯೂ ಸಮಾಜ ಕಲ್ಯಾಣ ಇಲಾಖೆಯವರಿಗೆ ದಿನಾಂಕ 2.07.2018ರಂದು ಪತ್ರ ಬರೆಯಲಾಗಿದೆ. ಆಕ್ಷೇಪಣೆಯನ್ನು ಕೈ ಬಿಡಲು ಕೋರಿದೆ. |
| 72 | <u>ಟೆಂಡರ್ ಪ್ರಕ್ರಿಯೆ ಕೈಗೊಳ್ಳದೆ ಮೆಸ್ ಬಿಲ್ಲನ್ನು ಪಾವತಿಸಿರುವುದು :</u><br>ಪುರುಷರ ವಸತಿ ನಿಲಯ, ಮಡಿಕೇರಿ, ಮಹಿಳಾ ವಸತಿ ನಿಲಯ ಚಿಕ್ಕಳುವಾರ ಮತ್ತು ಮಡಿಕೇರಿ ಇಲ್ಲಿ ಮೆಸ್ ವೆಚ್ಚಕ್ಕೆ ಸಂಬಂಧಪಟ್ಟಂತೆ ನೇರವಾಗಿ ಕಂಟ್ರಾಕ್ಟರ್‌ಗಳಿಗೆ/ವಿದ್ಯಾರ್ಥಿಗಳ ಮೆಸ್ ಬಿಲ್ಲನ್ನು ಪಾವತಿಸಲಾಗಿರುವುದನ್ನು 2016-17ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ.<br>ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಮತ್ತು ಪಾರದರ್ಶಕ ಕಾಯ್ದೆ 2000 ರ ನಿಯಮ 4 ರನ್ವಯ ಹಾಗೂ ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ: ಲೋಇ/513/ಆಕೋ3/2001 ದಿನಾಂಕ:19.11.2001 ಹಾಗೂ ಆದೇಶ ಸಂಖ್ಯೆ: ಸಿಆಸು/ಇ2/ಇ.ಸಂಗ್ರ /2009 ದಿನಾಂಕ:09.10.2012 ರಲ್ಲಿ ಸೂಚಿಸಿರುವಂತೆ ಯಾವುದೇ ಸರಕು ಖರೀದಿ ಅಥವಾ ಸೇವೆ ಪಡೆಯುವ ಸಂದರ್ಭದಲ್ಲಿ ರೂ.1,00,000/-ಗಳಿಗೆ ಮೀರಿದ ಮೊತ್ತದ ಪ್ರಕ್ರಿಯೆಗೆ ಟೆಂಡರ್ ತೆರೆಯಬೇಕಾಗಿರುತ್ತದೆ. ಹಾಗೂ ರೂ.5,00,000/- ಮೀರಿದ ಖರೀದಿ ಪ್ರಕ್ರಿಯೆಗೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಬೇಕಾಗಿರುತ್ತದೆ. ವಸತಿ ನಿಲಯಗಳ ವಾರ್ಷಿಕ ಮೆಸ್ ವೆಚ್ಚವು ರೂ.1,00,000 ಮೀರಿರುವುದರಿಂದ ಟೆಂಡರ್ ಕೈಗೊಳ್ಳಬೇಕಾಗಿದ್ದು, ಈ ಸಂಬಂಧ ಟೆಂಡರ್ ಪ್ರಕ್ರಿಯೆ ಕಡತಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:191/2018-19 ದಿ:12.02.2019 ರಂದು ಜಾರಿ ಮಾಡಲಾಗಿತ್ತು. ಆದರೆ ಯಾವುದೇ ಕಡತಗಳನ್ನು ಹಾಜರುಪಡಿಸಿರುವುದಿಲ್ಲ. ವಸತಿ ನಿಲಯಗಳಲ್ಲಿ ಟೆಂಡರ್ ಕರೆಯದೇ ನೇರವಾಗಿ ಕಂಟ್ರಾಕ್ಟರ್‌ಗಳಿಗೆ ಮೆಸ್ ಬಿಲ್ಲನ್ನು ಪಾವತಿಸಲಾಗಿದೆ. ವೆಚ್ಚ ರೂ.11,77,084/-ಗಳು ಪಾರದರ್ಶಕ ಅಧಿನಿಯಮ/ನಿಯಮಗಳಿಗೆ ವಿರುದ್ಧವಾದ ವೆಚ್ಚವಾಗಿರುವುದರಿಂದ ಆಕ್ಷೇಪಣೆಯಲ್ಲಿಡಲಾಗಿದೆ, ವಿವರಗಳನ್ನು <u>ಅನುಬಂಧ-36 ರಲ್ಲಿ</u> ವರದಿಗೆ ಲಗತ್ತಿಸಿದೆ. | ಹಾಸ್ಟೆಲ್‌ನಲ್ಲಿ ವಾಸ್ತವ್ಯವಿರುವ ವಿದ್ಯಾರ್ಥಿಗಳಿಗೆ ವ್ಯಯಿಸಲಾಗುವ ಮೆಸ್ ವೆಚ್ಚವನ್ನು ವಿಂಗಡಣಾ ಪದ್ಧತಿಯಲ್ಲಿ ವಿದ್ಯಾರ್ಥಿಗಳಿಂದ ವಸೂಲು ಮಾಡಲಾಗುತ್ತಿದ್ದು ಸದ್ರಿ ಮೊತ್ತವನ್ನು ವಿದ್ಯಾರ್ಥಿಗಳೇ ಪ್ರಾಂಶುಪಾಲರು/ನಿಲಯಪಾಲಕರ ಹೆಸರಲ್ಲಿರುವ ಬ್ಯಾಂಕ್ ಖಾತೆಗೆ ಜಮೆ ಮಾಡುತ್ತಾರೆ. ಯಾವುದೇ ನಗದು ವ್ಯವಹಾರ ಇರುವುದಿಲ್ಲ. ವಿದ್ಯಾರ್ಥಿಗಳ ಅಭಿರುಚಿಗೆ ತಕ್ಕಂತೆ ವ್ಯವಸ್ಥೆ ಮಾಡಲಾಗುತ್ತಿರುವುದರಿಂದ ಈ ಖರೀದಿಗಳನ್ನು ಟೆಂಡರ್ ಮೂಲಕ ನಿರ್ವಹಿಸುವುದು ಕಷ್ಟಸಾಧ್ಯವೆಂದು ಅವಗಾಹನೆಗೆ ತರುತ್ತಾ ಆಕ್ಷೇಪಣೆಯನ್ನು ಕೈ ಬಿಡಲು ಕೋರಲಾಗಿದೆ. |
| 73 | <u>ವಿದ್ಯಾರ್ಥಿಗಳಿಂದ ಸ್ವೀಕರಿಸಿದ ಬಾಡಿಗೆ ಮೊತ್ತವನ್ನು ವಿಶ್ವವಿದ್ಯಾನಿಲಯದ ನಿಧಿಗೆ ಜಮಾ ಮಾಡದಿರುವುದು:</u><br>2016-17ನೇ ಸಾಲಿನ ಮಂಗಳೂರು ವಿಶ್ವವಿದ್ಯಾನಿಲಯದ ಪುರುಷರ ವಸತಿ ನಿಲಯ, ಮಂಗಳೂರು ಇಲ್ಲಿಗೆ ಸ್ನಾತಕೋತ್ತರ ವಿದ್ಯಾರ್ಥಿಗಳು ಮತ್ತು ಸಂಶೋಧನಾ ವಿದ್ಯಾರ್ಥಿಗಳನ್ನು ಪ್ರವೇಶಾತಿ ಮಾಡಿಕೊಳ್ಳಲಾಗಿದೆ. ಸ್ನಾತಕೋತ್ತರ ವಿದ್ಯಾರ್ಥಿಗಳಿಂದ ವಾರ್ಷಿಕವಾಗಿ ಹಾಗೂ ಸಂಶೋಧನಾ ವಿದ್ಯಾರ್ಥಿಗಳಿಂದ ಮಾಸಿಕವಾಗಿ ಕೊಠಡಿ ಬಾಡಿಗೆಯನ್ನು ಪಡೆಯಲಾಗುತ್ತಿದೆ. ಈ ಹಣವನ್ನು 48 ಗಂಟೆಗಳೊಳಗೆ ಸಂಬಂಧಿಸಿದ ಲೆಕ್ಕ ಖಾತೆಗೆ ಜಮೆಗೊಳಿಸಬೇಕು. ಇದರ ವಿವರ/ದಾಖಲೆಗಳನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ: 165/2018-19 ದಿ:02.02.2019 ರಂದು ಜಾರಿ ಮಾಡಲಾಗಿ, ಜಮಾ ಮಾಡಲಾದ ವಿವರಗಳನ್ನು ಹಾಜರುಪಡಿಸಿರುವುದಿಲ್ಲ. 2015-16 ಹಾಗೂ 2016-17ನೇ ಸಾಲುಗಳಲ್ಲಿ ವಸೂಲಾಗಿರುವ ಇಂತಹ ಬಾಡಿಗೆ ಮೊತ್ತ ರೂ.25,29,135/-ಗಳು ವಸತಿ ನಿಲಯದ ಖಾತೆಯಲ್ಲಿಯೇ ಉಳಿದಿರುತ್ತದೆ. ಈ ಮೊತ್ತವನ್ನು ಸಕಾಲದಲ್ಲಿ ಹೂಡಿಕೆ ಮಾಡಿದ್ದಲ್ಲಿ ಬಡ್ಡಿ ಆದಾಯ ಲಭ್ಯವಾಗುತ್ತಿತ್ತು. ಈ ನಷ್ಟಕ್ಕೆ ಕಾರಣ ಆಂತರಿಕ ನಿಯಂತ್ರಣ ಇಲ್ಲದಿರುವುದಾಗಿದೆ. ವಿವರಗಳನ್ನು <u>ಅನುಬಂಧ-37 ರಲ್ಲಿ</u> ವರದಿಗೆ ಲಗತ್ತಿಸಿದೆ. ಹಣಕಾಸು ನಿರ್ವಹಣೆಯಲ್ಲಿ ಆಂತರಿಕ ನಿಯಂತ್ರಣ ವ್ಯವಸ್ಥೆ ಇಲ್ಲದ ಕಾರಣ ಇಂತಹ ನ್ಯೂನ್ಯತೆಗಳು ಮರುಕಳಿಸದಂತೆ ಕ್ರಮಬದ್ಧವಾಗಿ ಲೆಕ್ಕ ನಿರ್ವಹಣೆ ಮಾಡಲು ಸೂಚಿಸಿದೆ. | ಸದ್ರಿ ಮೊತ್ತವನ್ನು ದಿನಾಂಕ 18.06.2019 ರಂದು ವಿಶ್ವವಿದ್ಯಾನಿಲಯ ಖಾತೆಗೆ ಜಮೆ ಮಾಡಲಾಗಿದೆ. ಆಕ್ಷೇಪಣೆಯನ್ನು ಕೈ ಬಿಡಲು ಕೋರಲಾಗಿದೆ |

74

<u>ತಾತ್ಕಾಲಿಕ/ ಸಂಚಿತ ವೇತನದಡಿಯಲ್ಲಿ ನೌಕರರನ್ನು ನೇಮಕ ಮಾಡಿಕೊಂಡಿರುವ ಬಗ್ಗೆ :</u>

ಮಹಿಳೆಯರ/ಪುರುಷರ ವಸತಿ ನಿಲಯ ಮತ್ತು ಉದ್ಯೋಗಸ್ಥ ಮಹಿಳೆಯರ ವಸತಿನಿಲಯ, ಮಂಗಳೂರು ಇಲ್ಲಿಗೆ ತಾತ್ಕಾಲಿಕ/ ಸಂಚಿತ ವೇತನದಡಿಯಲ್ಲಿ ನೌಕರರನ್ನು ನೇಮಕ ಮಾಡಿಕೊಂಡು ವಿವಿಧ ಪದನಾಮಗಳಲ್ಲಿ ವೇತನ ಪಾವತಿಸಿರುವುದನ್ನು ಗಮನಿಸಲಾಗಿದೆ. ಈ ರೀತಿ ಕರ್ತವ್ಯ ನಿರ್ವಹಿಸುತ್ತಿರುವವರ ನೇಮಕಾತಿಯು ವಸತಿ ನಿಲಯಗಳಿಗೆ ಮಂಜೂರಾದ ಹುದ್ದೆಗಳಿಗೆ ಎದುರಾಗಿ ನೇಮಕ ಮಾಡಿಕೊಳ್ಳಲಾಗಿದೆಯೇ ಎಂಬುದನ್ನು ತಿಳಿದುಕೊಳ್ಳಲು ನೇಮಕಾತಿ ಪ್ರಕ್ರಿಯೆ ಕಡತಗಳನ್ನು ಹಾಗೂ ಖಾಲಿ ಹುದ್ದೆಗಳಿಗೆ ಎದುರಾಗಿ ಖಾಯಂ ನೌಕರರುಗಳನ್ನು ವಿಶ್ವವಿದ್ಯಾನಿಲಯ ಕಾಯ್ದೆ-2000 ರ ನಿಯಮಗಳು 56 ಮತ್ತು 57 ರನ್ವಯ ನೇಮಕಾತಿ ಪ್ರಕ್ರಿಯೆಗಳಿಗೆ ಕೈಗೊಳ್ಳಲಾಗಿರುವ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾಪತ್ರ ಸಂಖ್ಯೆ:134/2018-19 ದಿ:29.01.2019 ಮತ್ತು 125/2018-19 ದಿ:24.01.2019 ಮತ್ತು 162/2018-19 ದಿ:01.02.2019 ರಂದು ಜಾರಿ ಮಾಡಲಾಗಿ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ <u>ಅನುಬಂಧ-38 ರಲ್ಲಿ</u> ವಿವರಿಸಲಾಗಿರುವಂತೆ ಇವರುಗಳಿಗೆ ಪಾವತಿಸಿರುವ ಒಟ್ಟು ವೇತನ ಮೊತ್ತ ರೂ.53,02,075/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

ವಸತಿನಿಲಯುಗಳಲ್ಲಿ ವರ್ಷಂಪ್ರತಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಿರುವುದರಿಂದ ವಸತಿ ನಿಲಯದ ದೈನಂದಿನ ಕಾರ್ಯಗಳಿಗೆ ನೌಕರರ ಅವಶ್ಯಕತೆ ಇದ್ದುದರಿಂದ ಕಾಲ ಕಾಲಕ್ಕನುಗುಣವಾಗಿ ವಿಶ್ವವಿದ್ಯಾಲಯದ ಅಧಿಕಾರಿಗಳ ಗಮನಕ್ಕೆ ತಂದು ಸಿಬ್ಬಂದಿಗಳ ನೇಮಕಾತಿ ಮಾಡಿ ವೇತನ ಪಾವತಿ ಮಾಡಲಾಗಿದೆ. ಆಕ್ಷೇಪಣೆಯನ್ನು ಕೈ ಬಿಡಲು ಕೋರಲಾಗಿದೆ.

75

<u>ಇ-ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೆ ಕೈಗೊಳ್ಳದೆ ವಸತಿ ನಿಲಯಗಳಿಗೆ ದಿನಸಿ ಪದಾರ್ಥಗಳನ್ನು ಖರೀದಿಸಿರುವುದು:</u>

ಮಂಗಳೂರು ವಿಶ್ವವಿದ್ಯಾನಿಲಯದ ಅಧೀನಕ್ಕೊಳಪಡುವ ಪುರುಷ/ ಮಹಿಳಾ ವಸತಿ ನಿಲಯ, ಮಂಗಳೂರು ಹಾಗೂ ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯಗಳಿಗೆ ಅವಶ್ಯಕವಿರುವ ದಿನಸಿ ಪದಾರ್ಥಗಳನ್ನು ಖರೀದಿಸಿ ಈ ಕೆಳಕಂಡಂತೆ ವೆಚ್ಚ ಭರಿಸಲಾಗಿದೆ.

| ಕ್ರ.ಸಂ | ವಸತಿ ನಿಲಯದ ಹೆಸರು | ಮೊಬಲಗು |
|---|---|---|
| 1 | ಪುರುಷರ ವಸತಿ ನಿಲಯ | 37,76,809 |
| 2 | ಮಹಿಳೆಯರ ವಸತಿ ನಿಲಯ | 28,94,108 |
| 3 | ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯ | 18,80,925 |
| ಒಟ್ಟು | | 85,51,842 |

ಈ ಮೇಲೆ ನಮೂದಿಸಿರುವಂತೆ ವಸತಿ ನಿಲಯಗಳು ದಿನಸಿ ಪದಾರ್ಥಗಳನ್ನು ಖರೀದಿಸಲು ಭರಿಸಿರುವ ವಾರ್ಷಿಕ ವೆಚ್ಚ ರೂ.5 ಲಕ್ಷ ಮೀರಿರುವುದರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಮತ್ತು ಪಾರದರ್ಶಕ ಕಾಯ್ದೆ 2000 ರ ಕಲಂ 4 ರನ್ವಯ ಹಾಗೂ ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ:ಲೋಇ/513/ಆಕೋ3/2001 ದಿ:19.11.2001 ರನ್ವಯ ಹಾಗೂ ಆದೇಶ ಸಂಖ್ಯೆ: ಸಿಆಸು/ಇ2/ಇ-ಸಂಗ್ರ/2009 ದಿ:09.10.2012 ರಲ್ಲಿ ಸೂಚಿಸಿರುವಂತೆ ಯಾವುದೇ ಸರಕು ಖರೀದಿ ಅಥವಾ ಸೇವೆ ಪಡೆಯುವ ಸಂದರ್ಭದಲ್ಲಿ ರೂ.5 ಲಕ್ಷ ಮೀರಿದ ಖರೀದಿ ಪ್ರಕ್ರಿಯೆಗೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯಬೇಕಾಗಿತ್ತು. ಇ-ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೆ ಕೈಗೊಂಡಿರುವ ಕಡತಗಳನ್ನು ಹಾಗೂ ದಾಸ್ತಾನು ಸ್ವೀಕೃತಿ ಮತ್ತು ವಿತರಣಾ ವಹಿಯನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:122/2018-19 ದಿ:24.01.2019 ಮತ್ತು 141/2018-19 ದಿ:30.01.2019, 168/2018-19 ದಿ:04.02.2019 ರಂದು ಜಾರಿ ಮಾಡಲಾಗಿದ್ದು, ಇ-ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೆ ಕೈಗೊಂಡ ಕಡತಗಳನ್ನು ಹಾಗೂ ದಾಸ್ತಾನು ಸ್ವೀಕೃತಿ ಮತ್ತು ವಿತರಣೆ ವಹಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.

ದಿನಸಿ ಪದಾರ್ಥಗಳನ್ನು ಖರೀದಿಸಿದ ನಂತರ ವಸತಿ ನಿಲಯದ ದಾಸ್ತಾನಿಗೆ ತೆಗೆದುಕೊಂಡು ಪ್ರತಿ ದಿನ ಅವಶ್ಯಕವಿರುವಷ್ಟು ದಿನಸಿ ಪದಾರ್ಥಗಳನ್ನು ವಿತರಿಸಿ ವಿತರಣಾ ವಹಿಯಲ್ಲಿ ನಮೂದಿಸಿ ದೃಢೀಕರಿಸಬೇಕಾಗಿರುತ್ತದೆ. ಆದರೆ ವಸತಿ ನಿಲಯದಲ್ಲಿ ದಾಸ್ತಾನು ಮತ್ತು ವಿತರಣಾ ವಹಿಯನ್ನು ನಿರ್ವಹಿಸದಿರುವುದರಿಂದ ನಿಖರವಾಗಿ, ದಿನಸಿ ಪದಾರ್ಥಗಳ ಬಳಕೆಯ ಬಗ್ಗೆ ತಿಳಿಯಲು ಸಾಧ್ಯವಾಗಿರುವುದಿಲ್ಲ. ಕೆ.ಟಿ.ಪಿ.ಪಿ ನಿಯಮಗಳನ್ನು ಪಾಲಿಸುವ ಮೂಲಕ ಇ-ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೆ ಕೈಗೊಳ್ಳದೆ ನೇರವಾಗಿ ಖರೀದಿಸಿರುವುದರಿಂದ ಮತ್ತು ದಾಸ್ತಾನು ವಹಿಯನ್ನು ಸಮರ್ಪಕವಾಗಿ ನಿರ್ವಹಿಸದಿರುವುದರಿಂದ ದಿನಸಿ ಪದಾರ್ಥಗಳನ್ನು ಖರೀದಿಸಿರುವ ಒಟ್ಟು ಮೊತ್ತ ರೂ.85,51,842/-ಗಳನ್ನು ಆಕ್ಷೇಪಣೆಗೆ ಸೂಚಿಸಲಾಗಿದೆ. ವಿವರಗಳನ್ನು <u>ಅನುಬಂಧ-39 ರಲ್ಲಿ</u> ವರದಿಗೆ ಲಗತ್ತಿಸಿದೆ.

ವಸತಿನಿಲಯದ ವಿದ್ಯಾರ್ಥಿಗಳ ಊಟೋಪಚಾರಗಳ ವೆಚ್ಚವನ್ನು ವಿದ್ಯಾರ್ಥಿಗಳೇ ವಿಂಗಡಿಸಿ ಭರಿಸುವುದರಿಂದ ದಿನಸಿ ಪದಾರ್ಥಗಳ ಖರೀದಿಗೆ ಟೆಂಡರ್ ಕರೆದಿರುವುದಿಲ್ಲ. ಆಕ್ಷೇಪಣೆಯನ್ನು ಕೈ ಬಿಡಲು ಕೋರಲಾಗಿದೆ.

76

<u>ಟೆಂಡರ್ ಪ್ರಕ್ರಿಯೆ ಕೈಗೊಳ್ಳದೆ ವಸತಿ ನಿಲಯಗಳಿಗೆ ತರಕಾರಿಗಳನ್ನು ಖರೀದಿಸಿರುವುದು :</u>

ಮಂಗಳೂರು ವಿಶ್ವವಿದ್ಯಾನಿಲಯದ ಅಧೀನಕ್ಕೊಳಪಡುವ ಪುರುಷ/ ಮಹಿಳಾ ವಸತಿ ನಿಲಯ, ಮಂಗಳೂರು ಹಾಗೂ ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯಗಳಿಗೆ ಅವಶ್ಯಕವಿರುವ ತರಕಾರಿಗಳನ್ನು ಖರೀದಿಸಲು ವೆಚ್ಚ ಭರಿಸಿರುವ ವಿವರಗಳನ್ನು ಗಮನಿಸಲಾಗಿದ್ದು, ವಿವರಗಳು ಈ ಕೆಳಕಂಡಂತಿದೆ.

| ಕ್ರ.ಸಂ | ವಸತಿ ನಿಲಯದ ಹೆಸರು | ಮೊಬಲಗು |
|---|---|---|
| 1 | ಪುರುಷರ ವಸತಿ ನಿಲಯ | 11,36,906 |
| 2 | ಮಹಿಳೆಯರ ವಸತಿ ನಿಲಯ | 8,85,595 |
| 3 | ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯ | 7,55,378 |
| ಒಟ್ಟು ರೂ. | | 27,77,879 |

ಈ ಮೇಲೆ ನಮೂದಿಸಿರುವಂತೆ ವಸತಿ ನಿಲಯಗಳು ತರಕಾರಿ ಪದಾರ್ಥಗಳನ್ನು ಖರೀದಿಸಲು ಭರಿಸಿರುವ ವಾರ್ಷಿಕ ವೆಚ್ಚವು ರೂ. 1.00 ಲಕ್ಷಗಳಿಗೆ ಮೀರಿರುವುದರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಮತ್ತು ಪಾರದರ್ಶಕ ಕಾಯ್ದೆ-2000ರ ಕಲಂ 4ರನ್ವಯ ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ ಲೋಇ/513/ಆಕೋ3/2001 ದಿ. 19.11.2011ರಲ್ಲಿ ಸೂಚಿಸಿರುವಂತೆ ರೂ.1.00 ಲಕ್ಷ ಮೀರಿದ ಸರಕು ಖರೀದಿ ಮತ್ತು ಸೇವೆ ಪಡೆಯುವುದಕ್ಕೆ ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ಪ್ರಕ್ರಿಯೆ ಕೈಗೊಳ್ಳಬೇಕಾಗುತ್ತದೆ. ಟೆಂಡರ್ ಪ್ರಕ್ರಿಯೆ ಕೈಗೊಂಡ ಕಡತಗಳನ್ನು ಹಾಗೂ ದಾಸ್ತಾನು ವಹಿಯನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ 123/2018-19 ದಿನಾಂಕ 24.01.2019, 143/2018-19,30.01.2019 ಮತ್ತು 167/2018-19 ದಿ.04.02.2019ರಂದು ಜಾರಿ ಮಾಡಲಾಗಿ ಯಾವುದೇ ಟೆಂಡರ್ ಪ್ರಕ್ರಿಯೆ ಕಡತಗಳನ್ನು ಹಾಗೂ ದಾಸ್ತಾನು ವಹಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.

ತರಕಾರಿಗಳನ್ನು ಖರೀದಿಸಿದ ನಂತರ ವಸತಿ ನಿಲಯದ ವಹಿಯಲ್ಲಿ ದಾಸ್ತಾನಿಗೆ ತೆಗೆದುಕೊಂಡು ಪ್ರತಿ ದಿನ ಅವಶ್ಯಕವಿರುವಷ್ಟು ತರಕಾರಿ ಪದಾರ್ಥಗಳನ್ನು ವಿತರಿಸಿ ವಿತರಣಾ ವಹಿಯಲ್ಲಿ ನಮೂದಿಸಿ ದೃಢೀಕರಿಸಬೇಕಾಗಿರುತ್ತದೆ. ಆದರೆ ವಸತಿ ನಿಲಯದಲ್ಲಿ ದಾಸ್ತಾನು ವಹಿಯನ್ನು ನಿರ್ವಹಿಸದಿರುವುದರಿಂದ ನಿಖರವಾಗಿ ತರಕಾರಿ ಪದಾರ್ಥಗಳ ಬಳಕೆಯ ಬಗ್ಗೆ ತಿಳಿಯಲು ಸಾಧ್ಯವಾಗಿರುವುದಿಲ್ಲ. ಕೆ.ಟಿ.ಪಿ.ಪಿ ನಿಯಮಗಳನ್ನು ಪಾಲಿಸಿ ಟೆಂಡರ್ ಪ್ರಕ್ರಿಯೆ ಕೈಗೊಳ್ಳದೆ ಖರೀದಿಸಿರುವುದರಿಂದ ಹಾಗೂ ದಾಸ್ತಾನು ವಹಿಯನ್ನು ನಿರ್ವಹಿಸದಿರುವುದರಿಂದ ತರಕಾರಿಗಳನ್ನು ಖರೀದಿಸಲು ಭರಿಸಿರುವ ಒಟ್ಟು ಮೊತ್ತ ರೂ.27,77,879/-ಗಳನ್ನು ಆಕ್ಷೇಪಣೆಗೆ ಸೂಚಿಸಲಾಗಿದೆ. ವಿವರಗಳನ್ನು <u>ಅನುಬಂಧ-40 ರಲ್ಲಿ</u> ವರದಿಗೆ ಲಗತ್ತಿಸಿದೆ.

ವಸತಿನಿಲಯದ ವಿದ್ಯಾರ್ಥಿಗಳ ಉಟೋಪಚಾರಗಳ ವೆಚ್ಚವನ್ನು ವಿದ್ಯಾರ್ಥಿಗಳೇ ವಿಂಗಡಿಸಿ ಭರಿಸುವುದರಿಂದ ದಿನಸಿ ಪದಾರ್ಥಗಳ ಖರೀದಿಗೆ ಟೆಂಡರ್ ಕರೆದಿರುವುದಿಲ್ಲ. ಆಕ್ಷೇಪಣೆಯನ್ನು ಕೈ ಬಿಡಲು ಕೋರಲಾಗಿದೆ.

77

## <u>ದೂರ ಶಿಕ್ಷಣ ಕೇಂದ್ರ (Distance Learning Centre)</u>

<u>ಆರ್ಥಿಕ ಪರಿಸ್ಥಿತಿ ವಿವರ:</u>

2016-17ನೇ ಸಾಲಿನ ಮಂಗಳೂರು ವಿಶ್ವವಿದ್ಯಾನಿಲಯದ ಅಧೀನಕ್ಕೆ ಒಳಪಟ್ಟಿರುವ ದೂರ ಶಿಕ್ಷಣ ಕೇಂದ್ರದಲ್ಲಿ ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ ದಾಖಲೆಗಳನ್ವಯ ನಿರ್ದೇಶಕರು, ದೂರಶಿಕ್ಷಣ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ ರವರ ಹೆಸರಿನಲ್ಲಿ ಆರ್ಥಿಕ ವಹಿವಾಟನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮಂಗಳಗಂಗೋತ್ರಿ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು ಈ ಬ್ಯಾಂಕಿನ ಖಾತೆ ಸಂಖ್ಯೆ: 30772744765 ರಲ್ಲಿ ನಿರ್ವಹಿಸುತ್ತಿದ್ದು, 2016-17ನೇ ಸಾಲಿನ ಆರ್ಥಿಕ ಪರಿಸ್ಥಿತಿ ವಿವರ ಈ ಕೆಳಕಂಡಂತಿದೆ.

| | | | |
|---|---|---|---|
| | | | |

| ದಿನಾಂಕ:01.04.2016 ರಂತೆ ಪ್ರಾರಂಭಿಕ ಶಿಲ್ಕು | 11,502 |
|---|---|
| (+) 2016-17 ಬ್ಯಾಂಕ್ ಬಡ್ಡಿ ಸೇರಿ ಸ್ವೀಕೃತಿಯಾದ ಮೊತ್ತ | 3,65,326 |
| ಒಟ್ಟು ಮೊತ್ತ ರೂ. | 3,76,828 |
| (-) 2016-17ನೇ ಸಾಲಿನಲ್ಲಿ ಪಾವತಿಸಲಾದ ಒಟ್ಟು ಮೊತ್ತ | 3,22,164 |
| ದಿನಾಂಕ:31.03.2017 ರಂತೆ ಅಂತಿಮ ಶಿಲ್ಕು | 54,664 |

ದಿನಾಂಕ: 31.03.2017 ರ ಅಂತ್ಯಕ್ಕೆ ನಗದು ಪುಸ್ತಕದ ಅಂತಿಮ ಶಿಲ್ಕು ಹಾಗೂ ಬ್ಯಾಂಕ್ ಪಾಸ್ ಬುಕ್‌ನ ಅಂತಿಮ ಶಿಲ್ಕು ತಾಳೆಯಾಗಿರುತ್ತದೆ.

ಸಾಮಾನ್ಯ ಮಾಹಿತಿ

78

ವಿದ್ಯಾರ್ಥಿಗಳ ಪ್ರವೇಶಾತಿ ಹಾಗೂ ಪ್ರವೇಶ ಶುಲ್ಕದ ವಸೂಲಾತಿ ವಿವರಗಳ ಕುರಿತಂತೆ :

2016-17ನೇ ಶೈಕ್ಷಣಿಕ ಸಾಲಿನಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ದೂರ ಶಿಕ್ಷಣ ಕೇಂದ್ರದಲ್ಲಿ ವಿವಿಧ ಸ್ನಾತಕ ಹಾಗೂ ಸ್ನಾತಕೋತ್ತರ ಕೋರ್ಸುಗಳಿಗೆ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳ ಬೋಧನಾ ಶುಲ್ಕದ ಜೊತೆ ಇನ್ನಿತರ ಶುಲ್ಕಗಳ ವಿವರಗಳ ಮೂಲ ಚಲನ್‌ಗಳು ಹಾಗೂ ಪ್ರವೇಶಾತಿ ವಹಿಯೊಂದಿಗೆ ಪರಿಶೀಲಿಸಲಾಗಿದ್ದು. ವಿವಿಧ ಸ್ನಾತಕ ಹಾಗೂ ಸ್ನಾತಕೋತ್ತರ ಕೋರ್ಸುಗಳಿಗೆ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳ ವಿವರ ಈ ಕೆಳಕಂಡಂತಿದೆ.

ಮಂಗಳೂರು ವಿಶ್ವವಿದ್ಯಾನಿಲಯ, ದೂರ ಶಿಕ್ಷಣ ಕೇಂದ್ರ, ಮಂಗಳೂರು

2016-17ನೇ ಸಾಲಿನಲ್ಲಿ ಸ್ನಾತಕ ಹಾಗೂ ಸ್ನಾತಕೋತ್ತರ ಕೋರ್ಸ್‌ಗಳಿಗೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ವಿಷಯವಾರು

(**Subject wise**) ವಿವರ

**COURSEWISE/ CENTRE WISE STUDENT STRENGTH 2016-17**

| Sl.No | Course | Student Strength | | | | |
|---|---|---|---|---|---|---|
| | | CDE, MG | UCM | FMKMC | GFGU | TOTAL |
| 1 | I B.A | 195 | 178 | 71 | 64 | 508 |
| 2 | II B.A | 278 | -- | 2 | -- | 280 |
| 3 | III B.A | 147 | -- | -- | -- | 147 |
| 4 | I B.COM | 75 | 112 | 10 | 37 | 234 |
| 5 | II B.COM | 172 | -- | 1 | -- | 173 |
| 6 | III B.COM | 171 | -- | 2 | -- | 173 |
| 7 | I BBA | 14 | 22 | 3 | 9 | 48 |
| 8 | II BBA | 39 | -- | 1 | -- | 40 |
| 9 | III BBA | 27 | -- | -- | -- | 27 |
| 10 | I M.A ECONOMICS | 62 | 37 | 22 | 24 | 145 |
| 11 | II M.A ECONOMICS | 98 | -- | -- | -- | 98 |
| 12 | I M.A ENGLISH | 90 | 52 | 13 | 26 | 181 |
| 13 | II M.A ENGLISH | 107 | -- | -- | -- | 107 |
| 14 | I M.A HISTORY | 32 | 27 | 9 | 6 | 74 |
| 15 | II M.A HISTORY | 47 | -- | -- | -- | 47 |
| 16 | I M.A KANNADA | 51 | 40 | 18 | 21 | 130 |
| 17 | II M.A KANNADA | 89 | -- | -- | -- | 89 |

2016-17ನೇ ಸಾಲಿನಲ್ಲಿ ವಿದ್ಯಾರ್ಥಿಗಳಿಂದ ಸ್ವೀಕರಿಸಲಾಗಿರುವ ಶುಲ್ಕದ ವಿವರಗಳು 640 ಪುಟಗಳಲ್ಲಿ ಲಭ್ಯವಿದ್ದು ಒಟ್ಟು 240.53 ಲಕ್ಷ ಸ್ವೀಕೃತಿಯಾಗಿದೆ. ಇದರಲ್ಲಿ ಪ್ರವೇಶಾತಿ ಶುಲ್ಕದ ರೂ. 215.34ಲಕ್ಷ ಕೂಡಾ ಸೇರ್ಪಡೆಯಾಗಿರುತ್ತದೆ. ಸದ್ರಿ ವಿವರಗಳನ್ನು ಮುಂದಿನ ಲೆಕ್ಕ ತಪಾಸಣಾ ಸಮಯದಲ್ಲಿ ಹಾಜರು ಪಡಿಸಲಾಗುವುದು.

| | | | | | | |
|---|---|---|---|---|---|---|
| 18 | I M.A POLITICAL SCIENCE | 18 | 18 | 8 | 7 | 51 |
| 19 | II M.A POLITICAL SCIENCE | 27 | -- | -- | -- | 27 |
| 20 | I M.A SOCIOLOGY | 30 | 14 | 3 | 10 | 57 |
| 21 | I M.A SOCIOLOGY | 34 | -- | -- | -- | 34 |
| 22 | I M.COM | 302 | 286 | 80 | 177 | 845 |
| 23 | II M.COM | 695 | -- | -- | -- | 695 |
| 24 | II MBA | 12 | -- | -- | -- | 12 |
| 25 | II M.A HINDI | 26 | -- | -- | -- | 12 |
| **TOTAL** | | **2838** | **786** | **243** | **381** | **4248** |

ಮುಂದುವರಿದಂತೆ, ಮೇಲ್ಕಂಡ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳಿಂದ ವಿಶ್ವವಿದ್ಯಾನಿಲಯವು ನಿಗದಿಪಡಿಸಿರುವ ಪ್ರವೇಶ ಶುಲ್ಕ ಹಾಗೂ ಇನ್ನಿತರ ಶುಲ್ಕಗಳ ರೂಪದಲ್ಲಿ ವಸೂಲಾತಿ ಮಾಡಿರುವ ಹಾಗೂ ಬಾಕಿ ಉಳಿದಿರುವ ಪ್ರವೇಶಾತಿ ಶುಲ್ಕದ ವಿವರ (ಡಿ.ಸಿ.ಬಿ) ಈ ಕೆಳಗಿನಂತಿದೆ :

<u>2016-17ನೇ ಸಾಲಿನ ದೂರಶಿಕ್ಷಣ ಕೇಂದ್ರದ ಪ್ರವೇಶಾತಿ ಶುಲ್ಕದ ವಿವರ **(DCB STATEMENT)**</u>

| ಕ್ರ,ಸಂ | ಕೋರ್ಸ್ | ಬೇಡಿಕೆ | ವಸೂಲಾತಿ | ಬಾಕಿ | ಷರಾ |
|---|---|---|---|---|---|
| 1 | B.A | 25,19,400 | 25,19,400 | - | |
| 2 | B.COM | 17,10,300 | 17,10,300 | - | |
| 3 | BBA | 3,75,500 | 3,75,500 | - | |
| 4 | MA ECONOMICS | 15,78,700 | 15,78,700 | - | |
| 5 | MA ENGLISH | 18,80,200 | 18,80,200 | - | |
| 6 | MA HISTORY | 7,87,900 | 7,87,900 | - | |
| 7 | MA KANNADA | 14,22,100 | 14,22,100 | - | |
| 8 | MA POLITICAL SCIENCE | 5,11,200 | 5,11,200 | - | |
| 9 | MA SOCIOLOGY | 5,93,900 | 5,93,900 | - | |
| 10 | M.COM | 99,31,000 | 99,31,000 | - | |
| 11 | MBA (TOURISM) | 70,800 | 70,800 | - | Second year admission |
| 12 | MA HINDI | 1,53,400 | 1,53,400 | - | |
| ಒಟ್ಟು ಮೊತ್ತ ರೂ. | | 2,15,34,400 | 2,15,34,400 | - | |

2015-16ನೇ ಸಾಲಿನಲ್ಲಿ ಪ್ರವೇಶಾತಿ ಪಡೆದ ವಿದ್ಯಾರ್ಥಿ/ವಿದ್ಯಾರ್ಥಿನಿಯರು ದ್ವಿತೀಯ ವರ್ಷಕ್ಕೆ ಪ್ರವೇಶಾತಿ ಪಡೆದಿರುತ್ತಾರೆ.

2016-17ನೇ ಸಾಲಿನಲ್ಲಿ ಪ್ರವೇಶಾತಿ ಪಡೆದವರು ಚಲನ್ ಮೂಲಕ ವಿಶ್ವವಿದ್ಯಾನಿಲಯದ ಸಂಬಂಧಪಟ್ಟ ಖಾತೆಗೆ ಜಮೆ ಮಾಡಿ, ಪ್ರವೇಶಾತಿ ವಹಿಯಲ್ಲಿ ಚಲನ್ ನಂಬರ್, ಸ್ವೀಕೃತಿ ಮೊತ್ತಗಳನ್ನು ದಾಖಲಿಸಿ ಸಂಬಂಧಪಟ್ಟ ನಿರ್ದೇಶಕರು ದೃಢೀಕರಿಸಿ ಸದರಿ ಮೊತ್ತ ಜಮೆ ಮಾಡಿರುವ ವಿವರಗಳ ಮೊತ್ತಕ್ಕೆ ಹಣಕಾಸು ಅಧಿಕಾರಿಗಳಿಂದ ದೃಢೀಕರಣಗೊಳಿಸಬೇಕಿರುತ್ತದೆ. ಆ ದೃಢೀಕರಣ ಪತ್ರವನ್ನು ಅಥವಾ ಜಿ.ಆರ್.ಎ ಖಾತೆಗೆ ಜಮೆ ಮಾಡಿರುವ ವಿವರಗಳ ಬ್ಯಾಂಕ್ ಸ್ಕ್ರೋಲ್ ಅನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಜಿ.ಆರ್.ಎ ಖಾತೆಗೆ ಜಮೆಯಾಗಿರುವ ಬಗ್ಗೆ ಪರಿಶೀಲಿಸಲು ಸಾಧ್ಯವಾಗದಿರುವುದರಿಂದ ಕಛೇರಿ ಮುಖ್ಯಸ್ಥರು ಸೂಕ್ತ ಕ್ರಮ ಕೈಗೊಂಡು ಹಣಕಾಸು ಅಧಿಕಾರಿಗಳಿಂದ ಜಮೆಯಾಗಿರುವ ಬಗ್ಗೆ ದೃಢೀಕರಣವನ್ನು ಪಡೆದು ಮುಂದಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಸೂಚಿಸಿದೆ. ಆ ವರವಿಗೆ ರೂ. 2,15,34,400 ಆಕ್ಷೇಪಣೆಗೆ ಸೂಚಿಸಲಾಗಿದೆ.

| | | |
|---|---|---|
| 79 | <u>ಅಧ್ಯಯನ ಸಾಮಾಗ್ರಿ (**Study Material**) ಗಳ ಬೈಂಡಿಂಗ್ ಹಾಗೂ ಜೆರಾಕ್ಸ್‌ನ ಟೆಂಡರ್ ಕಡತವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು :</u><br>ದೂರ ಶಿಕ್ಷಣ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ 2016-17ನೇ ಸಾಲಿನಲ್ಲಿ ವಿವಿಧ ಸ್ನಾತಕ ಹಾಗೂ ಸ್ನಾತಕೋತ್ತರ ಕೋರ್ಸ್‌ಗಳಿಗೆ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳಿಗೆ ವಿತರಣೆಯಾಗುವ ಅಧ್ಯಯನ ಸಾಮಾಗ್ರಿಗಳನ್ನು ವಿಶ್ವವಿದ್ಯಾನಿಲಯವು ಸಂಬಂಧಪಟ್ಟ ಕೋರ್ಸ್‌ನ ಒಂದು ಮೂಲ ಪ್ರತಿಯನ್ನು ಪ್ರವೇಶ ಪಡೆದ ವಿದ್ಯಾರ್ಥಿಗಳ ಸಂಖ್ಯೆಗಳಿಗನುಗುಣವಾಗಿ ಜೆರಾಕ್ಸ್ ಮಾಡಿಸಿ ನಂತರ ಬೈಂಡ್ ಮಾಡಿಸಿ ವಿದ್ಯಾರ್ಥಿಗಳಿಗೆ ವಿತರಿಸಲಾಗುತ್ತದೆ. ಈ ಜೆರಾಕ್ಸ್ ಮತ್ತು ಬೈಂಡಿಂಗ್ ಕಾರ್ಯಕ್ಕೆ ಸಂಬಂಧಿಸಿದಂತೆ ದೂರ ಶಿಕ್ಷಣ ಕೇಂದ್ರವು ಸದರಿ ಸಾಲಿನಲ್ಲಿ ಸುಮಾರು 17,37,437/- ಲಕ್ಷ ರೂಪಾಯಿಗಳನ್ನು ವಿನಿಯೋಗಿಸಿರುವುದು ಲೆಕ್ಕಪರಿಶೋಧನೆಯಲ್ಲಿ ಕಂಡು ಬಂದಿರುತ್ತದೆ.<br>ಆದ್ದರಿಂದ ಅಧ್ಯಯನ ಸಾಮಾಗ್ರಿಗಳ ಬೈಂಡಿಂಗ್ ಹಾಗೂ ಜೆರಾಕ್ಸ್ ಕಾರ್ಯದ ನಿಮಿತ್ತ ಕರೆದಿರುವ ಟೆಂಡರ್ ಪ್ರಕ್ರಿಯೆ ಕಡತವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:33/2018-19/ ದಿ:03.12.2018 ರಂದು ಜಾರಿ ಮಾಡಲಾಗಿತ್ತು. ವಿಚಾರಣೆ ಪತ್ರದಲ್ಲಿ ಕೋರಿರುವ ಯಾವುದೇ ದಾಖಲೆ/ಕಡತಗಳನ್ನು ಹಾಜರುಪಡಿಸಿರುವುದಿಲ್ಲ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999 (ಕೆ.ಟಿ.ಪಿ.ಪಿ) ಹಾಗೂ ತಿದ್ದುಪಡಿ ನಿಯಮ 2001 ರ ಉಪನಿಯಮ 4(ಜ) ಮತ್ತು 4(ಜ) (ಜ) ಹಾಗೂ ಸರ್ಕಾರದ ಇತ್ತೀಚಿನ ಅಧಿಸೂಚನೆ ಸಂಖ್ಯೆ: ಸಿಆಸುಇ/2/ಇಸಂಗ್ರ/2009 ದಿನಾಂಕ:09.10.2012 ರಲ್ಲಿ ವಿವರಿಸಿರುವಂತೆ, ರೂ.5 ಲಕ್ಷ ಮೌಲ್ಯಗಳಿಗೆ ಮೀರಿದ ಪ್ರತಿಯೊಂದು ಸಂಗ್ರಹಣೆ/ ಸೇವೆಯ ಸಂಬಂಧದಲ್ಲಿ ಎಲ್ಲಾ ಸಂಸ್ಥೆಗಳು/ ಇಲಾಖೆಗಳು 2012 ರ ಡಿಸೆಂಬರ್ 3ನೇ ದಿನಾಂಕದಿಂದ ಜಾರಿಗೆ ಬರುವಂತೆ ವಿದ್ಯುನ್ಮಾನ ಸಂಗ್ರಹಣಾ ವೇದಿಕೆ (ಇ-ಪ್ರೊಕ್ಯೂರ್‌ಮೆಂಟ್) ಮುಖಾಂತರ ಟೆಂಡರ್ ಕರೆದು ತಮ್ಮ ಸೇವೆಯನ್ನು ಪೂರೈಸಿಕೊಳ್ಳಬೇಕೆಂದು ನಿರ್ದಿಷ್ಟಪಡಿಸಿದೆ. ಆದರೆ, ಇಲ್ಲಿ ಇ-ಟೆಂಡರ್ ಕರೆಯದೇ ನೇರವಾಗಿ ದರಪಟ್ಟಿಯ ಮೂಲಕ ಗುತ್ತಿಗೆದಾರರನ್ನು ನೇಮಿಸಿಕೊಂಡು ಕೆಲಸದ ಆದೇಶವನ್ನು ನೀಡಿರುವುದು ಕೆ.ಟಿ.ಪಿ.ಪಿ ನಿಯಮದ ಉಲ್ಲಂಘನೆಯಾಗಿರುವುದರಿಂದ ಜೆರಾಕ್ಸ್ ಹಾಗೂ ಬೈಂಡಿಂಗ್ ಕಾರ್ಯಕ್ಕೆ ಪಾವತಿಸಲಾದ ವೆಚ್ಚ ಒಟ್ಟು ಮೊತ್ತ ರೂ.17,37,437/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರವನ್ನು <u>ಅನುಬಂಧ-41 ರಲ್ಲಿ</u> ಒದಗಿಸಲಾಗಿದೆ. | 2015-16 ಹಾಗೂ 2016-17ನೇ ಸಾಲಿನಲ್ಲಿ ದೂರ ಶಿಕ್ಷಣ ಕೇಂದ್ರದ ಅಧ್ಯಯನ ಸಾಮಾಗ್ರಿಗಳ ಜೆರಾಕ್ಸ್ ಗೆ ಸಂಬಂಧಿಸಿದಂತೆ ಶೈಕ್ಷಣಿಕ ವರ್ಷದಲ್ಲಿ ಅಗತ್ಯತೆಗೆ ಅನುಸಾರವಾಗಿ ಅಧ್ಯಯನ ಸಾಮಾಗ್ರಿಗಳನ್ನು ಜೆರಾಕ್ಸ್ ಮಾಡಬೇಕಾಗಿದ್ದು ಇದಕ್ಕೆ ಸಂಬಂಧಿಸಿದಂತೆ ಅರ್ಹ ಸಂಸ್ಥೆಗಳಿಂದ ದರಪಟ್ಟಿಗಳನ್ನು ಆಹ್ವಾನಿಸಲಾಗಿದ್ದು ಪ್ರತಿ ಪುಟದ ಜೆರಾಕ್ಸ್‌ಗೆ ರೂ. 0.32ರಂತೆ ಕನಿಷ್ಟ ದರ ನಮೂದಿಸಿದ ಸಂಸ್ಥೆ ಮೆ.ಶ್ಯಾಮ್ ಜೆರಾಕ್ಸ್ ಇವರನ್ನು ಅನುಮೋದಿಸಿದ್ದು ಸದ್ರಿ ಸಂಸ್ಥೆಯವರಿಂದ ಕಾಲ ಕಾಲಕ್ಕೆ ಅಗತ್ಯತೆಗೆ ಅನುಗುಣವಾಗಿ ಜೆರಾಕ್ಸ್ ಮಾಡಿಸಲಾಗಿದೆ. ಬೈಂಡಿಂಗ್ ಕಾರ್ಯಕ್ಕೂ ದರಪಟ್ಟಿ ಆಹ್ವಾನಿಸಲಾಗಿದ್ದು ಅತೀ ಕನಿಷ್ಠ ದರ ನಮೂದಿಸಿದ ಮೆ. ಪ್ರಿಂಟ್ ಶಾಪ್ ಮಂಗಳೂರು ಇವರಿಂದ ಅಗತ್ಯತೆಗೆ ಅನುಸಾರವಾಗಿ ಬೈಂಡಿಂಗ್ ಕೆಲಸವನ್ನು ನಿರ್ವಹಿಸಲಾಗಿದೆ. ರೂ. 1392637.00 ಮೊತ್ತವು ಇಡೀ ವರ್ಷದಲ್ಲಿ ಆಗಿರುವ ವೆಚ್ಚವಾಗಿದ್ದು, ಒಂದೇ ಸಲ ಮಾಡಿದ ವೆಚ್ಚವಾಗಿರುವುದಿಲ್ಲ. ಎರಡೂ ದರಪಟ್ಟಿಗಳು ಮಾರ್ಕೆಟ್ ದರಗಳಲ್ಲಿ ಕನಿಷ್ಟವಾಗಿದೆ. ಮುಂದೆ ಈ ಪ್ರಕ್ರಿಯೆಯನ್ನು ಇ ಟೆಂಡರ್ ಮೂಲಕ ನಿರ್ವಹಿಸಲಾಗುವುದು. ಆದುದರಿಂದ ಆಕ್ಷೇಪಣೆಯನ್ನು ಕೈ ಬಿಡಲು ಕೋರಿದೆ. |
| 80 | <u>ದರಪಟ್ಟಿ/ ಟೆಂಡರ್ ಪ್ರಕ್ರಿಯೆ ಕೈಗೊಳ್ಳದೇ ವಸ್ತುಗಳ ಖರೀದಿ ಮಾಡಿರುವ ಕುರಿತು :</u><br>2016-17ನೇ ಸಾಲಿನಲ್ಲಿ ದೂರ ಶಿಕ್ಷಣ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ ಕಛೇರಿಗೆ ಖರೀದಿಸಲಾದ ವಸ್ತುಗಳ ಸಂಬಂಧ ಪಾವತಿಸಲಾದ ಎಲ್ಲಾ ಓಚರ್‌ಗಳನ್ನು ಪರಿಶೀಲಿಸಲಾಗಿ ಲೇಖನ ಸಾಮಾಗ್ರಿ, ಮುದ್ರಣ ಸಾಮಾಗ್ರಿಗಳು ಹಾಗೂ ಸಲಕರಣೆಗಳ ಖರೀದಿ ಪ್ರಕ್ರಿಯೆಯಲ್ಲಿ ಕೆ.ಟಿ.ಪಿ.ಪಿ ನಿಯಮ 4(e) ಮತ್ತು 4(e) (e) ರಂತೆ ಟೆಂಡರ್ ಕರೆಯದೇ ವಸ್ತುಗಳನ್ನು ಖರೀದಿ ಮಾಡಿ ಸಂಬಂಧಪಟ್ಟ ಸರಬರಾಜುದಾರರಿಗೆ ಬಿಲ್ ಮೊತ್ತವನ್ನು ಪಾವತಿಸಿರುವುದು ಕಂಡು ಬಂದಿದ್ದು, ಇದಕ್ಕೆ ಸಂಬಂಧಿಸಿದಂತೆ ದರಪಟ್ಟಿ/ ಟೆಂಡರ್ ಪ್ರಕ್ರಿಯೆ ಕೈಗೊಂಡ ಬಗ್ಗೆ ದಾಖಲೆ/ ಕಡತಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ: 159/2018-19 ದಿ:31.01.2019 ರಲ್ಲಿ ಕೋರಲಾಗಿತ್ತು. ಕೋರಲಾಗಿರುವ ವಿಚಾರಕ್ಕೆ ಸಂಬಂಧಿಸಿದಂತೆ ದೂರ ಶಿಕ್ಷಣ ಕೇಂದ್ರದಿಂದ ದಾಖಲೆ/ ಮಾಹಿತಿಯನ್ನು ಪಡೆಯಲಾಗಿದ್ದು ಅದರಲ್ಲಿ ಕೆಲವೊಂದು ಉತ್ತರಗಳು ಮಾತ್ರ ಸಮರ್ಪಕವಾಗಿದ್ದು, ಇನ್ನುಳಿದಂತೆ ದರಪಟ್ಟಿ/ ಟೆಂಡರ್ ಪ್ರಕ್ರಿಯೆ ಕೈಗೊಳ್ಳದಿರುವುದು ಕೆ.ಟಿ.ಪಿ.ಪಿ ನಿಯಮದ ಉಲ್ಲಂಘನೆಯಾಗಿರುವುದರಿಂದ ಖರೀದಿ ಪ್ರಕ್ರಿಯೆಯ ಒಟ್ಟು ಮೊತ್ತ ರೂ.9,01,577/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರವನ್ನು <u>ಅನುಬಂಧ-42 ರಲ್ಲಿ</u> ಒದಗಿಸಲಾಗಿದೆ. | ವಿವರಗಳನ್ನು ಮುಂದಿನ ಲೆಕ್ಕ ತಪಾಸಣಾ ವೇಳೆ ಹಾಜರುಪಡಿಸಲಾಗುವುದು. |
| 81 | <u>ದೂರ ಶಿಕ್ಷಣ ಪರೀಕ್ಷಾ ಕಾರ್ಯಗಳಿಗೆ ಹಾಜರಾದ ಪ್ರಾಧ್ಯಾಪಕರುಗಳಿಗೆ/ ಅಧಿಕಾರಿಗಳಿಗೆ ನಿಯಮ ಮೀರಿ ಸಂಭಾವನೆಯನ್ನು ಪಾವತಿಸಿರುವುದರ ಕುರಿತು :</u><br>2016-17ನೇ ಸಾಲಿನ ದೂರ ಶಿಕ್ಷಣ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು. ಇಲ್ಲಿ ವಿವಿಧ ಸ್ನಾತಕ ಹಾಗೂ ಸ್ನಾತಕೋತ್ತರ ಪರೀಕ್ಷಾ ಕಾರ್ಯಗಳನ್ನು ನಿರ್ವಹಿಸಿದ ಹಲವು ಪ್ರಾಧ್ಯಾಪಕರುಗಳು ಹಾಗೂ ಅಧಿಕಾರಿಗಳಿಗೆ ದಿನಭತ್ಯೆ, ಪ್ರಯಾಣ ಭತ್ಯೆಗಳ ಜೊತೆಗೆ ಹೆಚ್ಚುವರಿಯಾಗಿ ಸಂಭಾವನೆಯನ್ನು ನೀಡಿರುವುದು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವ ಓಚರ್‌ಗಳನ್ನು | |

| | | |
|---|---|---|
| | ಪರಿಶೀಲಿಸಿದಾಗ ಕಂಡು ಬಂದಿರುತ್ತದೆ. ಈ ಸಂಬಂಧ ಪರೀಕ್ಷಾ ಸಂಭಾವನೆಯನ್ನು ನೀಡಲು ನಿರ್ದಿಷ್ಟಪಡಿಸಿದ ಸರ್ಕಾರದ ವಿಶ್ವವಿದ್ಯಾನಿಲಯದ ಆದೇಶ ಪ್ರತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ: 192/2018-19 ದಿನಾಂಕ:12.02.2019 ರಂದು ಜಾರಿ ಮಾಡಲಾಗಿತ್ತು. ಆದರೆ ಸದರಿ ದಾಖಲೆ ಹಾಜರುಪಡಿಸಿರುವುದಿಲ್ಲ. ವಾಸ್ತವವಾಗಿ ಯು.ಜಿ.ಸಿ ವೇತನ ಪಡೆಯುತ್ತಿರುವ ಪ್ರಾಧ್ಯಾಪಕರುಗಳಿಗೆ 6 ನೇ ಯು.ಜಿ.ಸಿ ವೇತನ ಪರಿಷ್ಕರಣೆ ನಿಯಮಾವಳಿಗಳಲ್ಲಿ ಯಾವುದೇ ಸಂಭಾವನೆ ಪಾವತಿಸಲು ಅವಕಾಶವಿರುವುದಿಲ್ಲ. ಹಾಗೂ ಕೆ.ಸಿ.ಎಸ್.ಆರ್ ನಿಯಮ-498 ರಿಂದ 516 ರ ನಿಯಮಗಳನ್ವಯ ವಾಸ್ತವಿಕ ತಂಗುವಿಕೆಗೆ ವೇತನ ಶ್ರೇಣಿಗೆ ಅನುಗುಣವಾಗಿ ದಿನಭತ್ಯೆಯನ್ನು ಪಾವತಿಸಬೇಕಾಗಿರುತ್ತದೆ. ಕೆ.ಸಿ.ಎಸ್.ಆರ್ ನಿಯಮ-28 (ಫೀಜು ಮತ್ತು ಗೌರವಧನ) ರನ್ವಯ ಖಾಯಂ ಸರ್ಕಾರಿ ನೌಕರನು ಪ್ರತಿನಿತ್ಯ ತಾನು ನಿರ್ವಹಿಸುವ ಕರ್ತವ್ಯದ ಹೆಚ್ಚುವರಿ ಕೆಲಸಕ್ಕೆ ಯಾವುದೇ ಸಂಭಾವನೆಯನ್ನು ಪಡೆಯಲು ಅವಕಾಶವಿಲ್ಲ ಎಂದು ಸೂಚಿಸುತ್ತದೆ.<br>ಆದರೆ, ಇಲ್ಲಿ ಕೆ.ಸಿ.ಎಸ್.ಆರ್ ನ ನಿಯಮಗಳನ್ನು ಉಲ್ಲಂಘನೆ ಮಾಡಿ ಹೆಚ್ಚುವರಿಯಾಗಿ ಸಂಭಾವನೆಯನ್ನು ಪಾವತಿಸಲಾಗಿರುತ್ತದೆ. ಹೀಗೆ ಹೆಚ್ಚುವರಿಯಾಗಿ ಪಾವತಿಸಿರುವ ಮೊತ್ತ ರೂ.2,43,060/-ಗಳನ್ನು ವಸೂಲಿಸುವುದು, ಇಲ್ಲವಾದಲ್ಲಿ ಸಿಂಡಿಕೇಟ್ ನಿರ್ಣಯವನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ-2000 ರ ನಿಯಮ-41 (5), (6), (7) ರನ್ವಯ ಸರ್ಕಾರದಿಂದ ಹಾಗೂ ಗೌರವಾನ್ವಿತ ಕುಲಾಧಿಪತಿಗಳಿಂದ ಅನುಮೋದನೆ ಪಡೆಯುವುದು. ಅಲ್ಲಿಯವರೆಗೂ ಸದರಿ ಮೊತ್ತ ರೂ.2,43,060/-ಗಳನ್ನು ವಸೂಲಾತಿಯಲ್ಲಿಡಲಾಗಿದೆ. ವಿವರವನ್ನು <u>ಅನುಬಂಧ-43 ರಲ್ಲಿ</u> ಒದಗಿಸಲಾಗಿದೆ. ದಿನಾಂಕ:10.05.2019 ರ ಪುನರ್ ಪರಿಶೀಲನಾ ವೇಳೆಯಲ್ಲಿ ಸದರಿ ವಿಷಯವನ್ನು ಚರ್ಚಿಸಲಾಗಿ, ಸಂಭಾವನೆ ನೀಡದಿದ್ದಲ್ಲಿ ಪರೀಕ್ಷಾ ಕಾರ್ಯ ನಡೆಯಲು ಸಾಧ್ಯವಿಲ್ಲ ಹಾಗೂ ಯು.ಜಿ.ಸಿ ಯ ಮಾನದಂಡದಂತೆ ಕಾರ್ಯ ನಿರ್ವಹಿಸಲಾಗಿದೆ. ಟಿ.ಎ/ಡಿ.ಎ/ಇತರೆ ಸಂಭಾವನೆಯನ್ನು ನಿಯಮಾನುಸಾರವೇ ನೀಡಲಾಗಿದೆಯೆಂದು ಕುಲಪತಿಗಳು ತಿಳಿಸಿರುವುದನ್ನು ದಾಖಲೆಗಳ ರೂಪದಲ್ಲಿ ಸಲ್ಲಿಸುವವರೆಗೂ ವಸೂಲಾತಿಯಲ್ಲಿ ಮುಂದುವರೆಸಲು ತೀರ್ಮಾನಿಸಲಾಯಿತು. | ಮಂಗಳೂರು ವಿಶ್ವವಿದ್ಯಾನಿಲಯದ ದೂರಶಿಕ್ಷಣ ಕೇಂದ್ರದಿಂದ ನಡೆಸುವ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಕೋರ್ಸುಗಳನ್ನು ನಡೆಸಲು ವಿಶ್ವವಿದ್ಯಾನಿಲಯವು ಯಾವುದೇ ಬೋಧಕ ಸಿಬ್ಬಂದಿಗಳನ್ನು ನೇಮಕಾತಿ ಮಾಡಿರುವುದಿಲ್ಲ. ದೂರಶಿಕ್ಷಣಕ್ಕೆ ಸಂಬಂಧಿಸಿ ಪಠ್ಯ ಪುಸ್ತಕದ ತಯಾರಿ ಮತ್ತು ಪರೀಕ್ಷಾ ಕಾರ್ಯದ ಎಲ್ಲಾ ಕೆಲಸಗಳಿಗೆ ವಿಶ್ವವಿದ್ಯಾನಿಲಯ ಸಂಯೋಜಿತ ಕಾಲೇಜುಗಳ ಅಧ್ಯಾಪಕರನ್ನು ಅವಲಂಬಿಸಬೇಕಾಗುತ್ತದೆ. ದೂರ ಶಿಕ್ಷಣಕ್ಕೆ ಬರುವ ವಿದ್ಯಾರ್ಥಿಗಳು ಈ ಅಧ್ಯಾಪಕರ ವ್ಯಾಪ್ತಿಯಲ್ಲಿ ಬರುವುದಿಲ್ಲ. ಸದ್ರಿ ಅಧ್ಯಾಪಕರು ದೂರ ಶಿಕ್ಷಣಕ್ಕೆ ಸಂಬಂಧಿಸಿದ ಕೆಲಸ ಕಾರ್ಯಗಳನ್ನು ತಮ್ಮ ರಜಾ ಅವಧಿಯಲ್ಲಿ ಮತ್ತು ಬಿಡುವಿನ ವೇಳೆಯಲ್ಲಿ ನಿರ್ವಹಿಸುತ್ತಾರೆ. ದೂರಶಿಕ್ಷಣದ ಮುಖಾಂತರ ಗುಣಮಟ್ಟದ ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ಒದಗಿಸಲು ದೂರಶಿಕ್ಷಣದ ಪಠ್ಯ ಪುಸ್ತಕದ ರಚನೆ, ಸಂಪರ್ಕ ತರಗತಿಗಳನ್ನು ನಡೆಸಲು ಮತ್ತು ಮೌಲ್ಯ ಮಾಪನ ಕಾರ್ಯಗಳಿಗೆ ಶಿಕ್ಷಕ ವೃತ್ತಿಯಲ್ಲಿ ಒಳ್ಳೆಯ ಅನುಭವವಿರುವ ಯುಜಿಸಿ ವೇತನ ಪಡೆಯುವ ಶಿಕ್ಷಕರನ್ನು ನಿಯೋಜಿಸಲಾಗುತ್ತದೆ. ಆದ್ದರಿಂದ ದೂರ ಶಿಕ್ಷಣ ಕಾರ್ಯಕ್ರಮದ ಪರೀಕ್ಷಾ ಕಾರ್ಯಗಳನ್ನು ನಿರ್ವಹಿಸುತ್ತಿರುವ ಯುಜಿಸಿ ವೇತನ ಪಡೆಯುತ್ತಿರುವ ಅಧ್ಯಾಪಕರುಗಳಿಗೂ ಸಂಭಾವನೆ ಪಾವತಿಸುವಂತೆ ದಿನಾಂಕ 25.08.2005 ರಂದು ನಡೆದ ಸಿಂಡಿಕೇಟು ಸಭೆಯು ನಿರ್ಣಯ ಕೈಗೊಂಡಿರುತ್ತದೆ. (ಕಾರ್ಯಸೂಚಿ ಸಂಖ್ಯೆ ಅಭಿವೃದ್ಧಿ 7-33(2005). ಈ ಹಿನ್ನಲೆಯಲ್ಲಿ ಸದರಿ ಆಕ್ಷೇಪಣೆಯನ್ನು ಕೈ ಬಿಡುವಂತೆ ಮತ್ತೊಮ್ಮೆ ಕೋರಲಾಗಿದೆ. |
| 82 | <u>ಅಧ್ಯಯನ ಸಾಮಾಗ್ರಿ (**Study Material**) ದಾಸ್ತಾನು ವಹಿ ಪರಿಶೀಲನೆ :</u><br>2016-17ನೇ ಸಾಲಿನ ದೂರ ಶಿಕ್ಷಣ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ವಿತರಣೆಯಾಗಿರುವ ವಿವಿಧ ಅಧ್ಯಯನ ಸಾಮಾಗ್ರಿ ದಾಸ್ತಾನು ವಹಿಯನ್ನು ಪರಿಶೀಲಿಸಲಾಗಿ, ದಿನಾಂಕ:03.12.2018 ರ ಅಂತ್ಯಕ್ಕೆ ದಾಸ್ತಾನು ವಹಿಯಲ್ಲಿ ನಮೂದಿಸಿರುವ ಪುಸ್ತಕ ಸಂಖ್ಯೆ ಮತ್ತು ವಿವರಗಳನ್ನು <u>ಅನುಬಂಧ-44 ರಲ್ಲಿ</u> ಒದಗಿಸಲಾಗಿದೆ. ಹಾಗೂ 2016-17ನೇ ಸಾಲಿನಲ್ಲಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೆ ವಿತರಣೆಯಾಗಿರುವ ವಿವಿಧ ಕೋರ್ಸ್‌ಗಳ ಪುಸ್ತಕಗಳ ಸಂಖ್ಯೆಗೂ ಹಾಗೂ ದಾಸ್ತಾನು ವಹಿಯಲ್ಲಿ ನಮೂದಿಸಿರುವ ಸಂಖ್ಯೆಗೂ ಭೌತಿಕವಾಗಿ ತಾಳೆಯಾಗಿರುತ್ತದೆ. | ದಾಸ್ತಾನು ವಹಿ ತಾಳೆಯಾಗಿದ್ದು ಮುಂದಿನ ಲೆಕ್ಕ ತಪಾಸಣಾ ವೇಳೆ ಹಾಜರು ಪಡಿಸಲಾಗುವುದು. |
| 83 | <u>**UGC Startup Research Project,** ರಸಾಯನಶಾಸ್ತ್ರ ವಿಭಾಗದ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು</u><br><br>ಡಾ॥ ಎಂ.ಆರ್ ಮದ್ದಾನಿ, ಪ್ರಧಾನ ಸಂಶೋಧಕರು, UGC Startup Research Project, ರಸಾಯನಶಾಸ್ತ್ರ ವಿಭಾಗ, ಇವರಿಗೆ ಪ್ರಾಜೆಕ್ಟ್‌ನ ಸಂಶೋಧನಾ ಕಾರ್ಯಗಳಿಗೆ ಅಗತ್ಯವಿರುವ ಉಪಕರಣ Rotary Evaporator Heildolph Model hei vap value digital with vaccum pump-rotavac value control (HEI-VAP Silver 4 package (230 v 50/60 Hz) IN PLUG-1 ಸಂಖ್ಯೆಯನ್ನು INKARP INSTRUMENTD PVT LTD, Hyderabad ರವರ ಇನ್ವಾಯ್ಸ್ ನಂ:4116/ 29.03.2016 ರಲ್ಲಿ ಖರೀದಿಸಿ, ಧನಾದೇಶ ಸಂಖ್ಯೆ: 435134/ ದಿ:04.07.2016 ರಲ್ಲಿ ರೂ.3,30,000/-ಗಳನ್ನು ಪಾವತಿಸಲಾಗಿದೆ. | |

ಈ ಖರೀದಿ ಸಂಬಂಧ, ಈ ಸಾಮಾಗ್ರಿಗಳ ಖರೀದಿಗಾಗಿ ಕರೆಯಲಾಗಿರುವ ಟೆಂಡರ್ ದಾಖಲೆಗಳು, ದಾಸ್ತಾನು ಸ್ವೀಕೃತಿ ಮತ್ತು ವಿತರಣಾ ಲೆಕ್ಕಪತ್ರಗಳು, ವಾರ್ಷಿಕ ದಾಸ್ತಾನು ಪರಿಶೀಲನಾ ವಿವರ ಪಟ್ಟಿ ಹಾಗೂ ಇನ್ನಿತರೇ ಪೂರಕ ದಾಖಲೆಗಳನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:65/ 2018-19 ನ್ನು ದಿನಾಂಕ:21.12.2018 ರಂದು ನೀಡಿದರೂ ಸಹ ಹಾಜರುಪಡಿಸದ ಕಾರಣ ಸದರಿ ಮೊತ್ತ ರೂ.3,30,000/-ಗಳನ್ನು ಆಕ್ಷೇಪಣೆಗೆ ಸೂಚಿಸಲಾಗಿದೆ.

UGC start-up ಪ್ರಾಜೆಕ್ಟ್‌ನಡಿ Rotary Evaporator ಖರೀದಿಗೆ ಸಂಬಂಧಿಸಿ, ಟೆಂಡರ್ ಆಹ್ವಾನ ಪತ್ರ, ತುಲನಾತ್ಮಕ ತಃಖ್ತೆ, ದಾಸ್ತಾನು ವಹಿ ಇತ್ಯಾದಿಗಳನ್ನು ಮುಂದಿನ ಲೆಕ್ಕ ತಪಾಸಣೆ ವೇಳೆ ಹಾಜರು ಪಡಿಸಲಾಗುವುದು. ಆಕ್ಷೇಪಣೆಯನ್ನು ಕೈ ಬಿಡುವಂತೆ ಕೋರಲಾಗಿದೆ.

84

<u>ಯು.ಜಿ.ಸಿ ವಿವಿಧ ಯೋಜನೆಗಳ ಹಾಗೂ ಪ್ರಯೋಜಿತ ಕಾರ್ಯಕ್ರಮಗಳ ಆರ್ಥಿಕ ಪರಿಸ್ಥಿತಿ ವಿವರಗಳು :</u>

**1) UGC General (MRP)**

2016-17ನೇ ಸಾಲಿನ ಆರ್ಥಿಕ ವಹಿವಾಟನ್ನು ಎಸ್.ಬಿ.ಐ ಮಂಗಳಗಂಗೋತ್ರಿ, ಮಂಗಳೂರು ವಿಶ್ವವಿದ್ಯಾನಿಲಯ ಕ್ಯಾಂಪಸ್‌ನ ಶಾಖೆಯ ಖಾತೆ ಸಂಖ್ಯೆ:10094966491 ರಲ್ಲಿ ನಿರ್ವಹಿಸಿದೆ.

| | |
|---|---|
| ಪ್ರಾರಂಭಿಕ ಶಿಲ್ಕು | ರೂ.2,16,73,791 |
| ಜಮಾ ಒಟ್ಟು | ರೂ.4,07,57,864 |
| ಒಟ್ಟು | ರೂ.6,24,31,655 |
| ಖರ್ಚು ಒಟ್ಟು | ರೂ.5,89,33,519 |
| ಅಖೈರು ಶಿಲ್ಕು (ಲೆಕ್ಕಪರಿಶೋಧನೆಯಂತೆ) | ರೂ.34,98,136 |
| ಅಖೈರು ಶಿಲ್ಕು (ಬ್ಯಾಂಕ್ ಪಾಸ್ ಪುಸ್ತಕದಂತೆ) | ರೂ.36,11,572 |
| ವ್ಯತ್ಯಾಸ | ರೂ.1,13,436 |

ವ್ಯತ್ಯಾಸಕ್ಕೆ ಕಾರಣ :- ನಗದಾಗದ ಧನಾದೇಶಗಳು ಹಾಗೂ ಬ್ಯಾಂಕ್ ಖಾತೆಯಿಂದ ಹೆಚ್ಚುವರಿ ಖರ್ಚಾಗಿರುವುದು.

<u>ಅ. ನಗದಾಗದ ಧನಾದೇಶಗಳು:</u>

| | | |
|---|---|---|
| 1 | 435277/ 31.03.2017 | ರೂ.18,024 |
| 2 | 435279/ 31.03.2017 | ರೂ.717 |
| 3 | 435271/ 25.03.2017 | ರೂ.23,044 |
| 4 | 435272/ 27.03.2017 | ರೂ.38,069 |
| 5 | 435273/ 27.03.2017 | ರೂ.3,124 |
| 6 | 435274/ 27.03.2017 | ರೂ.18,342 |
| 7 | 435275/ 27.03.2017 | ರೂ.12,716 |
| | | (-) 1,14,036 |
| ಹೆಚ್ಚುವರಿ ಖರ್ಚು | | (-) 600 |
| ವ್ಯತ್ಯಾಸ | | 1,13,436 |

ಆ. ಧನಾದೇಶ ಸಂಖ್ಯೆ :43511/ 20.05.2016 ರಲ್ಲಿ(ವೋಚರ್ ಸಂಖ್ಯೆ: 37/20.05.2016) ರೂ.1,23,200/-ಗಳ ಧನಾದೇಶ ಬರೆದಿದ್ದು, ಬ್ಯಾಂಕ್ ಖಾತೆಯಲ್ಲಿ ರೂ.1,23,800/-ಗಳು ಡ್ರಾ ಆಗಿದ್ದು, ರೂ.600/-ಗಳು ಹೆಚ್ಚುವರಿಯಾಗಿ ಬ್ಯಾಂಕ್‌ನಿಂದಲೇ ನೇರವಾಗಿ ನಿಧಿಗೆ ಖರ್ಚು ಹಾಕಲಾಗಿದೆ. ಈ ಮೊತ್ತವನ್ನು ಬ್ಯಾಂಕಿನವರಿಂದ ಹಿಂಪಡೆದು ವಿಶ್ವವಿದ್ಯಾನಿಯಲದ ಖಾತೆಗೆ ಜಮಾ ಮಾಡಿಸಿಕೊಳ್ಳಲು ಸೂಚಿಸಿದೆ. ಅಲ್ಲಿಯವರೆಗೆ ಈ ಮೊತ್ತವನ್ನು ವಸೂಲಾತಿಗೆ ಸೂಚಿಸಿದೆ.

2) **UGC Refresher Course**

2016-17ನೇ ಸಾಲಿನ ಆರ್ಥಿಕ ವಹಿವಾಟನ್ನು ಎಸ್.ಬಿ.ಐ, ಮಂಗಳಗಂಗೋತ್ರಿ, ಮಂಗಳೂರು ವಿಶ್ವವಿದ್ಯಾನಿಲಯ, ಕ್ಯಾಂಪಸ್ ಶಾಖೆಯ ಖಾತೆ ಸಂಖ್ಯೆ: 10094967279 ರಲ್ಲಿ ನಿರ್ವಹಿಸಿದೆ.

| | |
|---|---|
| ಪ್ರಾರಂಭಿಕ ಶಿಲ್ಕು | ರೂ.7,62,791 |
| ಜಮಾ ಒಟ್ಟು | ರೂ.38,810 |
| ಒಟ್ಟು | ರೂ.8,01,601 |
| ಖರ್ಚು ಒಟ್ಟು | ಇಲ್ಲ |
| ಅಖೈರು ಶಿಲ್ಕು (ಲೆಕ್ಕಪರಿಶೋಧನೆಯಂತೆ) | ರೂ.8,01,601 |
| ಅಖೈರು ಶಿಲ್ಕು (ಬ್ಯಾಂಕ್ ಪಾಸ್ ಪುಸ್ತಕದಂತೆ) | ರೂ.8,01,601 |
| ವ್ಯತ್ಯಾಸ | ಇಲ್ಲ |

3) **Development Asstee to University (MCJ & Chemistry)**

2016-17ನೇ ಸಾಲಿನ ಆರ್ಥಿಕ ವಹಿವಾಟನ್ನು ಎಸ್.ಬಿ.ಐ, ಮಂಗಳಗಂಗೋತ್ರಿ, ಮಂಗಳೂರು ವಿಶ್ವವಿದ್ಯಾನಿಲಯ, ಕ್ಯಾಂಪಸ್ ಶಾಖೆಯ ಖಾತೆ ಸಂಖ್ಯೆ: 10094966322 ರಲ್ಲಿ ನಿರ್ವಹಿಸಿದೆ.

| | |
|---|---|
| ಪ್ರಾರಂಭಿಕ ಶಿಲ್ಕು | ರೂ.7,00,911 |
| ಜಮಾ ಒಟ್ಟು | ರೂ.3,42,452 |
| ಒಟ್ಟು | ರೂ.10,43,363 |
| ಖರ್ಚು ಒಟ್ಟು | ಇಲ್ಲ |
| ಅಖೈರು ಶಿಲ್ಕು (ಲೆಕ್ಕಪರಿಶೋಧನೆಯಂತೆ) | ರೂ.10,43,363 |
| ಅಖೈರು ಶಿಲ್ಕು (ಬ್ಯಾಂಕ್ ಪಾಸ್ ಪುಸ್ತಕದಂತೆ) | ರೂ.10,43,363 |
| ವ್ಯತ್ಯಾಸ | ಇಲ್ಲ |

4) **Centre for women's Studies-UGC:**

2016-17ನೇ ಸಾಲಿನ ಆರ್ಥಿಕ ವಹಿವಾಟನ್ನು ಎಸ್.ಬಿ.ಐ, ಮಂಗಳಗಂಗೋತ್ರಿ, ಮಂಗಳೂರು ವಿಶ್ವವಿದ್ಯಾನಿಲಯ, ಕ್ಯಾಂಪಸ್ ಶಾಖೆಯ ಖಾತೆ ಸಂಖ್ಯೆ: 3003650339 ರಲ್ಲಿ ನಿರ್ವಹಿಸಿದೆ.

ಹೆಚ್ಚುವರಿ ಪಾವತಿಯಾದ ರೂ. 600.00ನ್ನು ದಿನಾಂಕ 26.04.17ರಂದು ಹಿಂದೆ ಪಡೆದಿದ್ದು ಬ್ಯಾಂಕ್ ಖಾತೆಗೆ ಜಮೆ ಮಾಡಲಾಗಿದೆ.

| | |
|---|---|
| ಪ್ರಾರಂಭಿಕ ಶಿಲ್ಕು | ರೂ.69,118 |
| ಜಮಾ ಒಟ್ಟು | ರೂ.12,47,087 |
| ಒಟ್ಟು | ರೂ.13,16,205 |
| ಖರ್ಚು ಒಟ್ಟು | 2,58,644 |
| ಅಖೈರು ಶಿಲ್ಕು (ಲೆಕ್ಕಪರಿಶೋಧನೆಯಂತೆ) | ರೂ.10,57,561 |
| ಅಖೈರು ಶಿಲ್ಕು (ಬ್ಯಾಂಕ್ ಪಾಸ್ ಪುಸ್ತಕದಂತೆ) | ರೂ.10,57,561 |
| ವ್ಯತ್ಯಾಸ | ಇಲ್ಲ |

5) **Canara Bank, Balmatta Mangalore (UGC Grant)**

2016-17ನೇ ಸಾಲಿನ ಆರ್ಥಿಕ ವಹಿವಾಟನ್ನು Canara Bank, Mangalore Balmatta Road, Mangalore , ಇಲ್ಲಿನ ಖಾತೆ ಸಂಖ್ಯೆ: 1333101201861 ರಲ್ಲಿ ನಿರ್ವಹಿಸಿದೆ.

| | |
|---|---|
| ಪ್ರಾರಂಭಿಕ ಶಿಲ್ಕು | ರೂ.7,48,819 |
| ಜಮಾ ಒಟ್ಟು | ರೂ.13,67,367 |
| ಒಟ್ಟು | ರೂ.21,16,186 |
| ಖರ್ಚು ಒಟ್ಟು | ರೂ.13,31,399 |
| ಅಖೈರು ಶಿಲ್ಕು (ಲೆಕ್ಕಪರಿಶೋಧನೆಯಂತೆ) | ರೂ.7,84,787 |
| ಅಖೈರು ಶಿಲ್ಕು (ಬ್ಯಾಂಕ್ ಪಾಸ್ ಪುಸ್ತಕದಂತೆ) | ರೂ.7,84,787 |
| ವ್ಯತ್ಯಾಸ | ಇಲ್ಲ |

6) **UGC XI Plan fund :**

2016-17ನೇ ಸಾಲಿನ ಆರ್ಥಿಕ ವಹಿವಾಟನ್ನು ಎಸ್.ಬಿ.ಐ, ಮಂಗಳಗಂಗೋತ್ರಿ, ಮಂಗಳೂರು ವಿಶ್ವವಿದ್ಯಾನಿಲಯ, ಕ್ಯಾಂಪಸ್ ಶಾಖೆಯ ಖಾತೆ ಸಂಖ್ಯೆ: 30263309695 ರಲ್ಲಿ ನಿರ್ವಹಿಸಿದೆ.

| | |
|---|---|
| ಪ್ರಾರಂಭಿಕ ಶಿಲ್ಕು | ರೂ.17,06,231 |
| ಜಮಾ ಒಟ್ಟು | ರೂ.45,203 |
| ಒಟ್ಟು | ರೂ.17,51,434 |
| ಖರ್ಚು ಒಟ್ಟು | ರೂ.17,00,000 |
| ಅಖೈರು ಶಿಲ್ಕು (ಲೆಕ್ಕಪರಿಶೋಧನೆಯಂತೆ) | ರೂ.51,434 |
| ಅಖೈರು ಶಿಲ್ಕು (ಬ್ಯಾಂಕ್ ಪಾಸ್ ಪುಸ್ತಕದಂತೆ) | ರೂ.51,434 |
| ವ್ಯತ್ಯಾಸ | ಇಲ್ಲ |

7) **Centre for Study of Social Exclusion & Inclusive policy (CSEIP) :**

2016-17ನೇ ಸಾಲಿನ ಆರ್ಥಿಕ ವಹಿವಾಟನ್ನು ಎಸ್.ಬಿ.ಐ, ಮಂಗಳಗಂಗೋತ್ರಿ, ಮಂಗಳೂರು ವಿಶ್ವವಿದ್ಯಾನಿಲಯ, ಕ್ಯಾಂಪಸ್ ಶಾಖೆಯ ಖಾತೆ ಸಂಖ್ಯೆ: 30164814089 ರಲ್ಲಿ ನಿರ್ವಹಿಸಿದೆ.

| | |
|---|---|
| ಪ್ರಾರಂಭಿಕ ಶಿಲ್ಕು | ರೂ.2,22,525 |
| ಜಮಾ ಒಟ್ಟು | ರೂ.22,12,550 |
| ಒಟ್ಟು | ರೂ.24,35,075 |
| ಖರ್ಚು ಒಟ್ಟು | ರೂ.21,90,902 |
| ಅಖೈರು ಶಿಲ್ಕು (ಲೆಕ್ಕಪರಿಶೋಧನೆಯಂತೆ) | ರೂ.2,44,173 |
| ಅಖೈರು ಶಿಲ್ಕು (ಬ್ಯಾಂಕ್ ಪಾಸ್ ಪುಸ್ತಕದಂತೆ) | ರೂ.2,44,173 |
| ವ್ಯತ್ಯಾಸ | ಇಲ್ಲ |

8) **Innovative Programme witj Material Science :**

2016-17ನೇ ಸಾಲಿನ ಆರ್ಥಿಕ ವಹಿವಾಟನ್ನು ಎಸ್.ಬಿ.ಐ, ಮಂಗಳ ಗಂಗೋತ್ರಿ, ಮಂಗಳೂರು ವಿಶ್ವವಿದ್ಯಾನಿಲಯ, ಕ್ಯಾಂಪಸ್ ಶಾಖೆಯ ಖಾತೆ ಸಂಖ್ಯೆ: 30266313665 ರಲ್ಲಿ ನಿರ್ವಹಿಸಿದೆ.

| | |
|---|---|
| ಪ್ರಾರಂಭಿಕ ಶಿಲ್ಕು | ರೂ.4,841 |
| ಜಮಾ ಒಟ್ಟು | ರೂ.247 |
| ಒಟ್ಟು | ರೂ.5,088 |
| ಖರ್ಚು ಒಟ್ಟು | ಇಲ್ಲ |
| ಅಖೈರು ಶಿಲ್ಕು (ಲೆಕ್ಕಪರಿಶೋಧನೆಯಂತೆ) | ರೂ.5,088 |
| ಅಖೈರು ಶಿಲ್ಕು (ಬ್ಯಾಂಕ್ ಪಾಸ್ ಪುಸ್ತಕದಂತೆ) | ರೂ.5,088 |
| ವ್ಯತ್ಯಾಸ | ಇಲ್ಲ |

85 ಇಂಜಿನಿಯರಿಂಗ್ ವಿಭಾಗದಲ್ಲಿ ದಾಖಲೆಗಳನ್ನು ನಿರ್ವಹಿಸದಿರುವುದು :

2016-17ನೇ ಸಾಲಿನ ಮಂಗಳೂರು ವಿಶ್ವವಿದ್ಯಾನಿಲಯದ ಇಂಜಿನಿಯರಿಂಗ್ ವಿಭಾಗದ ಲೆಕ್ಕಪರಿಶೋಧನೆಯಲ್ಲಿ ಗಮನಿಸಿದ ಬಹು ಮುಖ್ಯ ಅಂಶಗಳೆಂದರೆ ವರ್ಕ್ ಕ್ಯಾಷ್‌ಬುಕ್, ಗ್ರಾಂಟ್ & ಔಟ್‌ಲೇ, ಸಿ ರಿಜಿಸ್ಟರ್ ನಿರ್ವಹಿಸಿರುವುದಿಲ್ಲ. ಅಲ್ಲದೆ ಬಿ.ಆರ್.ಎಸ್ ಸ್ಟೇಟ್‌ಮೆಂಟ್ ಸಹ ಮಾಡಿರುವುದಿಲ್ಲ. ಹಣಕಾಸು ವಿಭಾಗದಿಂದ ಸ್ವೀಕರಿಸಿದ ಚೆಕ್/ಇತರೆ ನಗದುಗಳನ್ನು ನಗದು ಪುಸ್ತಕಕ್ಕೆ ತೆಗೆದುಕೊಂಡು ನಗದು ಪುಸ್ತಕವನ್ನು ಕರ್ನಾಟಕ ಆರ್ಥಿಕ ಸಂಹಿತೆ ಪ್ರಕಾರ ನಿರ್ವಹಿಸಿಲ್ಲದಿರುವುದು ಕಂಡು ಬಂದಿರುತ್ತದೆ. ಇದು ಗಂಭೀರ ಸ್ವರೂಪವಾಗಿದೆ.

| | | |
|---|---|---|
| | ಇದರಿಂದಾಗಿ ಹಣಕಾಸು ವಿಭಾಗದಿಂದ ಬಿಡುಗಡೆಯಾದ ಅನುದಾನ ಪಾವತಿಸಲಾದ ಮುಂಗಡ, ಇತರೇ ಸ್ವೀಕೃತಿ, ಧನಾದೇಶ, ಫೀ, ಶುಲ್ಕ, ಬಾಡಿಗೆ ಇತ್ಯಾದಿ ಬಾಬ್ತು ವಿವರಗಳನ್ನು ಲೆಕ್ಕಪರಿಶೋಧನೆಯಲ್ಲಿ ಖಚಿತಪಡಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ಆದ್ದರಿಂದ ದಾಖಲಾತಿಗಳ ಸಂಪೂರ್ಣ ನಿರ್ವಹಣೆಗೆ ಸಂಬಂಧಿಸಿದಂತೆ ಆಡಳಿತಾತ್ಮಕ ಕ್ರಮ ಕೈಗೊಳ್ಳಲು ತಿಳಿಸಿದೆ. ಮುಖ್ಯವಾಗಿ ಇಂಜಿನಿಯರಿಂಗ್ ವಿಭಾಗದಲ್ಲಿ ಕಾರ್ಯ ನಿರ್ವಹಿಸುವ ಅಧಿಕಾರಿ/ಸಿಬ್ಬಂದಿಗಳು ಈ ಬಗ್ಗೆ ಗಮನಹರಿಸಿ ದಾಖಲಾತಿಗಳನ್ನು ನಿಯಮಗಳ ಪ್ರಕಾರ ನಿರ್ವಹಿಸುವ ಅಗತ್ಯವಿರುತ್ತದೆ. | ಸದ್ರಿ ದಾಖಲೆಗಳನ್ನು ಪ್ರಸ್ತುತ ನಿರ್ವಹಿಸಲಾಗುತ್ತಿದೆ. |
| 86 | <u>ಕ್ರಿಯಾ ಯೋಜನೆ ತಯಾರಿಸದೇ ಕಾಮಗಾರಿ ನಡೆಸಿರುವುದು :</u><br>2016-17ನೇ ಸಾಲಿನ ಇಂಜಿನಿಯರಿಂಗ್ ವಿಭಾಗದ ಲೆಕ್ಕಪರಿಶೋಧನೆಯಲ್ಲಿ ಕ್ರಿಯಾ ಯೋಜನೆ ಸಿದ್ಧಪಡಿಸಿಕೊಂಡು ಸಕ್ಷಮ ಪ್ರಾಧಿಕಾರಗಳ ಅನುಮೋದನೆ ಪಡೆಯದೇ ಕಾಮಗಾರಿಗಳನ್ನು ನಿರ್ವಹಿಸಿ ವೆಚ್ಚ ಪಾವತಿಸಿರುವುದನ್ನು ಗಮನಿಸಲಾಗಿದೆ. ವಾರ್ಷಿಕವಾಗಿ ಲಭ್ಯ ಅನುದಾನ, ಮುಂದುವರೆದ ಕಾಮಗಾರಿಗಳು, ಹೊಸ ಕಾಮಗಾರಿಗಳು ಹಾಗೂ ಇತರೆ ಕಾಮಗಾರಿಗಳು ಅವುಗಳ ಅಂದಾಜು ವೆಚ್ಚ, ನಿಗದಿಪಡಿಸಲಾದ ಆಯವ್ಯಯ ಅವಕಾಶಕ್ಕೆದುರಾಗಿ ಕ್ರಿಯಾ ಯೋಜನೆ ಸಿದ್ಧಪಡಿಸಿಕೊಂಡು ಅನುಮೋದನೆ ಪಡೆಯಬೇಕಿರುತ್ತದೆ. ಆದರೆ, ಕ್ರಿಯಾ ಯೋಜನೆ ತಯಾರಿಸದೇ ಮುಂದುವರೆದ ಕಾಮಗಾರಿಗಳು ಮತ್ತು ಇತರೆ ಕಾಮಗಾರಿಗಳನ್ನು ನಿರ್ವಹಿಸಿರುವುದರಿಂದ ಆಡಳಿತಾತ್ಮಕ ಅನುಮೋದನೆ ಪಡೆಯದೆ ನಿರ್ವಹಿಸಿದಂತಾಗಿರುತ್ತದೆ. ಆದ್ದರಿಂದ ಈ ಹಿಂದಿನ ಸಾಲುಗಳವರೆಗಿನ ವೆಚ್ಚ, ಪ್ರಸ್ತುತ ಸಾಲಿನಲ್ಲಿ ಪಾವತಿಸಲಾದ ವೆಚ್ಚ, ಕ್ರೋಢೀಕೃತ ವೆಚ್ಚ, ಹೊಸ ಕಾಮಗಾರಿಗಳಿಗೆ ಪಾವತಿಸಬೇಕಾದ ವೆಚ್ಚ, ಅನುದಾನದ ಉಳಿಕೆ/ ಹೆಚ್ಚುವರಿ ವೆಚ್ಚ ಇತ್ಯಾದಿಗಳನ್ನು ನಿಖರವಾಗಿ ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ. ಆದ್ದರಿಂದ ಈ ಸಂಬಂಧ ಆಡಳಿತಾತ್ಮಕ ಕ್ರಮ ಕೈಗೊಳ್ಳಲು ತಿಳಿಸಿದೆ. | ನಿರ್ವಹಣಾ/ದುರಸ್ತಿ ಕಾಮಗಾರಿಗಳ ಕ್ರಿಯಾಯೋಜನೆಯನ್ನು ತಯಾರಿಸುವ ಬಗ್ಗೆ ಸಂಬಂಧಪಟ್ಟ ವಿಭಾಗಗಳಿಂದ ವಿವಿಧ ಕಾಮಗಾರಿಗಳ ಪಟ್ಟಿಯನ್ನು ಮುಂದಾಗಿಯೇ ನೀಡುವಂತೆ ತಿಳಿಸಲಾಗುವುದು. ನಿರ್ವಹಣಾ ಕಾಮಗಾರಿಗಳ ಪಟ್ಟಿಯು ಯಾವುದೇ ವಿಭಾಗಗಳಿಂದ ಬಾರದಿರುವ ಮೇರೆಗೆ ಕ್ರಿಯಾ ಯೋಜನೆಯನ್ನು ಇದುವರೆಗೆ ತಯಾರಿಸಲಾಗಿರುವುದಿಲ್ಲ. ನಿರ್ವಹಣೆ/ದುರಸ್ತಿ ಕಾಮಗಾರಿಗಳನ್ನು ಆಯಾಯ ಸಾಲಿನಲ್ಲಿಯೇ ಪೂರ್ಣಗೊಳಿಸಲಾಗಿದೆ. ಕಾಮಗಾರಿ ಒಂದು ವರ್ಷದ ಅವಧಿಯೊಳಗೆ ಪೂರ್ಣಗೊಳಿಸಲಾಗದ ಪ್ರಸ್ತಾಪ ಬಂದಲ್ಲಿ ಅವುಗಳ ಕ್ರಿಯಾ ಯೋಜನೆಯನ್ನು ತಯಾರಿಸಿ ಸಲ್ಲಿಸಲಾಗುವುದು. ಅಲ್ಲದೆ ಪ್ರಸ್ತುತ ನಿರ್ವಹಿಸಲಾಗುತ್ತಿದೆ. ಆದ್ದರಿಂದ ಈ ಲೆಕ್ಕ ಪರಿಶೋಧನಾ ಆಕ್ಷೇಪಣೆಯನ್ನು ಕೈಬಿಡುವಂತೆ ಕೋರಲಾಗಿದೆ. |
| 87 | <u>2016-17ನೇ ಸಾಲಿನ ಕೆಲವು ಕಾಮಗಾರಿ ಲೆಕ್ಕಪತ್ರ ದಾಖಲೆಗಳನ್ನು ಹಾಜರುಪಡಿಸದಿರುವುದು :</u><br>2016-17ನೇ ಸಾಲಿನಲ್ಲಿ ವಿವಿಧ ಲೆಕ್ಕ ಶೀರ್ಷಿಕೆಗಳಡಿಯಲ್ಲಿ ವೆಚ್ಚ ಭರಿಸಲಾದ ಕಾಮಗಾರಿ ಬಿಲ್ಲುಗಳಿಗೆ ಸಂಬಂಧಿಸಿದಂತೆ ಸಂಪೂರ್ಣ ಲೆಕ್ಕಪತ್ರ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ: 81/18-19 ದಿ:27.12.2018, 121/18-19 ದಿ:24.01.2019, 126/18-19 ದಿ:24.01.2019, 133/18-19 ದಿ:28.01.2019, 151/18-19 ದಿ:30.01.2019, 152/18-19 ದಿ:30.01.2019, 176/18-19 ದಿ:05.02.2019 ಹಾಗೂ 201/18-19 ದಿ:16.02.2019 ರಂದು ಜಾರಿ ಮಾಡಲಾಗಿದ್ದರೂ ಸಹ ಲೆಕ್ಕಪರಿಶೋಧನೆಯ ಅಂತ್ಯದವರೆಗೆ ಭಾಗಶಃ ದಾಖಲಾತಿಗಳನ್ನು ಮಾತ್ರ ಹಾಜರುಪಡಿಸಲಾಗಿದ್ದು, ಇನ್ನುಳಿದಂತೆ ಹಾಜರುಪಡಿಸದ ಕಾಮಗಾರಿ ಬಿಲ್ಲುಗಳ ಒಟ್ಟು ಮೊತ್ತ ರೂ.8,51,17,113/- ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ದಾಖಲೆಗಳನ್ನು ಹಾಜರುಪಡಿಸಲು ವಿಫಲರಾದ ಅಧಿಕಾರಿ/ಸಿಬ್ಬಂದಿ ವಿರುದ್ಧ ಆಡಳಿತಾತ್ಮಕ ಕ್ರಮ ಕೈಗೊಳ್ಳಲು ತಿಳಿಸಿದೆ. ವಿವರಗಳನ್ನು <u>ಅನುಬಂಧ-45 ರಲ್ಲಿ</u> ನೀಡಿದೆ. | ವರದಿಯಲ್ಲಿ ಸೂಚಿಸಿರುವ ಹೆಚ್ಚಿನ ಕಡತಗಳನ್ನು 2016-17ನೇ ಸಾಲಿನ ಲೆಕ್ಕಪರಿಶೋಧನಾ ಸಂದರ್ಭದಲ್ಲಿ ಸಲ್ಲಿಸಲಾಗಿದೆ. ಆದರೆ ಲೆಕ್ಕ ಪರಿಶೋಧನಾ ಸಂದರ್ಭದಲ್ಲಿ ಕೆಲವು ಶಾಖಾಧಿಕಾರಿಗಳು ಚುನಾವಣಾ ಕರ್ತವ್ಯಕ್ಕೆ ಹಾಜರಾಗಿರುವ ಮೇರೆಗೆ ಕೆಲವೊಂದು ದಾಖಲೆಗಳನ್ನು ಹಾಜರು ಪಡಿಸಲಾಗಿರುವುದಿಲ್ಲ. ಆದಾಗ್ಯೂ ಹಾಜರುಪಡಿಸದ ದಾಖಲೆಗಳನ್ನು ಮುಂದಿನ ಲೆಕ್ಕಪರಿಶೋಧನೆಯಲ್ಲಿ ಹಾಜರು ಪಡಿಸಲಾಗುವುದು.ಆದ್ದರಿಂದ ಲೆಕ್ಕಪರಿಶೋಧನಾ ಆಕ್ಷೇಪಣೆಯನ್ನು ಕೈಬಿಡಲು ಕೋರಲಾಗಿದೆ. |
| 88 | <u>ಟೆಂಡರ್ ಕರಾರಿನ ಷರತ್ತನ್ನು ಉಲ್ಲಂಘಿಸಿ, ಹೆಚ್ಚುವರಿ ಪರಿಮಾಣಕ್ಕೆ ಬಿಲ್ ಪಾವತಿಸಿರುವುದು :</u><br>2016-17ನೇ ಸಾಲಿನಲ್ಲಿ ಪಾವತಿಸಿರುವ ಕಾಮಗಾರಿ ವೋಚರ್‌ಗಳನ್ನು (ಹಾಜರುಪಡಿಸಿರುವಷ್ಟು) ಸಂಬಂಧಿಸಿದ ಟೆಂಡರ್ ಲೆಕ್ಕಪತ್ರ ದಾಖಲೆಗಳೊಂದಿಗೆ ಪರಿಶೀಲಿಸಲಾಗಿ, Karnataka works Departmental code-2014 ರ codal ನಿಯಮಗಳಂತೆ Standard tender documents for procurement of works (STD) ನ KW ನ ಷರತ್ತಿನಂತೆ ಟೆಂಡರ್ ಕರೆದು, ಗುತ್ತಿಗೆ ಕರಾರು ಮಾಡಲಾಗಿರುತ್ತದೆ.<br>Standard tender document ನ ಕರಾರಿನ ಕಲಂ-30.4 ರನ್ವಯ ಪ್ರತೀ ಐಟಂ ನ ಪರಿಮಾಣವು ಅಂದಾಜು ಪಟ್ಟಿಯ ಪರಿಮಾಣಕ್ಕೆ ಸೀಮಿತಗೊಳಿಸಿ ಅಥವಾ ಶೇ.5 ರಷ್ಟರ ವರೆಗೆ ಏರಿಳಿತವಾಗಿ (Variation) ಕಾರ್ಯನಿರ್ವಹಿಸಿದ ಪರಿಮಾಣಕ್ಕೆ ಕಾರ್ಯಪಾಲಕ ಅಭಿಯಂತರರು ತಮ್ಮ ಅಧಿಕಾರದ ವಿವೇಚನೆಗೆ ಒಳಪಟ್ಟು ಪಾವತಿಸಬಹುದಾಗಿರುತ್ತದೆ. ಹಾಗೂ ಶೇ.5 ಕ್ಕಿಂತ ಹೆಚ್ಚಾದಲ್ಲಿ ವಿಶ್ವವಿದ್ಯಾನಿಲಯದಿಂದ ಮಂಜೂರಾತಿಯನ್ನು ಅಗತ್ಯವಾಗಿ ಪಡೆಯಬೇಕಾಗಿರುತ್ತದೆ. | ಪ್ರಸ್ತುತ ಕಾಮಗಾರಿಗಳ ಪರಿಮಾಣ ಅಂದಾಜು ಪಟ್ಟಿಯ ಪರಿಮಾಣಕ್ಕಿಂತ ಶೇ. 5 ರಷ್ಟನ್ನು ಮೀರಿ ಹೆಚ್ಚಿನ ಪರಿಮಾಣ ನಿರ್ವಹಿಸಿದಲ್ಲಿ ಆಡಳಿತ ಅನುಮೋದನೆ ಪಡೆದುಕೊಳ್ಳಲಾಗುತ್ತಿದೆ. ಸದ್ರಿ ಆಕ್ಷೇಪಣೆಗೆ ಸಂಬಂಧಿಸಿದಂತೆ ಹೆಚ್ಚುವರಿ ಪ್ರಮಾಣ ಬಗ್ಗೆ ಪರಿಶೀಲಿಸಿ ಅನುಮೋದನೆ ಪಡೆಯಲು ಕ್ರಮ ಕೈಗೊಳ್ಳಲಾಗುವುದು. ಆಕ್ಷೇಪಣೆಯನ್ನು ಕೈಬಿಡುವಂತೆ ಕೋರಲಾಗಿದೆ. |

| | | |
|---|---|---|
| | ಆದರೆ ಕೆಲವು ಕಾಮಗಾರಿ ಬಿಲ್ಲುಗಳಲ್ಲಿ ಅಂದಾಜು ಪಟ್ಟಿಯ ಪರಿಮಾಣಕ್ಕಿಂತ ಶೇ.5 ರಷ್ಟನ್ನು ಮೀರಿ ಹೆಚ್ಚಿನ ಪರಿಮಾಣ ನಿರ್ವಹಿಸಿರುವುದಕ್ಕೆ ಕಾರ್ಯಪಾಲಕ ಅಭಿಯಂತರರು ವಿಶ್ವವಿದ್ಯಾನಿಲಯದ ಮಂಜೂರಾತಿಯನ್ನು ಪಡೆಯದೇ ಮೇಲ್ಕಂಡ ನಿಯಮಗಳನ್ನು ಉಲ್ಲಂಘಿಸಿ, ಬಿಲ್ಲುಗಳನ್ನು ಪಾವತಿಸಿರುತ್ತಾರೆ.<br>ಹೀಗೆ ನಿಯಮಗಳನ್ನು ಉಲ್ಲಂಘಿಸಿ, ಹೆಚ್ಚುವರಿ ಪರಿಮಾಣಕ್ಕೆ ಪಾವತಿಸಿರುವ ಕಾಮಗಾರಿಗಳ ವಿವರಗಳನ್ನು <u>ಅನುಬಂಧ-46 ರಲ್ಲಿ</u> ವರದಿಗೆ ಲಗತ್ತಿಸಿದೆ. ಸಂಬಂಧಿಸಿದ ಕಾರ್ಯಪಾಲಕ ಅಭಿಯಂತರರು ಹಾಗೂ ಇತರೇ ಅಧಿಕಾರಗಳ ಮೇಲೆ ಆಡಳಿತಾತ್ಮಕ ಸೂಕ್ತ ಕ್ರಮ ಕೈಗೊಳ್ಳಲು ಹಾಗೂ ಈ ನ್ಯೂನ್ಯತೆ ಕುರಿತಂತೆ ಅನುಪಾಲನಾ ವರದಿ ಸಲ್ಲಿಸಲು ಸೂಚಿಸುತ್ತಾ, ಅನುಬಂಧ-46 ರಲ್ಲಿ ತಿಳಿಸಿರುವಂತೆ ಒಟ್ಟು ರೂ.34,95,820/- ಗಳನ್ನು ವಸೂಲಾತಿಗೆ ಸೂಚಿಸಲಾಗಿದೆ. (ವಿಚಾರಣಾ ಪತ್ರ ಸಂಖ್ಯೆ: 201/2018-19 ದಿನಾಂಕ:16.02.2019) | |
| 89 | <u>ಕಾಮಗಾರಿ ನಿರ್ವಹಿಸಿದ ಗುತ್ತಿಗೆದಾರರಿಗೆ ಸೇವಾ ತೆರಿಗೆಯನ್ನು ಪಾವತಿಸಿರುವುದು :</u><br>2016-17ನೇ ಸಾಲಿನ ಮಂಗಳೂರು ವಿಶ್ವವಿದ್ಯಾನಿಲಯದ ಇಂಜಿನಿಯರಿಂಗ್ ವಿಭಾಗದ ದಾಖಲಾತಿಗಳ ಲೆಕ್ಕಪರಿಶೋಧನೆಯಲ್ಲಿ ಬಿ.ಆರ್ ಸಂಖ್ಯೆ:253/2016-17 ರಲ್ಲಿ ವಿಶ್ವವಿದ್ಯಾನಿಲಯ ವ್ಯಾಪ್ತಿಯ ಕಾಮಗಾರಿಗಳನ್ನು ನಿರ್ವಹಿಸಿದ ಗುತ್ತಿಗೆದಾರರಾದ ಶ್ರೀ ಕ್ಲಿಫರ್ಡ್ ಡಿಸೋಜ ಇವರಿಗೆ ರೂ.2,00,008/-ಗಳ ಸೇವಾ ತೆರಿಗೆಯನ್ನು ಪಾವತಿಸಿರುವುದನ್ನು ಗಮನಿಸಲಾಗಿದ್ದು, ಹಾಜರುಪಡಿಸಿರುವ ದಾಖಲಾತಿಗಳನ್ನು ಪರಿಶೀಲಿಸಲಾಗಿ ಅಂದಾಜು ಪಟ್ಟಿಯಲ್ಲಿ ಸೇವಾ ತೆರಿಗೆ ಪಾವತಿಸುವ ಸಂಬಂಧ ಯಾವುದೇ ಅವಕಾಶ ಮಾಡಿಕೊಂಡಿರುವುದಿಲ್ಲ. ಅಲ್ಲದೆ ಆಡಳಿತಾತ್ಮಕ ಮಂಜೂರಾತಿಯಾದ ಟೆಂಡರ್ ಮೊತ್ತದಲ್ಲಿ ಸೇವಾ ತೆರಿಗೆ ಸೇರಿಲ್ಲದಿರುವುದರಿಂದ ಸದರಿ ಸೇವಾ ತೆರಿಗೆಯನ್ನು ಪಾವತಿಸಿರುವುದು ಹೆಚ್ಚುವರಿ ಪಾವತಿಯಾದಂತಾಗಿದ್ದು, ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ಹೊರೆಯಾಗಿ ನಷ್ಟ ಉಂಟಾಗಿರುತ್ತದೆ. ಆದ್ದರಿಂದ ಈ ಸಂಬಂಧ ಪಾವತಿಸಲಾದ ರೂ.2,00,008/-ಗಳನ್ನು ಸಂಬಂಧಪಟ್ಟವರಿಂದ ವಸೂಲಿಸಿ ವಿಶ್ವವಿದ್ಯಾನಿಲಯದ ಸಂಬಂಧಿತ ಖಾತೆಗೆ ಜಮಾ ಮಾಡಿ ವಿವರಗಳನ್ನು ಹಾಜರುಪಡಿಸಲು ಸೂಚಿಸಿದೆ. ಹಾಗೂ ದಾಖಲೆಗಳನ್ನು/ಕಡತಗಳನ್ನು ಪರಿಶೀಲಿಸದೆ ಈ ರೀತಿಯ ವೆಚ್ಚಗಳ ಬಿಲ್ಲುಗಳನ್ನು ಪಾವತಿಗೆ ಅಂಗೀಕರಿಸುವ ಹಣಕಾಸು ಇಲಾಖೆ ಹಾಗೂ ಇಂಜಿನಿಯರಿಂಗ್ ಶಾಖೆಯ ಸಿಬ್ಬಂದಿಗಳ ವಿರುದ್ಧ ಸೂಕ್ತ ಆಡಳಿತಾತ್ಮಕ ಕ್ರಮ ಜರುಗಿಸಲು ಸೂಚಿಸಿದೆ. | ಈ ಬಗ್ಗೆ ಕುಲಸಚಿವರ ಪತ್ರ ಸಂಖ್ಯೆ: ಮವಿ/ಡಿಇವಿ/43/ 2015-16/ಡಿ1 ದಿನಾಂಕ 01.04.2016 ರಲ್ಲಿ ನೀಡಿರುವ ಆದೇಶದನ್ವಯ ಗುತ್ತಿಗೆದಾರರಿಗೆ ಸೇವಾ ತೆರಿಗೆಯನ್ನು ವಿಶ್ವವಿದ್ಯಾನಿಲಯದಿಂದ ಪಾವತಿ ಮಾಡಲಾಗಿರುತ್ತದೆ. ಆದುದರಿಂದ ಆಕ್ಷೇಪಣೆಯನ್ನು ಕೈಬಿಡುವಂತೆ ಕೋರಲಾಗಿದೆ. |
| 90 | <u>**E.M.D, Security Deposit (Performance Security)** ಮತ್ತು **Additional Security (Unbalanced), Register of works**ಸಂಬಂಧದ ವಹಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು :</u><br>2016-17ನೇ ಸಾಲಿನ ಕಾಮಗಾರಿ ವೋಚರ್‌ಗಳಿಗೆ ಸಂಬಂಧಿಸದಿಂತೆ, Standard Tender documents (STD) for procurement of works ನ clause 24 ಮತ್ತು 24 (1), 25 ಮತ್ತು 25 (1) ಹಾಗೂ 29 ಮತ್ತು 29 (1) ರನ್ವಯ ಗುತ್ತಿಗೆದಾರರಿಂದ ಸ್ವೀಕರಿಸಲಾದ Security Deposit ಮತ್ತು Additional Security (Unbalanced) ಹಾಗೂ Clause 9 &9.1 ರನ್ವಯ ಸ್ವೀಕರಿಸಲಾದ Earnestr money deposit (EMD) ಗಳ ವಹಿಗಳು ಮತ್ತು ಸಂಪೂರ್ಣ ಲೆಕ್ಕಪತ್ರ ದಾಖಲೆಗಳು ಮತ್ತು 2016-17ನೇ ಸಾಲಿನಲ್ಲಿ ಗುತ್ತಿಗೆದಾರರಿಗೆ EMD, SD ಮತ್ತು AD ಗಳನ್ನು ಹಿಂದಿರುಗಿಸಿರುವುದಕ್ಕೆ ದಾಖಲೆಗಳನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:81/2018-19 ದಿನಾಂಕ:27.12.2018 ಹಾಗೂ ವಿಚಾರಣಾ ಪತ್ರ ಸಂಖ್ಯೆ:108/2018-19 ನ್ನು ದಿನಾಂಕ:08.01.2019 ನೀಡಿದ್ದರೂ ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.<br>ಮೇಲ್ಕಂಡ ಎಲ್ಲಾ ಲೆಕ್ಕಪತ್ರ ದಾಖಲೆಗಳನ್ನು ಲೆಕ್ಕತನಿಖೆಗೆ ಹಾಜರುಪಡಿಸದ ಕಾರಣ ಪರಿಶೀಲಿಸಲು ಹಾಗೂ ದೃಢೀಕರಿಸಲು ಸಾಧ್ಯವಾಗಿರುವುದಿಲ್ಲ. ದಿನಾಂಕ:10.05.2019 ರ ಪುನರ್ ಪರಿಶೀಲನಾ ವೇಳೆಯಲ್ಲಿ ಕಾರ್ಯಪಾಲ ಅಭಿಯಂತರರಿಗೆ ಈ ಬಗ್ಗೆ ವಿಶೇಷ ಗಮನ ಹರಿಸುವಂತೆ ಸೂಚಿಸುತ್ತಾ, Karnataka Public Works Departmental Code-2014 ರ ಪ್ಯಾರಾ-220 ರನ್ವಯ ಮತ್ತು Publics Works Accounts ನಮೂನೆ-7, 12 ಮತ್ತು 13 ರೀತ್ಯಾ ಕ್ರಮವಾಗಿ ದಾಖಲೆಗಳನ್ನು ಕ್ರಮಬದ್ಧಗೊಳಿಸಿ ಅನುಪಾಲನಾ ವರದಿಯನ್ನು ಸಲ್ಲಿಸುವಂತೆ ನಿರ್ದೇಶನ ನೀಡಲಾಯಿತು. | E.M.D, Security Deposit (Performance Security) ಮತ್ತು Additional Security (Unbalanced) ಸಂಬಂಧಿಸಿದ ವಹಿಗಳನ್ನು ಪ್ರಸ್ತುತ ನಿರ್ವಹಿಸಲಾಗುತ್ತಿದೆ.ಮುಂದಿನ ಲೆಕ್ಕ ತಪಾಸಣಾ ವೇಳೆ ಹಾಜರು ಪಡಿಸಲಾಗುವುದು. ಆಕ್ಷೇಪಣೆಯನ್ನು ಕೈ ಬಿಡುವಂತೆ ಕೋರಲಾಗಿದೆ. |

| | | |
|---|---|---|
| 91 | **<u>M/S Roy Constructuions, Mangalore</u>** <u>ರವರ ಕಾಮಗಾರಿ ಬಿಲ್ಲುಗಳಲ್ಲಿ ಆದಾಯ ತೆರಿಗೆಯನ್ನು ಕಡಿಮೆ ಕಟಾಯಿಸಿರುವುದು</u><br>2016-17ನೇ ಸಾಲಿನಲ್ಲಿ M/S Roy Constructuions, Mangalore ಎಂಬ ಸಂಸ್ಥೆಗೆ ಪಾವತಿಸಿರುವ ಕಾಮಗಾರಿ ವೋಚರ್‌ಗಳನ್ನು ಪರಿಶೀಲಿಸಲಾಗಿ, ಈ ಸಂಸ್ಥೆಯ ಹೆಸರಿಗೆ ಗುತ್ತಿಗೆ ಕರಾರು ಮಾಡಿಕೊಂಡು, ಕಾಮಗಾರಿ ಆದೇಶವನ್ನು ಸಂಸ್ಥೆಯ ಹೆಸರಿಗೇ ನೀಡಲಾಗಿರುತ್ತದೆ. ಹಾಗೂ ಕಾಮಗಾರಿ ಬಿಲ್ಲುಗಳಲ್ಲಿ ಶೇ.1 ರ ದರದಂತೆ ಆದಾಯ ತೆರಿಗೆಯನ್ನು ಕಟಾಯಿಸಲಾಗಿರುತ್ತದೆ.<br>ಆದಾಯ ತೆರಿಗೆ ಕಾಯಿದೆ-1961 ರ ಪರಿಚ್ಛೇದ 194-ಅ ರನ್ವಯ ಸಂಸ್ಥೆಯು ವ್ಯಕ್ತಿಯ ಹೆಸರಿನಲ್ಲದೆ ಸಂಸ್ಥೆಯೆಂದು ನೊಂದಯಿಸಿದ್ದಲ್ಲಿ ಗುತ್ತಿಗೆದಾರರ ಬಿಲ್ಲುಗಳಲ್ಲಿ ಶೇ.2 ರ ದರದಂತೆ ಆದಾಯ ತೆರಿಗೆಯನ್ನು ಸಂಸ್ಥೆಯ ಗುತ್ತಿಗೆ ಬಿಲ್ಲುಗಳಲ್ಲಿ ಕಟಾಯಿಸಿ ಪಾವತಿಸಬೇಕಾಗಿರುತ್ತದೆ. ಆದರೆ, ಇಲ್ಲಿ ಹೀಗೆ ಮಾಡದೆ ಶೇ.1 ರಷ್ಟನ್ನು ಮಾತ್ರ ಕಟಾಯಿಸಲಾಗಿದೆ.<br>ಆದುದರಿಂದ <u>ಅನುಬಂಧ-47</u> ರಲ್ಲಿ ತಿಳಿಸಿರುವ ಕಾಮಗಾರಿಗಳ ಪಾವತಿಗಳನ್ನು ಶೇ.2 ರ ದರದಂತೆ ಆದಾಯ ತೆರಿಗೆ ಕಟಾಯಿಸಬೇಕಾಗಿದ್ದು, ಕಡಿಮೆ ಕಟಾಯಿಸಿರುವ ಮೊತ್ತ ರೂ.34,057/-ಗಳನ್ನು ಸಂಸ್ಥೆಯವರಿಂದ ವಸೂಲಿಸಲು ತಿಳಿಸಿದೆ. ಹಾಗೂ ಇನ್ನುಮುಂದೆ ಈ ನ್ಯೂನ್ಯತೆ ಮರುಕಳಿಸದಂತೆ ಗಮನಹರಿಸಲು ಸೂಚಿಸಿದೆ. | ಸದರಿ ಗುತ್ತಿಗೆದಾರರು ಪಾನ್ ನಂಬರವನ್ನು ಒದಗಿಸಿದ್ದು ಸಂಖ್ಯೆ ABRPC0892J ಆಗಿರುತ್ತದೆ. ಪಾನ್ ಸಂಖ್ಯೆ ವೈಯಕ್ತಿಕವಾಗಿರುವುದರಿಂದ 1% ಆದಾಯ ತೆರಿಗೆ ಕಟಾಯಿಸಿದ್ದು ಸರಿಯಿರುತ್ತದೆ. ಆದುದರಿಂದ ಆಕ್ಷೇಪಣೆಯನ್ನು ಕೈಬಿಡುವಂತೆ ಕೋರಲಾಗಿದೆ. |
| 92 | <u>ಆಸ್ತಿವಹಿಯ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು :</u><br>ಮಂಗಳೂರು ವಿಶ್ವವಿದ್ಯಾನಿಲಯದ ಮಾಲೀಕತ್ವಕ್ಕೆ ಒಳಪಟ್ಟಿರುವ ಇಂಜಿನಿಯರಿಂಗ್ ವಿಭಾಗದಲ್ಲಿ ಎಲ್ಲಾ ಚರಾಸ್ತಿ ಮತ್ತು ಸ್ಥಿರಾಸ್ತಿಗಳು ಹಾಗೂ 2016-17ನೇ ಸಾಲಿನಲ್ಲಿ ಕಾಮಗಾರಿಗಳನ್ನು ನಿರ್ವಹಿಸಿ ಹೊಸದಾಗಿ ಸೃಜಿಸಲಾದ ಆಸ್ತಿಗಳ ಬಗ್ಗೆ ವಿವರಗಳನ್ನೊಳಗೊಂಡ ವಹಿಗಳು ಮತ್ತು ಸಂಪೂರ್ಣ ಲೆಕ್ಕ ಪತ್ರ ದಾಖಲೆಗಳನ್ನು ಲೆಕ್ಕ ಪರಿಶೋಧನೆಗೆ ಹಾಜರು ಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ 81/2018-19ನ್ನು ದಿನಾಂಕ 27.12.2018ರಂದು ನೀಡಿದರೂ ಸಹ ಹಾಜರುಪಡಿಸಿರುವುದಿಲ್ಲ.<br>ಈ ಬಗ್ಗೆ ಸಂಬಂಧಿಸಿದ ಅಧಿಕಾರಿಗಳ ಮೇಲೆ ಆಡಳಿತಾತ್ಮಕ ಸೂಕ್ತ ಕ್ರಮ ಕೈಗೊಂಡು. ಈ ನ್ಯೂನತೆ ಕುರಿತಂತೆ ಹಾಗೂ ಆಸ್ತಿ ವಹಿಯ ಬಗ್ಗೆ ಪೂರ್ಣ ವರದಿಯನ್ನು ಅನುಪಾಲನಾ ವರದಿಯಲ್ಲಿ ಸಲ್ಲಿಸಲು ತಿಳಿಸಿದೆ. | ಆಸ್ತಿವಹಿ (Property Register) ಹಾಗೂ ಲೆಕ್ಕಪತ್ರ ದಾಖಲೆಗಳನ್ನು ಮುಂದಿನ ಅವಧಿಗಳಲ್ಲಿ ನಿರ್ವಹಿಸಿ ಲೆಕ್ಕಪರಿಶೋಧನೆಗೆ ಹಾಜರು ಪಡಿಸಲಾಗುವುದು.ಆದುದರಿಂದ ಆಕ್ಷೇಪಣೆಯನ್ನು ಕೈಬಿಡುವಂತೆ ಕೋರಲಾಗಿದೆ. |
| 93 | <u>ಆರ್ಥಿಕ ಪ್ರತ್ಯಾಧಿಕಾರವನ್ನು ಮಿತಿ ಮೀರಿ ಕಾಮಗಾರಿಗೆ ತಾಂತ್ರಿಕ ಮಂಜೂರಾತಿ ನೀಡಿರುವುದು :</u><br>ಮಂಗಳೂರು ವಿಶ್ವವಿದ್ಯಾನಿಲಯದ ಮಂಗಳ ಗಂಗೋತ್ರಿಯಲ್ಲಿರುವ CARRT ಯೋಜನೆಯ ಸಂಶೋಧನೆಗಳಿಗಾಗಿ ಇಲಿ ಮತ್ತು ಮೊಲಗಳನ್ನು ವೈಜ್ಞಾನಿಕ ರೀತಿಯಲ್ಲಿ ಸಾಕಲು ಬೇಕಾದ ಪ್ರತ್ಯೇಕ ಹಾಗೂ ಸುಸಜ್ಜಿತ ಕಟ್ಟಡ ಅವಶ್ಯಕತೆಯನ್ನು ಪೂರೈಸಲು ರೂ.120.00 ಲಕ್ಷಗಳ ಅಂದಾಜು ಪಟ್ಟಿಗೆ ಕುಲಸಚಿವರ ಪತ್ರ ಸಂಖ್ಯೆ: ಮವಿ/ಡಿ.ಇ.ವಿ/47/2013-14/ಡಿ1 ದಿ:30.04.2014 ರಲ್ಲಿ ಆಡಳಿತ ಮಂಜೂರಾತಿ ದೊರಕಿದ್ದು ಕಾರ್ಯಪಾಲಕ ಅಭಿಯಂತರರ ನಡವಳಿಗಳ ಸಂಖ್ಯೆ: ಮಂ.ವಿ.ವಿ/ಇಡಿ/ಸಿ.ಆರ್-04/2014-15/ಎಸ್-6 ದಿನಾಂಕ:24.05.2014ರಲ್ಲಿ ತಾಂತ್ರಿಕ ಮಂಜೂರಾತಿಗೊಂಡಿರುತ್ತದೆ. ಸದರಿ ಕಾಮಗಾರಿಯನ್ನು ಟೆಂಡರ್ ಕರಾರು ಪತ್ರ ಸಂಖ್ಯೆ: MUA No:12/2015-16 (T) ದಲ್ಲಿ M/S Roy Constructions, Mangalore ರವರಿಗೆ ವಹಿಸಲಾಗಿರುತ್ತದೆ.<br>2016-17ನೇ ಸಾಲಿನಲ್ಲಿ ಈ ಕಾಮಗಾರಿಯ (Construction of Animal House for CARRT Project in Mangalore University Campus) ಎರಡನೇ ಮತ್ತು ಭಾಗಶಃ ಬಿಲ್ಲನ್ನು (ಬಿ.ಆರ್: 224/2016-17/ ದಿನಾಂಕ:01.10.2016) ಪರಿಶೀಲಿಸಿದ್ದು ಕಾರ್ಯಪಾಲಕ ಅಭಿಯಂತರರು ತಮ್ಮ ಆರ್ಥಿಕ ಪ್ರತ್ಯಾಧಿಕಾರದ ಮಿತಿ ಮೀರಿ ಸದರಿ ಕಾಮಗಾರಿಗೆ ತಾಂತ್ರಿಕ ಮಂಜೂರಾತಿ ನೀಡಲಾಗಿರುವುದು ಕಂಡು ಬಂದಿರುತ್ತದೆ.<br>ಕಾಮಗಾರಿ ಅಂದಾಜು ಪಟ್ಟಿಗೆ ತಾಂತ್ರಿಕ ಮಂಜೂರಾತಿ ನೀಡುವ ಸಂಬಂಧ ಸರ್ಕಾರಿ ಆದೇಶ ಸಂಖ್ಯೆ: PWD/671/Fc-1/2009 ಬೆಂಗಳೂರು ದಿನಾಂಕ:03.02.2010 ರ ಪ್ರಕಾರ ಆರ್ಥಿಕ ಪ್ರತ್ಯಾಧಿಕಾರದ ಮಿತಿಯನ್ನು ನಿಗದಿಪಡಿಸಿದ್ದು, ವಿವರಗಳು ಈ ಕೆಳಕಂಡಂತಿದೆ. | ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟ ಆರ್ಥಿಕ ಪ್ರತ್ಯಾಧಿಕಾರವು ಪುಟ ಸಂಖ್ಯೆ 282 ರಲ್ಲಿ ತಿಳಿಸಿರುವಂತೆ Statute relating to delegation of power to the Vice Chancellor ಅನುಬಂಧ 1.A,B,2.a.b 3 abcd ಯಲ್ಲಿ ಸಿಂಡಿಕೇಟ್ ಸಭೆಗೆ ಮಂಡಿಸಿ ನಿರ್ಣಯದಂತೆ ಕ್ರಮ ಕೈಗೊಳ್ಳುವ ಅಧಿಕಾರವಿರುತ್ತದೆ.<br>(ಆದರೂ ಕಾಮಗಾರಿಗಳ ಬಗ್ಗೆ ತಾಂತ್ರಿಕವಾಗಿ ಪರಿಶೀಲಿಸಲು ಕುಲಪತಿಯವರು ಕಟ್ಟಡ ಸಮಿತಿ ಸಭೆಯನ್ನು ರಚಿಸಿದ್ದು.(ಕಟ್ಟಡ ಸಮಿತಿ ಸಭೆಯಲ್ಲಿ ಲೋಕೋಪಯೋಗಿ ಇಲಾಖೆಯ ಅಧೀಕ್ಷಕ ಅಭಿಯಂತರರು ಸೇರಿ 08 ಜನ ಸದಸ್ಯರಿರುತ್ತಾರೆ) ತಾಂತ್ರಿಕ ವಿಚಾರಗಳನ್ನು ಚರ್ಚಿಸಿ ಅನುಮೋದನೆಗಾಗಿ ಸಿಂಡಿಕೇಟ್ ಸಭೆಗೆ ಮಂಡಿಸಲಾಗುವುದು) ಅದರಂತೆ ರೂ. 5.00 ಲಕ್ಷಕ್ಕಿಂತ ಮೇಲ್ಪಟ್ಟ ಎಲ್ಲಾ ಕಾಮಗಾರಿಗಳನ್ನು ಮಂಗಳೂರು ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳಾದ ಕಟ್ಟಡ ಸಮಿತಿ ಸಭೆ ಹಾಗೂ ಸಿಂಡಿಕೇಟ್ ಸಭೆಯ ಅನುಮೋದನೆಯೊಂದಿಗೆ ನಿರ್ವಹಿಸಲ್ಪಟ್ಟಿದೆ. ಸರ್ಕಾರಿ ಸುತ್ತೋಲೆ ದಿನಾಂಕ 03.02.2019ರಲ್ಲಿ ವಿಶ್ವವಿದ್ಯಾನಿಲಯ ತಾಂತ್ರಿಕ ಅಧಿಕಾರಿಗಳಿಗೆ ಪ್ರತಿನಿಯೋಜನಾಧಿಕಾರ ವ್ಯಾಪ್ತಿಯ ಬಗ್ಗೆ ಸ್ಪಷ್ಟತೆಯಿಲ್ಲದಿರುವುದರಿಂದ ಹಾಗೂ ಮಂಗಳೂರು ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳ ಅನುಮೋದನೆಯ ನಂತರವೇ |

<table>
<tr>
<td></td>
<td>

| | | |
|---|---|---|
| 1 | ಮುಖ್ಯ ಅಭಿಯಂತರರಿಗೆ | ಪೂರ್ಣ ಅಧಿಕಾರ (ಪ್ರತೀ ಕಾಮಗಾರಿಗೆ) |
| 2 | ಅಧೀಕ್ಷಕ ಅಭಿಯಂತರರಿಗೆ | ರೂ.50.00 ಲಕ್ಷಗಳು (ಪ್ರತೀ ಕಾಮಗಾರಿಗೆ) |
| 3 | ಕಾರ್ಯಪಾಲಕ ಅಭಿಯಂತರರಿಗೆ | ರೂ.10.00 ಲಕ್ಷಗಳು (ಪ್ರತೀ ಕಾಮಗಾರಿಗೆ) |

ಸರ್ಕಾರ ನಿಗದಿಪಡಿಸಿರುವ ಆರ್ಥಿಕ ಪ್ರತ್ಯಾಧಿಕಾರ ಪ್ರಕಾರ (Delegation of financial power) ರೂ.10.00 ಲಕ್ಷಗಳನ್ನು ಮೀರಿ ಕಾರ್ಯಪಾಲಕ ಅಭಿಯಂತರರು ಮೇಲ್ಕಂಡ ಕಾಮಗಾರಿಯ ಅಂದಾಜು ಮೊತ್ತ ರೂ.120.00 ಗಳಿಗೆ ತಾಂತ್ರಿಕ ಮಂಜೂರಾತಿ ನೀಡಿರುವುದರಿಂದ, 2016-17ನೇ ಸಾಲಿನಲ್ಲಿ ಈ ಕಾಮಗಾರಿಗೆ ಪಾವತಿಸಿರುವ (ಧನಾದೇಶ ಸಂಖ್ಯೆ: 095966/ ದಿನಾಂಕ:11.10.2016) ರೂ.33,23,727/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.
</td>
<td>ಕಾರ್ಯಕಾರಿ ಅಭಿಯಂತರರು ಕುಲಪತಿಯವರ ಪರವಾಗಿ ತನ್ನ ಉಪಸ್ಥಿತಿಯಲ್ಲಿ ತಾಂತ್ರಿಕ ಮಂಜೂರಾತಿಯನ್ನು ನೀಡಿರುತ್ತಾರೆ ಹಾಗೂ ವಿಶ್ವವಿದ್ಯಾನಿಲಯದಲ್ಲಿ ಕಾರ್ಯಕಾರಿ ಅಭಿಯಂತರರಿಗೆ ಯಾವುದೇ ಆರ್ಥಿಕ ಪ್ರತ್ಯಾಧಿಕಾರವಿರುವುದಿಲ್ಲ ಎಂದು ಈ ಮೂಲಕ ತಿಳಿಸಲಾಗಿದೆ.<br>ಆದ್ದರಿಂದ ಆಕ್ಷೇಪಣೆಯನ್ನು ಕೈಬಿಡಲು ಕೋರಲಾಗಿದೆ.</td>
</tr>
<tr>
<td>94</td>
<td>
<u>ಅಳತೆ (ಎಂ.ಬಿ) ಪುಸ್ತಕಗಳಲ್ಲಿ **Check Measurement** ದಾಖಲಿಸದೇ ಬಿಲ್ಲು ಪಾವತಿಸಿರುವುದು :</u>

2016-17ನೇ ಸಾಲಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ ಕಾಮಗಾರಿ ದಾಖಲೆಗಳನ್ನು ಪರಿಶೀಲಿಸಲಾಗಿ, ಕಾರ್ಯಪಾಲಕ ಅಭಿಯಂತರರಾದ ಶ್ರೀ ಎನ್.ಎಸ್.ಮಹದೇವಸ್ವಾಮಿ, ದಿನಾಂಕ:01.04.2016 ರಿಂದ ದಿ:05.07.2016 ರವರೆಗೆ ಮತ್ತು ಶ್ರೀ ಎಂ.ಚಂದ್ರಶೇಖರ್ ದಿನಾಂಕ:05.07.2016 ರಿಂದ ದಿ:31.03.2017 ಅವಧಿಗಳಲ್ಲಿ Check Measurement, ನ್ನು ಎಂ.ಬಿ ಪುಸ್ತಕಗಳಲ್ಲಿ ದಾಖಲಿಸಿರುವುದಿಲ್ಲ. ಹಾಗೂ ಹಣಕಾಸು ಅಧಿಕಾರಿಗಳಾದ ಪ್ರೊ. ಪಿ.ಎ.ರೇಗೋ, ದಿನಾಂಕ:01.04.2016 ರಿಂದ ದಿ:15.05.2016 ರವರೆಗೆ ಶ್ರೀ ಪಾಂಡುರಂಗ ಪ್ರಭು, ದಿನಾಂಕ: 16.05.2016 ರಿಂದ ದಿ:05.06.2016 ರವರೆಗೂ ಮತ್ತು ಪ್ರೋ. ಶ್ರೀಮತಿ ಕಲ್ಲೂರಾಯ, ದಿನಾಂಕ: 06.06.2016 ರಿಂದ ದಿನಾಂಕ:31.03.2017 ಅವಧಿಗಳಲ್ಲಿ ಈ ಕಾಮಗಾರಿ ಬಿಲ್ಲುಗಳನ್ನು ಪಾವತಿ ಮಾಡುವ ಮುನ್ನ ಚೆಕ್‌ಮೆಜರ್‌ಮೆಂಟ್ ಮಾಡಿದ ಬಗ್ಗೆ ಖಚಿತಪಡಿಸಿಕೊಂಡಿರುವುದಿಲ್ಲ. ಇವರುಗಳ ಅವಧಿಯಲ್ಲಿ ಈ ಪ್ರಮಾದಗಳು ಕಂಡು ಬಂದಿದ್ದು, Karnataka public works departmental code, ಟೆಂಡರ್ ಷರತ್ತುಗಳು ಪಾವತಿ ನಿಯಮಗಳನ್ನು ಉಲ್ಲಂಘಿಸಿರುವುದು ಕಂಡು ಬಂದಿರುತ್ತದೆ. ಇವರುಗಳ ಮೇಲೆ ಆಡಳಿತಾತ್ಮಕ ಕ್ರಮ ಜರುಗಿಸ ಬಹುದಾಗಿರುತ್ತದೆ.

Karnataka public works departmental code-2014 ರ chapter-10 paragraph 110 (9) ರನ್ವಯ ಕಾರ್ಯಪಾಲಕ ಅಭಿಯಂತರರು ರೂ.25.00 ಲಕ್ಷಗಳವರೆಗಿನ ಕಾಮಗಾರಿ ಮೌಲ್ಯಗಳಿಗೆ ಶೇ.10 ರಷ್ಟು ಹಾಗೂ ರೂ.25.00 ಲಕ್ಷಗಳನ್ನು ಮೀರಿದ ಕಾಮಗಾರಿ ಮೌಲ್ಯಗಳಿಗೆ ಶೇ.25 ರಷ್ಟು Check Measurement ದಾಖಲಿಸಿದ ನಂತರವೇ ಬಿಲ್ಲು ಪಾವತಿಸಬೇಕಾಗಿರುತ್ತದೆ.

ಈ ಸಂಬಂಧವಾಗಿ ವಿಚಾರಣಾ ಪತ್ರ ಸಂಖ್ಯೆ: 199/2018-19 ದಿ:16.02.2019 ರ ನೀಡಲಾಗಿ ಸಮಂಜಸವಾದ ಉತ್ತರ ಸ್ವೀಕೃತಿಯಾಗದ ಕಾರಣ ಹಾಗೂ ಚೆಕ್‌ಮೆಜರ್ ಮಾಡಿದ ದಾಖಲೆಗಳಿಲ್ಲದ ಕಾರಣ, ಅಳತೆಗಳನ್ನು ಪುನಃ ಖಚಿತಪಡಿಸಿಕೊಳ್ಳುವ ಷರತ್ತಿಗೆ ಒಳಪಡಿಸಿ, ರೂ.61,96,860/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರಗಳು <u>ಅನುಬಂಧ- 48ರಲ್ಲಿ</u> ವರದಿಗೆ ಲಗತ್ತಿಸಿದೆ.
</td>
<td>ಪ್ರಸ್ತುತ ಆಳತೆಗಳಿಗೆ ಪರಿಶೀಲನೆ ಮಾಡಲಾಗುವುದು. ಆದ್ದರಿಂದ ಈ ಆಕ್ಷೇಪಣೆಯನ್ನು ಕೈಬಿಡಲು ಕೋರಲಾಗಿದೆ.</td>
</tr>
<tr>
<td>95</td>
<td>
<u>**Electronic Measurement Book** ನಿರ್ವಹಿಸದೇ **Public works Department code-2014** ರ **codal** ನಿಯಮಗಳನ್ನು ಉಲ್ಲಂಘಿಸಿ **Manual Measurement Book** ನಿರ್ವಹಿಸಿರುವುದು :</u>

1) ಮಂಗಳೂರು ವಿಶ್ವವಿದ್ಯಾನಿಲಯದ ವಿಜ್ಞಾನ ಸಂಕೀರ್ಣ ಕಟ್ಟಡದ ದುರಸ್ಥಿ ಮತ್ತು ನವೀಕರಣ ಕಾಮಗಾರಿ (ನಾಲ್ಕನೇ ಮತ್ತು ಅಂತಿಮ ಬಿಲ್ಲು) ಯ ಅಂದಾಜು ಮೊತ್ತ ರೂ.1,43,50,000/-(ಬಿ.ಆರ್ ಸಂಖ್ಯೆ:20/2016-17 ದಿನಾಂಕ:21.04.2016)

2) ಮಂಗಳೂರು ವಿಶ್ವವಿದ್ಯಾನಿಲಯದ ಆವರಣದ ವಿಜ್ಞಾನ ಸಂಕೀರ್ಣ ಕಟ್ಟಡದ ಮೊದಲನೆಯ, ಎರಡನೇ ಅಂತಸ್ತು ಹಾಗೂ ಛಾವಣಿಯ ನವೀಕರಣ ಕಾಮಗಾರಿ (ಏಳನೇ ಮತ್ತು ಅಂತಿಮ ಬಿಲ್ಲು) ಯ ಅಂದಾಜು ಮೊತ್ತ ರೂ.2.41/- ಕೋಟಿ (ಬಿ.ಆರ್ ಸಂಖ್ಯೆ:139/2016-17 ದಿನಾಂಕ:13.07.2016)

3) ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ ಚಿಕ್ಕ ಅಳುವಾರದಲ್ಲಿ ವಿಜ್ಞಾನ ಸಂಕೀರ್ಣ ಕಟ್ಟಡ (ಉತ್ತರ ಭಾಗ) ನಿರ್ಮಾಣ ಕಾಮಗಾರಿ (ಮೊದಲನೇ ಮತ್ತು ಭಾಗಶಃ ಬಿಲ್ಲು) ಯ ಅಂದಾಜು ಮೊತ್ತ ರೂ.4,90,20,000/- (ಬಿ.ಆರ್ ಸಂಖ್ಯೆ: 175/2016-17 ದಿನಾಂಕ:12.08.2016)
</td>
<td>ಪ್ರಸ್ತುತ ರೂ. 5.00 ಲಕ್ಷದ ಮೇಲ್ಪಟ್ಟ ಎಲ್ಲಾ ಕಾಮಗಾರಿಗಳಿಗೂ Electronic Measure- ment Book (EMB) ನಿರ್ವಹಿಸಲಾಗುತ್ತಿದೆ. ಆದ್ದರಿಂದ ಆಕ್ಷೇಪಣೆಯನ್ನು ಕೈಬಿಡುವಂತೆ ಕೋರಲಾಗಿದೆ.</td>
</tr>
</table>

| | | |
|---|---|---|
| | ಮೇಲ್ಕಂಡ ಈ ಮೂರು ಕಾಮಗಾರಿಗಳ ಅಳತೆಗಳನ್ನು Electronic MeasurementBook ನಲ್ಲಿ ದಾಖಲಿಸಿರುವುದಿಲ್ಲ. ಹಾಗೂ ಅಳತೆಗಳನ್ನು ಕೈಯ ಬರವಣಿಗೆಯಲ್ಲಿ ಬರೆದು ದಾಖಲಿಸಿರುತ್ತಾರೆ. ಅಳತೆ ಪುಸ್ತಕ (Manual measurement Book) ದಲ್ಲಿ ದಾಖಲಿಸಿ, ನಿರ್ವಹಿಸಲಾಗಿರುತ್ತದೆ.<br>Karantaka Public works Department Code-2014 ರ Chapter-10 Paragraph 110 {1.(ಜಿ)} ಮತ್ತು Paragraph 112 (1) [2(i) (ii) ರನ್ವಯ ಮತ್ತು ಸರ್ಕಾರದ ಆದೇಶ ಸಂಖ್ಯೆ: FD/56/PRO/CELL/2004 ಬೆಂಗಳೂರು ದಿನಾಂಕ:18.01.2005 ರನ್ವಯ ಕಾಂಗಾರಿ ಮೌಲ್ಯ ರೂ.25.00 ಲಕ್ಷಗಳು ಮತ್ತು ಅದನ್ನು ಮೀರಿದ್ದಕ್ಕೆ ಗುತ್ತಿಗೆದಾರರು Electronic Measurement Book ನಲ್ಲಿ ಅಳತೆಗಳನ್ನು ದಾಖಲಿಸಿ Soft ಮತ್ತು Hard ಪ್ರತಿಗಳನ್ನು diskette/ CD ROM ಮೂಲಕ ಪಾವತಿಗಾಗಿ ಸಂಬಂಧಿಸಿದ ಅಭಿಯಂತರರಿಗೆ ಸಲ್ಲಿಸಬೇಕಾಗಿರುತ್ತದೆ.<br>ಮೇಲ್ಕಂಡ ನಿಯಮಗಳನ್ನು ಉಲ್ಲಂಘಿಸಿರುವವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಲು ಲೆಕ್ಕಪರಿಶೋಧನಾ ವರದಿಯು ಸೂಚಿಸುತ್ತದೆ ಹಾಗೂ ಈ ಕುರಿತು ಅನುಪಾಲನಾ ವರದಿ ಸಲ್ಲಿಸಲು ಸೂಚಿಸಿದೆ. | |
| 96 | ಏಕೈಕ ಬಿಡ್ಡುದಾರರಿಗೆ ಟೆಂಡರ್ ಕಾಮಗಾರಿ ವಹಿಸಿರುವುದು :<br>ಕಾಮಗಾರಿ ಟೆಂಡರ್ ಪ್ರಕ್ರಿಯೆ ಕಡತಗಳನ್ನು ಪರಿಶೀಲಿಸಲಾಗಿ, ಅನುಬಂಧ-49 ರಲ್ಲಿ ತಿಳಿಸಿರುವ ಕಾಮಗಾರಿಗಳನ್ನು ಏಕೈಕ ಬಿಡ್ಡುದಾರರಿಗೆ ಕಾರ್ಯಾದೇಶ ನೀಡಿ ವಹಿಸಲಾಗಿರುತ್ತದೆ.<br>ಕರ್ನಾಟಕ ಸರ್ಕಾರದ ಸರ್ಕಾರಿ ಆದೇಶ ಪತ್ರ ಸಂಖ್ಯೆ: NO/PWD/1359/SO/F.C/2001/(P2) ದಿನಾಂಕ: 03.12.2012 ರ ಉಪಬಂಧ 3-1 ರನ್ವಯ ಕಾಮಗಾರಿಯ ಆದೇಶ ನೀಡುವ ಮೊದಲು ಉಪಬಂಧದಲ್ಲಿ ವಿವರಿಸಿರುವಂತೆ ಏಕೈಕ ಬಿಡ್ಡುದಾರರಿಗೆ (Single tender) ಕಾರ್ಯಾದೇಶವನ್ನು ನೀಡುವಂತಿಲ್ಲ. ಟೆಂಡರ್ ಕರೆದಾಗ ಏಕೈಕ ಬಿಡ್ಡುದಾರರು ಆಯ್ಕೆಯಾದಲ್ಲಿ ಸದರಿ ಟೆಂಡರನ್ನು ತಿರಸ್ಕರಿಸಿ, ಮರು ಟೆಂಡರ್ ಆಹ್ವಾನ ನೀಡಬೇಕಾಗಿರುತ್ತದೆ.<br>ಮೇಲ್ಕಂಡ ಸರ್ಕಾರಿ ಆದೇಶವನ್ನು ಉಲ್ಲಂಘಿಸಿ ಅನುಬಂಧ-49 ರಲ್ಲಿ ತಿಳಿಸಿರುವ ಕಾಮಗಾರಿಗಳನ್ನು ಏಕೈಕ ಗುತ್ತಿಗೆದಾರರಿಗೆ ವಹಿಸಿರುವುದಕ್ಕೆ ಸೂಕ್ತ ಸ್ಪಷ್ಟೀಕರಣಗಳನ್ನು ನೀಡಲು ತಿಳಿಸುತ್ತಾ, ಮೂರು ಕಾಮಗಾರಿಗಳ ಒಟ್ಟು ಮೊತ್ತ ರೂ.6,85,890/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ ಹಾಗೂ ಈ ಕುರಿತು ಅನುಪಾಲನಾ ವರದಿ ಸಲ್ಲಿಸಲು ಸೂಚಿಸಿದೆ. | ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿ ಕೈಗೊಳ್ಳಲು ಪ್ರಸ್ತಾಪಿಸಲಾಗುವ ಕೆಲವೊಂದು ಕಾಮಗಾರಿಗಳನ್ನು ಅತೀ ಅಗತ್ಯದ ದೃಷ್ಟಿಯಿಂದ, ಸಕ್ಷಮ ಪ್ರಾಧಿಕಾರಗಳಿಂದ ನಿಯಮಾನುಸಾರವಾಗಿ ವಿಶ್ವವಿದ್ಯಾನಿಲಯಕ್ಕೆ ಹೆಚ್ಚಿನ ಆರ್ಥಿಕ ಹೊರೆ ಇಲ್ಲದಂತೆ ನಿರ್ವಹಿಸಲಾಗಿರುತ್ತದೆ. ಮುಂದಿನ ದಿನಗಳಲ್ಲಿ ಏಕೈಕ ಬಿಡ್ಡುದಾರರಿಗೆ ಟೆಂಡರ್ ಕಾಮಗಾರಿಯನ್ನು ವಹಿಸದಂತೆ ಕ್ರಮ ಕೈಗೊಳ್ಳಲಾಗುವುದು.<br>ಆದುದರಿಂದ ಆಕ್ಷೇಪಣೆ ಕೈಬಿಡುವಂತೆ ಕೋರಲಾಗಿದೆ. |
| 97 | **Inspire Fellowship** ಅನುದಾನದ ದಾಸ್ತಾನು ವಹಿಯನ್ನು ಹಾಜರುಪಡಿಸದಿರುವುದು :<br>2016-17ನೇ ಸಾಲಿನ ಲೆಕ್ಕ ಪರಿಶೋಧನೆಯಲ್ಲಿ Inspire Fellowship ಅನುದಾನದ ವೆಚ್ಚದ ಓಚರ್‌ಗಳನ್ನು ಪರಿಶೀಲಿಸಲಾಗಿ, ಈ ಪ್ರಾಜೆಕ್ಟ್‌ಗೆ ಸಂಬಂಧಪಟ್ಟಂತೆ ವಿವಿಧ ಸಂಶೋಧನಾ ವಿದ್ಯಾರ್ಥಿಗಳು ಹಲವಾರು ವಸ್ತುಗಳು ಪಠ್ಯಪುಸ್ತಕಗಳು ಉಪಕರಣಗಳು ಇತ್ಯಾದಿಗಳನ್ನು ಖರೀದಿ ಮಾಡಲಾಗಿದೆ. ಆದರೆ ಇದಕ್ಕೆ ಸಂಬಂಧಪಟ್ಟಂತೆ ಯಾವುದೇ ದಾಸ್ತಾನು ವಹಿಯನ್ನು ನಿರ್ವಹಿಸಿರುವುದಿಲ್ಲ. ಆದ್ದರಿಂದ ಖರೀದಿ ಮಾಡಿರುವ ವಸ್ತುಗಳ ನಿಖರತೆ ಮತ್ತು ಅದರ ಗುಣಮಟ್ಟವನ್ನು ತಿಳಿಯಲು ಸಾಧ್ಯವಿಲ್ಲದ ಕಾರಣ ದಾಸ್ತಾನು ವಹಿಯನ್ನು ಸಮರ್ಪಕವಾಗಿ ನಿರ್ವಹಿಸಲು ತಿಳಿಸಿದೆ. | Inspire Fellowship ನ Contingency ಅನುದಾನದಲ್ಲಿ ಖರೀದಿಸಲಾಗುವ ಕಿರು ಉಪಕರಣ, ರಾಸಾಯನಿಕಗಳಿಗೆ ದಾಸ್ತಾನು ವಹಿ ನಿರ್ವಹಿಸುವಂತೆ ಸಂಶೋಧನಾ ವಿದ್ಯಾರ್ಥಿಗಳಿಗೆ ಸೂಚಿಸಲಾಗುವುದು. ಸದರಿ ಅನುದಾನವನ್ನು ಬಹುತೇಕ ಜೆರಾಕ್ಸ್, ಲೇಖನ ಸಾಮಾಗ್ರಿಗಳ ಖರೀದಿ, ಕ್ಷೇತ್ರ ಕಾರ್ಯದ ಪ್ರಯಾಣ ವೆಚ್ಚ, ಮುದ್ರಣ ಮುಂತಾದ ಕಾರ್ಯಗಳಿಗೆ ಬಳಸಲಾಗುವುದರಿಂದ 2019-20ನೇ ಸಾಲಿನಿಂದ ಸಂಶೋಧನಾ ವಿದ್ಯಾರ್ಥಿಗಳಿಗೆ ಕಟ್ಟುನಿಟ್ಟಾಗಿ ದಾಸ್ತಾನು ವಹಿ ನಿರ್ವಹಿಸಲು ಕ್ರಮಕೈಗೊಳ್ಳುವುದಾಗಿ ತಿಳಿಸುತ್ತಾ ಆಕ್ಷೇಪಣೆ ಕೈ ಬಿಡುವಂತೆ ಕೋರಲಾಗಿದೆ. |
| 98 | **DST PURSE** ಅನುದಾನದ ವೆಚ್ಚಗಳಲ್ಲಿ ಕಂಡು ಬಂದಿರುವ ನ್ಯೂನ್ಯತೆಗಳ ಕುರಿತು :-<br>2016-17ನೇ ಸಾಲಿನ ಲೆಕ್ಕ ತಪಾಸಣೆಯಲ್ಲಿ DST PURSE ವತಿಯಿಂದ ಪ್ರಾಯೋಜಿತ ಸಂಶೋಧನೆ ಕಾರ್ಯಕ್ಕೆ ಬಿಡುಗಡೆಯಾಗಿರುವ ಅನುದಾನದ ವೆಚ್ಚಗಳನ್ನು ಪರಿಶೀಲಿಸಲಾಗಿ Schemes and Project ಗಳಿಗೆ ಸಂಬಂಧಿಸಿದಂತೆ ವಾರ್ಷಿಕ ಲೆಕ್ಕ ಪತ್ರದಲ್ಲಿ ನಮೂದಿಸಿರುವಂತೆ DST PURSE, 2016-17ನೇ ಸಾಲಿನ ಲೆಕ್ಕ ಪರಿಶೋಧನೆಯಲ್ಲಿ ಕಂಡು ಬಂದಿರುವ ನ್ಯೂನ್ಯತೆಗಳ ವಿವರಗಳು ಈ ಕೆಳಕಂಡಂತಿದೆ. | |

| ಕ್ರ.ಸಂ | ಓಚರ್ ಸಂಖ್ಯೆ/ ದಿನಾಂಕ | ಧನಾದೇಶ ಸಂಖ್ಯೆ/ ದಿನಾಂಕ | ಮೊತ್ತ | ವಿವರ | ನ್ಯೂನತೆಗಳು |
|---|---|---|---|---|---|
| 1 | 3/02.05.16 | 701042/ 14,50,635 02.05.16 | 15490 | R.o water Purifier, Eureka Farbes Ltd Mangaloere ಇವರಿಂದ ಖರೀದಿ ಮಾಡಿರುವುದು | 1)ಕೊಟೇಶನ್ ಕರೆದಿರುವುದಿಲ್ಲ 2) ದಾಸ್ತಾನುವಹಿಯಲ್ಲಿ ದಾಖಲಾಗಿರುವುದಿಲ್ಲ |
| 2 | 12/19.05.16 | 701053/ 19.05.16 | 9271 | M/s Binary Systems Private Limited , Bangalore ಇವರಿಂದ Laser Printer ಖರೀದಿ ಮಾಡಿರುವುದು | 1)ಕೊಟೇಶನ್ ಕರೆದಿರುವುದಿಲ್ಲ 2)ದಾಸ್ತಾನು ವಹಿಯಲ್ಲಿ ದಾಖಲಾಗಿರುವುದಿಲ್ಲ |
| 3 | 13/24.05.16 | 701054/ 24.05.16 | 54374 | M/s anchids networks & systeams Bangalore ಇವರಿಂದ Dell Computer ಖರೀದಿ ಮಾಡಿರುವುದು | 1)ಕೊಟೇಶನ್ ಕರೆದಿರುವುದಿಲ 2) ದಾಸ್ತಾನು ವಹಿಯಲ್ಲಿ ದಾಖಲಾಗಿರುವುದಿಲ್ಲ |
| 4 | 14/24.05.16 | 701055/ 24.05.16 | 1371500 | M/s Convengent Technologies Bangalore ಇವರಿಂದ Logic Analy 3 Tektronix ಉಪಕರಣ ಖರೀದಿ ಮಾಡಿರುವುದು | 1) ಇ-ಟೆಂಡರ್ ಕರೆದಿರುವ ಬಗ್ಗೆ ದಾಖಲೆಗಳನ್ನು ಒದಗಿಸಿರುವುದಿಲ್ಲ 2) ದಾಸ್ತಾನು ವಹಿಯಲ್ಲಿ ದಾಖಲಾಗಿರುವುದಿಲ್ಲ |
| | | **Total** | 14,50,635 | | |

ಈ ಮೇಲಿನ ಓಚರ್‌ಗಳಿಗೆ ಸಂಬಂಧಪಟ್ಟಂತೆ ವಿಚಾರಣಾ ಪತ್ರ ಸಂಖ್ಯೆ:137/2018-19 ದಿನಾಂಕ29.01.2019 ರಂದು ವಿಚಾರಣೆ ನೀಡಿದ್ದು ದಿನಾಂಕ:15.02.2019ರಂದು ನೀಡಿರುವ ಉತ್ತರವು ಸಮಂಜಸವಾಗಿರುವುದಿಲ್ಲ. ಆದ್ದರಿಂದ ಒಟ್ಟು ಮೊತ್ತ ರೂ.14,50,635/- ನ್ನು ಆಕ್ಷೇಪಣೆಯಲ್ಲಿಡಲಾಗಿದೆ.

DST PURSE Lab Service Charge ಹೆಸರಿನಲ್ಲಿ ಈಗಾಗಲೇ ಖಾತೆ ಇದ್ದರೂ ಸಹ, (A/c No 31731454646) ಹೊಸ ಬ್ಯಾಂಕ್ ಖಾತೆಯನ್ನು State Bank of India ಮಂಗಳ ಗಂಗೋತ್ರಿಯಲ್ಲಿ (A/c.No 36113863215) ತೆರೆಯಲಾಗಿದೆ. ಯಾವುದಾದರು ಒಂದು ಖಾತೆಗೆ ಅಂತಿಮ ಶಿಲ್ಕನ್ನು ವರ್ಗಾವಣೆ ಮಾಡಿಕೊಂಡು ಆ ಖಾತೆಯಲ್ಲಿ ಮಾತ್ರ ನಿರ್ವಹಿಸಲು ನಿರ್ದೇಶನ ನೀಡಿದೆ.

ಸಂಶೋಧನಾ ವಿದ್ಯಾರ್ಥಿಗಳಿಂದ ಸಂಗ್ರಹಸಿರುವ PURSE LAB ಶುಲ್ಕವನ್ನು ಬ್ಯಾಂಕ್ ಖಾತೆಗೆ ಜಮ ಮಾಡಿಸಿರುವ ಬಗ್ಗೆ ಪೂರಕ ದಾಖಲೆ ನೀಡದ ಕಾರಣ, ಜಮಾ ಮಾಡಿರುವ ಮೊತ್ತದಲ್ಲಿ ವ್ಯತ್ಯಾಸ ಕಂಡುಬರುವ ಸಾಧ್ಯತೆ ಇದೆ. ಮತ್ತು ಇದಕ್ಕೆ ಸಂಬಂಧಪಟ್ಟಂತೆ ಯಾವುದೇ ನಗದು ಪುಸ್ತಕವನ್ನು ನಿರ್ವಹಿಸಿರುವುದಿಲ್ಲ ಆದ್ದರಿಂದ ಸಂಗ್ರಹವಾಗಿರುವ ಒಟ್ಟು ರೂ.4,48,775/- ರ ನಿಖರತೆಯನ್ನು ಲೆಕ್ಕಪರಿಶೋಧನೆಯಲ್ಲಿ ಖಚಿತಪಡಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ.

DST PURSE Programme ಖಾತೆ ಸಂಖ್ಯೆ:31731454646ಯಿಂದ, ದಿನಾಂಕ:16.07.16ಮತ್ತು ದಿನಾಂಕ 03.08.16 ರಂದು ಕ್ರಮವಾಗಿ ರೂ.1,91,034 ಮತ್ತು ರೂ.33,831 ನ್ನು ವಿಶ್ವವಿದ್ಯಾನಿಲಯದ ಸಾಮಾನ್ಯ ನಿಧಿ ಖಾತೆಗೆ ವರ್ಗಾವಣೆ ಮಾಡಿದ್ದು ಇದಕ್ಕೆ ಸಂಬಂಧಪಟ್ಟ ಯಾವುದೇ ದಾಖಲೆಗಳನ್ನು ಒದಗಿಸದಿರುವುದರಿಂದ ಯಾವ ಕಾರಣಕ್ಕಾಗಿ ಈ ಹಣವನ್ನು ವರ್ಗಾವಣೆ ಮಾಡಲಾಯಿತು ಎನ್ನುವುದಕ್ಕೆ ವಿವರಣೆಯನ್ನು ಮುಂದಿನ ಲೆಕ್ಕ ತನಿಖೆಗೆ ಹಾಜರುಪಡಿಸುವುದು.

ಈ ಯೋಜನೆಯಡಿ ಖರೀದಿಸಿರುವ ವಿವಿಧ ಸರಕುಗಳನ್ನು ದಾಸ್ತಾನು ವಹಿಗೆ ಸ್ವೀಕರಿಸಿ ಸರಿಯಾಗಿ ನಿರ್ವಹಿಸಿರುವುದಿಲ್ಲ. ಬದಲಾಗಿ ಕಂಪ್ಯೂಟರ್ ಮುದ್ರಿತ ಪ್ರತಿಯನ್ನು ಇದಕ್ಕೆ ಲಗತ್ತಿಸಲಾಗುತ್ತಿದ್ದು ದೃಢೀಕರಿಸಲು ಕ್ರಮವಹಿಸುವುದು.

ಡಿಎಸ್ಟಿ ಪರ್ಸ್ ಯೋಜನೆಯಡಿ ಖರೀದಿಸಿರುವ ವಿವಿಧ ಸರಕುಗಳನ್ನು ದಾಸ್ತಾನು ವಹಿಯಲ್ಲಿ ಸ್ವೀಕರಿಸಿ, ನಮೂದುಗಳನ್ನು ಮಾಡಿದ್ದು ಈ ಬಗ್ಗೆ ದೃಢೀಕರಿಸಲಾಗಿದೆ ಹಾಗೂ ಇನ್ನು ಮುಂದಕ್ಕೆ ನಿಯಮಾನುಸಾರ ಇ-ಟೆಂಡರ್/ಕೊಟೇಶನ್‌ಗಳನ್ನು ಆಹ್ವಾನಿಸಿ ಸಾಮಾಗ್ರಿಗಳನ್ನು ಖರೀದಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಲಾಗಿದೆ. ಆದ್ದರಿಂದ ಈ ಆಕ್ಷೇಪಣೆಯನ್ನು ಕೈ ಬಿಡುವಂತೆ ಕೋರಲಾಗಿದೆ.

| | | |
|---|---|---|
| 99 | 2016-17ನೇ ಸಾಲಿನ ವಿಶೇಷ ಪ್ರಾಜೆಕ್ಟ್ ಸ್ಕೀಂ ಬಿ.ಆರ್.ಎನ್.ಎಸ್ ಆರ್/ಪಿ **Development and environment** ನ ಬಗ್ಗೆ :<br>ಮಂಗಳೂರು ವಿ.ವಿ.ಯ 2016-17ನೇ ಸಾಲಿನ ವಿಶೇಷ ಪ್ರಾಜೇಕ್ಟ್ ಸ್ಕೀಂ ಬಿ.ಆರ್.ಎನ್.ಎಸ್ ಆರ್/ಪಿ Development and environment ಗೆ ಸಂಬಂಧಿಸಿದಂತೆ CARER ಕೇಂದ್ರಮಾಹಿತಿ ಪುಸ್ತಕ ಮುದ್ರಣ (ಧನಾದೇಶ ಸಂಖ್ಯೆ:258774) ಪಾವತಿ ಮೊತ್ತ ರೂ.40,800/-ಗಳನ್ನು ಪಾವತಿಸಲಾಗಿರುತ್ತದೆ. ಆದರೆ ಸರ್ಕಾರಿ ಆದೇಶ ಸಂಖ್ಯೆ:ಆಇ.01ಟಿಸಿಇ.2012 ಬೆಂಗಳೂರು ದಿನಾಂಕ:21.06.2012 ಆದೇಶದನ್ವಯ ಮೂರು ದರಪಟ್ಟಿಗಳನ್ನು ಪಡೆದು ಕನಿಷ್ಠ ದರವನ್ನು ನಮೂದಿಸಿರುವ ಸಂಸ್ಥೆಗೆ ಖರೀದಿ ಆದೇಶವನ್ನು ನೀಡಬೇಕಿರುತ್ತದೆ. ದರಪಟ್ಟಿ ಕರೆದು ಖರೀದಿ ಪ್ರಕ್ರಿಯೆ ಕೈಗೊಂಡಿರುವ ಬಗ್ಗೆ ಕಡತಗಳನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರಸಂಖ್ಯೆ:190 ದಿನಾಂಕ:12.02.2019 ರಲ್ಲಿ ಕೋರಲಾಗಿ, ಅವುಗಳನ್ನು ಹಾಜರುಪಡಿಸದಿರುವುದರಿಂದ ರೂ.40,800/-ಗಳನ್ನು ಆಕ್ಷೇಪಣೆಗೆ ಸೂಚಿಸಿದೆ. | ಅತೀ ಅಗತ್ಯದ ಹಿನ್ನಲೆಯಲ್ಲಿ ಪುಸ್ತಕಗಳನ್ನು ಮುದ್ರಣ ಮಾಡಿದ್ದು ಮುಂದೆ ಕೊಟೇಶನ್ ಕರೆದು ನಿರ್ವಹಿಸಲಾಗುವುದು. ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ. |
| 100 | ಮಂಗಳೂರು ವಿಶ್ವವಿದ್ಯಾನಿಲಯ ಉದ್ಯೋಗಿಗಳ ಪತ್ತಿನ ಸಹಕಾರಿ ಸಂಘ ರವರಿಂದ ಖರೀದಿಸಿರುವ ಬಗ್ಗೆ :<br>2016-17ನೇ ಸಾಲಿನ ಮಂಗಳೂರು ವಿಶ್ವವಿದ್ಯಾನಿಲಯದ ಲೆಕ್ಕಪರಿಶೋಧನೆಯಲ್ಲಿ ಸಾಮಾನ್ಯ ಖಾತೆಯಿಂದ ಪಾವತಿಸಲಾದ ಓಚರ್‌ಗಳನ್ನು ಪರಿಶೀಲಿಸಲಾಗಿ, ಸುಮಾರು ರೂ.49.00 ಲಕ್ಷಕ್ಕೂ ಅಧಿಕ ಮೊತ್ತದ ಸಾಮಾಗ್ರಿಗಳನ್ನು ಮಂಗಳೂರು ವಿಶ್ವವಿದ್ಯಾನಿಲಯ ಉದ್ಯೋಗಿಗಳ ಪತ್ತಿನ ಸಹಕಾರಿ ಸಂಘದ ಮೂಲಕ ಮಂಗಳೂರು ವಿಶ್ವವಿದ್ಯಾನಿಲಯದ ಅಧೀನದಲ್ಲಿರುವ ಎಲ್ಲಾ ವಿಭಾಗಗಳು, ಕಾಲೇಜುಗಳು ಹಾಗೂ ಸಂಸ್ಥೆಗಳು ನೇರವಾಗಿ ಖರೀದಿಸಿ ಬಿಲ್ಲುಗಳನ್ನು ಪಾವತಿಸಿರುವುದು ಕಂಡು ಬಂದಿರುತ್ತದೆ. ಈ ಖರೀದಿ ಪ್ರಕ್ರಿಯೆಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ-1999 ಅಧಿನಿಯಮ 2000 ವನ್ನು ಪಾಲಿಸಿರುವುದಿಲ್ಲ. ಸಂಘದವರು ಮಾರಾಟ ಮಾಡಲು ಕೆ.ಟಿ.ಪಿ.ಪಿ ನಿಯಮ 4(G) ವಿನಾಯಿತಿ ಪಡೆದುಕೊಂಡಿಲ್ಲ. ಈ ರೀತಿ ಸದರಿ ಸಂಘದಲ್ಲಿ ಖರೀದ ವ್ಯವಹಾರ ನಡೆಸಲು ಸರ್ಕಾರದ ಆದೇಶ/ಕೆ.ಟಿ.ಪಿ.ಪಿ ನಿಯಮ 4(ಜಿ) ರಡಿ ವಿನಾಯಿತಿ ಪಡೆದ ಪ್ರತಿಯನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ: 95/ 2018-19 ದಿನಾಂಕ:02.01.2019 ರಲ್ಲಿ ಜಾರಿ ಮಾಡಲಾಗಿ, ಯಾವುದೇ ಮಾಹಿತಿ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ ಮಂಗಳೂರು ವಿಶ್ವವಿದ್ಯಾನಿಲಯ ಉದ್ಯೋಗಿಗಳ ಪತ್ತಿನ ಸಹಕಾರಿ ಸಂಘದಿಂದ ಖರೀದಿಸಲಾದ ಒಟ್ಟು ಮೊತ್ತ ರೂ.49,04,840/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರವನ್ನು ಅನುಬಂಧ-50 ರಲ್ಲಿ ವರದಿಗೆ ಲಗತ್ತಿಸಿದೆ. | ಸದ್ಯ ಸದ್ರಿ ಸಹಕಾರ ಸಂಘದಿಂದ ಖರೀದಿ ವೇಳೆ ಕೆಟಿಟಿಪಿ 1999ರಲ್ಲಿ ಸೂಚಿಸಿದಂತೆ ಕ್ರಮ ಕೈಗೊಳ್ಳಲಾಗುತ್ತಿದೆ. ಆಕ್ಷೇಪಣೆಯನ್ನು ಕೈ ಬಿಡಲು ಕೋರಿದೆ. |
| 101 | ಜಿ.ಆರ್.ಎ ಖಾತೆಯ ವೆಚ್ಚದ ಲೆಕ್ಕಪತ್ರ ದಾಖಲೆಗಳನ್ನು ಹಾಜರುಪಡಿಸದಿರುವುದು :<br>2016-17ನೇ ಸಾಲಿನಲ್ಲಿ ಜಿ.ಆರ್.ಎ ಖಾತೆಯಿಂದ ವೆಚ್ಚ ಭರಿಸಲಾದ ಬಿಲ್ಲುಗಳಿಗೆ ಸಂಬಂಧಿಸಿದಂತೆ ಪೂರಕ ದಾಖಲಾತಿಗಳನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:29/18-19 ದಿ:23.11.18, 35/18-19 ದಿ:03.12.2018, 64/18-19 ದಿ:21.02.2018, 116/18-19 ದಿ:17.01.2019 ಗಳನ್ನು ನೀಡಲಾಗಿತ್ತು. ಆದರೆ ಈ ಸಂಬಂಧ ಭಾಗಶಃ ಲೆಕ್ಕಪತ್ರ ದಾಖಲೆಗಳನ್ನು ಮಾತ್ರ ಲೆಕ್ಕಪರಿಶೋಧನೆಗೆ ಹಾಜರುಪಡಿಸಲಾಗಿದ್ದು, ಉಳಿದಂತೆ ಹಾಜರುಪಡಿಸದ ದಾಖಲಾತಿಗಳ ಬಿಲ್ಲುಗಳ ಒಟ್ಟು ಮೊತ್ತ ರೂ.1,17,23,059/-(ಹಣಕಾಸು ಶಾಖೆ ಬಾಬ್ತು ರೂ.82,38,915/-, ಆಡಳಿತ ಶಾಖೆ ರೂ.15,07,560/-, ಪರೀಕ್ಷ ರೂ.19,76,584/-) ಆಕ್ಷೇಪಣೆಯಲ್ಲಿಡಲಾಗಿದೆ. ಇದಕ್ಕೆ ಸಂಬಂಧಿಸಿದವರ ಮೇಲೆ ಆಡಳಿತಾತ್ಮಕ ಕ್ರಮ ಕೈಗೊಳ್ಳಲು ತಿಳಿಸಿದೆ. ವಿವರಗಳನ್ನು ಅನುಬಂಧ-51, 52 ಮತ್ತು 53 ರಲ್ಲಿ ವರದಿಗೆ ಲಗತ್ತಿಸಿದೆ. | ದಾಖಲೆಗಳನ್ನು ಮುಂದಿನ ಲೆಕ್ಕ ತಪಾಸಣಾ ವೇಳೆ ಹಾಜರು ಪಡಿಸಲಾಗುವುದು. |
| 102 | ಸಾಮಾನ್ಯ ನಿಧಿಗೆ ಸಂಬಂಧಿಸಿದ ಅಗತ್ಯ ಲೆಕ್ಕಪತ್ರ ದಾಖಲೆಗಳನ್ನು ಹಾಜರುಪಡಿಸದಿರುವುದು :<br>ಸಾಮಾನ್ಯ ನಿಧಿಗೆ ಸಂಬಂಧಿಸಿದಂತೆ ಹಾಜರುಪಡಿಸಲಾದ ಲೆಕ್ಕಪತ್ರದಾಖಲೆಗಳನ್ನು ಪರಿಶೀಲಿಸಲಾಗಿ ಕಂಡುಬಂದ ನ್ಯೂನ್ಯತೆಗಳನ್ನು ಈ ಕೆಳಗಿನ ತಃಖ್ತೆಯಲ್ಲಿ ವಿವರಿಸಲಾಗಿದೆ. | |

| ಕ್ರ.ಸಂ | ಪಾವತಿ ವಿವರಗಳು | ಧನಾದೇಶ ಸಂಖ್ಯೆ/ ದಿನಾಂಕ | ಪಾವತಿ ಮೊತ್ತ ರೂ ಗಳಲ್ಲಿ ವಿವರಗಳು | ಷರಾ |
|---|---|---|---|---|
| 1 | ಶ್ರೀ ದೇವೆಂದ್ರ ಕುಮಾರ್ ವೈದ್ಯಕೀಯ ಖರ್ಚಿಗೆ ಮುಂಗಡ ಹಣ | 118666/9.06.16 | 40,000 | ಓಚರ್‌ಗಳನ್ನು ಹಾಜರುಪಡಿಸಿಲ್ಲ. |
| 2 | ಶ್ರೀ ಲೋಕಾನಾಥ್ ವೈದ್ಯಕೀಯ ವೆಚ್ಚದ ಬಿಲ್ಲು | 118461/1.06.16 | 400492 | ಓಚರ್‌ಗಳನ್ನು ಹಾಜರುಪಡಿಸಿಲ್ಲ |
| 3 | ಕುಲಪತಿಯವರ ಕೊಠಡಿಗೆ ಪೋಸ್ಟ್ ಕವರ್ ಖರೀದಿ | 118682/09.06.16 | 28500 | ದರಪಟ್ಟಿ ಆಹ್ವಾನಿಸಿರುವುದಿಲ್ಲ |
| 4 | ವಿಶ್ವವಿದ್ಯಾನಿಲಯ ಆರೋಗ್ಯ ಕೇಂದ್ರಕ್ಕೆ ಒಔಷದಿ ಖರೀದಿ | 118853/18.06.16 | 8162 | ದರಪಟ್ಟಿ ಆಹ್ವಾನಿಸಿರುವುದಿಲ್ಲ |
| 5 | ಕಂಪ್ಯೂಟರ್ ಪ್ರಿಪೆಡ್ ಮಾಕ್ಸ್ ಕಾರ್ಡ್ ಪೂರೈಕೆ | 118452/1.6.16 | 357599 | ದರಪಟ್ಟಿ ಆಹ್ವಾನಿಸಿರುವುದಿಲ್ಲ |
| 6 | ಟಿ.ಎ /ಡಿ.ಎ ಬಿಲ್ | 118913/23.6.16 | 5225 | ಟಿಎ/ಡಿಎ ಬಿಲ್ ಹಾಜರುಪಡಿಸಿರುವುದಿಲ್ಲ |
| | | 118914&118915/23.6.16 | 9218 | |
| | | 118916/118917/22.6.16 | 6110 | |
| | | ಒಟ್ಟು ಮೊತ್ತ | 8,55,306 | |

ಈ ಮೇಲಿನ ತಃಖ್ತೆಯಲ್ಲಿ ವಿವರಿಸಿರುವಂತೆ ಕ್ರ.ಸಂಖ್ಯೆ1,2,6 ರ ವೈದ್ಯಕೀಯ ಮುಂಗಡ ಬಿಲ್ಲು ಹಾಗೂ ಟಿಎ/ಡಿಎ ಬಿಲ್‌ಗಳನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಕ್ರ.ಸಂಖ್ಯೆ 3, 4 ಮತ್ತು 5 ಕ್ಕೆ ಸಂಬಂಧಿಸಿದ ಓಚರ್‌ಗಳನ್ನು ಪರಿಶೀಲಿಸಲಾಗಿ ಸ್ಪರ್ದಾತ್ಮಕ ದರ ಪಟ್ಟಿಗಳನ್ನು ಆಹ್ವಾನಿಸಿರುವುದಿಲ್ಲ. ಈ ಸಂಬಂಧ ಅಗತ್ಯ ಓಚರ್‌ಗಳನ್ನು ಹಾಜರುಪಡಿಸುವಂತೆ ಕೋರಿ ಲೆಕ್ಕ ತನಿಖಾ ವಿಚಾರಣಾ ಪತ್ರ ಸಂಖ್ಯೆ (193/ದಿನಾಂಕ12.12.2019) ನೀಡಲಾಗಿ, ಅವಶ್ಯ ಲೆಕ್ಕ ಪತ್ರ ದಾಖಲೆಗಳನ್ನು ಪೂರ್ಣ ಪ್ರಮಾಣದಲ್ಲಿ ಹಾಜರುಪಡಿಸಿಲ್ಲ. ಆದ್ದರಿಂದ ಈ ಸಂಬಂಧದ ಒಟ್ಟು ಪಾವತಿ ಮೊತ್ತ 8,55,306/- ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

ದಾಖಲೆಗಳು ಲಭ್ಯವಿದ್ದು ಮುಂದಿನ ಲೆಕ್ಕ ತಪಾಸಣಾ ವೇಳೆ ಹಾಜರು ಪಡಿಸಲಾಗುವುದು.

103 <u>ಚಿಕ್ಕಳುವಾರ ಪ್ರಾದೇಶಿಕ ಕೇಂದ್ರದ ಮಹಿಳೆಯರ ವಸತಿ ನಿಲಯದ ಲೆಕ್ಕಪತ್ರಗಳನ್ನು ಹಾಜರುಪಡಿಸದಿರುವುದು:</u>

2016-17ನೇ ಸಾಲಿನ ಲೆಕ್ಕತಪಾಸಣೆಗೆ ಚಿಕ್ಕಳುವಾರ ಪ್ರಾದೇಶಿಕ ಕೇಂದ್ರದ ಮಹಿಳಾ ವಸತಿ ನಿಲಯ, ಲೆಕ್ಕತಪಾಸಣೆ ಕೈಗೊಳ್ಳಲು ಈ ಕೆಳಕಂಡ ಲೆಕ್ಕಪತ್ರಗಳನ್ನು ತುರ್ತಾಗಿ ಲೆಕ್ಕತಪಾಸಣೆಗೆ ಹಾಜರುಪಡಿಸುವಂತೆ ಕೋರಲಾಗಿತ್ತು. ಅವುಗಳೆಂದರೆ:

1. ನಗದು ಪುಸ್ತಕ
2. ಧನಾದೇಶ ಪುಸ್ತಕಗಳು
3. ಬ್ಯಾಂಕ್ ಪಾಸ್ ಪುಸ್ತಕಗಳು
4. ರಶೀದಿ ಪುಸ್ತಕಗಳು ಮತ್ತು ದಾಸ್ತಾನು ವಹಿ
5. ದಿನ ವಹಿ ಮತ್ತು ಜಮಾ ವಹಿ
6. ಪ್ರವೇಶಾತಿ ವಹಿ
7. ನಿಶ್ಚಿತ ಠೇವಣಿ ವಹಿ
8. ಪ್ರವೇಶಾತಿ ಶುಲ್ಕಗಳ ವಿವರಗಳ

ಸದ್ರಿ ದಾಖಲೆಗಳನ್ನು ಮುಂದಿನ ಲೆಕ್ಕ ತಪಾಸಣಾ ವೇಳೆ ಹಾಜರು ಪಡಿಸಲಾಗುವುದು.

| | | |
|---|---|---|
| | 9. ಸಂಶೋಧನಾ ವಿದ್ಯಾರ್ಥಿಗಳ ಪ್ರವೇಶಾತಿ ವಿವರ<br>10. ಸಂಶೋಧನಾ ವಿದ್ಯಾರ್ಥಿಗಳ ಮನೆ ಬಾಡಿಗೆ ಭತ್ಯೆ ವಸೂಲಾತಿ ವಿವರಗಳು<br>11. ಮೆಸ್ ಬಿಲ್ಲುಗಳು ಮತ್ತು ಡಿ.ಸಿ ಹುಂಡಿಗಳು<br>12. ಎ.ಸಿ ಮತ್ತು ಎನ್.ಡಿ.ಸಿ ಹುಂಡಿಗಳು<br>13. ವಾರ್ಷಿಕ ದಾಸ್ತಾನು ಪರಿಶೀಲನಾ ವರದಿ<br>14. ತಾತ್ಕಾಲಿಕ ನೌಕರರ ನೇಮಕಾತಿ ಪ್ರಕ್ರಿಯೆ ಕಡತ.<br>15. ಖಾಯಂ ಮತ್ತು ತಾತ್ಕಾಲಿಕ ನೌಕರರ ವೇತನ ಪಾವತಿ ಕಡತ ಮತ್ತು ಹಾಜರಾತಿ ವಹಿಗಳು.<br>ಈ ಮೇಲೆ ವಿವರಿಸಿರುವ ಕಡತಗಳು/ ಲೆಕ್ಕಪತ್ರಗಳನ್ನು ಹಾಜರುಪಡಿಸುವಂತೆ ಲೆಕ್ಕ ತಪಾಸಣಾ ವಿಚಾರಣಾ ಪತ್ರದ ಸಂಖ್ಯೆ:178/2018-19 ದಿ:06.02.2019 ಹಾಗೂ 195/2018-19 ದಿ:12.02.2019 ರಲ್ಲಿ ಎರಡು ವಿಚಾರಣಾ ಪತ್ರಗಳನ್ನು ಕೋರಲಾಗಿದ್ದರೂ, ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ. ಆದ್ದರಿಂದ ಸದರಿ ವಸತಿ ನಿಲಯದ ಆರ್ಥಿಕ ವಹಿವಾಟುಗಳನ್ನು ಲೆಕ್ಕತಪಾಸಣೆಗೆ ಕೈಗೊಳ್ಳಲು ಸಾಧ್ಯವಾಗದಿರುವುದರಿಂದ ಕಛೇರಿ ಮುಖ್ಯಸ್ಥರು ಸೂಕ್ತ ಕ್ರಮ ವಹಿಸಿ ಸಂಬಂಧಿಸಿದವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಸೂಚಿಸಿದೆ. | |
| 104 | <u>ಆಸ್ತಿ ವಿವರಗಳ ವಹಿಯನ್ನು ಹಾಜರುಪಡಿಸದಿರುವುದು :</u><br>2016-17ನೇ ಸಾಲಿನ ಮಂಗಳೂರು ವಿಶ್ವವಿದ್ಯಾನಿಲಯದ ಅಧೀನಕ್ಕೊಳಪಡುವ ಸಂಸ್ಥೆಗಳ/ವಿಭಾಗಗಳ ಆಸ್ತಿಗಳು, ಕಟ್ಟಡಗಳು, ವಾಣಿಜ್ಯ ಕಟ್ಟಡಗಳು, ಚರಾಸ್ತಿಗಳು ಹಾಗೂ ಸ್ಥಿರಾಸ್ತಿಗಳನ್ನೊಳಗೊಂಡ ಆಸ್ತಿ ವಹಿಯನ್ನು ನಿರ್ವಹಿಸಿರುವ ಬಗ್ಗೆ ವಿಚಾರಣಾ ಪತ್ರ ಸಂಖ್ಯೆ:98//2018-19 ದಿ:02.01.2019 ಹಾಗೂ 119/18-19 ದಿ:18.01.2019 ರಂದು ಎರಡು ವಿಚಾರಣಾ ಪತ್ರಗಳನ್ನು ನೀಡಲಾಗಿ, ಯಾವುದೇ ಸಂಸ್ಥೆ/ವಿಭಾಗದ ಚರಾಸ್ತಿ/ ಸ್ಥಿರಾಸ್ತಿಗಳ ವಿವರಗಳನ್ನೊಳಗೊಂಡ ಆಸ್ತಿ ವಹಿಯನ್ನು ಲೆಕ್ಕತಪಾಸಣೆಗೆ ಹಾಜರು ಪಡಿಸಿರುವುದಿಲ್ಲ. ಈ ಬಗ್ಗೆ ಆಯಾ ಕಛೇರಿ/ಸಂಸ್ಥೆಯ ಮುಖ್ಯಸ್ಥರು ಆಸಕ್ತಿ ವಹಿಸಿ ಚರಾಸ್ತಿ ಸ್ಥಿರಾಸ್ತಿಯ ವಿಭಾಗವಾರು ಪಟ್ಟಿಯನ್ನು ಸಿದ್ಧಪಡಿಸಿ ಹಣಕಾಸು ಅಧಿಕಾರಿಯವರ ಗಮನಕ್ಕೆ ಸಲ್ಲಿಸಬೇಕಿರುತ್ತದೆ. ಇಲ್ಲವಾದಲ್ಲಿ ಹಣಕಾಸು ಅಧಿಕಾರಿಯವರು ಆಯಾ ಸಂಸ್ಥೆಯ ಮುಖ್ಯಸ್ಥರ ವೇತನವನ್ನು ತಡೆ ಹಿಡಯಬಹುದಾಗಿರುತ್ತದೆ. | ವಿಶ್ವವಿದ್ಯಾನಿಲಯ ಅಧೀನಕ್ಕೆ ಒಳಪಡುವ ಸ್ಥಿರ ಆಸ್ತಿಗಳ ವಿವರದ ಪುಸ್ತಕವನ್ನು ಲೆಕ್ಕ ಪರಿಶೋಧಕರಿಗೆ ಹಾಜರು ಪಡಿಸಲಾಗಿದೆ. ವಿಶ್ವವಿದ್ಯಾನಿಲಯದ ಸ್ಥಿರ ಆಸ್ತಿಗೆ ಸಂಬಂಧಿಸಿದ ವಿವರಗಳನ್ನು ಕುಲಸಚಿವರ ಪತ್ರ ಸಂಖ್ಯೆ: ಮವಿ/ಡಿಇವಿ/36/2017-18/ಡಿ1, ದಿನಾಂಕ 15.02.2019ರಲ್ಲಿ ಪರಿಶೀಲನೆಗೆ ನೀಡಲಾಗಿರುತ್ತದೆ. ಸದ್ರಿ ಪತ್ರದ ಪ್ರತಿಯನ್ನು ಲಗತ್ತಿಸುತ್ತಾ ಆಕ್ಷೇಪಣೆಯನ್ನು ಕೈ ಬಿಡುವಂತೆ ಕೋರಲಾಗಿದೆ. |
| 105 | <u>ವಾರ್ಷಿಕ ದಾಸ್ತಾನು ಪರಿಶೀಲನಾ ವರದಿಯಲ್ಲಿ ಕಂಡು ಬಂದಿರುವ ನ್ಯೂನ್ಯತೆಗಳು :</u><br>2016-17ನೇ ಸಾಲಿನ ದೂರ ಶಿಕ್ಷಣ ಕೇಂದ್ರ ಮತ್ತು ವಿವಿಧ ವಿಭಾಗಗಳನ್ನೊಳಗೊಂಡಂತೆ ಮಂಗಳೂರು ವಿಶ್ವವಿದ್ಯಾನಿಲಯ ಮಂಗಳೂರು ವಾರ್ಷಿಕ ದಾಸ್ತಾನು ಅನುಮೋದಿತ ಪರಿಶೀಲನಾ ವರದಿಯನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:02/2018-19 ದಿ:13.11.2018, 105/2018-19 ದಿ:05.01.2019 ಮತ್ತು 41/2018-19 ದಿ:06.12.2018 ರಂದು ಜಾರಿ ಮಾಡಲಾಗಿ, ಕೆಲವು ವಿಭಾಗಗಳ ವಾರ್ಷಿಕ ದಾಸ್ತಾನು ಪರಿಶೀಲನಾ ವರದಿಗಳನ್ನು ಹಾಜರುಪಡಿಸಲಾಗಿದೆ. ಇವುಗಳಲ್ಲಿ ಕಂಡು ಬಂದಿರುವ ನ್ಯೂನ್ಯತೆಗಳು ಈ ಕೆಳಕಂಡಂತಿವೆ.<br>1) ನಿಗದಿತ ಸಮಯದಲ್ಲಿ ವಿವಿಧ ವಿಭಾಗಗಳು ಸಕ್ಷಮ ಪ್ರಾಧಿಕಾರಕ್ಕೆ ವಾರ್ಷಿಕ ದಾಸ್ತಾನು ಪರಿಶೀಲನಾ ವರದಿ ಸಲ್ಲಿಸದಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ.<br>2) ಮೂರನೇ ವ್ಯಕ್ತಿಯಿಂದ ದಾಸ್ತಾನು ಪರಿಶೀಲನೆ ನಡೆಸದೆ ಸಂಬಂಧಪಟ್ಟ ವಿಭಾಗದ ಸಿಬ್ಬಂದಿಗಳೇ ಪರಿಶೀಲನೆ ನಡೆಸಿರುವುದನ್ನು ಗಮನಿಸಲಾಗಿದೆ.<br>3) 2016-17ನೇ ಸಾಲಿನಲ್ಲಿ ಖರೀದಿಸಿದ ವಸ್ತುಗಳು ವಾರ್ಷಿಕ ದಾಸ್ತಾನುವಿನಲ್ಲಿ ಕಂಡು ಬರದೇ ಇರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ.<br>4) ವಾರ್ಷಿಕ ದಾಸ್ತಾನು ಪರಿಶೀಲನಾ ವರದಿಯಲ್ಲಿ ಅನುಪಯುಕ್ತ ವಸ್ತುಗಳ ವಿವರಗಳನ್ನು ನಮೂದಿಸಿರುವುದಿಲ್ಲ. | ನ್ಯೂನ್ಯತೆಗಳನ್ನು ಸರಿಪಡಿಸಲು ಎಲ್ಲಾ ಅಧೀನ ಕಚೇರಿ ಮುಖ್ಯಸ್ಥರಿಗೆ ಸೂಚಿಸಲಾಗಿದೆ. ಮುಂದಿನ ಲೆಕ್ಕ ತಪಾಸಣೆ ವೇಳೆ ಹಾಜರುಪಡಿಸಲಾಗುವುದು |

5) ನಿಗದಿತ ನಮೂನೆಯಲ್ಲಿ ವಾರ್ಷಿಕ ದಾಸ್ತಾನು ಪರಿಶೀಲನಾ ವರದಿಯನ್ನು ತಯಾರಿಸದಿರುವುದರಿಂದ ಕೆಲವು ವಿಭಾಗಗಳ ವರದಿಯಲ್ಲಿ ಹೊಸದಾಗಿ ಖರೀದಿಸಿರುವ ವಸ್ತುಗಳ ವಿವರಗಳನ್ನು ಸ್ಪಷ್ಟವಾಗಿ ನಮೂದಿಸಿರುವುದಿಲ್ಲ.

ಕರ್ನಾಟಕ ಆರ್ಥಿಕ ಸಂಹಿತೆ-1958 ರ ಅನುಚ್ಛೇದ-169 ರನ್ವಯ ಆರ್ಥಿಕ ವರ್ಷದ ಕೊನೆಯಲ್ಲಿ ವಾರ್ಷಿಕ ದಾಸ್ತಾನು ಪರಿಶೀಲನೆಯನ್ನು ಕೈಗೊಂಡು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ. ಹಾಗೂ ಕೆ.ಎಫ್.ಸಿ-1958 ರ ಅನುಚ್ಛೇದ-168 ರಿಂದ 171 ರವರೆಗೆ ತಿಳಿಸಿರುವಂತೆ ಅನುಪಯುಕ್ತ ವಸ್ತುಗಳನ್ನು ಪಟ್ಟಿ ಮಾಡಿ ವಿಲೇ ಮಾಡಲು ಕ್ರಮ ಕೈಗೊಳ್ಳಬೇಕಾಗಿರುತ್ತದೆ. ಆದರೆ, ವಾರ್ಷಿಕ ದಾಸ್ತಾನು ಪರಿಶೀಲನೆಯನ್ನು ಕೈಗೊಂಡಿರುವ ವರದಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದರಿಂದ ಆಯಾ ವಿಭಾಗಗಳಲ್ಲಿ ಪ್ರಸ್ತುತ ಲಭ್ಯವಿರುವ ಎಲ್ಲಾ ವಸ್ತುಗಳ ಬಗ್ಗೆ ಖಚಿತಪಡಿಸಲು ಸಾಧ್ಯವಾಗದಿರುವುದರಿಂದ ಕಛೇರಿ ಮುಖ್ಯಸ್ಥರು ಸೂಕ್ತ ಕ್ರಮವಹಿಸಿ ವಾರ್ಷಿಕ ದಾಸ್ತಾನು ಪರಿಶೀಲನೆಯನ್ನು ಕೈಗೊಂಡು ವರದಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ.

<u>ಸಾಮಾನ್ಯ ಅಭಿಪ್ರಾಯ :</u>

2016-17ನೇ ಸಾಲಿನ ಮಂಗಳೂರು ವಿಶ್ವವಿದ್ಯಾನಿಲಯದ ಲೆಕ್ಕಪರಿಶೋಧನೆಯಲ್ಲಿ ಗಮನಿಸಿದಾಗ, ದಾಖಲೆ ಮತ್ತು ಕಡತಗಳ ನಿರ್ವಹಣೆಯು ಕ್ರಮಬದ್ಧವಾಗಿರುವುದಿಲ್ಲ. ಆರ್ಥಿಕ ಮತ್ತು ಆಡಳಿತ ನಿರ್ವಹಣೆಯಲ್ಲಿ ಆಂತರಿಕ ನಿಯಂತ್ರಣ ಕಂಡು ಬಂದಿರುವುದಿಲ್ಲ ಹಾಗೂ ಪ್ರತಿ ಮಾಹೆ ನಗದು ಪುಸ್ತಕ ಹಾಗೂ ಬ್ಯಾಂಕ್‌ಪಾಸ್ ಪುಸ್ತಕಗಳ ವ್ಯವಹಾರಗಳ ನಡುವೆ ಲೆಕ್ಕಸಮನ್ವಯ ಮಾಡಿರುವುದಿಲ್ಲ. ಹಿಂದಿನ ಸಾಲುಗಳ ಆಕ್ಷೇಪಣಾ ಮತ್ತು ವಸೂಲಾತಿಗೆ ಅನುಸರಣಾ ವರದಿ ಸಲ್ಲಿಸಲು ಯಾವುದೇ ಕ್ರಮಗಳನ್ನು ವಹಿಸಿರುವುದಿಲ್ಲ. ನೇಮಕಾತಿ ಮಾಡುವಾಗ ಸರ್ಕಾರದ ಸುತ್ತೋಲೆಗಳನ್ನು ಮತ್ತು ವಿಶ್ವವಿದ್ಯಾನಿಲಯದ ಕಾಯಿದೆಗಳನ್ನು ಅನುಸರಣೆ ಮಾಡುತ್ತಿಲ್ಲ. ನಿಶ್ಚಿತ ಠೇವಣಿಗಳ ಹೂಡಿಕೆಯಲ್ಲಿ ಪಾರದರ್ಶಕತೆಯನ್ನು ಕಾಯ್ದುಕೊಂಡಿಲ್ಲ. ಇಂಜಿನಿಯರಿಂಗ್ ವಿಭಾಗದಲ್ಲಿ ಅತ್ಯವಶ್ಯಕವಾದಂತಹ ದಾಖಲೆಗಳನ್ನು ನಿರ್ವಹಿಸಿರುವುದಿಲ್ಲ. ಯಾವುದೇ ಸಂಗ್ರಹಣೆಗಳಲ್ಲಿ ಕೆ.ಟಿ.ಪಿ.ಪಿ ಅಧಿನಿಯಮ ಹಾಗೂ ನಿಯಮಗಳನ್ನು ಪಾಲನೆ ಮಾಡುತ್ತಿಲ್ಲ. ಸಂಸ್ಥೆಯ ಆಯವ್ಯಯ, ವಾರ್ಷಿಕ ಲೆಕ್ಕಪತ್ರ, ಇವುಗಳ ವ್ಯತ್ಯಾಸಗಳನ್ನು ಇದುವರೆವಿಗೂ ಸರಿದೂಗಿಸಿ ಕೊಂಡಿರುವುದಿಲ್ಲದ ಕಾರಣ ವಾರ್ಷಿಕ ಲೆಕ್ಕಪತ್ರಗಳ ದೃಢೀಕರಣ ಮಾಡಲು ಸಾಧ್ಯವಾಗುತ್ತಿಲ್ಲ. ಈ ಶಿಕ್ಷಣ ಸಂಸ್ಥೆಯನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯುವ ಸಾಮರ್ಥ್ಯವಿರುವುದು ಇಲ್ಲಿನ ಅಧಿಕಾರಿ ವೃಂದಗಳಿಗೆ ಮಾತ್ರ. ಅವರುಗಳು ದೂರದೃಷ್ಟಿ ಯೋಜನೆಯನ್ನು ರೂಪಿಸಿಕೊಂಡಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಅನುದಾನಗಳನ್ನು ಸೆಳೆಯಬಹುದಾಗಿರುತ್ತದೆ. ಹಾಗೂ ಸಂಸ್ಥೆಯ ಘನತೆಯನ್ನು ಉಳಿಸಿಕೊಳ್ಳಬಹುದಾಗಿರುತ್ತದೆ. ಮುಖ್ಯವಾಗಿ ಲೆಕ್ಕಪರಿಶೋಧನೆಗೆ ಕಡತಗಳನ್ನು ಹಾಜರುಪಡಿಸದಿರುವುದು /ಭಾಗಶಃ ಹಾಜರುಪಡಿಸುತ್ತಿರುವುದು ದಾಖಲೆಗಳ ಉತ್ತರದಾಯತ್ವದ ಅಸ್ತಿತ್ವವನ್ನು ಪ್ರಶ್ನಿಸಿದಂತಾಗಿದೆ. ಕಂಡಿಕೆಗಳಲ್ಲಿ ಪ್ರಸ್ತಾಪಿಸಿದಂತೆ ಲೆಕ್ಕಪರಿಶೋಧನೆಗೆ ಕಡತಗಳನ್ನು ಹಾಜರುಪಡಿಸದಿರುವ ಸಿಬ್ಬಂದಿಗಳ ವಿರುದ್ಧ ಅಗತ್ಯ ಕ್ರಮವನ್ನು ವಹಿಸದಿದ್ದಲ್ಲಿ ಇದೇ ರೀತಿಯ ಕಾರ್ಯನಿರ್ವಹಣೆ ಮುಂದುವರೆಯಲು ಅವಕಾಶ ಕಲ್ಪಿಸಿದಂತಾಗುತ್ತದೆ. ಇನ್ನು ಮುಂದಾದರೂ ಇಂತಹ ಸಿಬ್ಬಂದಿಗಳ ವಿರುದ್ಧ ಆಡಳಿತಾತ್ಮಕ ಕ್ರಮ ಜರುಗಿಸುವ ಮೂಲಕ ಹಾಗೂ ಎಚ್ಚರಿಕೆ ನೀಡುವ ಮೂಲಕ ಲೆಕ್ಕಪತ್ರಗಳ ನಿರ್ವಹಣೆಯಲ್ಲಿ ಗಣನೀಯ ಸುಧಾರಣೆ ತರುವುದು ಅಗತ್ಯವಿರುತ್ತದೆ.

ಅಪರ ನಿರ್ದೇಶಕರು
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ,
ಪ್ರಾಂತೀಯ ಕಛೇರಿ, ಮೈಸೂರು ವಿಭಾಗ, ಮೈಸೂರು.

# ಮಂಗಳೂರು ವಿಶ್ವವಿದ್ಯಾನಿಲಯ

# ಮಂಗಳಗಂಗೋತ್ರಿ

# 2016-17ನೇ ಸಾಲಿನ

# ಲೆಕ್ಕಪರಿಶೋಧನಾ ವರದಿಗೆ ಅನುಸರಣಾ ವರದಿ

ಮಂಗಳೂರು ವಿಶ್ವವಿದ್ಯಾನಿಲಯದ 2016-17ನೇ ಸಾಲಿನ ಲೆಕ್ಕಪರಿಶೋಧನಾ ಕರಡು ವರದಿಯಲ್ಲಿ ಕಂಡು ಬಂದ ನ್ಯೂನ್ಯತೆಗಳಲ್ಲಿನ ಆಕ್ಷೇಪಣೆ ಮತ್ತು ವಸೂಲಾತಿ ಮೊತ್ತದ ವಿವರಗಳು:

| ಕ್ರ.ಸಂ | ಕಂಡಿಕೆ ಸಂಖ್ಯೆ | ವಿವರ | ಆಕ್ಷೇಪಣೆ ಮೊತ್ತ | ವಸೂಲಾತಿ ಮೊತ್ತ |
|---|---|---|---|---|
| 1 | 2 | 3 | 4 | 5 |
| | | ಭಾಗ-1 | | |
| 1 | 1 | ಹಿಂದಿನ ಸಾಲುಗಳ ಲೆಕ್ಕತಪಾಸಣಾ ವರದಿಗಳ ಕಂಡಿಕೆಗಳಿಗೆ ಅನುಪಾಲನಾ ವರದಿಗಳನ್ನು ಸಲ್ಲಿಸದಿರುವುದು. | - | - |
| | | ಭಾಗ-2 | | |
| 2 | 2 | ವಿಶ್ವವಿದ್ಯಾನಿಲಯದ ಹಣಕಾಸು ಸ್ಥಿತಿ. | - | - |
| 3 | 3 | 2016-17ನೇ ಸಾಲಿನಲ್ಲಿ ಆಯವ್ಯಯದಲ್ಲಿ ವಿವಿಧ ಲೆಕ್ಕ ಶೀರ್ಷಿಕೆಯಡಿಯಲ್ಲಿ ನಿಗದಿಪಡಿಸಲಾದ ವೆಚ್ಚಕ್ಕಿಂತ ಹೆಚ್ಚುವರಿ ವೆಚ್ಚ ಭರಿಸಿದ ಕುರಿತು. | 19,52,56,860 | - |
| 4 | 4 | ನಗದು ಪುಸ್ತಕದ ನಿರ್ವಹಣೆ ನ್ಯೂನತೆಗಳು. | 39,87,399.50 | - |
| 5 | 5 | ನಗದು ಪರಿಶೀಲನೆ. | | - |
| 6 | 6 | ಅಂಚೆ ಚೀಟಿ ದಾಸ್ತಾನು ಪರಿಶೀಲನೆ. | - | - |
| 7 | 7 | ಉಪಯೋಗಿಸದೆ (Unused) ಇರುವ ರಶೀದಿ ಪುಸ್ತಕಗಳ ದಾಸ್ತಾನು ಪರಿಶೀಲನೆ. | - | - |
| 8 | 8 | ಗ್ರಂಥಾಲಯದಲ್ಲಿ ಉಪಯೋಗಿಸದೆ ಇರುವ ರಶೀದಿ ಪುಸ್ತಕಗಳ ದಾಸ್ತಾನು ವಿವರಗಳ ಪರಿಶೀಲನೆ. | - | - |
| 9 | 9 | ರಶೀದಿ ಪುಸ್ತಕಗಳ ದಾಸ್ತಾನು ವಹಿ ಪರಿಶೀಲನೆ. (ಹಣಕಾಸು ವಿಭಾಗ) | - | - |
| 10 | 10 | ರಶೀದಿ ಪುಸ್ತಕಗಳಿಂದ ಸ್ವೀಕರಿಸಲಾದ ಮೊಬಲಗುಗಳಿಗೆ ನಿರ್ವಹಿಸಲೇಬೇಕಾದ ಹಾಗೂ ನಿರ್ವಹಣೆಯಲ್ಲಿ ಗಮನಿಸಲಾದ ನ್ಯೂನ್ಯತೆಗಳ ವಿವರ. | - | - |
| 11 | 11 | ಆಡಳಿತ ವಿಭಾಗದ ರಶೀದಿ ಪುಸ್ತಕಗಳ ದಾಸ್ತಾನು ಪರಿಶೀಲನೆ. | - | - |
| 12 | 12 | 2016-17ನೇ ಸಾಲಿನ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿದ ರಶೀದಿ ಪುಸ್ತಕಗಳ ಪರಿಶೀಲನೆ. | - | - |
| 13 | 13 | ಕಂಡಿಕೆ-12 ರಲ್ಲಿ ತಿಳಿಸಲಾದ ರಶೀದಿ ಪುಸ್ತಕಗಳಿಂದ ಸ್ವೀಕರಿಸಲಾದ ಮೊಬಲಗುಗಳಿಗೆ ಸಂಬಂಧಿಸಿದಂತೆ ನಿರ್ವಹಿಸಿರುವ ವಹಿಗಳಲ್ಲಿ ಕಂಡು ಬಂದಿರುವ ನ್ಯೂನ್ಯತೆಗಳ ವಿವರಗಳು ಹಾಗೂ ಕಡಿಮೆ ಹಣ ಜಮೆ ಮಾಡಿರುವುದು. | - | 6,500 |
| 14 | 14 | 2016-17ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯವು ನಿಶ್ಚಿತ ಠೇವಣಿ (Fixed Deposit) ಯಲ್ಲಿ ಹೂಡಿಕೆ ಮಾಡಿರುವ ಹಣಕಾಸಿನ ವಿವರ. | - | 35,73,600 |
| 15 | 15 | 2016–17ನೇ ಸಾಲಿನಲ್ಲಿ ಮಂಗಳೂರು ವಿ.ವಿ.ಯ ಪ್ರಥಮ ದರ್ಜೆ ಕಾಲೇಜು, ಮಂಗಳೂರು ಇಲ್ಲಿನ ಕೋರ್ಸ್‌ವಾರು ವಿದ್ಯಾರ್ಥಿಗಳ ಪ್ರವೇಶಾತಿ ವಿವರ. | - | - |

| | | | | |
|---|---|---|---|---|
| 16 | 16 | ಕೆ.ಟಿ.ಪಿ.ಪಿ ಕಾಯ್ದೆ-1999-2000 ರ ನಿಯಮ ಉಲ್ಲಂಘಿಸಿ ವೆಚ್ಚ ಭರಿಸಿರುವುದು. | 1,04,030 | 1,040 |
| 17 | 17 | ಕೆ.ಟಿ.ಪಿ.ಪಿ ಕಾಯ್ದೆ-1999-2000 ರ ನಿಯಮ ಉಲ್ಲಂಘಿಸಿ ವಿಶ್ವವಿದ್ಯಾನಿಲಯಕ್ಕೆ ರಾಸಾಯನಿಕ ಹಾಗೂ ಪ್ರಯೋಗಾಲಯ ಸಾಮಾಗ್ರಿಗಳನ್ನು ಖರೀದಿಸಿರುವುದು. | 78,44,490 | - |
| 18 | 18 | ಟೆಂಡರ್ ಪ್ರಕ್ರಿಯೇ ಕೈಗೊಳ್ಳದೆ Software ಮತ್ತು ಇನ್ನಿತರೆ ಉಪಕರಣಗಳನ್ನು ಖರೀದಿಸಿರುವುದು. | 1,54,575 | - |
| 19 | 19 | ಖರೀದಿ ಬಿಲ್ಲುಗಳಲ್ಲಿ ಅಗತ್ಯವಾದ ಮತ್ತು ಅವಶ್ಯವಾದ ಮಾಹಿತಿ ದೃಢೀಕರಣ ಇಲ್ಲದಿದ್ದರೂ ಬಿಲ್ಲುಗಳನ್ನು ಪಾವತಿಸಿರುವುದು. | 93,980 | - |
| 20 | 20 | ಹೊಸ ವಾಹನಗಳ ಖರೀದಿಗೆ ಸಂಬಂಧಿಸಿದಂತೆ ಸರ್ಕಾರದ ಅನುಮತಿ ಪತ್ರ ಹಾಗೂ ಸಿಂಡಿಕೇಟ್ ನಿರ್ಣಯದ ನಡವಳಿ ಪ್ರತಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು. | 33,40,000 | - |
| 21 | 21 | ವಾಹನಗಳಿಗೆ ಖರೀದಿಸಲಾದ ಇಂಧನ ಮತ್ತು ವಾಹನಗಳ ದುರಸ್ಥಿಗಳಿಗೆ ಸಂಬಂಧಪಟ್ಟಂತೆ ಲಾಗ್ ಪುಸ್ತಕಗಳನ್ನು ಹಾಜರುಪಡಿಸದಿರುವುದು. | 34,25,443 | |
| 22 | 22 | ಟೆಂಡರ್ ಕರೆಯದೇ ವಿಶ್ವವಿದ್ಯಾನಿಲಯದ 2016-17ನೇ ಸಾಲಿನ ಕ್ಯಾಲೆಂಡರ್ ಹಾಗೂ ಡೈರಿ ಮುದ್ರಣ ಮಾಡಿಸಿರುವ ಬಗ್ಗೆ. | 3,28,016 | - |
| 23 | 23 | Digital University Information Management System (DUIMS) ಈ ತಂತ್ರಜ್ಞಾನವನ್ನು ವಿಶ್ವವಿದ್ಯಾನಿಲಯಕ್ಕೆ ಅಳವಡಿಸಿರುವ ವೆಚ್ಚಕ್ಕೆ ಸಂಬಂಧಪಟ್ಟಂತೆ ಟೆಂಡರ್ ಕಡತವನ್ನು ಹಾಜರುಪಡಿಸದಿರುವುದು. | 51,00,478 | - |
| 24 | 24 | ಹೊರಗುತ್ತಿಗೆಯ ಮಾನವ ಸಂಪನ್ಮೂಲ ಸೇವೆಯನ್ನು ಮುಂದುವರಿಸಿರುವ ಬಗ್ಗೆ. | 2,28,11,103 | - |
| 25 | 25 | ಮೆ. ಕೆನಾನ್ ಡಿಟೆಕ್ಟೀವ್ & ಸೆಕ್ಯೂರಿಟಿ ಸರ್ವಿಸಸ್, ಬೆಂಗಳೂರು ರವರಿಗೆ ಪರಿಷ್ಕೃತ ವೇತನವನ್ನು ಪಾವತಿಸಿರುವ ಸಂಬಂಧ ಪೂರಕ ಲೆಕ್ಕಪತ್ರ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು. | 24,13,578 | - |
| 26 | 26 | ಆದಾಯ ತೆರಿಗೆ ಕಟಾಯಿಸದೇ ಸರ್ವರ್ ಬಾಡಿಗೆ ಬಿಲ್ಲು ಪಾವತಿಸಿರುವುದು. | - | 17,738 |
| 27 | 27 | ಸರಬರಾಜು ಬಿಲ್ಲಿನಲ್ಲಿ (Supply bill) ಕಟಾಯಿಸಲಾದ ಮಾರಾಟ ತೆರಿಗೆ ಮೊಬಲಗನ್ನು ಸರಬರಾಜುದಾರರಿಗೆ ಹಿಂದಿರುಗಿಸಿರುವುದು. | - | 47,522 |
| 28 | 28 | ಶಾಸನಾತ್ಮಕ ಕಟಾವಣೆಗಳನ್ನು ಕಟಾಯಿಸದೇ ಕಾಮಗಾರಿ ಬಿಲ್ಲುಗಳನ್ನು ಪಾವತಿಸಿರುವುದು. | - | 32,027 |
| 29 | 29 | ಆದಾಯ ತೆರಿಗೆ ಕಟಾಯಿಸದಿರುವುದು | - | 3,150 |
| 30 | 30 | DGS & D ದರದಲ್ಲಿ 40 ಲ್ಯಾಪ್‌ಟಾಪ್‌ಗಳನ್ನು ಖರೀದಿಸಿ ಬಿಲ್ಲು ಹೆಚ್ಚುವರಿ ಪಾವತಿಸಿರುವ ಬಗ್ಗೆ. | - | 45,600 |

| | | | | |
|---|---|---|---|---|
| 31 | 31 | DGS & D ದರದಲ್ಲಿ 100 ಲ್ಯಾಪ್‌ಟಾಪ್‌ಗಳನ್ನು ಖರೀದಿಸಿ ಬಿಲ್ಲು ಪಾವತಿಸಿರುವ ಬಗ್ಗೆ. | - | 1,12,000 |
| 32 | 32 | DGS & D ದರದಲ್ಲಿ 400 ಕಂಪ್ಯೂಟರ್‌ಗಳ ಖರೀದಿಯಲ್ಲಿ ರಿಯಾಯಿತಿ ಪಡೆಯದಿರುವ ಬಗ್ಗೆ. | - | 14,10,500 |
| 33 | 33 | ಉದ್ಯಾನವನಗಳ ನಿರ್ವಹಣೆಯ ಟೆಂಡರ್ ಕಡತವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು. | 24,00,900 | - |
| 34 | 34 | ಶುಚಿತ್ವ ಕೆಲಸದ (Cleaning Service) ಟೆಂಡರ್ ಕಡತವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವ ಕುರಿತು. | 20,26,092 | - |
| 35 | 35 | ಭದ್ರತಾ ಸೇವೆಯ ಟೆಂಡರ್ ಕಡತವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು. | 19,63,574 | - |
| 36 | 36 | ವಿದ್ಯುತ್ ಸ್ಥಾವರಗಳ ನಿರ್ವಹಣಾ ವೆಚ್ಚ ಭರಿಸಿರುವುದು. | 2,80,32,535 | - |
| 37 | 37 (ಎ) | ಬೋಧಕೇತರ ನೌಕರರುಗಳಿಗೆ ನಿಯಮ ಉಲ್ಲಂಘಿಸಿ ವಿಶೇಷ ಭತ್ಯೆಗಳನ್ನು ಪಾವತಿಸಿರುವುದು. | - | 1,24,526 |
| 38 | 37 (ಬಿ) | ದಿನಭತ್ಯೆ ಮತ್ತು ರಸ್ತೆ ಮೈಲೇಜು ದರಗಳನ್ನು ಹೆಚ್ಚಾಗಿ ಪಾವತಿಸಿರುವುದು. | - | 10,889 |
| 39 | 37 (ಸಿ) | ಪ್ರವಾಸ ಭತ್ಯೆ ನಿಯಮಗಳನ್ನು ಉಲ್ಲಂಘಿಸಿ ರಸ್ತೆ ಮೈಲೇಜು ದರವನ್ನು ಪಡೆದಿರುವುದು | - | 1,000 |
| 40 | 37 (ಡಿ) | ಹೆಚ್ಚುವರಿ ಪ್ರಯಾಣಭತ್ಯೆ ಪಾವತಿಸಿರುವುದು | - | 21,260 |
| 41 | 38 | ಮಾಹಿತಿ ತಂತ್ರಜ್ಞಾನ (I.T. Consultant) ಸಂದರ್ಶಕರ ನೇಮಕಾತಿ ಮುಂದುವರೆಸುವ ಕಡತ ಹಾಜರುಪಡಿಸದಿರುವುದು. | 5,26,534 | - |
| 42 | 39 | ಕಾನೂನು ವೆಚ್ಚದ ಪಾವತಿ ಸಂಬಂಧ ಪೂರಕ ದಾಖಲಾತಿಗಳನ್ನು ಹಾಜರುಪಡಿಸದಿರುವುದು. | 50,000 | - |
| 43 | 40 | ಶ್ರೀ ನಿತೀಶ್.ಪಿ.ಬೈಂದೂರ್ ತಾತ್ಕಾಲಿಕ ಫೋಟೋಗ್ರಾಫರ್-ಕಂ-ಆರ್ಟಿಸ್ಟ್ ರವರಿಗೆ ತುಟ್ಟಿ ಭತ್ಯೆ ಮತ್ತು ಇತರೇ ಭತ್ಯೆಗಳನ್ನು ಪಾವತಿಸಿರುವುದು. | - | 1,68,463 |
| 44 | 41 | ಡಾ॥ ಎಂ.ಕೆ ಭಂಡಿ ಗ್ರಂಥಪಾಲಕರು ರವರನ್ನು ವಯೋನಿವೃತ್ತಿಗೊಳಿಸದೇ 62 ವರ್ಷಗಳವರೆಗೆ ಸೇವೆಯಲ್ಲಿ ಮುಂದುವರೆಸಿರುವುದು. | - | 30,11,423 |
| 45 | 42 | 2006 ರ 6ನೇ ಯು.ಜಿ.ಸಿ ವೇತನ ಶ್ರೇಣಿಯ ಹಿಂಬಾಕಿ ಮೊತ್ತವನ್ನು ದಿನಾಂಕ:01.01.2006 ರ ನಂತರ ನೇಮಕಗೊಂಡಿರುವ ಬೋಧಕರಿಗೆ ಪಾವತಿಸಿರುವುದು. | - | 18,94,313 |
| 46 | 43 | ಗ್ರಂಥಾಲಯ ಸಹಾಯಕರುಗಳಿಗೆ ಸಹಾಯಕ ಗ್ರಂಥಪಾಲಕರುಗಳ ಹುದ್ದೆಗೆ ನಿಯಮ ಉಲ್ಲಂಘಿಸಿ ಪದೋನ್ನತಿ ನೀಡಿರುವುದು. | - | 11,15,087 |
| 47 | 44 | 17 ಜನ ಬೋಧಕೇತರ ನೌಕರರನ್ನು ತಾತ್ಕಾಲಿಕವಾಗಿ ಸೇರಿದ ದಿನಾಂಕದಿಂದ ಎಲ್ಲಾ ಸೌಲಭ್ಯಗಳನ್ನು ವಿಸ್ತರಿಸಿರುವ ಬಗ್ಗೆ. | - | - |
| 17 | **ಕೆ.ಟಿ.ಪಿ.ಪಿ ಕಾಯ್ದೆ-1999-2000 ರ ನಿಯಮ ಉಲ್ಲಂಘಿಸಿ ವಿಶ್ವವಿದ್ಯಾನಿಲಯಕ್ಕೆ ರಾಸಾಯನಿಕ ಹಾಗೂ ಪ್ರಯೋಗಾಲಯ ಸಾಮಾಗ್ರಿಗಳನ್ನು ಖರೀದಿಸಿರುವುದು :**<br>2016-17ನೇ ಸಾಲಿನಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ವಿಭಾಗಗಳಿಗೆ ಹಾಗೂ ಘಟಕ ಕಾಲೇಜುಗಳಿಗೆ ಅಗತ್ಯವಿರುವ ರಾಸಾಯನಿಕಗಳು ಹಾಗೂ ಪ್ರಯೋಗಾಲಯ ಪರಿಕರಗಳನ್ನು ಖರೀದಿಸಿರುವ ಸಂಬಂಧ ವಿವಿಧ ಏಜೆನ್ಸಿಗಳಿಗೆ ವೆಚ್ಚ ಪಾವತಿಸಿರುವುದನ್ನು ಗಮನಿಸಲಾಗಿದ್ದು, ಸದರಿ ವೆಚ್ಚಗಳ ಪಾವತಿ ಸಂಬಂಧ ಪೂರಕ ದಾಖಲಾತಿಗಳನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ: 29/2018-19 ದಿ:23.11.2018, 35/18-19 ದಿ:03.12.2018, 64/18-19 ದಿ:21.12.2018, 116/18-19 ದಿ:17.01.2019 ಹಾಗೂ 109/2018-19 ದಿ:08.01.2019 ಗಳನ್ನು ಜಾರಿ ಮಾಡಲಾಗಿತ್ತು.<br>ಅದರಂತೆ ಹಾಜರುಪಡಿಸಲಾದ ದಾಖಲಾತಿಗಳನ್ನು ಪರಿಶೀಲಿಸಲಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಅಧಿಕೃತ ಜ್ಞಾಪನಾ: ಮಂವಿ/ಡಿಇವಿ/28/2016-17/ಡಿ2 ದಿ:25.08.2016ರಂತೆ ಸಿಂಡಿಕೇಟು ಸಭೆಯ ಕಾರ್ಯಸೂಚಿ ಸಂಖ್ಯೆ:ಡಿಇವಿ /ಸಾ.ಸ/5/30/2016 ದಿನಾಂಕ:30.07.2016 ರ ನಿರ್ಣಯದಂತೆ ಒಟ್ಟು ಹದಿನಾಲ್ಕು ಸಂಸ್ಥೆಗಳಿಗೆ ರೂ.3,000/-ಗಳ ಹಿಂದಿರುಗಿಸಲಾಗದ ಠೇವಣಿಯೊಂದಿಗೆ ದರ ಗುತ್ತಿಗೆ ಆಧಾರದಲ್ಲಿ ರಾಸಾಯನಿಕಗಳು ಹಾಗೂ ಪ್ರಯೋಗಾಲಯ ಪರಿಕರಗಳನ್ನು ಖರೀದಿಸಲು ಕನಿಷ್ಠ 5% ರಿಂದ ಗರಿಷ್ಠ 31% ರವರೆಗೆ ವಿವಿಧ ರಸಾಯನಿಕ ಹಾಗೂ ಪರಿಕರಗಳ ಮುಖಬೆಲೆಗೆ ರಿಯಾಯಿತಿ ನೀಡುವ ಆಧಾರದಲ್ಲಿ ಕಂಪನಿವಾರು ಅನುಮೋದನೆಯನ್ನು ನೀಡಲಾಗಿರುತ್ತದೆ. ಸದರಿ ಸಂಸ್ಥೆಗಳು ರಾಸಾಯನಿಕ ಹಾಗೂ ಪ್ರಯೋಗಾಲಯ ಪರಿಕರಗಳನ್ನು ಸರಬರಾಜು ಮಾಡಿ ಪಾವತಿಗಾಗಿ ಸಲ್ಲಿಸಿರುವ ಬಿಲ್ಲುಗಳಲ್ಲಿ ಕಂಪನಿಗಳು ಶೇಕಡವಾರು ರಿಯಾಯಿತಿ ದಾಖಲಿಸದೇ ಐಟಂವಾರು ದರಗಳನ್ನು ದಾಖಲಿಸಲಾಗಿದ್ದು, ಕಂಪನಿಯ ನಮೂದಿಸಿರುವ ದರವು ರಿಯಾಯಿತಿ ದರದ ಕಡಿತ ಮಾಡಲಾದ ಮೊತ್ತಕ್ಕೆ ಅನುಗುಣವಾಗಿ ರಿಯಾಯಿತಿ ನೀಡಲಾಗಿಯೇ ಎನ್ನುವುದನ್ನು ಖಚಿತ ಪಡಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ಇದರಿಂದಾಗಿ ಹೆಚ್ಚುವರಿ ಬಿಲ್ಲು ಪಾವತಿಯಾಗಿ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ನಷ್ಟ ಉಂಟಾಗಿರಬಹುದೆಂದು ಭಾವಿಸಲಾಗಿದೆ. ಆದ್ದರಿಂದ ಈ ಬಗ್ಗೆ ಪೂರಕ ದಾಖಲಾತಿಗಳೊಂದಿಗೆ ವಿವರಣೆ ನೀಡಲು ಕೋರಿದೆ.<br>ಕೆ.ಟಿ.ಪಿ.ಪಿ ಕಾಯ್ದೆ-1999-2000 ಕಲಂ 4(ಇ) ಪ್ರಕಾರ ಹಾಗೂ ಸರ್ಕಾರದ ಆದೇಶ ಸಂಖ್ಯೆ:ಆಇ/01/ಟಿ.ಸಿ.ಇ/2012 ಬೆಂಗಳೂರು ದಿನಾಂಕ: 21.06.2012 ರನ್ವಯ ರೂ.5,000/-ಗಳ ಮೇಲ್ಪಟ್ಟ ಖರೀದಿಗೆ ದರಪಟ್ಟಿ ಹಾಗೂ ರೂ.1.00 ಲಕ್ಷಗಳ ಮೇಲ್ಪಟ್ಟ ಖರೀದಿಗಳಿಗೆ ಟೆಂಡರ್ ಕರೆದು ಕ್ರಮವಹಿಸಬೇಕಾಗಿದ್ದು, ಸ್ಪರ್ಧಾತ್ಮಕ ದರಗಳಲ್ಲಿ ಗುಣಮಟ್ಟದ ಸರಕು ಸೇವೆಗಳನ್ನು ಪಡೆಯಬಹುದಾಗಿದ್ದು. ಈ ಮೇಲ್ಕಂಡ ಸಾಮಾಗ್ರಿ/ ಸಲಕರಣೆಗಳ ಖರೀದಿಯ ಪ್ರಕ್ರಿಯೆಯಲ್ಲಿ ಸದರಿ ನಿಯಮಾವಳಿಯ ಸ್ಪಷ್ಟ ಉಲ್ಲಂಘನೆಯಾಗಿರುವುದರಿಂದ ಈ ಸಂಬಂಧ ಭರಿಸಲಾದ ಒಟ್ಟು ಮೊತ್ತ ರೂ.78,44,490/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರವನ್ನು ಅನುಬಂಧ- 6ರಲ್ಲಿ ವರದಿಗೆ ಲಗತ್ತಿಸಿದೆ. | ಪ್ರತಿ ವರ್ಷದಂತೆ 2016–17ನೇ ಸಾಲಿನಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಜ್ಞಾನ ವಿಭಾಗಗಳು ಹಾಗೂ ಘಟಕ ಕಾಲೇಜುಗಳ ವಿಜ್ಞಾನ ವಿಭಾಗಗಳಿಗೆ ಅಗತ್ಯವಿರುವ ರಾಸಾಯನಿಕ, ಗ್ಲಾಸ್‌ವೇರ್ ಮತ್ತುಬಳಕೆ ವಸ್ತುಗಳನ್ನು ಧಾರಣಾ ಗುತ್ತಿಗೆ ದರದ ಮೂಲಕ ಖರೀದಿಸಲು ಕ್ರಮಕೈಗೊಳ್ಳಲಾಗಿದ್ದು ಸದರಿ ಪ್ರಕ್ರಿಯೆಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಕಾಯ್ದೆಯಡಿ ದಕ್ಷಿಣ ಕನ್ನಡ ಜಿಲ್ಲಾ ಟೆಂಡರ್ ಬುಲೆಟಿನ್‌ನಲ್ಲಿ ಪ್ರಕಟಣೆ ನೀಡಿ ರೂ.3,000/– ಹಿಂದಿರುಗಿಸಲಾಗದ ಠೇವಣಿಯನ್ನು ಪಡೆದುಕೊಂಡು, ಗರಿಷ್ಠ ರಿಯಾಯಿತಿ ಆಧಾರ ದಲ್ಲಿ ವಿವಿಧ ವಿತರಕ ಸಂಸ್ಥೆಗಳನ್ನು ಧಾರಣಾಗುತ್ತಿಗೆ ದರ ಪಟ್ಟಿಗೆ ಸೇರಿಸಿ ಖರೀದಿಗೆ ಇದುವರೆಗೆ ಕ್ರಮಕೈಗೊಳ್ಳಲಾಗುತ್ತಿತ್ತು.<br>ಸದರಿ ಪ್ರಕ್ರಿಯೆಯು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಕಾಯ್ದೆಯ ನಿಯಮಾವಳಿಗಳ ಅನುಸಾರವಿರುವುದಿಲ್ಲವೆಂದು 2016–17ನೇ ಸಾಲಿನ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯ ತಪಾಸಣೆಗೆ ಆಗಮಿಸಿದ, ಕರ್ನಾಟಕ ರಾಜ್ಯ ಲೆಕ್ಕಪತ್ರ ಇಲಾಖೆಯ ಲೆಕ್ಕ ಪರಿಶೋಧಕರು ತಿಳಿಸಿರುವುದರಿಂದ, 2019–20ನೇ ಸಾಲಿನಲ್ಲಿ ಧಾರಣಾಗುತ್ತಿಗೆ ದರ ನಿಗದಿ ಪಡಿಸುವ ಸಂದರ್ಭದಲ್ಲಿ ಪ್ರತಿಯೊಂದು ವಿಭಾಗಕ್ಕೆ ಒಂದು ವರ್ಷಕ್ಕೆ ಬೇಕಾಗುವ ಅಂದಾಜು ರಾಸಾಯನಿಕ/ಗ್ಲಾಸ್‌ವೇರ್/ ಬಳಕೆ ವಸ್ತುಗಳ ಐಟೆಂವಾರು ಪಟ್ಟಿಯನ್ನು ಪಡೆದುಕೊಂಡು, ಕ್ರೋಢೀಕರಿಸಿ ಟೆಂಡರ್ ಪೋರ್ಟಲ್‌ನಲ್ಲಿ ಪ್ರಕಟಣೆ ನೀಡಿ ಕನಿಷ್ಟ ದರ ನಮೂದಿಸಿದ ಸಂಸ್ಥೆಗಳನ್ನು ಧಾರಣಾ ಗುತ್ತಿಗೆ ದರಪಟ್ಟಿಗೆ ಸೇರಿಸಿ ಒಪ್ಪಂದವನ್ನು ಮಾಡಿಕೊಳ್ಳುವಂತೆ ಮೌಖಿಕವಾಗಿ ಸಲಹೆ ನೀಡಿರುವುದರಿಂದ ಸದರಿ ಲೆಕ್ಕಪರಿಶೋಧಕರ ಸಲಹೆಯಂತೆ 2019–20ನೇ ಸಾಲಿಗೆ ಇ–ಟೆಂಡರ್‌ಪೋರ್ಟಲ್‌ನಲ್ಲಿ ಐಟೆಂವಾರು ವಿವರದೊಂದಿಗೆ ಟೆಂಡರ್ ಆಹ್ವಾನಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br>ಆದುದರಿಂದ 2016–17, 2017–18 ಮತ್ತು 2018–19ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಟೆಂಡರ್ ಬುಲೆಟಿನ್‌ನಲ್ಲಿ ಪ್ರಕಟನೆ ನೀಡಿ ಮೇಲೆ ತಿಳಿಸಿದಂತೆ ಧಾರಣಾ ಗುತ್ತಿಗೆ ದರ ನಿಗದಿಪಡಿಸಿ ವಿವಿಧ ವಿಭಾಗಗಳಲ್ಲಿ ರಾಸಾಯನಿಕ/ಗ್ಲಾಸ್‌ವೇರ್/ ಬಳಕೆ ವಸ್ತುಗಳ ಖರೀದಿಗೆ ಈಗಾಗಲೇ ಮಂಜೂರಾತಿ ನೀಡಲ್ಪಟ್ಟಿರುವುದರಿಂದ, ಪ್ರಕ್ರಿಯೆ ಯಲ್ಲಿ ಆಗಿರುವ ಈ ಲೋಪವನ್ನು ಮನ್ನಿಸಿ, ಆಕ್ಷೇಪಣೆಯನ್ನು ಕೈಬಿಡುವಂತೆ ಕೋರಲಾಗಿದೆ. ಮುಂದಿನ ವರ್ಷಗಳಲ್ಲಿ ಇಂತಹ ತಪ್ಪುಗಳಾಗದಂತೆ ಎಚ್ಚರ ವಹಿಸಲಾಗುವುದು ಎಂದು ತಿಳಿಸಲಾಗಿದೆ. |

| | | |
|---|---|---|
| 18 | <u>ಟೆಂಡರ್ ಪ್ರಕ್ರಿಯೆ ಕೈಗೊಳ್ಳದೆ **Software** ಮತ್ತು ಇನ್ನಿತರೆ ಉಪಕರಣಗಳನ್ನು ಖರೀದಿಸಿರುವುದು :</u><br>2016-17ನೇ ಸಾಲಿನ ಲೆಕ್ಕ ತಪಾಸಣೆಯಲ್ಲಿ DST FIST Programme ಅಡಿಯಲ್ಲಿ ಸಂಶೋಧನೆ ಕೈ ಗೊಳ್ಳಲು, ಓಚರ್ ಸಂಖ್ಯೆ: 10/10-03-2017 ರಲ್ಲಿ ಧನಾದೇಶ ಸಂಖ್ಯೆ:562582, ದಿನಾಂಕ:16/06/2017 ರಲ್ಲಿ ರೂ1,54,575(68,700+85,875) ಗಳನ್ನು Photonics India Bangalore ರವರಿಗೆ ಪಾವತಿಸಿ Spare EEPROM IC With Software ಮತ್ತು Spare Main PCB ಉಪಕರಣಗಳನ್ನು ಖರೀದಿಸಲಾಗಿದ್ದು, KTPPಕಾಯ್ದೆ 2000ರ ಕಾಲಂ 4ಇ ಪ್ರಕಾರ ಟೆಂಡರ್ ಪ್ರಕ್ರಿಯೆ ಕೈಗೊಂಡ ಕಡತಗಳನ್ನು ಹಾಗೂ ದಾಸ್ತಾನು ವಹಿಯನ್ನು ಹಾಜರುಪಡಿಸುವಂತೆ ಲೆಕ್ಕ ತಪಾಸಣಾ ವಿಚಾರಣಾ ಪತ್ರ ಸಂಖ್ಯೆ: 138/ ದಿನಾಂಕ 29/01/2019 ರಂದು ಜಾರಿ ಮಾಡಿ ಓಚರ್ಸ್‌ಗಳನ್ನು ಲೆಕ್ಕ ತಪಾಸಣೆಗೆ ಹಾಜರುಪಡಿಸಿದ್ದು ಟೆಂಡರ್ ಪ್ರಕ್ರಿಯೆ ಕಡತಗಳನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ ಸದರಿ ಮೊತ್ತ ರೂ.1,54,575/- ಗಳನ್ನು ಆಕ್ಷೇಪಣೆಗೆ ಸೂಚಿಸಿದೆ. | ಮೆ. ಫೋಟೋನಿಕ್ಸ್ ಇಂಡಿಯಾ ಬೆಂಗಳೂರು ಇವರು ಈ ಉಪಕರಣಗಳ ಏಕೈಕ ಪೂರೈಕೆದಾರರಾಗಿದ್ದು ಇದರ ನಿರ್ವಹಣೆ ಬೇರೆ ಸಂಸ್ಥೆಗಳಿಂದ ಸಾಧ್ಯವಿರುವುದಿಲ್ಲ. ಸದ್ರಿ ಉಪಕರಣಗಳ ತಯಾರಿಕ ಸಂಸ್ಥೆ ಮೆ. ಲೇಸರ್ ಪ್ರೋಬ್ ಇಂಕ್ ಇವರು ಗೊತ್ತುಪಡಿಸಿದ ಸೇವಾ ವಿತರಕರು ಮೆ. ಫೋಟೋನಿಕ್ಸ್ ಇಂಡಿಯಾ ಬೆಂಗಳೂರು ಮಾತ್ರವಾಗಿರುತ್ತಾರೆ. ಕೆಟಿಪಿಪಿ ಆಕ್ಟ್ 4(ಬಿ) ಪ್ರಕಾರ ಕೊಟೇಶನನ್ನು ಅನುಮೋದಿಸಲಾಗಿದೆ. ಆಕ್ಷೇಪಣೆಯನ್ನು ಕೈಬಿಡುವಂತೆ ಕೋರಲಾಗಿದೆ. |
| 19 | <u>ಖರೀದಿ ಬಿಲ್ಲುಗಳಲ್ಲಿ ಅಗತ್ಯವಾದ ಮತ್ತು ಅವಶ್ಯವಾದ ಮಾಹಿತಿ ದೃಢೀಕರಣ ಇಲ್ಲದಿದ್ದರೂ ಬಿಲ್ಲುಗಳನ್ನು ಪಾವತಿಸಿರುವುದು :</u><br>ನೆಹರು ರವರ ಭಾರತ ಕಲ್ಪನೆ ಕಾರ್ಯಕ್ರಮ ಮತ್ತು ದಕ್ಷಿಣ ವಲಯ ಯುವ ಜನೋತ್ಸವ ಕಾರ್ಯಕ್ರಮಗಳಿಗೆ ಸಂಬಂಧಪಟ್ಟ ವೋಚರ್‌ಗಳನ್ನು ಪರಿಶೀಲಿಸಲಾಗಿ, ವೋಚರ್ ಸಂಖ್ಯೆ:166/ ದಿ:06.04.2016 ಧನಾದೇಶ ಸಂಖ್ಯೆ:066355/ ದಿ:06.04.2016 ರ ಹಾಗೂ ವೋಚರ್ ಸಂಖ್ಯೆ: 769/ ದಿ:29.04.2016 ಧನಾದೇಶ ಸಂಖ್ಯೆ:077277 ದಿ:03.05.2016 ರನ್ವಯ ಕ್ರಮವಾಗಿ ರೂ.59,150/- ಮತ್ತು ರೂ.17,09,278/- ಗಳನ್ನು ಪಾವತಿಸಲಾಗಿರುವ ಕೆಲವು ವೋಚರ್‌ಗಳಲ್ಲಿ ಟಿನ್ ನಂಬರ್, ತ್ರಿಪ್ರತಿಯಲ್ಲಿ ಬಿಲ್ ಸಲ್ಲಿಸದಿರುವುದು, ಬಿಲ್ಲಿನ ಹಿಂಬದಿಯಲ್ಲಿ ಘೋಷಣೆ ಇಲ್ಲದಿರುವುದು, ಜಿ.ಎಸ್.ಟಿ, ಬಿಲ್ಲು ನಂಬರ್, ಫೋನ್ ನಂಬರ್, ಕ್ರೆಡಿಟ್/ ಕ್ಯಾಶ್ ಬಿಲ್ ಇತ್ಯಾದಿ ವಿವರಗಳು ಇಲ್ಲದಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ. ಆದ್ದರಿಂದ ಕೆಲವು ಬಿಲ್ಲುಗಳಲ್ಲಿ ಅವಶ್ಯ ಮಾಹಿತಿ ಹಾಗೂ ದೃಢೀಕರಣಗಳು ಇಲ್ಲದಿರುವುದರಿಂದ ಇವುಗಳನ್ನು ಅಸಹಜ ವೋಚರ್ ಎಂದು ಪರಿಗಣಿಸಲಾಗಿದೆ. ಈ ಸಂಬಂಧವಾಗಿ ಲೆಕ್ಕತಪಾಸಣೆ ವಿಚಾರಣೆ ಸಂಖ್ಯೆ: 75/2018-19 ದಿನಾಂಕ:27.12.2018 ರಂದು ಜಾರಿ ಮಾಡಲಾಗಿ ಉತ್ತರ ಸಲ್ಲಿಸಲಾಗಿದ್ದು, ಅದರಲ್ಲಿ ರೂ.93,980/-ಕ್ಕೆ ಒದಗಿಸಿದ ಉತ್ತರವು ಸಮಂಜಸವಾಗಿಲ್ಲದಿರುವುದರಿಂದ ಆಕ್ಷೇಪಣೆಗೆ ಸೂಚಿಸಲಾಗಿದೆ. ವೋಚರ್ಸ್‌ಗಳ ವಿವರಗಳನ್ನು <u>ಅನುಬಂಧ-7 ರಲ್ಲಿ</u> ವಿವರಿಸಲಾಗಿದೆ. | ವಿವರಗಳನ್ನು ಮುಂದಿನ ಲೆಕ್ಕ ತಪಾಸಣಾ ವೇಳೆ ಒದಗಿಸಲಾಗುವುದು. |
| 20 | <u>ಹೊಸ ವಾಹನಗಳ ಖರೀದಿಗೆ ಸಂಬಂಧಿಸಿದಂತೆ ಸರ್ಕಾರದ ಅನುಮತಿ ಪತ್ರ ಹಾಗೂ ಸಿಂಡಿಕೇಟ್ ನಿರ್ಣಯದ ನಡವಳಿ ಪ್ರತಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು :</u><br>2016-17ನೇ ಸಾಲಿನ ವಾರ್ಷಿಕ ಲೆಕ್ಕಪತ್ರದಲ್ಲಿನ ಲೆಕ್ಕಶೀರ್ಷಿಕೆ ಸಂಖ್ಯೆ: 1433 ರಲ್ಲಿ ದಾಖಲಿಸಿರುವಂತೆ ಹಾಗೂ ಹಾಜರುಪಡಿಸಲಾದ ವೋಚರ್‌ಗಳ ಆಧಾರದಂತೆ ಮೂರು ಹೊಸ ವಾಹನಗಳ ಖರೀದಿಗೆಂದು ಒಟ್ಟು ರೂ.33,40,000/- ಗಳನ್ನು ('ಮಹೀಂದ್ರ XUV 500'- 1 X 14,80,000/- ಹಾಗೂ 'ಮಹೀಂದ್ರ TUV 300' -2 X 9,30,000/-) ವೆಚ್ಚ ಮಾಡಲಾಗಿದ್ದು, ಈ ವಾಹನಗಳ ಖರೀದಿ ಸಂಬಂಧ ಸಿಂಡಿಕೇಟ್ ತೀರ್ಮಾನ ನಡವಳಿ ಪ್ರತಿ ಹಾಗೂ ರಾಜ್ಯ ಸರ್ಕಾರದ ಆರ್ಥಿಕ ಇಲಾಖೆಯಿಂದ ಅನುಮತಿ/ ಅನುಮೋದನೆ ಪಡೆದಿರುವ ಬಗೆಗಿನ ದಾಖಲೆ ಪತ್ರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಕೋರಿ ಆಡಿಟ್ ವಿಚಾರಣಾ ಪತ್ರ ಸಂಖ್ಯೆ:132/2018-19 ದಿನಾಂಕ:28.01.2019 ರಂದು ಜಾರಿ ಮಾಡಲಾಗಿತ್ತು. ಅದಕ್ಕೆ ನೀಡಲಾದ ಅನುಸರಣಾ ವರದಿ ಹಾಗೂ ಹಾಜರುಪಡಿಸಲಾದ ದಾಖಲೆ ಪತ್ರಗಳು ಅಸಮಂಜಸ ಹಾಗೂ ಅಸಮರ್ಪಕವಾಗಿರುವುದರಿಂದ ವಾಹನಗಳ ಖರೀದಿಗೆ ಸಿಂಡಿಕೇಟ್ ನಿರ್ಣಯ ಹಾಗೂ ಸರ್ಕಾರದಿಂದ ಪಡೆದ ಅನುಮೋದನೆ ಪತ್ರವನ್ನು ಹಾಜರುಪಡಿಸುವವರೆಗೆ ಸದರಿ ವಾಹನಗಳ ಒಟ್ಟು ಖರೀದಿ ಮೊತ್ತ ರೂ.33,40,000/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. | ಹೊಸ ವಾಹನ ಖರೀದಿ ಬಗ್ಗೆ ಘಟನೋತ್ತರ ಅನುಮೋದನೆ ನೀಡುವ ಬಗ್ಗೆ ಸರಕಾರಕ್ಕೆ ಈ ಕಚೇರಿ ಪತ್ರ ಸಂ.ಮಂ.ವಿ/ಆಡಳಿತ/ವಾಹನ ಖರೀದಿ/ 2019-20/ಬಿ3 ದಿನಾಂಕ 31.08.2019ರಂದು ಪತ್ರ ಬರೆಯಲಾಗಿದೆ. ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ. |

| | | |
|---|---|---|
| 21 | <u>ವಾಹನಗಳಿಗೆ ಖರೀದಿಸಲಾದ ಇಂಧನ ಮತ್ತು ವಾಹನಗಳ ದುರಸ್ಥಿಗಳಿಗೆ ಸಂಬಂಧಪಟ್ಟಂತೆ ಲಾಗ್ ಪುಸ್ತಕಗಳನ್ನು ಹಾಜರುಪಡಿಸದಿರುವುದು</u><br>ಮಂಗಳೂರು ವಿಶ್ವವಿದ್ಯಾನಿಲಯ ಆಡಳಿತ ವ್ಯಾಪ್ತಿಗೆ ಒಳಪಡುವ ವಾಹನಗಳಿಗೆ ಸಂಬಂಧಪಟ್ಟಂತೆ 2016-17ನೇ ಸಾಲಿಗೆ ಖರೀದಿಸಲಾಗಿರುವ ಇಂಧನ ಖರೀದಿ ಮತ್ತು ವಾಹನಗಳ ದುರಸ್ಥಿಗಳಿಗೆ ಸಂಬಂಧಪಟ್ಟಂತೆ ವಾಹನಗಳ ಲಾಗ್ ಪುಸ್ತಕಗಳೊಂದಿಗೆ ಪೂರಕ ದಾಖಲಾತಿಗಳನ್ನು ಹಾಜರುಪಡಿಸಲು ಕೋರಿ ಲೆಕ್ಕಪರಿಶೋಧನೆ ವಿಚಾರಣೆ ಸಂಖ್ಯೆ:13/18-19 ದಿ:14.11.2018 ರಂದು ಮತ್ತು ವಿಚಾರಣೆ ಸಂಖ್ಯೆ:117/18-19 ದಿ:17.01.2019 ರ ದಿನಗಳಲ್ಲಿ ನೀಡಲಾಗಿ, ಈ ವಿಚಾರಣೆಗಳಿಗೆ ಪ್ರತಿಯಾಗಿ ಕೇವಲ ಕೆಲವೇ ಕೆಲವು ಇಂಧನ ಖರೀದಿಗಳಿಗೆ ಸಂಬಂಧಪಟ್ಟಂತೆ ಹಾಜರುಪಡಿಸಲಾದ ಲಾಗ್ ಪುಸ್ತಕಗಳನ್ನು ಪರಿಶೀಲಿಸಲಾಯಿತು, ಹಾಜರುಪಡಿಸದೇ ಇರುವ ಲಾಗ್‌ಪುಸ್ತಕಗಳ ಬಗ್ಗೆ ಪುನಃ ಲೆಕ್ಕತಪಾಸಣೆ ವಿಚಾರಣೆ ಸಂಖ್ಯೆ: 129/18-19 ದಿನಾಂಕ:24.01.2019 ರ ಮೂಲಕ ತಿಳಿಸಿ, ಬಾಕಿ ಉಳಿದ ಬಿಲ್ಲುಗಳನ್ನು ತಪಾಸಣೆಗೆ ಹಾಜರುಪಡಿಸಲು ಕೋರಲಾಯಿತು. ಆದರೂ ತಪಾಸಣೆ ಮುಕ್ತಾಯ ಹಂತ ತಲುಪಿದರು ಸಹ ತಪಾಸಣೆಗೆ ಬಾಕಿ ಉಳಿದ ಇಂಧನ ಖರೀದಿ ಬಿಲ್ಲುಗಳನ್ನು ಮತ್ತು ದುರಸ್ಥಿ ವಿವರಗಳಿಗೆ ಸಂಬಂಧಪಟ್ಟಂತೆ ಲಾಗ್ ಪುಸ್ತಕಗಳನ್ನು ಬಿಲ್ಲುಗಳೊಂದಿಗೆ ತಪಾಸಣೆಗೆ ಹಾಜರುಪಡಿಸದಿರುವುದು ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ 174 ಹಾಗೂ ಅದರಡಿಯಲ್ಲಿ ಉಪ ಅನುಚ್ಛೇದಗಳ ಮತ್ತು ಕರ್ನಾಟಕ ಸಾದಿಲ್ವಾರು ಕೈಪಿಡಿ ವಿಶೇಷ ನಿಯಮಗಳು 55(40) ಗಳನ್ನು ಉಲ್ಲಂಘಿಸಿರುವುದರಿಂದ, 2016-17ನೇ ಸಾಲಿನಲ್ಲಿ ವಿವಿಧ ಲೆಕ್ಕಶೀರ್ಷಿಕೆಗಳಲ್ಲಿ ಇಂಧನ ಖರೀದಿ ಮತ್ತು ದುರಸ್ಥಿಗಳಿಗೆ ಸಂಬಂಧಪಟ್ಟಂತೆ ತಪಾಸಣೆಗೆ ಹಾಜರುಪಡಿಸಲಾದ ಕೆಲವು ಮಾಹೆಗಳ ವೋಚರ್ಸ್‌ಗಳನ್ನು ಪರಿಶೀಲಿಸಿರುವುದನ್ನು ಹೊರತುಪಡಿಸಿ, ಹಾಜರುಪಡಿಸದೆ ಇರುವ ಬಿಲ್ಲುಗಳ ವಿವರಗಳನ್ನು <u>ಅನುಬಂಧ-8ರಲ್ಲಿ</u> ವಿವರಿಸಲಾಗಿರುವಂತೆ ಒಟ್ಟು ಖರೀದಿ ಮೊತ್ತ ರೂ.34,25,443/- ಗಳನ್ನು ಲಾಗ್ ಪುಸ್ತಕಗಳನ್ನು ಹಾಜರುಪಡಿಸುವವರೆಗೆ ಆಕ್ಷೇಪಿಸಿದೆ. | ಎಲ್ಲಾ ವಾಹನಗಳ ಲಾಗ್ ಪುಸ್ತಕಗಳನ್ನು ಹಾಜರುಪಡಿಸಲಾಗಿದೆ. ಅನುಬಂಧದಲ್ಲಿ ನೀಡಲಾಗಿರುವ ಎಲ್ಲಾ ವೋಚರ್‌ಗಳ ವಿವರಗಳನ್ನು ಮುಂದಿನ ಲೆಕ್ಕತನಿಖೆ ವೇಳೆ ಹಾಜರುಪಡಿಸಲಾಗುವುದು. |
| 22 | <u>ಟೆಂಡರ್ ಕರೆಯದೇ ವಿಶ್ವವಿದ್ಯಾನಿಲಯದ 2016-17ನೇ ಸಾಲಿನ ಕ್ಯಾಲೆಂಡರ್ ಹಾಗೂ ಡೈರಿ ಮುದ್ರಣ ಮಾಡಿಸಿರುವ ಬಗ್ಗೆ :</u><br>ಮಂಗಳೂರು ವಿಶ್ವವಿದ್ಯಾನಿಲಯದ 2016-17ನೇ ಸಾಲಿನ ಕ್ಯಾಲೆಂಡರ್ ಹಾಗೂ ಡೈರಿ ಮುದ್ರಣ ಸಂಬಂಧ ಒಟ್ಟು ರೂ.3,28,016/-ಗಳ ವೆಚ್ಚವನ್ನು ಭರಿಸಲಾಗಿದ್ದು, ಈ ಖರೀದಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ನಿಯಮ-1999 ರಲ್ಲಿ ಸೂಚಿಸಿರುವಂತೆ 1.00 ಲಕ್ಷ ಮೇಲ್ಪಟ್ಟಲ್ಲಿ ಟೆಂಡರ್ ಕೈಗೊಳ್ಳಬೇಕಾಗಿರುತ್ತದೆ. ಆದರೆ, ಇಲ್ಲಿ ಟೆಂಡರ್ ಕರೆಯದೇ ದರಪಟ್ಟಿಯ ಮೂಲಕ ರೂ.1.00 ಲಕ್ಷಕ್ಕೂ ಮೀರದಂತೆ ಬಿಡಿ-ಬಿಡಿಯಾಗಿ ಕ್ಯಾಲೆಂಡರ್ ಹಾಗೂ ಡೈರಿಗಳನ್ನು ಖರೀದಿಸಿರುವುದು ಕಂಡು ಬಂದಿರುತ್ತದೆ. ಇದು ಕೆ.ಟಿ.ಪಿ.ಪಿ ನಿಯಮ-1999 ರ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಸ್ಪಷ್ಟೀಕರಣವನ್ನು ನೀಡುವಂತೆ ವಿಚಾರಣಾ ಪತ್ರ ಸಂಖ್ಯೆ:111/2018-19 ದಿ:09.01.2019 ರಲ್ಲಿ ಜಾರಿ ಮಾಡಲಾಗಿತ್ತು, ಒದಗಿಸಿ ಕೋರಲಾದ ವಿವರಣೆಯು ಸಮರ್ಥನೀಯವಾಗಿಲ್ಲದ ಕಾರಣ ಸದರಿ ಮೊತ್ತ ರೂ.3,28,016/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರವನ್ನು ಅನುಬಂಧ-9ರಲ್ಲಿ ಒದಗಿಸಲಾಗಿದೆ. | ವಿಶ್ವವಿದ್ಯಾನಿಲಯದ ಡೈರಿ ಮತ್ತು ಕ್ಯಾಲೆಂಡರ್‌ಗಳನ್ನು ತುರ್ತಾಗಿ ಮುದ್ರಣ ಮಾಡಬೇಕಾಗಿದ್ದುದರಿಂದ ದರಪಟ್ಟಿ ಕರೆದು ಕನಿಷ್ಠ ದರ ನಮೂದಿಸಿದ ಸಂಸ್ಥೆಯಿಂದ ಮುದ್ರಣ ಮಾಡಲಾಗಿದೆ. ಈ ವರ್ಷದಿಂದ ಟೆಂಡರ್ ಕರೆದು ಮುದ್ರಣ ಮಾಡಲಾಗಿದೆ. ಆದುದರಿಂದ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ. |
| 23 | <u>**Digital University Information Management System (DUIMS)**ಈ ತಂತ್ರಜ್ಞಾನವನ್ನು ವಿಶ್ವವಿದ್ಯಾನಿಲಯಕ್ಕೆ ಅಳವಡಿಸಿರುವ ವೆಚ್ಚಕ್ಕೆ ಸಂಬಂಧಪಟ್ಟಂತೆ ಟೆಂಡರ್ ಕಡತವನ್ನು ಹಾಜರುಪಡಿಸದಿರುವುದು :</u><br>2016-17ನೇ ಸಾಲಿನ ವೋಚರ್ಸ್‌ಗಳ ಪರಿಶೀಲನೆಯಲ್ಲಿ ವೋಚರ ಸಂಖ್ಯೆ:84 ದಿನಾಂಕ:02.04.2016 ರಲ್ಲಿ ಧನಾದೇಶ ಸಂಖ್ಯೆ:066296 ದಿ:04.04.2016 ಹಾಗೂ ಮತ್ತೊಂದು ಧನಾದೇಶದ ಮೂಲಕ M/S Qventures pvt ltd ಇವರಿಗೆ Digital University Information Management System (DUIMS) ಎಂಬ ತಂತ್ರಜ್ಞಾನ ಅಳವಡಿಕೆ ಸಂಬಂಧ 2016-17ನೇ ಸಾಲಿನಲ್ಲಿ ಒಟ್ಟಾರೆ ರೂ.34,50,478 ಹಾಗೂ 2015-16ನೇ ಸಾಲಿನಲ್ಲಿ ರೂ.16,50,000/-ಗಳು ಒಟ್ಟು ರೂ.51,00,478/-ಗಳನ್ನು ಪಾವತಿ ಮಾಡಲಾಗಿರುವುದು ಪಾವತಿ ವಿವರಗಳನ್ನು <u>ಅನುಬಂಧ-10 ರಲ್ಲಿ</u> ವರದಿಗೆ ಲಗತ್ತಿಸಿದೆ. | ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ವೆಬ್ ಪೋರ್ಟಲ್ ಪ್ರಾಜೆಕ್ಟ್ ಅನುಷ್ಠಾನಗೊಳಿಸಲು ಟೆಂಡರ್ ಮುಖಾಂತರ ದರಪಟ್ಟಿ ಆಹ್ವಾನಿಸಿ ಅದರಲ್ಲಿ ಎಲ್1 ಸಂಸ್ಥೆಯಾದ Q venture Pvt. Ltd. ಇವರಿಗೆ ರೂ.33,00,000/-ಗಳಿಗೆ ಆದೇಶ ನೀಡಲಾಗಿರುತ್ತದೆ. ಟೆಂಡರ್ ಪ್ರಕಾರ Display size 46" ಮತ್ತು KIOSK size 19" ಆಗಿದ್ದು ವೆಬ್ ಪೋರ್ಟಲ್ ಅನುಷ್ಠಾನ ಸಂದರ್ಭದಲ್ಲಿ ಇದು ತುಂಬಾ ಚಿಕ್ಕದಾದುದರಿಂದ ಸದ್ರಿ ವೆಬ್ ಪೋರ್ಟಲ್‌ಗೆ ಹೊಂದಿಕೊಳ್ಳುವ ದೊಡ್ಡ ಗಾತ್ರದ Display ಹಾಗೂ kiosk screen ನ್ನು ಬದಲಾವಣೆ ಮಾಡಲು ಮಾನ್ಯ ಕುಲಪತಿಗಳು ಸೂಚಿಸಿದ್ದು ಮತ್ತು |

| | | |
|---|---|---|
| | ಈ ತಂತ್ರಜ್ಞಾನ ಅಳವಡಿಕೆ ಕುರಿತು ತಪಾಸಣೆಗೆ ಹಾಜರುಪಡಿಸಲಾದ ಮಾಹಿತಿಗಳಿಗೆ ರೂ.33,00,000/-ಗಳಿಗೆ M/S Qventures pvt ltd ಇವರಿಗೆ ಟೆಂಡರ್ ಎಲ್-1 ಒಪ್ಪಿಗೆಯಾಗಿರುವುದು ಕಂಡು ಬಂದಿರುತ್ತದೆ. ಆದರೆ ಅನುಬಂಧ-10 ರಲ್ಲಿ ಒದಗಿಸಲಾದ ಪಾವತಿ ವಿವರಗಳಂತೆ, ಒಟ್ಟು ರೂ.51,00,478/-ಗಳು ಪಾವತಿಯಾಗಿರುವುದರಿಂದ ಟೆಂಡರ್ ಒಪ್ಪಿಗೆ ಮೊತ್ತಕ್ಕೂ ಮತ್ತು ವೆಚ್ಚವಾಗಿರುವ ಮೊತ್ತಕ್ಕೂ ಸುಮಾರು ರೂ.18,00,475/-ಗಳು ಸದರಿ ತಂತ್ರಜ್ಞಾನ ಅಳವಡಿಕೆಗೆ ಟೆಂಡರ್ ಮೊತ್ತಕ್ಕಿಂತ ಹೆಚ್ಚುವರಿಯಾಗಿ ವೆಚ್ಚ ಭರಿಸಲಾಗಿರುವ ಮೊತ್ತಕ್ಕೆ ಕಾರಣಗಳನ್ನು ತಪಾಸಣೆಯಲ್ಲಿ ತಿಳಿದುಕೊಳ್ಳುವ ಉದ್ದೇಶದಿಂದ ಟೆಂಡರ್ ಕಡತ ಹಾಗೂ ಕರಾರು ಪತ್ರ ಮುಂತಾದ ಪೂರಕ ದಾಖಲಾತಿಗಳನ್ನು ತಪಾಸಣೆ ಒದಗಿಸಲು ಕೋರಿ ಲೆಕ್ಕತಪಾಸಣೆ ವಿಚಾರಣೆ ಸಂಖ್ಯೆ:43 ದಿ:11.12.2018 ರಲ್ಲಿ ಜಾರಿ ಮಾಡಲಾಗಿತ್ತು. ಆದರೆ ತಪಾಸಣೆ ಮುಗಿಯುವ ಅವಧಿಯವರೆಗೂ ಸಹ ಟೆಂಡರ್ ಕಡತ ಮತ್ತು ಪೂರಕ ದಾಖಲಾತಿಗಳನ್ನು ಹಾಜರುಪಡಿಸದೆ ಇರುವುದರಿಂದ ಈ ಖರೀದಿ ಪ್ರಕ್ರಿಯೆಯಲ್ಲಿ ಹಣದುರುಪಯೋಗವಾಗಿರುವ ಸಾಧ್ಯತೆಗಳನ್ನು ತಳ್ಳಿ ಹಾಕುವಂತಿಲ್ಲದಕಾರಣಸದರಿ ವೆಚ್ಚದ ಒಟ್ಟು ಮೊತ್ತ ರೂ.51,00,478/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ಈ ಬಗ್ಗೆ ಆಡಳಿತಾತ್ಮಕವಾಗಿ ಪರಿಶೀಲಿಸಿ, ಭರಿಸಲಾದ ವೆಚ್ಚವು ಸಮರ್ಥನೀಯವೇ ಎನ್ನುವುದನ್ನು ಖಚಿತಪಡಿಸಿಕೊಂಡು ಅನುಸರಣ ವರದಿಯನ್ನು ಸಲ್ಲಿಸಲು ಸೂಚಿಸಿದೆ. | ದಿನಾಂಕ 10.03.2016 ರ ಸಿಂಡಿಕೇಟ್ ಸಭೆಯ ನಿರ್ಣಯದಂತೆ Display size 55 ಮತ್ತು KIOSK size 23ಗೆ ಹೆಚ್ಚಿಸಲಾಗಿದೆ. ಸದ್ರಿ ಸಂಸ್ಥೆಯು ಸರಬರಾಜು ಮಾಡಿರುವ ವೆಬ್ ಪೋರ್ಟಲ್‌ಗೆ ಅದೇ ಸಂಸ್ಥೆಯ ಸಲಕರಣೆಗಳನ್ನು ಅಳವಡಿಸಬೇಕಾಗಿರುವುದರಿಂದ ಹೆಚ್ಚುವರಿ ವೆಚ್ಚ ಮಾಡಿ ಅಳವಡಿಸಲಾಗಿದೆ. ಈ ಸಂಬಂಧ ಹೆಚ್ಚುವರಿ ವೆಚ್ಚ ರೂ. 11,41,972/-ನ್ನು ವಿಶ್ವವಿದ್ಯಾಲಯ ಅಧಿನಿಯಮ 2000 ಸೆಕ್ಷನ್ 29(2) (ಐ)ರ ಅವಕಾಶದಂತೆ ದಿನಾಂಕ 10.03.2016 ರ ಸಿಂಡಿಕೇಟ್ ಸಭೆಯ ನಿರ್ಣಯದಂತೆ ಪಾವತಿಸಲಾಗಿದೆ. ಈ ಪಾವತಿಯು ಸಿಂಡಿಕೇಟ್ ಸಭೆಯ ಅನುಮೋದನೆಯಂತೆ ಮಾಡಿರುವುದರಿಂದ ಸದರಿ ಆಕ್ಷೇಪಣೆಯನ್ನು ಕೈ ಬಿಡುವಂತೆ ಕೋರಲಾಗಿದೆ.<br>ವೆಬ್ ಪೋರ್ಟಲ್ ಅನುಷ್ಠಾನದ ನಂತರ ವಿಶ್ವವಿದ್ಯಾನಿಲಯದಲ್ಲಿ ಸರ್ವರ್ ಕೊರತೆ ಇದ್ದುದರಿಂದ web portal ಗೆ ಹೊಂದಿಕೊಳ್ಳುವಂತಹ 2 ಸರ್ವರ್‌ಗಳನ್ನು ಸಿಂಡಿಕೇಟ್ ಸಭೆಯ ನಿರ್ಣಯದಂತೆ ಪೂರೈಕೆದಾರ ರಿಂದ ಮಾಸಿಕ ರೂ.70,000/- +ತೆರಿಗೆಯಂತೆ ಬಾಡಿಗೆಗೆ ಪಡೆಯಲಾಗಿರುತ್ತದೆ. ಸರ್ವರ್ ವೆಚ್ಚವು ಮೂಲ ಟೆಂಡರ್‌ನಲ್ಲಿ ಒಳಗೊಂಡಿರುವುದಿಲ್ಲ. ಸರ್ವರ್ ಬಾಡಿಗೆ ವೆಚ್ಚವನ್ನು ಕುಲಪತಿಯವರ ಅನುಮೋದನೆ ಮೇರೆಗೆ ಮಾಡಲಾಗಿದೆ. ಈ ಮೇಲಿನ ಎಲ್ಲಾ ವೆಚ್ಚಗಳೂ ಸೇರಿ ರೂ.51,00,478/ ಪಾವತಿಯಾಗಿರುತ್ತದೆ. ಮೇಲ್ಕಂಡ ಕಾರಣಗಳಿಂದಾಗಿ ಹೆಚ್ಚುವರಿ ಪಾವತಿ ಮಾಡಲಾಗಿದೆ. ಆಕ್ಷೇಪಣೆಯನ್ನು ಕೈಬಿಡಲು ಕೋರಲಾಗಿದೆ. |
| 24 | <u>ಹೊರಗುತ್ತಿಗೆಯ ಮಾನವ ಸಂಪನ್ಮೂಲ ಸೇವೆಯನ್ನು ಮುಂದುವರಿಸಿರುವ ಬಗ್ಗೆ :</u><br>2014-15ನೇ ಸಾಲಿನಲ್ಲಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ M/S Cannon Detective & Secutity Services, Bangalore ರವರಿಂದ ಹೊರಗುತ್ತಿಗೆಯ ಮೂಲಕ ಮಾನವ ಸಂಪನ್ಮೂಲ ಸೇವೆಯನ್ನು ಕೆ.ಟಿ.ಪಿ.ಪಿ-1999 ನಿಯಮಾನುಸಾರ ಪಡೆಯಲಾಗಿತ್ತು. ಟೆಂಡರ್ ದಸ್ತಾವೇಜುಗಳನ್ನು ಪರಿಶೀಲಿಸಲಾಗಿ ಸದರಿ ಸಂಸ್ಥೆಗೆ ಒಂದು ವರ್ಷದ ಅವಧಿಗೆ ಸೇವೆಯನ್ನು ಒದಗಿಸಲು ಅವಕಾಶವಿರುತ್ತದೆ. ಭದ್ರತಾ ಸೇವೆ, ಗ್ರೂಪ್-ಡಿ ಸೇವೆಯೆಂದು ಹುದ್ದೆವಾರು ವರ್ಗೀಕರಿಸಿ, ಅವರುಗಳ ಸೇವೆಯನ್ನು ಮಾಹೆವಾರು ವಿಭಜಿಸಿ, ಪ್ರತೀ ದ್ವೈಮಾಸಿಕವಾಗಿ ಪರಿಷ್ಕರಿಸಿ ಆದೇಶಿಸುತ್ತಿರುವುದು ಲೆಕ್ಕಪರಿಶೋಧನೆಯಲ್ಲಿ ಕಂಡು ಬಂದಿರುತ್ತದೆ. ಸದರಿ ಸಂಸ್ಥೆಯೇ 2014-15ನೇ ಸಾಲಿನಿಂದಲೂ ಮುಂದುವರಿಯುವಂತೆ ಅವಕಾಶ ಮಾಡಿಕೊಟ್ಟಿರುವುದು ಕೆ.ಟಿ.ಪಿ.ಪಿ ನಿಯಮಗಳ ಉಲ್ಲಂಘನೆಯಾಗಿರುತ್ತದೆ. ವಿಚಾರಣಾ ಪತ್ರ ಸಂಖ್ಯೆ:160/2018-19 ದಿ:31.01.2019 ರಂದು ಜಾರಿ ಮಾಡಲಾಗಿತ್ತು. ಈ ಸಂಬಂಧ ನೀಡಿರುವ ಉತ್ತರವು ಪರಿಗಣಿಸಲು ಅರ್ಹವಿಲ್ಲದ ಕಾರಣ 2016-17ನೇ ಸಾಲಿನಲ್ಲಿ M/S Cannon Detective & Secutity Services, Bangalore ರವರಿಗೆ ಪಾವತಿಸಿರುವ ಮೊತ್ತ ರೂ.2,28,11,103/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರಗಳನ್ನು <u>ಅನುಬಂಧ-11ರಲ್ಲಿ</u> ಒದಗಿಸಲಾಗಿದೆ. | ಹೊರಗುತ್ತಿಗೆಯ ಸಂಪನ್ಮೂಲ ಸೇವೆಯನ್ನು ಪಡೆಯಲು 2014-15ರಲ್ಲಿ ಟೆಂಡರ್ ಕರೆದು ಕರಾರು ಮಾಡಿಕೊಂಡು ದಿನಾಂಕ 01.01.2015ರಿಂದ 31.12.2015ರ ವರೆಗೆ ಸೇವೆಗಳನ್ನು ಪಡೆಯಲಾಗಿತ್ತು. ಆದರ ನಂತರ ಕಾರಣಾಂತರದಿಂದ ಹೊಸ ಟೆಂಡರ್ ಕರೆಯದೇ ಚಾಲ್ತಿಯಲ್ಲಿದ್ದ ಗುತ್ತಿಗೆ ದಾರರನ್ನೇ ಮುಂದುವರೆಸಲಾಗಿದೆ. ಇದರಿಂದ ವಿವಿಗೆ ಲಾಭದಾಯಕ ವಾಗಿರುತ್ತದೆ. ಆದುದರಿಂದ ಆಕ್ಷೇಪಣೆಯನ್ನು ಕೈಬಿಡಲು ಕೋರಲಾಗಿದೆ. |

25

<u>ಮೆ. ಕೆನಾನ್ ಡಿಟೆಕ್ಟೀವ್ & ಸೆಕ್ಯೂರಿಟಿ ಸರ್ವಿಸಸ್, ಬೆಂಗಳೂರು ರವರಿಗೆ ಪರಿಷ್ಕೃತ ವೇತನವನ್ನು ಪಾವತಿಸಿರುವ ಸಂಬಂಧ ಪೂರಕ ಲೆಕ್ಕಪತ್ರ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು :</u>

ವೋಚರ್ ಸಂಖ್ಯೆ: 3350/ ದಿ:01.09.2016 ರಲ್ಲಿ CANON DETECTIVE & SECURITY SERVICE ಬೆಂಗಳೂರು ರವರ ಬಿಲ್ಲು ಸಂಖ್ಯೆ:5374/ ದಿ:26.08.2016 ರಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಭದ್ರತಾ ಸಿಬ್ಬಂದಿ, ಗ್ರೂಪ್-ಡಿ ಸಿಬ್ಬಂದಿ ಮತ್ತು ಶುಚಿತ್ವ ಸಿಬ್ಬಂದಿಗಳ ಕನಿಷ್ಠ ವೇತನವನ್ನು ಪರಿಷ್ಕರಿಸಿ, ದಿನಾಂಕ:01.04.2015 ರಿಂದ ದಿ:31.07.2016 ರವರೆಗೆ ಒಟ್ಟು 16 ತಿಂಗಳ ಪರಿಷ್ಕೃತ ವೇತನ ಒಟ್ಟು ರೂ.24,13,578/-ಗಳನ್ನು ಧನಾದೇಶ ಸಂಖ್ಯೆ: 148136 ದಿನಾಂಕ:01.09.2016 ರಲ್ಲಿ ಮೇಲ್ಕಂಡ ಸಂಸ್ಥೆಯವರಿಗೆ ಪಾವತಿಸಿದೆ.

ಈ ಪಾವತಿ ಸಂಬಂಧ, ಸರ್ಕಾರದ ಪರಿಷ್ಕೃತ ಆದೇಶದ ಮೂಲ ಪ್ರತಿಗಳು, ದಿನಾಂಕ:01.04.2015 ರಿಂದ ದಿ:31.07.2016 ರವರೆಗಿನ ಒಟ್ಟು 16 ತಿಂಗಳ ವೋಚರ್‌ಗಳು, ಈ ಹಿಂದೆ ಪಾವತಿಸಲಾದ ದರಗಳಿಗೆ ಸಂಬಂಧಿಸಿದಂತೆ, ಸರ್ಕಾರದ ಮತ್ತು ವಿಶ್ವವಿದ್ಯಾನಿಲಯದ ಆದೇಶದ ಪ್ರತಿಗಳು ಹಾಗೂ ಸಂಸ್ಥೆಯೊಂದಿಗೆ ಮಾಡಿಕೊಂಡ ಕರಾರು ಒಪ್ಪಂದಗಳ ಮೂಲ ಲೆಕ್ಕಪತ್ರ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.

ಮೇಲ್ಕಂಡ ಎಲ್ಲಾ ಲೆಕ್ಕಪತ್ರ ದಾಖಲೆಗಳನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ: 100/2018-19 ನ್ನು ದಿನಾಂಕ:02.01.2019 ರಂದು ನೀಡಿದ್ದರೂ ಸಹ ಹಾಜರುಪಡಿಸದ ಕಾರಣ ಪಾವತಿ ಒಟ್ಟು ಮೊತ್ತ ರೂ.24,13,578/-ಗಳನ್ನು ಆಕ್ಷೇಪಣೆಗೆ ಸೂಚಿಸಲಾಗಿದೆ.

ಕರ್ನಾಟಕ ಸರಕಾರದ ಅಧಿಸೂಚನೆ ಸಂಖ್ಯೆ ಕಾ.ಇ.123ಎಲ್ ಡಬ್ಲ್ಯೂಎ 2015 ದಿನಾಂಕ 29.02.2016 ರಂತೆ ಭದ್ರತಾ ಏಜೆನ್ಸಿ ಉದ್ದಿಮೆಯಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ದಿನಾಂಕ 01.01.2016ರಿಂದ ಅನ್ವಯವಾಗುವಂತೆ ಕನಿಷ್ಠ ವೇತನ ನಿಗದಿಪಡಿಸಿರುವುದರಿಂದ ಕುಲಸಚಿವರ ಅಧಿಕೃತ ಜ್ಞಾಪನದ ಸಂಖ್ಯೆ ಮವಿ. ಸಾವಿ. ಬಿಲ್ಲು 65 2016-16/ಜಿ1 ದಿನಾಂಕ 26.08.2016 ರಲ್ಲಿ ಕನಿಷ್ಟ ವೇತನವನ್ನು ನಿಗದಿಪಡಿಸಿದ್ದು ಅದರಂತೆ ಪಾವತಿ ಮಾಡಲಾಗಿದೆ. ಲೆಕ್ಕ ಪತ್ರಗಳನ್ನು ಮುಂದಿನ ಲೆಕ್ಕ ತಪಾಸಣೆ ವೇಳೆ ಹಾಜರುಪಡಿಸಲಾಗುವುದು. ಆಕ್ಷೇಪಣೆಯನ್ನು ಕೈ ಬಿಡುವಂತೆ ಕೋರಲಾಗಿದೆ.

26

<u>ಆದಾಯ ತೆರಿಗೆ ಕಟಾಯಿಸದೇ ಸರ್ವರ್ ಬಾಡಿಗೆ ಬಿಲ್ಲು ಪಾವತಿಸಿರುವುದು :</u>

2016-17ನೇ ಸಾಲಿನಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ web portal ಪ್ರಾಜೆಕ್ಟ್‌ಗೆ ಬಾಡಿಗೆ ಆಧಾರದಲ್ಲಿ ಸರ್ವರ್ ಸೇವೆಯನ್ನು M/S Q ventures pvt ltd Hydarbad ಇವರಿಂದ ಪಡೆಯಲಾದ ಸಂಬಂಧ ಜಿ.ಆರ್.ಎ ಖಾತೆಯಿಂದ ವೆಚ್ಚ ಭರಿಸಲಾದ ಪಾವತಿ ವೋಚರ್‌ಗಳನ್ನು ಪರಿಶೀಲಿಸಲಾಗಿ ಆದಾಯ ತೆರಿಗೆ ಕಟಾಯಿಸದೆ ಬಿಲ್ಲು ಪಾವತಿಸಿರುವುದು ಕಂಡು ಬಂದಿರುತ್ತದೆ. ಆದಾಯ ತೆರಿಗೆ ಕಾಯ್ದೆ 194 (ಸಿ) ಯಂತೆ ಶೇ 2 ರಂತೆ ಆದಾಯ ತೆರಿಗೆ ಕಟಾಯಿಸಬೇಕಾಗಿದ್ದು, ಅದರಂತೆ ಈ ಸಂಬಂಧ ಪಾವತಿಸಲಾದ ಒಟ್ಟು ಮೊತ್ತ ರೂ.8,86,900/-ಗಳಿಗೆ ಶೇ.2 ರಂತೆ ಆದಾಯ ತೆರಿಗೆ ರೂ.17,738/-ಗಳನ್ನು ಮೇಲಿನ ಸಂಸ್ಥೆಯಿಂದ ವಸೂಲಿಸಿ ಆದಾಯ ತೆರಿಗೆ ಇಲಾಖೆಗೆ ಜಮಾ ಮಾಡಿ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಸೂಚಿಸಿದೆ. ಪಾವತಿ ವಿವರಗಳು ಈ ಕೆಳಕಂಡಂತಿವೆ.

| ಕ್ರ.ಸಂ | ವೋಚರ್ ಸಂಖ್ಯೆ | ಚೆಕ್ ಸಂಖ್ಯೆ/ ದಿನಾಂಕ | ಮೊತ್ತ | ಷರಾ |
|---|---|---|---|---|
| 1 | 2702 | 926344/ 01.08.2016 | 3,20,600 | |
| 2 | 3310 | 148113/ 01.09.2016 | 1,61,000 | |
| 3 | 5195 | 147340/ 01.12.2016 | 80,850 | |
| 4 | 5886 | 202957/ 04.01.2017 | 80,850 | |
| 5 | 6470 | 878740/ 04.02.2017 | 2,43,600 | |
| ಒಟ್ಟು | | | 8,86,900 | |

ಸದ್ರಿ ಸಂಸ್ಥೆಗೆ ಈ ಕಚೇರಿ ಸಂ ಮವಿ/ಎಫ್ಎಸ್ 2020-21ಎಫ್ 19/306 ದಿನಾಂಕ 10.06.2020ರಲ್ಲಿ ಪತ್ರ ಬರೆಯಲಾಗಿದೆ.

| | | |
|---|---|---|
| 27 | <u>ಸರಬರಾಜು ಬಿಲ್ಲಿನಲ್ಲಿ (**Supply bill**) ಕಟಾಯಿಸಲಾದ ಮಾರಾಟ ತೆರಿಗೆ ಮೊಬಲಗನ್ನು ಸರಬರಾಜುದಾರರಿಗೆ ಹಿಂದಿರುಗಿಸಿರುವುದು</u><br>2016-17ನೇ ಸಾಲಿನ ಏಪ್ರಿಲ್-2016 ರ ಮಾಹೆಯ ವೋಚರ್ಸ್‌ಗಳನ್ನು ಪರಿಶೀಲಿಸಲಾಗಿ, ವೋಚರ್ ಸಂಖ್ಯೆ:648/ ಧನಾದೇಶ ಸಂಖ್ಯೆ:077206 ದಿನಾಂಕ:28.04.2016 ರನ್ವಯ M/S Lakshmi Systems ದಾವಣಗೆರೆ ಇವರಿಗೆ ಜನರೇಟರ್ಸ್‌ಗಳನ್ನು ಸರಬರಾಜು ಮಾಡಲಾದ ಒಟ್ಟು ಬಿಲ್ಲಿನ ಮೊತ್ತ ರೂ.8,93,250/-ಗಳ ಬಿಲ್ಲಿನಲ್ಲಿ ಶೇ.4 ರಂತೆ ಕಟಾಯಿಸಲಾದ ಮಾರಾಟ ತೆರಿಗೆಯ ಮೊತ್ತ ರೂ.35,730/-ಗಳನ್ನು ಸರಬರಾಜುದಾರರು ಈ ಸರಬರಾಜು ಬಿಲ್ಲಿಗೆ ಸಂಬಂಧಿಸಿದಂತೆ ಈಗಾಗಲೇ ವಾಣಿಜ್ಯ ತೆರಿಗೆ ಇಲಾಖೆಗೆ ಜಮೆ ಮಾಡಿರುತ್ತೇನೆ ಎಂದು ಪೂರಕ ದಾಖಲಾತಿಗಳನ್ನು ಸಲ್ಲಿಸಿ ಸರಬರಾಜು ಬಿಲ್ಲಿನಲ್ಲಿ ಕಟಾಯಿಸಲಾದ ಮೊತ್ತ ರೂ.35,730/-ಗಳನ್ನು ಹಿಂಪಡೆದಿರುತ್ತಾರೆ.<br>ಆದರೆ ಸದರಿ ಸರಬರಾಜುದಾರರ ಬಿಲ್ಲಿನಲ್ಲಿ ವಿಶ್ವವಿದ್ಯಾನಿಲಯದವರು ಕಟಾಯಿಸಿಕೊಳ್ಳಲಾದ ಮಾರಾಟ ತೆರಿಗೆ ಮೊತ್ತ ರೂ.35,730/-ಗಳನ್ನು ವಾಣಿಜ್ಯ ತೆರಿಗೆ ಇಲಾಖೆಗೆ ವಿವಿಧ ಸರಬರಾಜು ಬಿಲ್ಲುಗಳಲ್ಲಿ/ ಕಾಮಗಾರಿ ಬಿಲ್ಲುಗಳಲ್ಲಿ ಕಟಾಯಿಸಲಾದ ಮಾರಾಟ ತೆರಿಗೆ ಮೊಬಲಗುಗಳಿಗೆ ಸಂಬಂಧಪಟ್ಟಂತೆ ಧನಾದೇಶ ಸಂಖ್ಯೆ: 019025 ದಿನಾಂಕ:11.03.2016 ರಲ್ಲಿ ಜಮೆ ಮಾಡಲಾಗಿರುವ ಒಟ್ಟು ರೂ.2,33,540/-ಗಳ ಒಟ್ಟು ಮೊತ್ತದಲ್ಲಿ M/S Lakshmi System ದಾವಣಗೆರೆ ಇವರ ಜನರೇಟರ್ಸ್ ಸರಬರಾಜು ಬಿಲ್ಲಿನಲ್ಲಿ ಕಟಾಯಿಸಲಾದ ಮಾರಾಟ ತೆರಿಗೆ ಮೊತ್ತ ರೂ.35,730/-ಗಳು ಸಹ ಸೇರಿ ಕೊಂಡಿರುತ್ತದೆ.<br>ಈ ಕಟಾಯಿಸಲಾದ ಮಾರಾಟ ತೆರಿಗೆಯ ಮೊತ್ತವನ್ನು ಮಾರಾಟ ತೆರಿಗೆ ಇಲಾಖೆಗೆ ಜಮಾ ಮಾಡಿರುವುದನ್ನು ಹಣಕಾಸು ಶಾಖೆಯಲ್ಲಿ ಗಮನಿಸದೆ ಮತ್ತು ಸರಬರಾಜುದಾರರಿಗೆ ಕಟಾಯಿಸಲಾದ ಮಾರಾಟ ತೆರಿಗೆಯ ಮೊತ್ತವನ್ನು ಹಿಂದಿರುಗಿಸುವ ಸಂದರ್ಭದಲ್ಲಿ ಕುಲಸಚಿವರ ಆದೇಶವನ್ನು ಸಹ ಪಡೆಯದೇ ನೇರವಾಗಿ ಹಣಕಾಸು ಶಾಖೆಯಿಂದ ಕೇವಲ ಸರಬರಾಜುದಾರರ ಮನವಿಯ ಪತ್ರದ ಆಧಾರದ ಮೇಲೆ ಬಿಲ್ಲಿನಲ್ಲಿ ಕಟಾಯಿಸಲಾದ ಮಾರಾಟ ತೆರಿಗೆಯ ಮೊತ್ತವನ್ನು ಸರಬರಾಜುದಾರರಿಗೆ ಹಿಂದಿರುಗಿಸಿರುವುದರಿಂದ ವಿಶ್ವವಿದ್ಯಾನಿಲಯಕ್ಕೆ ರೂ.35,730/-ಗಳು ಆರ್ಥಿಕ ನಷ್ಟ ಉಂಟಾಗಿರುವುದು ಸ್ಪಷ್ಟವಾಗಿ ಕಂಡು ಬಂದಿರುತ್ತದೆ.<br>ವಾಸ್ತವವಾಗಿ ಸರಬರಾಜು ಬಿಲ್ಲಿನಲ್ಲಿ ಕಟಾಯಿಸಲಾದ ಮಾರಾಟ ತೆರಿಗೆ ಮೊತ್ತವಾಗಲೀ/ ಆದಾಯ ತೆರಿಗೆ ಮೊತ್ತವನ್ನಾಗಲೀ ನೇರವಾಗಿ ಸರಬರಾಜುದಾರರಿಗೆ ಹಿಂದಿರುಗಿಸುವ ನಿಯಮಗಳಿಲ್ಲ ಇದನ್ನು ಸಂಬಂಧಿಸಿದ ಇಲಾಖೆಗೆ ಜಮಾ ಮಾಡಬೇಕಾಗಿರುತ್ತದೆ. ಸರಬರಾಜುದಾರರಿಗೆ ಸರಬರಾಜು ಬಿಲ್ಲಿನಲ್ಲಿ ಕಟಾಯಿಸಿಕೊಳ್ಳಲಾಗಿರುವ ಮಾರಾಟ ತೆರಿಗೆ ಮೊಬಲಗು, ಬಿಲ್ಲಿನ ವಿವರ ಮತ್ತು ಕಟಾಯಿಸಲಾದ ಮಾರಾಟ ತೆರಿಗೆಯನ್ನು ವಾಣಿಜ್ಯ ತೆರಿಗೆ ಇಲಾಖೆಗೆ ಜಮಾ ಮಾಡಲಾಗಿರುವ ವಿವರಗಳನ್ನು ಮಾತ್ರ ಸರಬರಾಜುದಾರರಿಗೆ ಅರ್ಜಿಯನ್ನು ಪಡೆದು ನೀಡಬೇಕಾಗಿರುತ್ತದೆ. ನಂತರ ಈ ಮಾಹಿತಿಗಳ ಆಧಾರದ ಮೇಲೆ ಸರಬರಾಜುದಾರರು ಮಾರಾಟ ತೆರಿಗೆ ಇಲಾಖೆಗೆ ಪೂರಕ ದಾಖಲಾತಿಗಳನ್ನು ಸಲ್ಲಿಸಿ ಜಮಾ ಮಾಡಲಾದ ಮಾರಾಟ ತೆರಿಗೆಯ ಮೊತ್ತವನ್ನು ಹಿಂಪಡೆಯಬಹುದಾಗಿದೆ.<br>ಆದರೆ ವಿಶ್ವವಿದ್ಯಾನಿಲಯದ ಹಣಕಾಸು ಶಾಖೆಯಲ್ಲಿ ಇದ್ಯಾವುದೇ ಕ್ರಮಗಳನ್ನಾಗಲೀ, ಪಾವತಿ ನಿಯಮಗಳನ್ನಾಗಲೀ ಅನುಸರಿಸದೆ ಮಾರಾಟ ತೆರಿಗೆ ಮೊತ್ತವನ್ನು ಸರಬರಾಜುದಾರರಿಗೆ ಪಾವತಿಸಿ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ನಷ್ಟ ಉಂಟು ಮಾಡಿರುವ ಅಧಿಕಾರಿಗಳು/ ಸಿಬ್ಬಂದಿಯವರ ಮೇಲೆ ಆಡಳಿತಾತ್ಮಕ ಕ್ರಮ ಕೈಗೊಂಡು ರೂ.35,730/-ಗಳಿಗೆ 2 ವರ್ಷ 9 ತಿಂಗಳುಗಳಿಗೆ ಚಾಲ್ತಿಯಲ್ಲಿರುವ ಬ್ಯಾಂಕ್‌ನ ಸರಳ ಬಡ್ಡಿದರದಂತೆ ಲೆಕ್ಕ ಹಾಕಿ ಒಟ್ಟು ರೂ.35,730 + 11,792 = 47,522/-ಗಳನ್ನು ಸರಬರಾಜುದಾರರಿಂದ ವಸೂಲಿಗೆ ಸೂಚಿಸಿದೆ.<br>ಈ ವಸೂಲಾತಿಗೆ ಸಂಬಂಧಪಟ್ಟಂತೆ ಲೆಕ್ಕಪರಿಶೋಧನೆ ವಿಚಾರಣೆ ಸಂಖ್ಯೆ:61 ದಿನಾಂಕ:20.12.2018 ರನ್ವಯ ನೀಡಲಾಗಿ ಉತ್ತರ ಸಲ್ಲಿಸಿರುವುದಿಲ್ಲ. | ಸದ್ರಿ ಸಂಸ್ಥೆಗೆ ಪತ್ರ ಬರೆಯಲಾಗಿದೆ. ಸದ್ರಿ ಮೊತ್ತ ರೂ. 35730.00ನ್ನು ಚಲನ್ ಸಂಖ್ಯೆ 11964 ದಿನಾಂಕ 7.11.2020ರಂದು ವಿವಿ ಖಾತೆಗೆ ಜಮೆ ಮಾಡಲಾಗಿದೆ. ಆಕ್ಷೇಪಣೆಯನ್ನು ಕೈ ಬಿಡುವಂತೆ ಕೋರಲಾಗಿದೆ. |
| 28 | <u>ಶಾಸನಾತ್ಮಕ ಕಟಾವಣೆಗಳನ್ನು ಕಟಾಯಿಸದೇ ಕಾಮಗಾರಿ ಬಿಲ್ಲುಗಳನ್ನು ಪಾವತಿಸಿರುವುದು :</u><br>2016-17ನೇ ಸಾಲಿನಲ್ಲಿ ಪಾವತಿಸಲಾದ ಕಾಮಗಾರಿ ಬಿಲ್ಲುಗಳಲ್ಲಿ ಶಾಸನಾತ್ಮಕ ಕಟಾವಣೆಗಳಾದ 1% LWC, 4% ಮಾರಾಟ ತೆರಿಗೆ, 1% CBF ಕಟಾಯಿಸದೇ ಬಿಲ್ಲು ಪಾವತಿಸಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದ್ದು, ಸಂಬಂಧಿಸಿದವರಿಂದ ಸದರಿ ಕಟಾವಣೆಗಳನ್ನು ಕಟಾಯಿಸಿ, ಸಂಬಂಧಿಸಿದ ಖಾತೆ/ ಲೆಕ್ಕ ಶೀರ್ಷಿಕೆಗೆ ಜಮಾ ಮಾಡಿ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ: 133/2018-19 ದಿನಾಂಕ:28.01.2019 ಹಾಗೂ ವಿಚಾರಣಾ ಪತ್ರ ಸಂಖ್ಯೆ: 198/2018-19 ದಿನಾಂಕ:16.02.2019 ಗಳನ್ನು ಜಾರಿ ಮಾಡಲಾಗಿತ್ತು. | ಬಿಲ್ಲು (ವೋಚರ್)ಗಳನ್ನು ಪರಿಶೀಲಿಸಲಾಗಿದ್ದು ಎಲ್ಲಾ ಕೆಲಸಗಳನ್ನು ಕೊಟೇಶನ್ ಮೂಲಕ ಮಾಡಿಸಿದ್ದು ಸಪ್ಲೈ ಬಿಲ್ಲುಗಳಿಗೆ ಪಾವತಿ ಮಾಡಿರುವುದರಂದ LWC,KST ಮತ್ತು CBF ಕಟಾವಣೆ ಮಾಡಿರುವುದಿಲ್ಲ. |

| | | |
|---|---|---|
| | ಆದರೆ ಈ ಸಂಬಂಧ ಯಾವುದೇ ವಿವರಗಳನ್ನು ಹಾಜರುಪಡಿಸದಿರುವುದರಿಂದ ಕೂಡಲೇ ಕ್ರಮವಹಿಸಿ ವಿವರಗಳನ್ನು ಹಾಜರುಪಡಿಸುವಂತೆ ಸೂಚಿಸಿದೆ. ವಿವರಗಳನ್ನು ಅನುಬಂಧ-12 ರಲ್ಲಿ ವರದಿಗೆ ಲಗತ್ತಿಸಿದೆ. ಹಾಗೂ ಶಾಸನಬದ್ಧ ಕಟಾವಣೆಗಳನ್ನು ಕಟಾಯಿಸಿಲ್ಲದ ವಿಷಯ ನಿರ್ವಾಹಕರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಸೂಚಿಸಿದೆ.<br>ಈ ಸಂಬಂಧ ಕಟಾವಣೆಗಳನ್ನು ಗುತ್ತಿಗೆದಾರರಿಂದ ವಸೂಲಿಸಿ ರೂ.32,027/-ಗಳನ್ನು ಸಂಬಂಧಿತ ಖಾತೆ/ ಲೆಕ್ಕ ಶೀರ್ಷಿಕೆಗಳಿಗೆ ಜಮಾ ಮಾಡಿ ವಿವರಗಳನ್ನು ಹಾಜರುಪಡಿಸುವಂತೆ ಸೂಚಿಸಿದೆ. | |
| 29 | ಆದಾಯ ತೆರಿಗೆ ಕಟಾಯಿಸದಿರುವುದು :<br>2016-17ನೇ ಸಾಲಿನ ಏಪ್ರಿಲ್-2016 ರ ಮಾಹೆಯ ವೋಚರ್‌ಗಳ ಪರಿಶೀಲನೆಯಲ್ಲಿ ವೋಚರ್ ಸಂಖ್ಯೆ: 77/ ದಿನಾಂಕ:02.04.2016 ರ ಧನಾದೇಶ ಸಂಖ್ಯೆ:066288/ ದಿ:02.04.2016 ರನ್ವಯ ದಿ:01.03.2016 ರಿಂದ 31.03.2016 ರವರೆಗೆ ಗಣಿತಶಾಸ್ತ್ರ ಸಂದರ್ಶಕ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸಿದ ಬಾಬ್ತು ರೂ.31,500/-ಗಳನ್ನು ಪಾವತಿ ಮಾಡಲಾಗಿದ್ದು, ಈ ಪಾವತಿಗೆ ಸಂಬಂಧಪಟ್ಟಂತೆ ಪಾವತಿ ಬಿಲ್ಲಿನಲ್ಲಿ ಶೇ.10 ರಂತೆ ಆದಾಯ ತೆರಿಗೆಯನ್ನು ಆದಾಯ ತೆರಿಗೆ ಕಾಯಿದೆಯ ನಿಯಮ 194C ರನ್ವಯ ರೂ.3,150/-ಗಳನ್ನು ಕಟಾಯಿಸಿರುವುದಿಲ್ಲ. ಆದಾಯ ತೆರಿಗೆ ಮೊತ್ತವನ್ನು ಸಂಬಂಧಿಸಿದ ಪ್ರಾಧ್ಯಾಪಕರಿಂದ ವಸೂಲಿಸಿ ಆದಾಯ ತೆರಿಗೆ ಇಲಾಖೆಗೆ ಜಮೆ ಮಾಡಿ ವರದಿ ಸಲ್ಲಿಸಲು ಸೂಚಿಸಲಾಗಿದೆ. | ಸಂದರ್ಶಕ ಪ್ರಾಧ್ಯಾಪಕರಾದ ಪ್ರೊ. ಎಂ.ಎಸ್. ಬಾಲಸುಬ್ರಹ್ಮಣಿ ಇವರು ನಿವೃತ್ತ ಪ್ರಾಧ್ಯಾಪಕರಾಗಿರುವುದರಿಂದ ಆದಾಯ ತೆರಿಗೆಯನ್ನು ಕಟಾಯಿಸಿರುವುದಿಲ್ಲ |
| 30 | **DG S & D** ದರದಲ್ಲಿ 40 ಲ್ಯಾಪ್‌ಟಾಪ್‌ಗಳನ್ನು ಖರೀದಿಸಿ ಬಿಲ್ಲು ಪಾವತಿಸಿರುವ ಬಗ್ಗೆ :<br>2016-17ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ವೋಚರ್ ಸಂಖ್ಯೆ:920/ ದಿ:03.05.2016 ಧನಾದೇಶ ಸಂಖ್ಯೆ:077398/ ದಿ:06.05.2016 ರಲ್ಲಿ ರೂ.22,80,000/-ಗಳನ್ನು ಪಾವತಿಸಿ M/S Base computer ರವರಿಂದ ASUSಎಂಬ ಹೆಸರಿನ 40 ಲ್ಯಾಪ್ ಟಾಪ್‌ಗಳನ್ನು ಖರೀದಿಸಿರುವ ಕಡತವನ್ನು ಪರಿಶೀಲಿಸಲಾಗಿ, ಸದರಿ ಖರೀದಿ ಪ್ರಕ್ರಿಯೆಯಲ್ಲಿ schedule 'A' 24 (a) ರನ್ವಯ Purchase departmental charges at 1% ಎಂದು 40 x 57000 = 22,80,000 x 1% /100= ರೂ.22,800/-ಗಳನ್ನು ಹಾಗೂ inspection departmental charge ಎಂದು DGSSD Rate contract schedule 'A' ರ 24 (ಬಿ) ರನ್ವಯ 40x57000 = 22,80,000/100 x 1% = ರೂ.22,800/-ಗಳನ್ನು ಒಟ್ಟಾರೆ ರೂ.45,600/-ಗಳನ್ನು ಪಾವತಿಸಿದ್ದು ಈ ಮೊತ್ತವನ್ನು **M/S Base computer** ರವರಿಂದ ವಸೂಲಿ ಮಾಡಬೇಕಾಗಿರುತ್ತದೆ. Rate contract ಗೆ ಒಳಪಟ್ಟಿರುವ ASUS Company ಯವರಿಂದ Base computer ಸಂಸ್ಥೆಯು ಅಧಿಕೃತ ಮಾರಾಟಗಾರರು ಎಂಬ ದೃಢೀಕರಣ ಪಡೆದಿರುವುದನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಆದುದರಿಂದ Base computer ರವರಿಂದ DGSSD Rate contract ನ ನಿಯಮಗಳನುಸಾರ Inspection charges ಮತ್ತು departmental charge ರೂ.45,600/-ಗಳನ್ನು ವಸೂಲಿಸಿ ವಿಶ್ವವಿದ್ಯಾನಿಲಯದ ಲೆಕ್ಕಶೀರ್ಷಿಕೆಗೆ ಜಮೆ ಮಾಡಿ, ಜಮೆ ಮಾಡಲಾದ ವಿವರಗಳನ್ನು ಹಾಗೂ M/S Base computer ರವರು ASUS companyಯವರ ಅಧಿಕೃತ ಸರಬರಾಜುದಾರರು ಎಂಬ ದೃಢೀಕರಣ ಪತ್ರವನ್ನು ಪಡೆದು ಲೆಕ್ಕ ತಪಾಸಣೆಗೆ ಹಾಜರುಪಡಿಸಲು ಸೂಚಿಸಿದೆ. | 40 ಲ್ಯಾಪ್ ಟಾಪ್‌ಗಳನ್ನು M/S Base Computer ಮಂಗಳೂರು ಇವರಿಂದ ವಿವಿಯ ಸಿಂಡಿಕೇಟ್ ಸಭೆ ದಿನಾಂಕ 20.11.2015ರಲ್ಲಿ ಅನುಮೋದಿಸಲಾದ ಟೆಂಡರ್ ದರ ಲ್ಯಾಪ್ ಟಾಪ್ ಒಂದರ ರೂ. 57000.00 ರಂತೆ ಖರೀದಿ ಮಾಡಲಾಗಿದ್ದು DGSSD ಇಲಾಖೆಗೆ Purchase department charges ಮತ್ತು inspection departmental charges ಪಾವತಿ ಮಾಡುವ ಪ್ರಮೇಯವಿರುವುದಿಲ್ಲ. ಆದುದರಿಂದ ಆಕ್ಷೇಪಣೆಯನ್ನು ಕೈ ಬಿಡಲು ಕೋರಿದೆ. |
| 31 | **DGS & D** ದರದಲ್ಲಿ 100 ಲ್ಯಾಪ್‌ಟಾಪ್‌ಗಳನ್ನು ಖರೀದಿಸಿ ಬಿಲ್ಲು ಪಾವತಿಸಿರುವ ಬಗ್ಗೆ :<br>2016-17ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಧನಾದೇಶ ಸಂಖ್ಯೆ: 633769/ ದಿನಾಂಕ:16.07.2016 ರಲ್ಲಿ ರೂ.68,74,000/-ಗಳನ್ನು ಪಾವತಿಸಿ 100 ಲ್ಯಾಪ್‌ಟಾಪ್‌ಗಳನ್ನು M/S Total IT Solution ಬೆಂಗಳೂರು ರವರಿಂದ DGS & D ದರದಡಿ ಖರೀದಿಸಿದ್ದು, ಸದರಿ ಖರೀದಿ ಪ್ರಕ್ರಿಯೆಯಲ್ಲಿ DGS & D Rate contract- Schedule 'A' 24 (a)ರನ್ವಯ Purchase Departmental charges at 1.0%ರಂತೆ 100 X 56,000= 56,00,000 x1.0% /100 = 56,000/- ಗಳು ಹಾಗೂ Departmental Inspection charge ಎಂದು DGS & D Rate contract- schedule 'A' 24 (b)ರನ್ವಯ 100 X 56,000= 56,00,000 x 1.0% /100 = 56,000/- ಗಳನ್ನು ಒಟ್ಟಾರೆ ರೂ.1,12,000/- ಗಳನ್ನು ಹೆಚ್ಚುವರಿಯಾಗಿ M/S Total 1 + Solution ಬೆಂಗಳೂರು ರವರಿಗೆ ಪಾವತಿಸಲಾಗಿರುತ್ತದೆ. ವಾಸ್ತವವಾಗಿ ಸದರಿ ಮೊತ್ತವು ಮೇಲಿನ ಷರತ್ತಿಗೆ ಅನ್ವಯಿಸಿರುವುದರಿಂದ ಸದರಿ ಸಂಸ್ಥೆಯಿಂದ ರೂ.1,12,000/- ವಸೂಲಿಸಲು ಸೂಚಿಸಿದೆ. ವಸೂಲಿಯಾದ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಸೂಚಿಸಿದೆ. | 100 ಲ್ಯಾಪ್ ಟಾಪ್‌ಗಳನ್ನು M/S Total IT Solutions ಬೆಂಗಳೂರು ರವರಿಂದ DGS&D ದರದಡಿ ಖರೀದಿಸಿದ್ದು, DGS&D Rate contract- Schedule 'A' 24 (a) ರನ್ವಯ Purchase Departmental charge 1.0% ಮತ್ತು 24 (b)ರನ್ವಯ 1.0% ನಂತೆ Inspection charge ಗಳನ್ನು DGS&D ಗೆ ಸರಬರಾಜು ಸಂಸ್ಥೆಯು ಪಾವತಿ ಮಾಡಬೇಕಾಗಿದೆ. ಸದ್ರಿ ಮೊತ್ತವನ್ನು ಸರಬರಾಜು ಸಂಸ್ಥೆಯು 24 (d) ಯಂತೆ ಖರೀದಿ ಮಾಡಿರುವ ಇಲಾಖೆಯಿಂದ ಹಿಂಪಡೆಯಬಹುದು ಎಂದು ತಿಳಿಸಲಾಗಿದೆ. ಈ ಖರೀದಿ ಪ್ರಕ್ರಿಯೆಯಲ್ಲಿ ಈ ಶುಲ್ಕವನ್ನು ಸಂಸ್ಥೆಯವರು DGS&Dಗೆ ಪಾವತಿಸಿಲ್ಲ ಹಾಗೂ ವಿ.ವಿ.ಯಿಂದ ಸಂಸ್ಥೆಯವರು ಹಿಂಪಡೆದಿರುವುದಿಲ್ಲ. ಆದುದರಿಂದ ಸಂಸ್ಥೆ ಯಿಂದ ವಸೂಲು ಮಾಡುವ ಪ್ರಮೇಯ ಉದ್ಭವಿಸುವುದಿಲ್ಲ. ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ. |

32

**<u>DGS & D ದರದಲ್ಲಿ 400 ಕಂಪ್ಯೂಟರ್‌ಗಳನ್ನು ಖರೀದಿಸಿ ರಿಯಾಯಿತಿ ಪಡೆಯದಿರುವ ಬಗ್ಗೆ :</u>**

2016-17ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಧನಾದೇಶ ಸಂಖ್ಯೆ: 119019/ ದಿನಾಂಕ:28.06.2016 ರಲ್ಲಿ ಮೇ॥ ಟೋಟಲ್ ಐಟಿ ಸಲ್ಯೂಷನ್, ಬೆಂಗಳೂರು ಇವರಿಂದ ಡಿ.ಜಿ.ಎಸ್ & ಡಿ ದರದಲ್ಲಿ ಗಣಕಯಂತ್ರಗಳನ್ನು ಖರೀದಿಸಿದ್ದು ಒಟ್ಟು ರೂ.2,23,40,500/-ಗಳನ್ನು ಪಾವತಿಸಲಾಗಿರುತ್ತದೆ.

ಡಿ.ಜಿ.ಎಸ್ & ಡಿ ದರಪಟ್ಟಿಯ ಅನ್ವಯ ದರಗಳನ್ನು ಈ ಕೆಳಕಂಡಂತೆ ಪಾವತಿಸಬೇಕಾಗಿರುತ್ತದೆ

| | | |
|---|---|---|
| 1 | ಗಣಕಯಂತ್ರಗಳ ಖರೀದಿ ಮೊತ್ತ - 400x45,500 | 1,82,00,000 |
| 2 | 4th& 5th Year warrenty charges | 27,30,000 |
| 3 | Service Tax at 15% on warrenty charges | 4,09,500 |
| **TOTAL** | | **2,13,39,500** |

400 ಗಣಕಯಂತ್ರಗಳನ್ನು ಖರೀದಿಸಿ ರೂ.2,13,39,500/-ಗಳನ್ನು ವಾಸ್ತವವಾಗಿ ಪಾವತಿಸಬೇಕಾಗಿರುತ್ತದೆ. ಆದರೆ ಡಿ.ಜಿ.ಎಸ್ & ಡಿ Rate contract- Schedule 'A' 24 (c)ರನ್ವಯ ಮೂಲ ದರ (ಅಂದರೆ ಒಂದು ಗಣಕಯಂತ್ರದ ಬೆಲೆ ರೂ.45,500/-ಗಳಲ್ಲಿಯ ಎಲ್ಲಾ ತೆರಿಗೆಗಳನ್ನು ಸೇರಿಸಲಾಗಿರುತ್ತದೆ) ----- ಒಳಗೊಂಡಿರುವುದರಿಂದ VAT @5% ಹೆಚ್ಚುವರಿಯಾಗಿ ರೂ.10,01,000/-ಗಳನ್ನು ಪಾವತಿಸಿರುವುದು ಡಿ.ಜಿ.ಎಸ್ & ಡಿ Rate contract- Schedule 'B' ರ 24 (c)ಯನ್ನು ಉಲ್ಲಂಘಿಸಿ ಪಾವತಿಸಲಾಗಿರುತ್ತದೆ.

ಡಿ.ಜಿ.ಎಸ್ & ಡಿ Rate contract- Schedule 'B' ರ ಸಿ ಅನ್ವಯ ಸಂಖ್ಯೆ:251 ರಿಂದ 500 ರ ಸ್ಲಾಬ್ ರನ್ವಯ 0.25% ರಿಯಾಯಿತಿಯನ್ನು ನೀಡಬೇಕಾಗಿದ್ದು, 400 X 45,500 = 1,82,00,000 X 0.25 % /100 = 45,500. ರೂ.45,500/-ಗಳನ್ನು ರಿಯಾಯಿತಿ ದರವನ್ನು ಕಟಾಯಿಸಿ ಪಾವತಿಸದೇ ರಿಯಾಯಿತಿಯನ್ನು ಪಡೆಯದೇ ಪಾವತಿಸಿರುವ ಮೊತ್ತ ರೂ.45,500/-ಗಳನ್ನು M|| Total IT Solution ರವರಿಂದ ವಸೂಲಿಸಬೇಕಾಗಿರುತ್ತದೆ.

DGS & D Rate Contract – Schedule "A" ರ 24 (a) ರನ್ವಯ Purchase Departmental charges at 1.0% ರಂತೆ 400 X 45,500 = 1,82,00,000 X 1.0% /100 = 1,82,000/-.ರೂ.1,82,000/-ಗಳನ್ನು **Departmental charges** ಆಗಿ ಸರಬರಾಜುದಾರರಿಂದ ವಸೂಲಿ ಮಾಡಬೇಕಾಗಿರುತ್ತದೆ.

ಮುಂದುವರೆದು DGS & D Rate Contract – Schedule "A" ರ 24 (b) For Inspection-Departmental Charges at 1.0% ರಂತೆ 400 X 45,500 = 1,82,00,000 X 1.0% /100 = 1,82,000/-. ರೂ.1,82,000/-ಗಳನ್ನು For Inspection-Departmental Charges ಆಗಿ ಸರಬರಾಜುದಾರರಿಂದ ವಸೂಲಿ ಮಾಡಬೇಕಾಗಿರುತ್ತದೆ.

ವಿಶ್ವವಿದ್ಯಾನಿಲಯದ RUSA ಅನುದಾನದಡಿಯಲ್ಲಿ 400 ಗಣಕಯಂತ್ರಗಳನ್ನು ಮೆ॥ TOTAL IT Solution ರವರಿಂದ DGS&D ದರಪಟ್ಟಿಯನ್ವಯ ಖರೀದಿಸಲಾಗಿದ್ದು, ಸರಬರಾಜುದಾರರಿಂದ ಈ ಕೆಳಕಂಡ ಕಡಿತಗಳನ್ನು ಮಾಡದೇ ಪೂರ್ಣವಾಗಿ ಪಾವತಿಸಲಾಗಿದ್ದು ಈ ಕೆಳಗೆ ವಿವರಿಸಿರುವ ಮೊತ್ತಗಳನ್ನು ವಸೂಲಿ ಮಾಡಿ ವಿಶ್ವವಿದ್ಯಾನಿಲಯದ ಲೆಕ್ಕಶೀರ್ಷಿಕೆಗೆ ಜಮೆ ಮಾಡುವಂತೆ ಸೂಚಿಸಿದೆ.

400 ಕಂಪ್ಯೂಟರ್‌ಗಳನ್ನು M/S Total IT Solutions ಬೆಂಗಳೂರು ರವರಿಂದ DGS&D ದರದಡಿ ಖರೀದಿಸಿದ್ದು, DGS&D Rate contract-Schedule 'A' 24 (a) ರನ್ವಯ Purchase Departmental charges 1.0% ಮತ್ತು 24 (b)ರನ್ವಯ 1.0% ನಂತೆ Inspection charge ಗಳನ್ನು DGS&D ಗೆ ಸರಬರಾಜು ಸಂಸ್ಥೆಯು ಪಾವತಿ ಮಾಡಬೇಕಾಗಿದೆ. ಸದ್ರಿ ಮೊತ್ತವನ್ನು ಸರಬರಾಜು ಸಂಸ್ಥೆಯು 24 (d) ಯಂತೆ ಖರೀದಿ ಮಾಡಿರುವ ಇಲಾಖೆಯಿಂದ ಹಿಂಪಡೆಯಬಹುದು ಎಂದು ತಿಳಿಸಲಾಗಿದೆ. ಈ ಖರೀದಿ ಪ್ರಕ್ರಿಯೆಯಲ್ಲಿ ಈ ಶುಲ್ಕವನ್ನು ಸಂಸ್ಥೆಯವರು DGS&Dಗೆ ಪಾವತಿಸಿಲ್ಲ ಹಾಗೂ ವಿ.ವಿ.ಯಿಂದ ಸಂಸ್ಥೆಯವರು ಹಿಂಪಡೆದಿರುವುದಿಲ್ಲ. ಅಲ್ಲದೆ DGS&D ಯವರ ಶೆಡ್ಯೂಲ್ ಎ ಯಲ್ಲಿ ದರಗಳು ತೆರಿಗೆ ರಹಿತ (Excl.) ಎಂದು ತಿಳಿಸಿರುವುದರಿಂದ ಚಾಲ್ತಿಯಲ್ಲಿರುವ ತೆರಿಗೆಯನ್ನು ಸಂಸ್ಥೆಯವರು ಕ್ಲೇಮ್ ಮಾಡಿದ್ದನ್ನು ಪಾವತಿಸಲಾಗಿದೆ. ಪಾವತಿ ಸಮಂಜಸವಾಗಿರುತ್ತದೆ. Annexure B(c) ಲ್ಲಿ ತಿಳಿಸಿರುವ discount ಖರೀದಿದಾರರು CRC. ನೀಡದೆಯಿರುವ ಸಂದರ್ಭದಲ್ಲಿ DGS&D ಯವರು ಪಾವತಿ ಮಾಡುವ ಸಂದರ್ಭಕ್ಕಾಗಿರುತ್ತದೆ. ಆದುದರಿಂದ ಸರಬರಾಜು ಸಂಸ್ಥೆಗೆ ಯಾವುದೇ ಹೆಚ್ಚುವರಿ ಪಾವತಿಯಾಗಿರುವುದಿಲ್ಲ. ಆದುದರಿಂದ ಸಂಸ್ಥೆಯಿಂದ ವಸೂಲು ಮಾಡುವ ಪ್ರಮೇಯ ಉದ್ಭವಿಸುವುದಿಲ್ಲ. ಆಕ್ಷೇಪಣೆಯನ್ನು ಕೈ ಬಿಡಲು ಕೋರಿದೆ.

<table>
<tr>
<td></td>
<td>
<table>
<tr><th>ಕ್ರ.ಸಂ</th><th>ನ್ಯೂನ್ಯತೆಗಳ ವಿವರ</th><th>ವಸೂಲಾತಿ ಮೊತ್ತ</th><th>ಷರಾ</th></tr>
<tr><td>1</td><td>DGS & D Rate contract- Schedule “A” ರ 24 (c) ಉಲ್ಲಂಘಿಸಿ VAT @ 5.5% ಹೆಚ್ಚುವರಿಯಾಗಿ ಪಾವತಿಸಿರುವುದು.</td><td>10,01,000</td><td>ಮಂಗಳೂರು ವಿಶ್ವವಿದ್ಯಾನಿಲಯ ಲೆಕ್ಕ ಶೀರ್ಷಿಕೆ ಜಮೆ ಮಾಡಬೇಕು</td></tr>
<tr><td>2</td><td>DGS & D Rate contract- Schedule “A” ರದ ಅನ್ವಯ 500 ರವರೆಗೆ ಗಣಕ ಯಂತ್ರ ಖರೀದಿಗೆ 0.25% ರಿಯಾಯಿತಿ ನೀಡಬೇಕಾದ ಮೊತ್ತ.</td><td>45,500</td><td>ಮಂಗಳೂರು ವಿಶ್ವವಿದ್ಯಾನಿಲಯ ಲೆಕ್ಕ ಶೀರ್ಷಿಕೆ ಜಮೆ ಮಾಡಬೇಕು</td></tr>
<tr><td>3</td><td>DGS & D Rate contract- Schedule “A” ರ 24 (a) ರನ್ವಯ Departmental charges @ 1.0% ರಂತೆ ಸರಬರಾಜುದಾರರಿಂದ ಪಡೆಯಬೇಕಾಗಿರುವುದು.</td><td>1,82,000</td><td></td></tr>
<tr><td>4</td><td>DGS & D Rate contract- Schedule “A” ರ 24 (b) ರನ್ವಯ Inspection charges @ 1.0% ರಂತೆ ಸರಬರಾಜುದಾರರಿಂದ ಪಡೆಯಬೇಕಾಗಿರುವುದು.</td><td>1,82,000</td><td></td></tr>
<tr><td colspan="2">TOTAL</td><td>14,10,500</td><td></td></tr>
</table>
ಈ ಮೇಲೆ ತಿಳಿಸಿರುವ ಕೋಷ್ಟಕದನ್ವಯ ರೂ.14,10,500/-ಗಳನ್ನು ಮೆ॥ ಟೊಟಲ್ ಸಲ್ಯೂಷನ್, ಬೆಂಗಳೂರು ರವರಿಂದ ವಸೂಲಿಸಿ ವಿಶ್ವವಿದ್ಯಾನಿಲಯದ ಸಂಬಂಧಿಸಿದ ಲೆಕ್ಕಶೀರ್ಷಿಕೆಗೆ ಜಮೆ ಮಾಡುವಂತೆ ಹಾಗೂ ಜಮೆ ಮಾಡಲಾದ ವಿವರಗಳನ್ನು ಲೆಕ್ಕಪರಿಶೋಧನಾ ಕಛೇರಿಗೆ ಸಲ್ಲಿಸುವಂತೆ ಸೂಚಿಸಿದೆ.
</td>
<td></td>
</tr>
<tr>
<td>33</td>
<td><u>ಉದ್ಯಾನವನಗಳ ನಿರ್ವಹಣೆಯ ಟೆಂಡರ್ ಕಡತವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು :</u><br>2016-17ನೇ ಸಾಲಿನಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಆವರಣಗಳಲ್ಲಿ ಇರುವ ಉದ್ಯಾನವನಗಳ ನಿರ್ವಹಣೆಯ ಸಂಬಂಧ M/S Star Employment Bureau, ಮೈಸೂರು ರವರಿಗೆ ಮಾಹೆಯಾನ ನಿರ್ವಹಣಾ ವೆಚ್ಚವನ್ನು ಭರಿಸಿರುವುದು ಲೆಕ್ಕಪರಿಶೋಧನೆ ವೇಳೆ ಕಂಡು ಬಂದಿದ್ದು, ಇದರ ಸಂಬಂಧ ಕರೆದಿರುವ ಟೆಂಡರ್ ಪ್ರಕ್ರಿಯೆ ಕಡತವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:160/2018-19 ದಿ:31.03.2019 ರಲ್ಲಿ ಜಾರಿ ಮಾಡಲಾಗಿತ್ತು. ಆದರೆ ಯಾವುದೇ ಕಡತ/ ದಾಖಲಾತಿಗಳನ್ನು ಹಾಜರುಪಡಿಸದ ಕಾರಣ, ಭರಿಸಲಾದ ಒಟ್ಟು ಮೊತ್ತ ರೂ.24,00,900/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರವನ್ನು <u>ಅನುಬಂಧ-13 ರಲ್ಲಿ</u> ಒದಗಿಸಲಾಗಿದೆ.</td>
<td>ವಿ.ವಿ.ಯ ಕ್ಯಾಂಪಸ್ಸಿನಲ್ಲಿರುವ ಉದ್ಯಾನವನದ ನಿರ್ವಹಣೆಗಾಗಿ ಟೆಂಡರ್ ಕರೆಯಲಾಗಿದ್ದು ದಿನಾಂಕ 01.01.15ರಿಂದ 31.12.15ರ ವರೆಗೆ ಗುತ್ತಿಗೆ ಯನ್ನು ನೀಡಲಾಗಿತ್ತು. ಸದ್ರಿ ಸಂಸ್ಥೆಯ ಗುತ್ತಿಗೆಯನ್ನು 2016-17ರಲ್ಲಿ ಯೂ ಮುಂದುವರೆಸಲಾಗಿದೆ. ಆಕ್ಷೇಪಣೆಯನ್ನು ಕೈ ಬಿಡಲು ಕೋರಿದೆ.</td>
</tr>
<tr>
<td>34</td>
<td><u>ಶುಚಿತ್ವ ಕೆಲಸದ (Cleaning Services) ಟೆಂಡರ್ ಕಡತವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವ ಕುರಿತು :</u><br>ಮಂಗಳೂರು ವಿಶ್ವವಿದ್ಯಾನಿಲಯದ ಅಧೀನಕ್ಕೊಳಪಟ್ಟಿರುವ ಮಂಗಳೂರು ವಿಶ್ವವಿದ್ಯಾನಿಲಯ ಕಾಲೇಜು ಹಾಗೂ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜು, (FMKMC) ಮಡಿಕೇರಿಯ ಆವರಣದ ಶುಚಿತ್ವ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಗುತ್ತಿಗೆದಾರರನ್ನು ನೇಮಿಸಿಕೊಂಡು ಶುಚಿತ್ವ ಸೇವೆಯ ನಿರ್ವಹಣಾ ವೆಚ್ಚವನ್ನು ಭರಿಸಿರುವುದು ಲೆಕ್ಕಪರಿಶೋಧನಾ ಅವಧಿಯಲ್ಲಿ ಕಂಡು ಬಂದಿದ್ದು, M/S Oshin security services ವಿರಾಜಪೇಟೆ ಹಾಗೂ ಶ್ರೀ ಕಿಶೋರ್ ಕುಮಾರ ಬಂಟ್ವಾಳ ಎಂಬ ಗುತ್ತಿಗೆದಾರರು ಈ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ. ಈ ಕೆಲಸಕ್ಕೆ ಕರೆದಿರುವ ಟೆಂಡರ್ ಪ್ರಕ್ರಿಯೆ ಕಡತವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:182/2018-19 ದಿ:07.02.2019 ರಲ್ಲಿ ಜಾರಿ ಮಾಡಲಾಗಿತ್ತು. ಆದರೆ ಯಾವುದೇ ದಾಖಲೆಗಳನ್ನು ಹಾಜರುಪಡಿಸದ ಕಾರಣ, ನಿರ್ವಹಣೆಗೆ ಭರಿಸಿರುವ ಒಟ್ಟು ಮೊತ್ತ ರೂ.20,26,092/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರವನ್ನು <u>ಅನುಬಂಧ-14 ರಲ್ಲಿ</u> ಒದಗಿಸಲಾಗಿದೆ.</td>
<td>ಶುಚಿತ್ವ ಕೆಲಸಕ್ಕಾಗಿ ಟೆಂಡರ್ ಕರೆಯಲಾಗಿದೆ. ದಾಖಲೆಗಳನ್ನು ಮುಂದಿನ ಲೆಕ್ಕ ತಪಾಸಣೆ ವೇಳೆ ಹಾಜರುಪಡಿಸಲಾಗುವುದು.</td>
</tr>
</table>

35

**<u>ಭದ್ರತಾ ಸೇವೆಯ ಟೆಂಡರ್ ಕಡತವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು :</u>**

ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ವ್ಯಾಪ್ತಿಗೆ ಒಳಪಟ್ಟಿರುವ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜು, ಮಡಿಕೇರಿ ಹಾಗೂ ಸ್ನಾತಕೋತ್ತರ ಕೇಂದ್ರ ಚಿಕ್ಕಳುವಾರ ಕೇಂದ್ರಗಳಿಗೆ 2016-17ನೇ ಸಾಲಿನಲ್ಲಿ ಭದ್ರತಾ ಸೇವೆಯ ಸಂಬಂಧ M/S Gajmukh Security Bureau, ಮೈಸೂರು ರವರಿಗೆ ಮಾಹೆಯಾನ ಭದ್ರತಾ ವೆಚ್ಚವನ್ನು ಭರಿಸಿರುವುದು ಲೆಕ್ಕಪರಿಶೋಧನೆಯಲ್ಲಿ ಕಂಡು ಬಂದಿದ್ದು, ಈ ವಿಚಾರವಾಗಿ ವಿಶ್ವವಿದ್ಯಾನಿಲಯವು ಕರೆದಿರುವ ಟೆಂಡರ್ ಪ್ರಕ್ರಿಯೆ ಕಡತಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ: 23/2018-19 ದಿ:16.11.2018 ರಲ್ಲಿ ಜಾರಿ ಮಾಡಲಾಗಿ, ಯಾವುದೇ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಭದ್ರತಾ ಸೇವೆಯ ನಿಮಿತ್ತ ಭರಿಸಲಾದ ಒಟ್ಟು ವೆಚ್ಚ ರೂ.19,63,574/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರವನ್ನು <u>ಅನುಬಂಧ-15ರಲ್ಲಿ</u> ಒದಗಿಸಲಾಗಿದೆ.

ಇದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಲೆಕ್ಕ ತಪಾಸಣೆಗೆ ಹಾಜರುಪಡಿಸಲಾಗಿದೆ. ಆದಾಗ್ಯೂ ಸದ್ರಿ ದಾಖಲೆಗಳನ್ನು ಮುಂದಿನ ಲೆಕ್ಕ ತಪಾಸಣೆ ವೇಳೆ ಹಾಜರು ಪಡಿಸಲಾಗುವುದು.

36

**<u>ವಿದ್ಯುತ್ ಸ್ಥಾವರಗಳ ನಿರ್ವಹಣಾ ವೆಚ್ಚ ಭರಿಸಿರುವುದು :</u>**

ಮಂಗಳೂರು ವಿಶ್ವವಿದ್ಯಾನಿಲಯದ 2016-17ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಮಂಗಳಗಂಗೋತ್ರಿ ಆವರಣದಲ್ಲಿ ನಂದಾ ದೀಪ ಮತ್ತು ಜ್ಞಾನ ದೀಪ ಎಂಬ 02 ವಿದ್ಯುತ್ ಸ್ಥಾವರಗಳನ್ನು ಸುಮಾರು 25 ವರ್ಷಗಳಿಗಿಂತ ಹಿಂದೆ ಸ್ಥಾಪಿಸಲಾಗಿರುತ್ತದೆ. ಈ ಸ್ಥಾವರಗಳ ನಿರ್ವಹಣೆ ಮಾಡಲು 2016-17ನೇ ಸಾಲಿನಲ್ಲಿ ಈ ಕೆಳಕಂಡ ಅಂಕಿ ಅಂಶಗಳಂತೆ ವೆಚ್ಚ ಭರಿಸುತ್ತಿರುವುದು ಕಂಡು ಬಂದಿರುತ್ತದೆ.

| | | |
|---|---|---|
| 1 | ಮೆಸ್ಕಾಂನಿಂದ ಸ್ಥಾವರಗಳಿಗೆ ಪಡೆಯಲಾಗುವ ವಿದ್ಯುತ್ ಪ್ರಮಾಣಕ್ಕೆ ಪಾವತಿಸಲಾಗಿರುವ ವಿದ್ಯುತ್ ಶುಲ್ಕ ಮೊತ್ತ | ರೂ.1,83,91,133 |
| 2 | 02 ಸ್ಥಾವರಗಳನ್ನು ನಿರ್ವಹಣೆ ಕಾರ್ಯಕ್ಕಾಗಿ ನಿಯೋಜಿಸಲಾಗುವ ಸಿಬ್ಬಂದಿಯವರ ವೇತನ ಪಾವತಿಗಾಗಿ | ರೂ.13,68,438 |
| 3 | ಮೆಸ್ಕಾಂ ಸಿಬ್ಬಂದಿಯವರು ವರ್ಷಕ್ಕೆ ಒಂದು ಬಾರಿ ಪರಿವೀಕ್ಷಣೆಗೆ ಬರುವುದಕ್ಕೆ ಶುಲ್ಕ ಪಾವತಿ | ರೂ.33,900<br>(+) 3,300 |
| | ಒಟ್ಟು | 1,97,96,771 |

ಮೇಲೆ ತಿಳಿಸಲಾದ ವೆಚ್ಚಗಳನ್ನು ವಾಸ್ತವವಾಗಿ ಕೋಣಾಜೆ ಗ್ರಾಮ ಪಂಚಾಯಿತಿಯು ಭರಿಸಬೇಕಿರುತ್ತದೆ. ಏಕೆಂದರೆ ಸದರಿ ವಿಶ್ವವಿದ್ಯಾನಿಲಯವು ಈ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿರುತ್ತದೆ. ಪ್ರತಿ ವರ್ಷ ಕಂದಾಯವನ್ನು ಸಹ ಗ್ರಾಮ ಪಂಚಾಯಿತಿಗೆ ಪಾವತಿಸಲಾಗುತ್ತಿದೆ. ಪ್ರಸ್ತುತ 2016-17ನೇ ಸಾಲಿನಲ್ಲಿ ರೂ.14,09,141/-ಗಳ ಕಂದಾಯ ಪಾವತಿಸಿರುವುದು ಕಂಡು ಬಂದಿರುತ್ತದೆ.

ಗ್ರಾಮ ಪಂಚಾಯಿತಿಯವರು ಕಂದಾಯವನ್ನು ಪಡೆದ ಮೇಲೆ ಗ್ರಾಮ ಪಂಚಾಯಿತಿ ವತಿಯಿಂದ ಬೀದಿ ದೀಪಗಳ ನಿರ್ವಹಣೆ ಮಾಡುವುದು ಗ್ರಾಮ ಪಂಚಾಯಿತಿಯವರ ಆದ್ಯ ಕರ್ತವ್ಯವಾಗಿರುತ್ತದೆ. ವಿಶ್ವವಿದ್ಯಾನಿಲಯದವರು ಗ್ರಾಮ ಪಂಚಾಯಿತಿಯ ವತಿಯಿಂದ ಬೀದಿ ದೀಪಗಳ ನಿರ್ವಹಣೆ ಸೌಲಭ್ಯವನ್ನು ಪಡೆಯದೆ, ವಿಶ್ವವಿದ್ಯಾನಿಲಯವು ಖರೀದಿಸಲಾಗುವ ವಿದ್ಯುತ್ ಸೌಲಭ್ಯವನ್ನು ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸಲಾಗಿರುವ ವಿದ್ಯುತ್ ಸ್ಥಾವರಗಳಿಂದ ವಿದ್ಯುತ್‌ನ ಮೂಲಕ ಬೀದಿ ದೀಪಗಳನ್ನು ನಿರ್ವಹಿಸುತ್ತಿರುವುದರಿಂದ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ಹೊರೆ ಉಂಟಾಗಿರುತ್ತದೆ.

ಇದು ಅಲ್ಲದೆ ಮೆಸ್ಕಾಂ ರವರಿಂದ ವಿದ್ಯುತ್ ಸ್ಥಾವರಗಳಿಗೆ ವಿದ್ಯುತ್ ಸರಬರಾಜು ಆಗುವ ಸ್ಥಳದಿಂದ ವಿಶ್ವವಿದ್ಯಾನಿಲಯದ ಸ್ಥಾವರಗಳು, ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿನ ವಿದ್ಯುತ್ ಕಂಬಗಳ ಅಳವಡಿಕೆ ಹಾಗೂ ಕಂಬಗಳ ನಿರ್ವಹಣೆ ಹಾಗೂ ವಿದ್ಯುತ್ ನಿರ್ವಹಣೆಗಾಗಿ ರೂ.82,35,764/-ಗಳ ವೆಚ್ಚದ ಮೊತ್ತವು ಸೇರಿಕೊಂಡಿರುತ್ತದೆ. ಹಾಗೂ ವಿಶ್ವವಿದ್ಯಾನಿಲಯದ ವಾಣಿಜ್ಯ ಸಂಕೀರ್ಣಗಳು, ವಸತಿ ಗೃಹಗಳಿಗೆ ಸ್ಥಾವರಗಳಿಂದ ವಿದ್ಯುತ್ ಸರಬರಾಜು ಮಾಡಿರುವುದಕ್ಕೆ ವಿಶ್ವವಿದ್ಯಾನಿಲಯದ ಸಿಬ್ಬಂದಿಯವರಿಂದ ವಿದ್ಯುತ್ ಶುಲ್ಕವನ್ನು ವಸೂಲಾತಿ ಮಾಡಲು ನಿಯೋಜಿಸಿರುವುದರಿಂದ ವಾಸ್ತವವಾಗಿ ವಿದ್ಯುತ್ ಉಪಯೋಗಿಸಲಾದ ಪ್ರಮಾಣಗಳಿಗೆ ವಿದ್ಯುತ್ ಶುಲ್ಕ ವಸೂಲಾತಿಯಾಗಿರುವುದಕ್ಕೆ ದೃಢಪಡಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ.

ವಿಶ್ವವಿದ್ಯಾನಿಲಯವು ಗ್ರಾಮಾಂತರ ಪ್ರದೇಶದಲ್ಲಿ ಸ್ಥಾಪನೆಯಾಗಿದ್ದು, ಆ ಸಂದರ್ಭದಲ್ಲಿ ಇಲ್ಲಿ ವಿದ್ಯುತ್ ಸಂಪರ್ಕ, ದಾರಿದೀಪ, ಕುಡಿಯುವ ನೀರಿನ ವ್ಯವಸ್ಥೆ ಮುಂತಾದ ಮೂಲಭೂತ ಸೌಕರ್ಯಗಳಿರಲಿಲ್ಲ. ವಿಶ್ವವಿದ್ಯಾನಿಲಯದ ವಿವಿಧ ಕಟ್ಟಡಗಳಿಗೆ, ಪ್ರಯೋಗಾಲಯದ ಸೌಲಭ್ಯಗಳಿಗೆ ಹಾಗೂ ಸಿಬ್ಬಂದಿ ವಸತಿ ಗೃಹಗಳಿಗೆ ಕುಡಿಯುವ ನೀರು, ವಿದ್ಯುತ್ ಪೂರೈಕೆ ಇತ್ಯಾದಿ ಮೂಲಭೂತ ಸೌಕರ್ಯ ಒದಗಿಸುವುದು ವಿಶ್ವವಿದ್ಯಾನಿಲಯದ ಆಡಳಿತಕ್ಕೆ ಅನಿವಾರ್ಯವಾದ ಹಿನ್ನಲೆಯಲ್ಲಿ ವಿಶ್ವವಿದ್ಯಾನಿಲಯದ ವತಿಯಿಂದ ಅಂದಿನ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಯೊಂದಿಗೆ ಪತ್ರ ವ್ಯವಹಾರ ನಡೆಸಿ, ಸರಕಾರದಿಂದ ಮಂಜೂರಾತಿ ಪಡೆದು ಕರ್ನಾಟಕ ವಿದ್ಯುತ್ ಮಂಡಳಿ ವತಿಯಿಂದಲೇ ಜ್ಞಾನದೀಪ ಮತ್ತು ನಂದಾದೀಪ ವಿದ್ಯುತ್ ಸ್ಥಾವರಗಳನ್ನು ಸ್ಥಾಪಿಸಲಾಗಿದೆ. ಸದರಿ ಸ್ಥಾವರಗಳಿಂದ ವಿಶ್ವವಿದ್ಯಾನಿಲಯ ಆವರಣದಲ್ಲಿ ಮಾತ್ರ ವಿದ್ಯುತ್ ಪೂರೈಕೆಯಾಗುತ್ತಿದೆ. ಸದರಿ ಸ್ಥಾವರಗಳ ನಿರ್ವಹಣೆಯನ್ನು ವಿಶ್ವವಿದ್ಯಾನಿಲಯದ ವತಿಯಿಂದಲೇ ಮಾಡಲಾಗುತ್ತಿದೆ. ಸ್ಥಾವರಗಳ ನಿರ್ವಹಣೆಗಾಗಿ ನೇಮಕವಾಗಿರುವ ಸಿಬ್ಬಂದಿಗಳು ಸರಕಾರದಿಂದ ಮಂಜೂರಾತಿ ಪಡೆದುದಾಗಿದೆ. ಉತ್ತಮ ಗುಣಮಟ್ಟದ ಮತ್ತು ನಿರಂತರ ವಿದ್ಯುತ್ ಸಂಪರ್ಕ ನೀಡಲಾಗುತ್ತದೆ. ಗ್ರಾಮ ಪಂಚಾಯತಿಗೆ ವಿಶ್ವವಿದ್ಯಾನಿಲಯದಿಂದ ವರದಿಯಲ್ಲಿ ತಿಳಿಸಿರುವಂತೆ ಕೇವಲ ವಸತಿ ನಿಲಯಗಳ ಬಾಬ್ತು ರೂ. 1409141.00 ವಾರ್ಷಿಕ ಕಂದಾಯ ಪಾವತಿಸಲಾಗಿದ್ದು ಗ್ರಾಮ ಪಂಚಾಯತಿಯವರು ವಸತಿ ನಿಲಯಗಳ ದಾರಿದೀಪಗಳ ನಿರ್ವಹಣೆ ಮಾಡಲು ಒಪ್ಪಿಕೊಂಡು ನಿರ್ವಹಿಸುತ್ತಿದ್ದಾರೆ. ಈ ಸ್ಥಾವರವನ್ನು ವಿಶೇಷ ಸಂದರ್ಭದಲ್ಲಿ ಸರಕಾರದ ಅನುಮತಿ ಮೇರೆಗೆ ಪಡೆದುಕೊಳ್ಳಲಾಗಿದೆ. ಸ್ಥಾವರಗಳು ಇಲ್ಲದಿದ್ದರೂ ಕಛೇರಿಗಳಿಗಾಗಿ ಮತ್ತು ಇತರ ಲ್ಯಾಬ್‌ಗಳಿಗಾಗಿ ಹಾಸ್ಟೆಲ್‌ಗಳಿಗಾಗಿ ವಿ.ವಿ.ಯ ವಿದ್ಯುತ್ ಶುಲ್ಕ ಭರಿಸಲೇಬೇಕಾಗಿತ್ತು. ಈಗಿನ ವಿದ್ಯುತ್ ಬೇಡಿಕೆ ಪ್ರಕಾರ ಇನ್ನೂ ಹೆಚ್ಚು ಸಾಮರ್ಥ್ಯದ ವಿದ್ಯುತ್ ಅಗತ್ಯವಿರುತ್ತದೆ. ವಿದ್ಯುತ್ ಬಳಕೆಗೆ ಈ ಪರಿಸರದ ವೈದ್ಯಕೀಯ ಕಾಲೇಜುಗಳು ಮತ್ತು ಆಸ್ಪತ್ರೆಗಳು ಈಗಿರುವ 11ಕೆವಿಎಯಿಂದ 33ಕೆವಿಎ ವಿದ್ಯುತ್ ಸರಬರಾಜು ವ್ಯವಸ್ಥೆಗೆ ಉನ್ನತೀಕರಿಸಿರುವಾಗ ಈ ವಿಶ್ವವಿದ್ಯಾನಿಲಯವು ಮೆಸ್ಕಾಂನಿಂದ ಕೇವಲ 440ವೋಲ್ಟ್ ವಿದ್ಯುತ್ ಪಡೆಯುವುದು ಸಮಂಜಸವಲ್ಲ. ಅಲ್ಲದೆ, ವಾಣಿಜ್ಯ ಸಂಕೀರ್ಣ ಕಟ್ಟಡ ಅಂಗಡಿ ಮಳಿಗೆ ಮತ್ತು

| | | |
|---|---|---|
| | ಮೇಲೆ ವಿವರಿಸಲಾಗಿರುವ ಎಲ್ಲಾ ವೆಚ್ಚಗಳನ್ನು ಮತ್ತು ಎಲ್ಲಾ ಅಂಶಗಳನ್ನು ಗಮನಿಸಿದಾಗ ವಿದ್ಯುತ್ ಸ್ಥಾವರಗಳನ್ನು ಸ್ಥಾಪಿಸಿ ನಿರ್ವಹಣೆ ಮಾಡುತ್ತಿರುವುದರ ಬದಲಾಗಿ ವಿಶ್ವವಿದ್ಯಾನಿಲಯವು ನೇರವಾಗಿ ವಿಶ್ವವಿದ್ಯಾನಿಲಯಕ್ಕೆ ಅವಶ್ಯವಿರುವ ವಿದ್ಯುತ್ ಪ್ರಮಾಣವನ್ನು ಸರಬರಾಜು ಮೆಸ್ಕಾಂನಿಂದ ಮಾಡಿಸಿಕೊಂಡು ವಿದ್ಯುತ್ ಪ್ರಮಾಣದ ಶುಲ್ಕವನ್ನು ಪಾವತಿಸುವ ಕ್ರಮವನ್ನು ಹಿಂದಿನಿಂದಲೂ ಪಾಲಿಸಿಕೊಂಡು ಬಂದಿದ್ದರೆ ವಿಶ್ವವಿದ್ಯಾನಿಲಯಕ್ಕೆ ಸ್ಥಾವರಗಳ ನಿರ್ವಹಣೆಗಾಗಿ ನಿಯೋಜಿಸಲಾಗಿರುವ ಸಿಬ್ಬಂದಿ ವೇತನ, ವಿದ್ಯುತ್ ಕಂಬಗಳ ನಿರ್ವಹಣೆ, ನಿರ್ವಹಣೆಗಾಗಿ ಬೇಕಾಗುವ ವಿದ್ಯುತ್ ಸಾಮಾಗ್ರಿಗಳ ಖರೀದಿ, ಗ್ರಾಮ ಪಂಚಾಯಿತಿಗೆ ಕಂದಾಯ ಪಾವತಿ ಮುಂತಾದವುಗಳಿಂದ ವಿಶ್ವವಿದ್ಯಾನಿಲಯಕ್ಕೆ ಕಳೆದ ಅನೇಕ ವರ್ಷಗಳಿಂದ ಮುಂದುವರೆದಿದ್ದು ಪ್ರತಿ ವರ್ಷ ಸುಮಾರು ಸರಾಸರಿ 2 ಕೋಟಿಯಷ್ಟು ವೆಚ್ಚ ಆಗುತ್ತಿರುವುದನ್ನು ತಡೆಯಬಹುದಾಗಿತ್ತು.<br>ಇನ್ನಾದರೂ ಈ ವಿದ್ಯುತ್ ಸ್ಥಾವರಗಳಿಂದ ವಿಶ್ವವಿದ್ಯಾನಿಲಯಕ್ಕೆ ಆಗುತ್ತಿರುವ ಆರ್ಥಿಕ ನಷ್ಟದ ಹೊರೆಯನ್ನು ತಪ್ಪಿಸಬಹುದಾಗಿದ್ದು, ಈ ಸ್ಥಾವರಗಳ ನಿರ್ವಹಣೆಯ ಬದಲಾಗಿ ಮೆಸ್ಕಾಂರವರಿಂದಲೇ ನೇರವಾಗಿ ವಿದ್ಯುತ್ ಸಂಪರ್ಕವನ್ನು ಪಡೆದು, ಅವಶ್ಯವಿರುವ ವಿದ್ಯುತ್ ಪ್ರಮಾಣವನ್ನು ಪಡೆದು ನಿರ್ವಹಿಸಿದಲ್ಲಿ ವಿಶ್ವವಿದ್ಯಾನಿಲಯಕ್ಕೆ ಆಗುತ್ತಿರುವ ಭಾರಿ ಆರ್ಥಿಕ ನಷ್ಟವನ್ನು ತಡೆಯಬಹುದಾಗಿದೆ ಎಂದು ತಪಾಸಣೆಯಲ್ಲಿ ಅಭಿಪ್ರಾಯವನ್ನು ತಿಳಿಸುತ್ತಾ. ಈ ಕುರಿತು ಶೀಘ್ರವಾಗಿ ಆಡಳಿತಾತ್ಮಕ ಕ್ರಮ ಕೈಗೊಂಡು ಸಮಂಜಸ ಅನುಪಾಲನಾ ವರದಿ ಸಲ್ಲಿಸುವವರೆಗೂ 2016-17ನೇ ಸಾಲಿನಲ್ಲಿ ಒಟ್ಟು ವೆಚ್ಚವಾಗಿರುವ ಮೊತ್ತ ರೂ.2,80,32,535/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. | ವಸತಿಗೃಹ ನಿವಾಸಿಗಳಿಂದ ವಿದ್ಯುತ್ ಶುಲ್ಕ ವಸೂಲಾತಿ ಮಾಡಿ ರೂ. 45,77,617.00ನ್ನು ವಿಶ್ವವಿದ್ಯಾನಿಲಯದ ನಿಧಿಗೆ ಜಮೆಗೊಳಿಸಲಾಗಿದೆ. ವಿದ್ಯುತ್ ವೆಚ್ಚವು ಸಮಂಜಸವಾಗಿರುವುದರಿಂದ ಈ ಆಕ್ಷೇಪಣೆಯನ್ನು ಕೈ ಬಿಡುವಂತೆ ಕೋರಲಾಗಿದೆ. |
| 37 (ಎ) | ಬೋಧಕೇತರ ನೌಕರರುಗಳಿಗೆ ನಿಯಮ ಉಲ್ಲಂಘಿಸಿ ವಿಶೇಷ ಭತ್ಯೆಗಳನ್ನು ಪಾವತಿಸಿರುವುದು :<br>2016-17ನೇ ಸಾಲಿನ ಮಂಗಳೂರು ವಿಶ್ವವಿದ್ಯಾನಿಲಯದ ಲೆಕ್ಕಪರಿಶೋಧನೆಯಲ್ಲಿ ಬೋಧಕೇತರ ನೌಕರರುಗಳಿಗೆ ನಿಯಮ ಉಲ್ಲಂಘಿಸಿ ವಿಶೇಷ ಭತ್ಯೆಗಳನ್ನು ಪಾವತಿಸಿರುವುದು ಕಂಡು ಬಂದಿರುತ್ತದೆ. ಶಾಸನಬದ್ಧ ಅಧಿಕಾರಿಗಳ ಆಪ್ತ ಶಾಖೆಯ ಸಿಬ್ಬಂದಿಗಳು ಮತ್ತು ಇತರೆ ಸಿಬ್ಬಂದಿ ವರ್ಗದವರಿಗೆ ಮೂಲ ವೇತನದ ಶೇ.5 ರಷ್ಟನ್ನು ವಿಶೇಷ ಭತ್ಯೆಯೆಂದು ಒಟ್ಟು ರೂ.1,24,526/-ಗಳನ್ನು ಪಾವತಿಸಲಾಗಿರುತ್ತದೆ.<br>ಕೆ.ಸಿ.ಎಸ್.ಆರ್ ನಿಯಮ 28 (ಬಿ) ಪ್ರಕಾರ ವಿಶೇಷ ಸಂದರ್ಭಗಳಲ್ಲಿ ಮತ್ತು ಸನ್ನಿವೇಶಗಳಲ್ಲಿ ಹೆಚ್ಚು ಸಮಯ ಕರ್ತವ್ಯ ನಿರ್ವಹಿಸುವುದು ಸರ್ಕಾರಿ ನೌಕರನ ಆದ್ಯ ಜವಾಬ್ದಾರಿಯಾಗಿರುತ್ತದೆ. ಸರ್ಕಾರಿ ಅಧಿಕೃತ ರಜಾ ದಿನಗಳಲ್ಲಿ ಕರ್ತವ್ಯ ನಿರ್ವಹಿಸಿರುವುದಕ್ಕೆ ಯಾವುದೇ ಗೌರವಧನ ಅಥವಾ ವಿಶೇಷ ಭತ್ಯೆಗಳನ್ನು ನೀಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. ಸರ್ಕಾರದ ಸಚಿವಾಲಯದ ಉನ್ನತ ಶಿಕ್ಷಣ ಇಲಾಖೆಯ ಆದೇಶ ಸಂಖ್ಯೆ: ಇಡಿ-34/ಯು.ಡಿ.ಎಸ್/2010 ದಿನಾಂಕ :28.07.2011ರ ಆದೇಶದಲ್ಲಿ ತಿಳಿಸಿರುವಂತೆ ಶಾಸನ ಬದ್ಧ ಅಧಿಕಾರಿಗಳ ಆಪ್ತ ಶಾಖೆಯ ಸಿಬ್ಬಂದಿಗಳಿಗೆ/ ಇತರೆ ಸಿಬ್ಬಂದಿ ವರ್ಗಕ್ಕೆ ಯಾವುದೇ ವಿಶೇಷ ಭತ್ಯೆಗಳನ್ನು ನೀಡಿದ್ದಲ್ಲಿ ರದ್ದು ಪಡಿಸಲು ಸೂಚಿಸಲಾಗಿದೆ. ಸಿಂಡಿಕೇಟ್ ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ/ಸಾನ/06/44/2011 ದಿನಾಂಕ:30.06.2011 ರ ಸಿಂಡಿಕೇಟ್ ಸಭೆಯ ನಿರ್ಣಯವನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ರ ನಿಯಮ 41(5)(6) ಹಾಗೂ (7) ರನ್ವಯ ಸರ್ಕಾರದ ಮುಖಾಂತರ ಮಾನ್ಯ ಕುಲಾಧಿಪತಿಗಳಿಂದ ಅನುಮೋದನೆಯನ್ನು ಪಡೆಯಬೇಕಾಗಿರುತ್ತದೆ.<br>ಮಂಗಳೂರು ವಿಶ್ವವಿದ್ಯಾನಿಲಯ ಕುಲಸಚಿವರ ಆದೇಶ ಸಂಖ್ಯೆ: ಎಂ.ಯು/55/ಇ.ಎಸ್.ಟಿ(4)/2005-06 ದಿನಾಂಕ: 11.07.2011ರ ಆದೇಶವು ಸರ್ಕಾರದ ಅಥವಾ ಮಾನ್ಯ ಕುಲಾಧಿಪತಿಗಳಿಂದ ಅನುಮೋದನೆ ಪಡೆಯದೆ ಸಿಂಡಿಕೇಟ್ ಸಭೆಯ ನಿರ್ಣಯದಂತೆ ಹೊರಡಿಸಲಾಗಿರುತ್ತದೆ. ಇದು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯಿದೆ 2000 ರ ನಿಯಮಗಳು ಮತ್ತು ಕೆ.ಸಿ.ಎಸ್.ಆರ್ ಉಲ್ಲಂಘನೆಯಾಗಿರುತ್ತದೆ. ವಿಶೇಷ ಭತ್ಯೆ ಮೊತ್ತ ರೂ.1,24,526/-ಗಳನ್ನು ಪಡೆದಿರುವ ಸಿಬ್ಬಂದಿ ವರ್ಗದ ವಿವರಗಳನ್ನು ಅನುಬಂಧ-16 ರಲ್ಲಿ ಒದಗಿಸಿದ್ದು, ಸದರಿ ಸಿಬ್ಬಂದಿಗಳಿಂದ ವಸೂಲಿ ಮಾಡಿ ಸಂಬಂಧಿಸಿದ ಖಾತೆಗೆ ಜಮೆಗೊಳಿಸಿ ಲೆಕ್ಕಪರಿಶೋಧನೆಗೆ ಮಾಹಿತಿ ನೀಡಲು ಸೂಚಿಸಿದೆ. ಹಾಗೂ ಮುಂದೆ ಇಂತಹ ಭತ್ಯೆಗಳ ಮಂಜೂರಾತಿ ಮಾಡುವ ಅಧಿಕಾರಿಗಳ ಮೇಲೆ ನಿಯಮ ಉಲ್ಲಂಘಿಸಿದ ಆರೋಪವೆಂದು ಪರಿಗಣಿಸಿ ಸೂಕ್ತ ಆಡಳಿತಾತ್ಮಕ ಕ್ರಮ ಜರುಗಿಸಲು ಸೂಚಿಸಿದೆ. | ಮಂಗಳೂರು ವಿಶ್ವವಿದ್ಯಾನಿಲಯದ ಶಾಸನಬದ್ಧ ಅಧಿಕಾರಿಗಳ ಆಪ್ತಶಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಮತ್ತು ಶಾಸನಬದ್ಧ ಅಧಿಕಾರಿಗಳ ವಾಹನ ಚಾಲಕರಿಗೆ ವಿಶೇಷ ಕರ್ತವ್ಯ ಭತ್ಯೆ ಮಂಜೂರು ಮಾಡಲಾಗಿದ್ದು, ಕುಲಸಚಿವರ ಕಛೇರಿ ಆದೇಶ ಸಂಖ್ಯೆ ಮಂವಿ/ಸಿಬ್ಬಂದಿ(4)/ಸಿ.ಆರ್ 11/99-2000 ದಿನಾಂಕ 15.02.2019ರಲ್ಲಿ ರದ್ದುಪಡಿಸಿ ಆದೇಶ ಹೊರಡಿಸಲಾಗಿದೆ. ಈಗಾಗಲೇ ಮಂಜೂರು ಮಾಡಲಾದ ವಿಶೇಷ ಭತ್ಯೆ ಮೊತ್ತವನ್ನು ಆಯಾ ಸಿಬ್ಬಂದಿಗಳಿಂದ ವಸೂಲಾತಿ ಮಾಡಿ ವಿಶ್ವವಿದ್ಯಾನಿಲಯ ನಿಧಿಗೆ ಜಮೆಗೊಳಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗಿದೆ. |
| 37 (ಬಿ) | ದಿನಭತ್ಯೆ ಮತ್ತು ರಸ್ತೆ ಮೈಲೇಜು ದರಗಳನ್ನು ಹೆಚ್ಚಾಗಿ ಪಾವತಿಸಿರುವುದು :<br>2016-17ನೇ ಸಾಲಿನ ಮಂಗಳೂರು ವಿಶ್ವವಿದ್ಯಾನಿಲಯದ ಅಧಿಕಾರಿ ವರ್ಗದವರು ಸದರಿ ವಿಶ್ವವಿದ್ಯಾನಿಲಯದ ಆದೇಶದಂತೆ ಪ್ರತ್ಯೇಕ ದಿನಭತ್ಯೆ ಮತ್ತು ರಸ್ತೆ ಮೈಲೇಜು ದರಗಳನ್ನು ನಿಗದಿಪಡಿಸಿಕೊಂಡಿರುತ್ತಾರೆ. ಆದರೆ, ಕರ್ನಾಟಕ ವಿಶ್ವವಿದ್ಯಾನಿಲಯ ಕಾಯಿದೆ-2000 ರ ರೀತ್ಯಾ ಸಂಸ್ಥೆಯ ಆರ್ಥಿಕ ವ್ಯವಹಾರಗಳನ್ನು ಕೆ.ಸಿ.ಎಸ್.ಆರ್, ಕೆ.ಎಫ್.ಸಿ ಮತ್ತು ಸರ್ಕಾರದ ಸುತ್ತೋಲೆ/ನಿಯಮಗಳ ಪ್ರಕಾರ | ಹೆಚ್ಚುವರಿ ಪ್ರಯಾಣಭತ್ತೆ ಪಾವತಿಯಾಗಿರುವ ಬಗ್ಗೆ ಪರಶೀಲಿಸಿ ವಸೂಲು ಮಾಡಲು ಕ್ರಮ ಕೈಗೊಳ್ಳಲಾಗುವುದು. |

| | | |
|---|---|---|
| | ನಿರ್ವಹಿಸಬೇಕಾಗಿರುತ್ತದೆ. ಅನುಬಂಧ-17 ರಲ್ಲಿ ತಿಳಿಸಲಾದ ಅಧಿಕಾರಿಗಳ ಪ್ರವಾಸ ಭತ್ಯೆಯ ಬಿಲ್ಲುಗಳನ್ನು ಪರಿಶೀಲಿಸಲಾಗಿ, ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ಆಇ/3/ಸೇನೀಸೇ/2012/ಬೆಂಗಳೂರು ದಿ:14.06.2012 ರನ್ವಯ ಮತ್ತು ಕೆ.ಸಿ.ಎಸ್.ಆರ್ ನಿಯಮ 514 ರಿಂದ 520 ರವರೆಗಿನ ನಿಯಮಗಳನ್ವಯ ಪ್ರವಾಸ ಕೈಗೊಳ್ಳಲಾಗುವ ಸರ್ಕಾರಿ ನೌಕರರುಗಳಿಗೆ ಮತ್ತು ಅಧಿಕಾರಿಗಳಿಗೆ ಅವರುಗಳ ವೇತನ ಶ್ರೇಣಿಗಳನ್ವಯ ನಿಗದಿಪಡಿಸಲಾಗಿರುವ ದಿನಭತ್ಯೆ ಮತ್ತು ರಸ್ತೆ ಮೈಲೇಜು ದರಗಳನ್ನು ಕ್ಲೈಂ ಮಾಡುವ ಬದಲಾಗಿ ಮಂಗಳೂರು ವಿಶ್ವವಿದ್ಯಾನಿಲಯವು ನಿಗದಿಪಡಿಸಿಕೊಳ್ಳಲಾಗಿರುವ ದರಗಳನ್ವಯ ಪಾವತಿಸಲಾಗಿದೆ. ಆದ್ದರಿಂದ ಹೆಚ್ಚುವರಿ ವ್ಯತ್ಯಾಸದ ಮೊತ್ತಗಳನ್ನು ಸದರಿ ಅಧಿಕಾರಿಗಳಿಂದ ವಸೂಲಿ ಮಾಡಲು ಸೂಚಿಸಲಾಗಿದೆ. | |
| 37 (ಸಿ) | ಪ್ರವಾಸ ಭತ್ಯೆ ನಿಯಮಗಳನ್ನು ಉಲ್ಲಂಘಿಸಿ ರಸ್ತೆ ಮೈಲೇಜು ದರವನ್ನು ಪಡೆದಿರುವುದು :<br>2016-17ನೇ ಸಾಲಿನ ಏಪ್ರಿಲ್-2016 ರ ಮಾಹೆಯ ವೋಚರ್ಸ್‌ಗಳ ಪರಿಶೀಲನೆಯಲ್ಲಿ ವೋಚರ್ ಸಂಖ್ಯೆ: 247 ದಿ:07.04.2016 ಧನಾದೇಶ ಸಂಖ್ಯೆ: 066423 ದಿ:07.04.2016 ರನ್ವಯ ಶ್ರೀಯುತ ಪುರುಷೋತ್ತಮ ನಾಯ್ಕ, ಉಪಕುಲಸಚಿವರು (D.R) ಇವರು ಮಂಗಳೂರಿನಿಂದ ಬೆಂಗಳೂರಿಗೆ ಪ್ರವಾಸ ಮಾಡಲಾಗಿರುವ ಬಿಲ್ಲಿನಲ್ಲಿ Taxi fare ಎಂದು ರಸ್ತೆ ದರ ರೂ.1,000/-ಗಳ ಒಟ್ಟು ಮೊತ್ತವನ್ನು (lumsum) ಪಡೆದಿರುತ್ತಾರೆ. ಆದರೆ ಕರ್ನಾಟಕ ಸರ್ಕಾರಿ ಸೇವಾ ನಿಯಮಾವಳಿ 490 ರಿಂದ 514 ರಂತೆ ಹಾಗೂ 2012 ರ 5ನೇ ವೇತನ ಆಯೋಗದ ನಿಯಮಗಳಂತೆ ಸದರಿ ಅಧಿಕಾರಿಯವರಿಗೆ ರಸ್ತೆ ಮೈಲೇಜು ದರವನ್ನು ರೂ.3/- ಗಳಂತೆ ಅವರು ಪ್ರವಾಸ ಮಾಡಲಾಗಿರುವ ಕಿ.ಮೀ ಗಳಿಗೆ ಲೆಕ್ಕ ಹಾಕಿ ಪಡೆದುಕೊಳ್ಳಬಹುದಾಗಿದೆ. ಆದ್ದರಿಂದ ಈ ಅಧಿಕಾರಿಯವರ ಪ್ರಕರಣದಲ್ಲಿ lumsum ರೂ.1,000/-ಗಳನ್ನು ಪಡೆದಿರುವುದನ್ನು ವಸೂಲಿಸಿ, ಜಿ.ಆರ್.ಎ ಖಾತೆಗೆ ಜಮೆ ಮಾಡಿ ವರದಿ ಸಲ್ಲಿಸಲು ಸೂಚಿಸಲಾಗಿದೆ. | ಸದ್ರಿ ಅಧಿಕಾರಿಯವರಿಗೆ ನೀಡಿದ ಟ್ಯಾಕ್ಸಿ ಬಾಡಿಗೆ ಬಗ್ಗೆ ಪರಿಶೀಲಿಸಿ ಹೆಚ್ಚುವರಿ ಪಾವತಿ ಬಗ್ಗೆ ಕ್ರಮ ಕೈಗೊಳ್ಳಲಾಗುವುದು. |
| 37 (ಡಿ) | ಹೆಚ್ಚುವರಿ ಪ್ರಯಾಣಭತ್ಯೆ ಪಾವತಿಸಿರುವುದು :<br>2016-17ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ವಿವಿಧ ಕಾರ್ಯಕ್ರಮಗಳ ಸಂಬಂಧ ಆಗಮಿಸಿದ ಸಮಿತಿ/ ಮಂಡಳಿಗಳ ಸದಸ್ಯರುಗಳಿಗೆ ವಿಶ್ವವಿದ್ಯಾನಿಲಯದಿಂದ ನಿಗದಿಪಡಿಸಲಾದ ಮೊತ್ತಕ್ಕಿಂತ ಹೆಚ್ಚುವರಿಯಾಗಿ ಪ್ರಯಾಣ ಭತ್ಯೆಯನ್ನು ಪಾವತಿಸಿರುವುದನ್ನು ಗಮನಿಸಲಾಗಿದ್ದು. ಹೆಚ್ಚುವರಿ ಪಾವತಿಗೆ ಆದೇಶದ ಪ್ರತಿಗಳನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ: 56/2018-19 ದಿ:19.12.2018 ನ್ನು ಜಾರಿ ಮಾಡಲಾಗಿತ್ತು. ಆದರೆ ಈ ಸಂಬಂಧ ಯಾವುದೇ ಆದೇಶದ ದಾಖಲಾತಿಗಳನ್ನು ಹಾಜರುಪಡಿಸದಿರು ವುದರಿಂದ ಹೆಚ್ಚುವರಿ ಪಾವತಿಸಲಾದ ರೂ.21,260/-ಗಳನ್ನು ಅನುಬಂಧದಲ್ಲಿ ತಿಳಿಸಿರುವವರಿಂದ ವಸೂಲಿಸಿ ವಿಶ್ವವಿದ್ಯಾನಿಲಯದ ಖಾತೆಗೆ ಜಮಾ ಮಾಡಿ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಸೂಚಿಸಿದೆ. ವಿವರಗಳನ್ನು ಅನುಬಂಧ-18 ರಲ್ಲಿ ನೀಡಿದೆ. | ಹೆಚ್ಚುವರಿ ಪ್ರಯಾಣಭತ್ತೆ ಪಾವತಿಯಾಗಿರುವ ಬಗ್ಗೆ ಪರಿಶೀಲಿಸಿ ವಸೂಲು ಮಾಡಲು ಕ್ರಮ ಕೈಗೊಳ್ಳಲಾಗುವುದು. |
| 38. | ಮಾಹಿತಿ ತಂತ್ರಜ್ಞಾನ **(I.T Consultant)** ಸಂದರ್ಶಕರ ನೇಮಕಾತಿ ಮುಂದುವರೆಸುವ ಕುರಿತು:<br>2015-16ನೇ ಸಾಲಿನಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಮಾಹಿತಿ ತಂತ್ರಜ್ಞಾನ ವಿಭಾಗಕ್ಕೆ ಇಬ್ಬರು ಮಾಹಿತಿ ತಂತ್ರಜ್ಞಾನ ಸಂದರ್ಶಕರನ್ನಾಗಿ ಮಾಹೆಯಾನ ರೂ.22,000/-ದರದಲ್ಲಿ ಸಂಚಿತ ವೇತನದಡಿ ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳುವಂತೆ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಇಲಾಖೆಯ ಕೌನಿಲ್ಸ್ ಇವರ ಪತ್ರ ಸಂಖ್ಯೆ:KSHEC/IT Consultants/2015-16 ದಿನಾಂಕ:29.05.2015 ರಲ್ಲಿನ ಪತ್ರದಲ್ಲಿ 8(ಸಿ) ನಲ್ಲಿ ಸೂಚಿಸಲಾಗಿದೆ. ಆ ಪ್ರಕಾರ ಶ್ರೀ ಗಣೇಶ್ ಮತ್ತು ನಿತಿನ್.ವಿ ಇವರನ್ನು ದಿ:01.06.2015 ರಿಂದ 6 ತಿಂಗಳ ಅವಧಿಯವರೆಗೆ ನೇಮಕಾತಿ ಮಾಡಿಕೊಳ್ಳಲಾಗಿರುತ್ತದೆ. ನಂತರ ಸದರಿ ಆದೇಶದ ರೀತ್ಯಾ ಸಂದರ್ಶಕರುಗಳನ್ನು ಮುಂದುವರೆಸಬೇಕಾದಲ್ಲಿ ಅವರ ಕಾರ್ಯ ಕ್ಷಮತೆಯನ್ನು ಆಧರಿಸಿ ಉತ್ತಮವಾಗಿದ್ದಲ್ಲಿ, ಮುಂದುವರೆಸಬಹುದಾಗಿರುತ್ತದೆ.<br>ಉನ್ನತ ಶಿಕ್ಷಣ ಇಲಾಖೆಯು ಈ ಬಗ್ಗೆ ನಿಗದಿಪಡಿಸಲಾಗಿರುವ ಮಾನದಂಡದಂತೆ 6 ತಿಂಗಳ ಅವಧಿಯವರೆಗೆ ಅಂದರೆ ದಿ:01.06.2015 ರಿಂದ 31.11.2015 ರವರೆಗೆ ನೇಮಕಾತಿ ಮಾಡಿಕೊಳ್ಳಲು ಅವಕಾಶವಿರುತ್ತದೆ. ಆದರೆ, ದಿ:31.11.2015 ರ ನಂತರ ಮುಂದುವರೆಸಲು ಸರ್ಕಾರದಿಂದ ಪೂರ್ವಾನುಮತಿ ಪಡೆದಿರುವ ಆದೇಶಗಳು ಹಾಗೂ ಸದರಿ ತಾತ್ಕಾಲಿಕ ನೌಕರರ ಕಾರ್ಯ ಕ್ಷಮತೆಯ ದೃಢೀಕರಣ ಪತ್ರವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣೆ ಪತ್ರ ಸಂಖ್ಯೆ:17 ದಿನಾಂಕ:16.11.2018 ರಲ್ಲಿ ಜಾರಿ ಮಾಡಿದ್ದರೂ, ಕೋರಲಾಗಿರುವ ಕಡತಗಳನ್ನು ಹಾಜರುಪಡಿಸದ ಕಾರಣ ರೂ.5,26,534/-ಗಳನ್ನು ಆಕ್ಷೇಪಣೆಗೆ ಸೂಚಿಸಿದೆ. | ಈ ಕಚೇರಿ ಅಧಿಕೃತ ಜ್ಞಾಪನ ಸಂಖ್ಯೆ MU/10/EST/27/2015-16 ದಿನಾಂಕ 15.12.2015 ರಲ್ಲಿ ಶ್ರೀ ಗಣೇಶ್ ಮತ್ತು ನಿತಿನ್ ವಿ ಕಿದಿಯೂರು ಇವರಿಬ್ಬರನ್ನು I.T Consultants ಗಳಾಗಿ ನೇಮಕ ಮಾಡಲಾಗಿತ್ತು. ಅದರಲ್ಲಿ ಶ್ರೀ ನಿತಿನ್ ವಿ. ಕಿದಿಯೂರು ಇವರು ಸೇವೆಯಿಂದ ಬಿಡುಗಡೆಗೊಂಡಿರುತ್ತಾರೆ. ಈ ಕಡತವನ್ನು ಈಗಾಗಲೇ ಲೆಕ್ಕ ಪರಿಶೋಧಕರಿಗೆ ಹಾಜರು ಪಡಿಸಲಾಗಿರುತ್ತದೆ. ಶ್ರೀ ಗಣೇಶ್ ಇವರು ತಮ್ಮ ಸಂಭಾವನೆಯನ್ನು ರೂ. 22,000/- ದಿಂದ ರೂ. 25,000/-ಕ್ಕೆ ಹೆಚ್ಚಿಸುವಂತೆ ಕೋರಿದ್ದು, ಈ ಸಂಬಂಧ (MU/10/EST(2)/2015-16 ದಿನಾಂಕ 29.08.2016ರಲ್ಲಿ) ಸರ್ಕಾರಕ್ಕೆ ಪತ್ರ ಬರೆಯಲಾಗಿತ್ತು. ಇದಕ್ಕೆ ಸಂಬಂಧಿಸಿ ಯಾವುದೇ ಅನುಮತಿ ಬಾರದಿರುವ ಕಾರಣ ದಿನಾಂಕ 12.04.2018 ರನ್ವಯ ವೇತನವನ್ನು ಪರಿಷ್ಕರಿಸಿ ರೂ. 22,000/-ದಿಂದ ರೂ. 25,000/- ಸರಕಾರದ ಅನುಮೋದನೆಯ ನಿರೀಕ್ಷೆಯಲ್ಲಿ ಮಾನ್ಯ ಕುಲಪತಿಯವರ ದಿನಾಂಕ 12.02.2018ರ ಆದೇಶದಂತೆ ಪಾವತಿಸಲಾಗಿರುತ್ತದೆ. ಆದರೂ ಈ ಬಗ್ಗೆ ಆಕ್ಷೇಪಣೆ ಇರುವ ಕಾರಣ ಮತ್ತೊಮ್ಮೆ ಸರಕಾರಕ್ಕೆ ನೆನಪೋಲೆಯನ್ನು ಸಲ್ಲಿಸುವ ಮೂಲಕ ಕ್ರಮ ಕೈಗೊಳ್ಳಲಾಗಿದೆ. |

| | | |
|---|---|---|
| 39 | <u>ಕಾನೂನು ವೆಚ್ಚದ ಪಾವತಿ ಸಂಬಂಧ ಪೂರಕ ದಾಖಲಾತಿಗಳನ್ನು ಹಾಜರುಪಡಿಸದಿರುವುದು :</u><br>2016-17ನೇ ಸಾಲಿನಲ್ಲಿ ಜುಲೈ ಮಾಹೆಯ ವೋಚರ್ ಸಂಖ್ಯೆ: 2271 ರಲ್ಲಿ ಚೆಕ್ ಸಂಖ್ಯೆ: 119213 ದಿನಾಂಕ: 08.07.2016 ರಲ್ಲಿ ರೂ.50,000/-ಗಳನ್ನು ಪಿ.ಎಸ್ ರಾಜಗೋಪಾಲ, ವಕೀಲರು ಬೆಂಗಳೂರು ಇವರಿಗೆ ಕಾನೂನು ವೆಚ್ಚವಾಗಿ ಪಾವತಿಸಿರುವುದನ್ನು ಗಮನಿಸಲಾಗಿದ್ದು, ಸದರಿ ಪಾವತಿಗೆ ಸಂಬಂಧಿಸಿದಂತೆ ಸರ್ಕಾರದ ಆದೇಶಗಳು, ವಿಶ್ವವಿದ್ಯಾನಿಲಯದ ಪರಿನಿಯಮಗಳು ಹಾಗೂ ಪೂರಕ ದಾಖಲಾತಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ: 32/2018-19 ದಿ:28.11.2018ನ್ನು ನೀಡಲಾಗಿದ್ದರೂ, ಸಹ ಈ ಸಂಬಂಧ ಯಾವುದೇ ಪೂರಕ ದಾಖಲಾತಿಗಳನ್ನು ಹಾಜರುಪಡಿಸದಿರುವುದರಿಂದ ಪಾವತಿಸಲಾದ ರೂ.50,000/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. | ಸದರಿ ಪಾವತಿಯು ಕಡತ ಸಂಖ್ಯೆ MU/23/EST(1)/2014-15/W.P ರಲ್ಲಿ ಆಗಿರುತ್ತದೆ. ಡಾ. ಯು. ವಿಜಯಮ್ಮ D/o ವೀರಣ್ಣ, ಮೈಸೂರು ಇವರು ಮಂಗಳೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜಿನ ಕನ್ನಡ ಸಹಾಯಕ ಪ್ರಾಧ್ಯಾಪಕ ಹುದ್ದೆಯ ನೇಮಕಾತಿಗೆ ಸಂಬಂಧಿಸಿ ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ಇದಕ್ಕೆ ಸಂಬಂಧಿಸಿ, ವಿಶ್ವವಿದ್ಯಾನಿಲಯದ ಪರವಾಗಿ ವಾದಿಸಲು ವಕೀಲರನ್ನು ನೇಮಕ ಮಾಡುವ ಬಗ್ಗೆ ಆದೇಶಕ್ಕೆ ಕಡತದಲ್ಲಿ ಮಂಡಿಸಿದ್ದು, ಮಂಗಳೂರು ವಿಶ್ವವಿದ್ಯಾನಿಲಯದ ವಕೀಲರ ಪಟ್ಟಿಯಿಂದ ಮಾನ್ಯ ಕುಲಪತಿಯವರು ಶ್ರೀ ಪಿ.ಎಸ್. ರಾಜಗೋಪಾಲ ಇವರ ಹೆಸರನ್ನು ಸೂಚಿಸಿರುತ್ತಾರೆ. ಸದರಿಯವರಿಗೆ ಈ ಕೇಸ್‌ನ್ನು ವಹಿಸಲಾಗಿದ್ದು, ಅದರಂತೆ ವಿಶ್ವವಿದ್ಯಾನಿಲಯದ ಪರವಾಗಿ ವಾದಿಸಿದ ವಕೀಲರಾದ ಶ್ರೀ ಪಿ.ಎಸ್. ರಾಜಗೋಪಾಲ್ ಅವರು ನೀಡಿದ ಬಿಲ್ಲಿನ ಮೊತ್ತ ರೂ.50,000/-ನ್ನು ಪಾವತಿಸಲಾಗಿದೆ.ಪ್ರಸ್ತುತ ನಿಯಮಾನುಸಾರ ವಕೀಲರ ಪಟ್ಟಿಯನ್ನು ಸಿಂಡಿಕೇಟು ಸಭೆಗೆ ಮಂಡಿಸಿ ಅನುಮೋದನೆ ಪಡೆಯಲಾಗುತ್ತದೆ. ಆದುದರಿಂದ ಸದರಿ ಲೆಕ್ಕ ಪರಿಶೋಧಕರು ಆಕ್ಷೇಪಣೆಯನ್ನು ಕೈಬಿಡುವಂತೆ ಕೋರಲಾಗಿದೆ. |
| 40 | <u>ಶ್ರೀ ನಿತೀಶ್.ಪಿ.ಬೈಂದೂರ್ ತಾತ್ಕಾಲಿಕ ಫೋಟೋಗ್ರಾಫರ್-ಕಂ-ಆರ್ಟಿಸ್ಟ್ ರವರಿಗೆ ತುಟ್ಟಿ ಭತ್ಯೆ ಮತ್ತು ಇತರೇ ಭತ್ಯೆಗಳನ್ನು ಪಾವತಿಸಿರುವುದು :</u><br>2016-17ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಶ್ರೀ ನಿತೀಶ್.ಪಿ.ಬೈಂದೂರ್ ಫೋಟೋಗ್ರಾಫರ್-ಕಂ-ಆರ್ಟಿಸ್ಟ್ (ತಾತ್ಕಾಲಿಕ) ಇವರನ್ನು ವಿ.ವಿ ಆದೇಶ ಸಂಖ್ಯೆ: ಮವಿ/23/ಸಿಬ್ಬಂದಿ(2)/2016-17 ದಿನಾಂಕ:01.08.2016 ರ ಆದೇಶದನ್ವಯ ತಾತ್ಕಾಲಿಕವಾಗಿ ನೇಮಕ ಮಾಡಿಕೊಂಡು ವೇತನ ಶ್ರೇಣಿ ರೂ.16,000 - 29,600 ರ ವೇತನ ಶ್ರೇಣಿಯನ್ನು ನಿಗದಿಪಡಿಸಿರುವ ಕ್ರಮ ನೇಮಕಾತಿ ಪ್ರಕ್ರಿಯೆಗೆ ವಿರುದ್ಧವಾಗಿರುತ್ತದೆ. ಈ ನೇಮಕಾತಿಯು ಅವೈಜ್ಞಾನಿಕವಾಗಿರುತ್ತದೆ. ಮುಂದುವರೆದು ತುಟ್ಟಿಭತ್ಯೆ, ಮನೆಬಾಡಿಗೆ ಭತ್ಯೆ, ವೈದ್ಯಕೀಯ ಭತ್ಯೆಗಳನ್ನು ಸಹ ಪಾವತಿಸಿರುವ ಕ್ರಮ ಖಾಯಂ ನೌಕರನೆಂದು ಪರಿಗಣಿಸಿರುವುದು ಲೆಕ್ಕಪರಿಶೋಧನೆಯಲ್ಲಿ ಕಂಡು ಬಂದಿರುತ್ತದೆ. ಆದರೆ, ನೇಮಕಾತಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ಸರ್ಕಾರದ ಅನುಮೋದನೆ, ಆರ್ಥಿಕ ಇಲಾಖೆ ಅನುಮೋದನೆ, ಜಾಹೀರಾತು, ಇತ್ಯಾದಿ ವಿವರಗಳನ್ನು ಹಾಜರುಪಡಿಸಿರುವುದಿಲ್ಲದ ಕಾರಣ ಈ ನೇಮಕಾತಿಯು ಸಕ್ಷಮ ಪ್ರಾಧಿಕಾರದ ಅನುಮೋದನೆಯಿಂದ ಆಗಿರುವುದಿಲ್ಲವೆಂದು ಭಾವಿಸಬೇಕಾಗುತ್ತದೆ. ಸದರಿ ತಾತ್ಕಾಲಿಕ ನೌಕರನಿಗೆ ನೀಡಿರುವ ತುಟ್ಟಿಭತ್ಯೆ, ಮನೆಬಾಡಿಗೆ ಭತ್ಯೆ, ವೈದ್ಯಕೀಯ ಭತ್ಯೆಗಳನ್ನು ವಸೂಲಿ ಮಾಡುವುದು ಹಾಗೂ ಈ ವೇತನ ಭತ್ಯೆಗಳನ್ನು ಪಾವತಿಸಿರುವವರ ವಿರುದ್ಧ ಆಡಳಿತಾತ್ಮಕ ಕ್ರಮ ಜರುಗಿಸಿ ಸರ್ಕಾರಕ್ಕೆ ವರದಿ ಸಲ್ಲಿಸುವುದು. ಪಾವತಿಸಿದ ಮೊಬಲಗು ರೂ.1,68,463/-ಗಳನ್ನು ವಸೂಲಾತಿಗೆ ಸೂಚಿಸಿದೆ. ವಿವರಗಳನ್ನು <u>ಅನುಬಂಧ-19 ರಲ್ಲಿ</u> ವರದಿಗೆ ಲಗತ್ತಿಸಿದೆ. ಮುಂದುವರೆದು ಪುನರ್ ಪರಿಶೀಲನಾ ವೇಳೆಯಲ್ಲಿ ಸದರಿಯವರಿಗೆ ನೀಡಲಾಗಿರುವ ಭತ್ಯೆಯನ್ನು ಹಿಂಪಡೆಯಲಾಗಿದೆ ಎಂದು ಮೌಖಿಕವಾಗಿ ತಿಳಿಸಿರುತ್ತಾರೆ. ಆದರೆ ವ್ಯತ್ಯಾಸದ ಮೊತ್ತವನ್ನು ವಸೂಲಿ ಮಾಡಿ ಸದರಿಯವರು ಸಂಚಿತ (Consolidated) ವೇತನದಡಿ ಕಾರ್ಯ ನಿರ್ವಹಿಸುತ್ತಿರುವುದನ್ನು ಲಿಖಿತವಾಗಿ ಸಲ್ಲಿಸುವವರೆಗೂ ಈ ಕಂಡಿಕೆಯನ್ನು ಮುಂದುವರೆಸಿದೆ. | ಶ್ರೀ ನಿತೀಶ್.ಪಿ.ಬೈಂದೂರ್, ಫೋಟೋಗ್ರಾಫರ್ ಇವರನ್ನು ದಿನಾಂಕ 01.08.2016 ರ ವಿಶ್ವವಿದ್ಯಾನಿಲಯದ ಆದೇಶದಲ್ಲಿ ತಾತ್ಕಾಲಿಕ ನೆಲೆಯಲ್ಲಿ ನೇಮಕ ಮಾಡಿ ವೇತನ ಶ್ರೇಣಿ ರೂ. 16,000-29,600/-ನಿಗದಿಪಡಿಸಿರುವ ಕ್ರಮ ನೇಮಕಾತಿ ಪ್ರಕ್ರಿಯೆಗೆ ವಿರುದ್ಧವಾಗಿರುತ್ತದೆ ಮತ್ತು ಸದರಿಯವರಿಗೆ ತುಟ್ಟಿ ಭತ್ಯೆ, ಮನೆ ಬಾಡಿಗೆ ಭತ್ಯೆ, ವೈದ್ಯಕೀಯ ಭತ್ಯೆ ಪಾವತಿಸಿ ಖಾಯಂ ನೌಕರನೆಂದು ಪರಿಗಣಿಸಲಾಗಿರುವ ನೇಮಕಾತಿಯನ್ನು ಲೆಕ್ಕ ತಪಾಸಣಾ ವರದಿಯಲ್ಲಿ ಆಕ್ಷೇಪಿಸಲಾಗಿದೆ. ಈ ಎಲ್ಲಾ ಭತ್ಯೆ ಹಾಗೂ ವೇತನ ಪಾವತಿಸಿರುವವರ ಮೇಲೆ ಆಡಳಿತಾತ್ಮಕ ಕ್ರಮ ಜರುಗಿಸಿ ರೂ.1,68,463/- ವಸೂಲಾತಿಗೆ ಸೂಚಿಸಲಾಗಿದೆ. ಈ ವಿಷಯವನ್ನು ಕಡತದಲ್ಲಿ ಮಂಡಿಸಿ ಆಕ್ಷೇಪಣೆಯಿರುವ ಮೊತ್ತವನ್ನು ನಿಯಮಾನುಸಾರ ಸದರಿಯವರಿಂದ ಹಿಂಪಡೆಯಲು ದಿನಾಂಕ 19.09.2019 ರಂದು ಈ ಕಚೇರಿಯಿಂದ ಸದರಿಯವರಿಗೆ ಪತ್ರ ಕಳುಹಿಸುವ ಮೂಲಕ ಕ್ರಮ ಕೈಗೊಳ್ಳಲಾಗಿರುತ್ತದೆ. ಪ್ರಸ್ತುತ ಸದರಿಯವರು ಫೋಟೋಗ್ರಾಫರ್‌ರಾಗಿ ಕರ್ತವ್ಯದಲ್ಲಿರುವುದಿಲ್ಲ ಎಂದು ಈ ಮೂಲಕ ತಿಳಿಸುತ್ತಾ ಆಕ್ಷೇಪಣೆಯನ್ನು ಕೈಬಿಡುವಂತೆ ಕೋರಲಾಗಿದೆ. |
| 41 | <u>ಡಾ॥ ಎಂ.ಕೆ ಭಂಡಿ ಗ್ರಂಥಪಾಲಕರು ರವರನ್ನು ವಯೋನಿವೃತ್ತಿಗೊಳಿಸದೇ 62 ವರ್ಷಗಳವರೆಗೆ ಸೇವೆಯಲ್ಲಿ ಮುಂದುವರೆಸಿರುವುದು :</u><br>2016-17ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಶ್ರೀ ಎಂ.ಕೆ.ಭಂಡಿ, ಗ್ರಂಥಪಾಲಕರು ರವರ ಸೇವಾ ವಹಿಯನ್ನು ಮತ್ತು ವೈಯಕ್ತಿಕ ಕಡತಗಳನ್ನು ಪರಿಶೀಲಿಸಲಾಗಿ ಶ್ರೀ ಎಂ.ಕೆ.ಭಂಡಿ ರವರ ಜನ್ಮ ದಿನಾಂಕ:13.10.1955 ರಲ್ಲಿ ಜನಿಸಿದ್ದು ಇವರನ್ನು ದಿನಾಂಕ:31.10.2015 ಕ್ಕೆ ಕೆ.ಸಿ.ಎಸ್.ಆರ್ ನಿಯಮ 95 ರ ಪ್ರಕಾರ ವಯೋ ನಿವೃತ್ತಿ ಮಾಡಬೇಕಾಗಿರುತ್ತದೆ.<br>ಸರ್ಕಾರದ ಕೆಳಕಂಡ ಆದೇಶದಲ್ಲಿ ಸ್ಪಷ್ಟೀಕರಣ ನೀಡಿದ್ದರೂ ಸಹ ಇದರಿಂದ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ನಷ್ಟ | |

ಉಂಟು ಮಾಡಲಾಗಿದೆ. 60 ರಿಂದ 62 ವರ್ಷಗಳ ವಯೋ ನಿವೃತ್ತಿಯ ಬಗ್ಗೆ ಸ್ಪಷ್ಟೀಕರಣ ಪಡೆಯಲು ಸಿಂಡಿಕೇಟ್, ವಿವಿಧ ವಿಶ್ವವಿದ್ಯಾನಿಲಯಗಳು ಮತ್ತು ಸರ್ಕಾರದೊಡನೆ ನಡೆಸಿರುವ ಪತ್ರ ವ್ಯವಹಾರಗಳ ವಿವರಗಳು ಮತ್ತು ನಿರ್ದೇಶನಗಳು ಈ ಕೆಳಕಂಡಂತಿವೆ:

1. ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಆದೇಶ ಸಂಖ್ಯೆ: ಇಡಿ254/ಯು.ಎನ್.ಇ/2014/ ಬೆಂಗಳೂರು ದಿನಾಂಕ: 28.09.2015 ರ ಆದೇಶದಲ್ಲಿ ಯು.ಜಿ.ಸಿ ವೇತನ ಪಡೆಯುತ್ತಿರುವ ಗ್ರಂಥಪಾಲಕರ ಹುದ್ದೆಯು ಬೋಧಕೇತರ ಹುದ್ದೆಯಾಗಿರುವುದರಿಂದ 60 ವರ್ಷಗಳಿಗೆ ವಯೋ ನಿವೃತ್ತಿ ಮಾಡಬೇಕಾಗಿರುತ್ತದೆ. ಈ ಆದೇಶವನ್ನು ಉಲ್ಲಂಘಿಸಿ ದಿನಾಂಕ: 19.12.2015 ರ ಸಿಂಡಿಕೇಟ್ ಸಭೆಯಲ್ಲಿ ಗ್ರಂಥಪಾಲಕರನ್ನು 60 ವರ್ಷದಿಂದ 62 ವರ್ಷಗಳಿಗೆ ಮುಂದುವರೆಸಲು ತೀರ್ಮಾನಿಸಲಾಗಿರುತ್ತದೆ. ಇದರಿಂದಾಗಿ ಸಂಸ್ಥೆಗೆ ಆರ್ಥಿಕ ನಷ್ಟ ಉಂಟಾಗಿರುತ್ತದೆ.
2. ಸರ್ಕಾರದ ಪತ್ರ ಸಂಖ್ಯೆ: ಇಡಿ94/ಯು.ಬಿ.ವಿ/2016 ದಿನಾಂಕ: 08.06.2016 ರ ಪತ್ರದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಪತ್ರ ದಿನಾಂಕ: 02.03.2016 ಕ್ಕೆ ಸ್ಪಷ್ಟೀಕರಣ ನೀಡುತ್ತಾ ಯು.ಜಿ.ಸಿ ವೇತನ ಶ್ರೇಣಿಗೆ ಒಳಪಡುವ ವಿಶ್ವವಿದ್ಯಾನಿಲಯಗಳ ಗ್ರಂಥಪಾಲಕರಿಗೆ ಬೋಧಕರು ಎಂಬ ಪರಿಭಾಷೆಗೆ ಒಳಪಡದ ಕಾರಣ 60 ವರ್ಷಕ್ಕೆ ವಯೋ ನಿವೃತ್ತಿಗೊಳಿಸಿರುವುದನ್ನು ಮತ್ತೊಮ್ಮೆ ಸ್ಪಷ್ಟೀಕರಣ ನೀಡಲಾಗಿದ್ದಾಗ್ಯೂ ಸಹ ದಿನಾಂಕ:31.08.2016 ರ ಸಿಂಡಿಕೇಟ್ ಸಭೆಯಲ್ಲಿ ಶ್ರೀ ಭಂಡಿಯವರಿಗೆ ಒಂದು ತಿಂಗಳ ಕಾಲಾವಕಾಶ ನೀಡಿ ನ್ಯಾಯಾಲಯದಲ್ಲಿ ದಾವೆ ಹೂಡಲು ಅನುವು ಮಾಡಿ ಕೊಡಲಾಗಿದೆ.
3. ಕುವೆಂಪು ವಿಶ್ವವಿದ್ಯಾನಿಲಯದ ಕುಲಸಚಿವರ ಅಭಿಪ್ರಾಯದ ಪತ್ರ ಸಂಖ್ಯೆ:ಕುವಿ/ಮಾಸನಿ/74/466/2016-17 ದಿನಾಂಕ: 02.05.2016 ರಲ್ಲಿ 60 ವರ್ಷಗಳಿಗೆ ವಯೋ ನಿವೃತ್ತಿಗೊಳಿಸಿರುವ ಬಗ್ಗೆ ತಿಳಿಸಲಾಗಿರುತ್ತದೆ.
4. ಬೆಂಗಳೂರು ವಿಶ್ವವಿದ್ಯಾನಿಲಯದ ಪತ್ರ ಸಂಖ್ಯೆ: ಬೆಂವಿವಿ/ಸಿಬ್ಬಂದಿ-01/ಇ2/ಇತರೆ/2013 ದಿನಾಂಕ:20.09.2013 ರ ಪತ್ರದಲ್ಲಿ 60 ವರ್ಷಕ್ಕೆ ವಯೋ ನಿವೃತ್ತಿ ಮಾಡಿರುವ ಬಗ್ಗೆ ಅಭಿಪ್ರಾಯ ತಿಳಿಸಲಾಗಿರುತ್ತದೆ.
5. ಕೆ.ಸಿ.ಎಸ್.ಆರ್ ನಿಯಮ-95 ರನ್ವಯ 60 ವರ್ಷಗಳಿಗೆ ವಯೋ ನಿವೃತ್ತಿಗೊಳಿಸಬೇಕಾಗಿರುತ್ತದೆ.
6. ಈ ಮೇಲೆ ತಿಳಿಸಿರುವ ಸರ್ಕಾರದ ಆದೇಶಗಳು ಹಾಗೂ ವಿವಿಧ ವಿಶ್ವವಿದ್ಯಾನಿಲಯಗಳು ಸ್ಪಷ್ಟೀಕರಣ ನೀಡಿದ್ದರೂ ದಿನಾಂಕ: 31.10.2015 ರ ಅಂತ್ಯಕ್ಕೆ ಶ್ರೀ ಎಂ.ಕೆ,ಭಂಡಿಯವರನ್ನು ವಯೋ ನಿವೃತ್ತಿಗೊಳಿಸದೆ ದಿ:28.09.2016 ರವರೆಗೆ ಸುಮಾರು 11 ತಿಂಗಳ ಕಾಲಾವಕಾಶವನ್ನು ಸದರಿ ನೌಕರರಿಗೆ ನೀಡಿ ನಂತರ ಮಾನ್ಯ ಉಚ್ಛ ನ್ಯಾಯಾಲಯಕ್ಕೆ ದಾವೆ ಹೂಡಿ ದಿನಾಂಕ:28.09.2016ರ ಮಧ್ಯಂತರ ಆದೇಶವನ್ನು ಪಡೆಯಲು ಅನುವು ಮಾಡಿಕೊಟ್ಟಿರುವ ಬಗ್ಗೆ ಸೂಕ್ತ ವಿವರಣೆಯನ್ನು ನೀಡುವಂತೆ ವಿಚಾರಣಾ ಪತ್ರ ಸಂಖ್ಯೆ:158/31.01.2019 ರಲ್ಲಿ ಕೋರಲಾಗಿತ್ತು. ಆದರೆ ಸಮಂಜಸ ವಿವರಣೆಯನ್ನು ನೀಡದಿರುವುದರಿಂದ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ನಷ್ಟ ಉಂಟಾಗಿರುತ್ತದೆ.

   ಸದರಿ ಉದ್ಯೋಗಿಗೆ ಪಾವತಿಸಿರುವ ವೇತನ ವಿವರಗಳು ಈ ಕೆಳಕಂಡಂತಿದೆ:

| | |
|---|---|
| ದಿನಾಂಕ:01.11.2015 ರಿಂದ 12.10.2017 ರವರೆಗೆ ಪಾವತಿಸಿರುವ ವೇತನ ಭತ್ಯೆಗಳು | ರೂ.43,53,265 |
| ವಾಸ್ತವವಾಗಿ ಪಾವತಿಸಬೇಕಾಗಿರುವ ನಿವೃತ್ತಿ ವೇತನ ಭತ್ಯೆಗಳ ಮೊತ್ತ | ರೂ.13,41,842 |
| ಹೆಚ್ಚುವರಿ ಪಾವತಿಸಿರುವ ವೇತನ ಭತ್ಯೆಗಳ ಮೊತ್ತ | ರೂ.30,11,423 |

ಈ ಮೇಲೆ ತಿಳಿಸಿರುವಂತೆ ಕೆ.ಸಿ.ಎಸ್.ಆರ್ ನಿಯಮ-95 ರನ್ವಯ ಹಾಗೂ ಸರ್ಕಾರದ ಆದೇಶ ಸಂಖ್ಯೆ: ಇಡಿ/254/ಯು.ಎನ್. ಇ/2014/ಬೆಂಗಳೂರು ದಿನಾಂಕ:28.09.2015 ಮತ್ತು ಸರ್ಕಾರದ ಆದೇಶ ಸಂಖ್ಯೆ:ಇಡಿ/94/ ಯು.ಯು.ವಿ/2016 ದಿನಾಂಕ:08.06.2016 ಹಾಗೂ ಕುವೆಂಪು ವಿಶ್ವವಿದ್ಯಾನಿಲಯ, ಬೆಂಗಳೂರು ವಿಶ್ವವಿದ್ಯಾನಿಲಯಗಳಲ್ಲಿ ವಯೋ ನಿವೃತ್ತಿ 60 ವರ್ಷಗಳಾಗಿರುವುದರ ಬಗ್ಗೆ ಸ್ಪಷ್ಟವಾಗಿ ತಿಳಿಸಿದ್ದರೂ ಸಹ ಸದರಿ ಆದೇಶಗಳನ್ನು ಉಲ್ಲಂಘಿಸಿ ದಿನಾಂಕ:01.11.2015 ರಿಂದ 12.10.2017 ರವರೆಗೆ ಮುಂದುವರೆಸಿ ರೂ.30,11,423/-ಗಳನ್ನು ಹೆಚ್ಚುವರಿ ವೇತನ ಭತ್ಯೆಗಳನ್ನು ಭರಿಸುವ ಮೂಲಕ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ನಷ್ಟ ಉಂಟು ಮಾಡಿರುವುದಕ್ಕೆ ಕಾರಣರಾಗಿರುವ ಕುಲಸಚಿವರು ಮತ್ತು ಸಂಬಂಧಿಸಿದ ಎಲ್ಲಾ ಅಧಿಕಾರಿಗಳ

ಈ ಬಗ್ಗೆ ಪತ್ರ ಸಮಸಂಖ್ಯೆ ದಿನಾಂಕ 14.03.2019ರಲ್ಲಿ ಈಗಾಗಲೇ ಸ್ಪಷ್ಟೀಕರಣವನ್ನು ಒದಗಿಸಲಾಗಿರುತ್ತದೆ.

ಸದರಿ ಪತ್ರದಲ್ಲಿ ತಿಳಿಸಿದಂತೆ ಕರ್ನಾಟಕ ರಾಜ್ಯ ಉಚ್ಛ ನ್ಯಾಯಾಲಯದ ಮಧ್ಯಂತರ ಆದೇಶದಂತೆ ಡಾ. ಎಂ.ಕೆ. ಭಂಡಿ ಇವರನ್ನು ದಿನಾಂಕ 12.10.2017ರವರೆಗೆ ಸೇವೆಯಲ್ಲಿ ಮುಂದುವರೆಸಲಾಗಿದೆ. ಕೆಲಸ ಮಾಡಿದ ಅವಧಿಗೆ ಸಂಬಳ ನೀಡಬೇಕಾಗಿರುವುದರಿಂದ ಸದರಿಯವರಿಗೆ ವೇತನ ಭತ್ಯೆ ಇತ್ಯಾದಿಗಳನ್ನು ಪಾವತಿಸಲಾಗಿದೆ.

2016-17ನೇ ಸಾಲಿನ ಲೆಕ್ಕ ತಪಾಸಣಾ ವರದಿಯ ಆಕ್ಷೇಪಣೆಯಲ್ಲಿ ಸೂಚಿಸಿದಂತೆ ಘನ ಉಚ್ಛ ನ್ಯಾಯಾಲಯದ ರಿಟ್ ಪಿಟಿಶನ್ ನಂಬ್ರ 13051/2016 (ಎಸ್ಆರ್/ಸಿ.ಡಬ್ಲ್ಯೂ ರಿಟ್ ಪಿಟಿಶನ್ ನಂಬ್ರ 33239/2016 ಮತ್ತು 51521/2016 (ಎಸ್ಆರ್ಎಎಸ್)ರ ತೀರ್ಪಿನ ಪ್ರಕಾರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಅನುಮೋದನೆ ಪಡೆದು ಲೆಕ್ಕ ತಪಾಸಣೆಗೆ ಹಾಜರುಪಡಿಸಲು ಕ್ರಮಕೈಗೊಳ್ಳಲಾಗುವುದು.

| | | |
|---|---|---|
| | ಮೇಲೆ ಆಡಳಿತಾತ್ಮಕ ಕ್ರಮ ವಹಿಸುವ ಮೂಲಕ ರೂ.30,11,423/-ಗಳನ್ನು ಆರ್ಥಿಕ ನಷ್ಟಕ್ಕೆ ಹೊಣೆಯಾಗಿರುವವರಿಂದ ವಸೂಲಾತಿ ಮಾಡಿ ವಿಶ್ವವಿದ್ಯಾನಿಲಯದ ಲೆಕ್ಕಶೀರ್ಷಿಕೆಗೆ ಜಮೆ ಮಾಡಿ ಜಮೆ ಮಾಡಿರುವ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಸೂಚಿಸಿದೆ. ವಿವರಗಳನ್ನು ಅನುಬಂಧ- 20ರಲ್ಲಿ ವರದಿಗೆ ಲಗತ್ತಿಸಿದೆ.<br>ದಿನಾಂಕ:10.05.2019 ರ ಪುನರ್ ಪರಿಶೀಲನಾ ವೇಳೆಯಲ್ಲಿ ಚರ್ಚಿಸಿದಂತೆ ಘನ ಉಚ್ಚ ನ್ಯಾಯಾಲಯದ ರಿಟ್ ಪಿಟೇಶನ್ ನಂಬರ್:13051/2016(ಎಸ್-ಆರ್) ಸಿ/ಡಬ್ಲ್ಯೂ, ರಿಟ್ ಪಿಟೇಶನ್ ನಂಬರ್: 33239/2016 & 51521/2016 (ಎಸ್-ಆರ್.ಎ.ಎಸ್)ರ ತೀರ್ಪಿನ ಪ್ರಕಾರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಅನುಮೋದನೆ ಪಡೆದು ಲೆಕ್ಕತಪಾಸಣೆಗೆ ಹಾಜರುಪಡಿಸುವವರೆಗೆ ಸದರಿ ಕಂಡಿಕೆಯನ್ನು ಮುಂದುವರೆಸಲಾಗಿದೆ. | |
| 42 | 2006ರ 6ನೇ ಯು.ಜಿ.ಸಿ ವೇತನ ಶ್ರೇಣಿಯ ಹಿಂಬಾಕಿ ಮೊತ್ತವನ್ನು ದಿನಾಂಕ:01.01.2006ರ ನಂತರ ನೇಮಕಗೊಂಡಿರುವ ಬೋಧಕರಿಗೆ ಪಾವತಿಸಿರುವುದು :<br>2016-17ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಬೋಧಕ ವೃಂದದವರಿಗೆ 2006ರ ಯು.ಜಿ.ಸಿ 6ನೇ ಪರಿಷ್ಕೃತ ವೇತನವನ್ನು ಪಾವತಿಸಿರುವ ಕಡತಗಳನ್ನು ಪರಿಶೀಲಿಸಲಾಗಿ-<br>ದಿನಾಂಕ: 01.01.2006 ರಿಂದ 24.12.2009 ರವರೆಗೆ ಹಿಂಬಾಕಿ ಮೊತ್ತವನ್ನು ಪಾವತಿಸುವಾಗ ತುಟ್ಟಿ ಭತ್ಯೆ ಹಾಗೂ ಇತರೆ ಭತ್ಯೆಗಳನ್ನು ಪಾವತಿಸುವಂತಿಲ್ಲ. ದಿನಾಂಕ:01.01.2006 ರ ನಂತರ ನೇಮಕಗೊಂಡ ಬೋಧಕ ವೃಂದದವರಿಗೆ ಹಿಂಬಾಕಿ ಮೊತ್ತವನ್ನು ಪಡೆಯಲು ಅವಕಾಶವಿರುವುದಿಲ್ಲವೆಂದು ಕೇಂದ್ರ ಮಾನವ ಸಂಪನ್ಮೂಲ ಮಂತ್ರಾಲಯದ ಪತ್ರ ಸಂಖ್ಯೆ: NO/F-1-7/201/-U/11/ ದಿನಾಂಕ:11.05.2010 ರ ಆದೇಶ ಹಾಗೂ ಸರ್ಕಾರಿ ಆದೇಶ ಸಂಖ್ಯೆ: ಇಡಿ480/ಯು.ಎನ್.ಇ/2014/ಬೆಂಗಳೂರು ದಿನಾಂಕ:07.06.2016 ರ ಆದೇಶಗಳಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ. ಅದಾಗ್ಯೂ ಸಹ ಬೋಧಕ ವೃಂದದವರಿಗೆ ಹಿಂಬಾಕಿ ಮೊತ್ತ ಪಾವತಿಸಿರುವುದು ಲೆಕ್ಕತಪಾಸಣೆಯಲ್ಲಿ ಕಂಡು ಬಂದಿರುತ್ತದೆ. ಲೆಕ್ಕತಪಾಸಣಾ ವಿಚಾರಣಾ ಪತ್ರ ಸಂಖ್ಯೆ:147 ದಿ:30.01.2019 ರಲ್ಲಿ ಈ ಬಗ್ಗೆ ಸ್ಪಷ್ಟನೇ ಕೋರಲಾಗಿ, ಯಾವುದೇ ವಿವರಣೆಯನ್ನು ನೀಡದಿರುವುದರಿಂದ ಸದರಿ ಬೋಧಕ ವೃಂದದವರಿಂದ ರೂ.18,94,313/-ಗಳನ್ನು ವಸೂಲಾತಿ ಮಾಡಿ ವಿಶ್ವವಿದ್ಯಾನಿಲಯದ ಸಂಬಂಧಪಟ್ಟ ಲೆಕ್ಕ ಶೀರ್ಷಿಕೆಗೆ ಜಮೆ ಮಾಡಿ ವಿವರಗಳನ್ನು ಸಲ್ಲಿಸುವಂತೆ ಸೂಚಿಸುತ್ತಾ, ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ನಷ್ಟ ಉಂಟಾಗಲು ಕಾರಣರಾದ ಅಧಿಕಾರಿಗಳು/ ಸಿಬ್ಬಂದಿಗಳ ಮೇಲೆ ಸೂಕ್ತ ಆಡಳಿತಾತ್ಮಕ ಕ್ರಮವಹಿಸಬಹುದಾಗಿರುತ್ತದೆ. ವಿವರಗಳನ್ನು ಅನುಬಂಧ-21 ರಲ್ಲಿ ವರದಿಗೆ ಲಗತ್ತಿಸಿದೆ. | ಮಂಗಳೂರು ವಿಶ್ವವಿದ್ಯಾನಿಲಯ ಹಾಗೂ ಘಟಕ ಕಾಲೇಜುಗಳಲ್ಲಿ ದಿನಾಂಕ 01.01.2006 ರಿಂದ ದಿನಾಂಕ 31.10.2009 ರ ಅವಧಿಯಲ್ಲಿ ನೇಮಕಗೊಂಡು ಯುಜಿಸಿ ವೇತನ ಪಡೆಯುತ್ತಿರುವ ಸಿಬ್ಬಂದಿಗಳಿಗೆ ಪಾವತಿಸಿರುವ 6ನೇ ಪರಿಷ್ಕೃತ ವೇತನ ಶ್ರೇಣಿಯ ಹಿಂಬಾಕಿ ಮೊತ್ತವನ್ನು ಸಂಬಂಧಪಟ್ಟವರ ವೇತನ/ನಿವೃತ್ತಿ ವೇತನದಿಂದ ಮರು ವಸೂಲಿ ಮಾಡಿ ವಿಶ್ವವಿದ್ಯಾನಿಲಯ ನಿಧಿಗೆ ಜಮೆ ಮಾಡುವಂತೆ ಈ ಕಚೇರಿ ಆದೇಶ ಸಂಖ್ಯೆ ಮವಿ/15/ಸಿಬ್ಬಂದಿ(1)/2012-13 ದಿನಾಂಕ 13.11.2019 ರಲ್ಲಿ ಆದೇಶಿಸಲಾಗಿದೆ. (ಪ್ರತಿ ಲಗತ್ತಿಸಲಾಗಿದೆ) ಇತರ ಭೋದಕ ವೃಂದದವರಿಗೆ ದಿನಾಂಕ 01.01.2006 ರಿಂದ ದಿನಾಂಕ 24.12.2009 ರವರೆಗೆ ಹಿಂಬಾಕಿ ಮೊತ್ತವನ್ನು ಪಾವತಿಸುವಾಗ ತುಟ್ಟಿಭತ್ಯೆಯನ್ನು ಪಾವತಿಸಿರುವುದನ್ನು ಹಿಂಪಡೆಯುವ ಬಗ್ಗೆ ಕ್ರಮ ಕೈಗೊಳ್ಳಲಾಗಿದೆ. ಆದುದರಿಂದ ಈ ಸಂಬಂಧದ ಲೆಕ್ಕ ಪರಿಶೋಧನಾ ಆಕ್ಷೇಪಣೆಯನ್ನು ಕೈಬಿಡುವಂತೆ ಕೋರಲಾಗಿದೆ. |
| 43 | ಗ್ರಂಥಾಲಯ ಸಹಾಯಕರುಗಳಿಗೆ ಸಹಾಯಕ ಗ್ರಂಥಪಾಲಕರುಗಳ ಹುದ್ದೆಗೆ ನಿಯಮ ಉಲ್ಲಂಘಿಸಿ ಪದೋನ್ನತಿ ನೀಡಿರುವುದು :<br>2016-17ನೇ ಸಾಲಿನ ಲೆಕ್ಕತಪಾಸಣೆಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಗ್ರಂಥಾಲಯ ಸಹಾಯಕರುಗಳ ಸೇವಾ ವಹಿಯನ್ನು ಪರಿಶೀಲಿಸಲಾಗಿ- ಸಿಂಡಿಕೇಟ್ ಸಭೆಯ ಅನುಮೋದನೆಯಂತೆ ಐದು ಜನ ಗ್ರಂಥಾಲಯ ಸಹಾಯಕರುಗಳಿಗೆ ಸಹಾಯಕ ಗ್ರಂಥಪಾಲಕರಾಗಿ ಪದೋನ್ನತಿ ನೀಡಿ ಯು.ಜಿ.ಸಿ ವೇತನವನ್ನು ನಿಗದಿಪಡಿಸಲಾಗಿದೆ.<br>ಶ್ರೀಮತಿ ಕೆ.ಪುಷ್ಪಲತಾ ರವರಿಗೆ ದಿನಾಂಕ:30.11.2013 ರಿಂದ ಯು.ಜಿ.ಸಿ ವೇತನ ಶ್ರೇಣಿಯನ್ನು ಕಾಲ್ಪನಿಕವಾಗಿ ನಿಗದಿಪಡಿಸಿ ದಿನಾಂಕ:14.01.2015 ರಿಂದ 07.02.2017 ರವರೆಗೆ ಆರ್ಥಿಕ ಸೌಲಭ್ಯವನ್ನು ನೀಡಲಾಗಿರುತ್ತದೆ. ಶ್ರೀ ಕೆ.ಕೆ.ಬಾದಾಮಿ, ಶ್ರೀಮತಿ ಸುಮಂಗಳ.ಕೆ.ಎಸ್, ಶ್ರೀಮತಿ ಜಯಲಕ್ಷ್ಮಿ, ಶ್ರೀ ಜಯಪ್ಪ.ಎಂ.ಸಿ, ರವರುಗಳಿಗೆ ದಿನಾಂಕ:14.01.2015 ರಂದು ಜರುಗಿದ ಸಿಂಡಿಕೇಟ್ ಸಭೆಯ ಅನುಮೋದನೆಯೊಂದಿಗೆ ಸರ್ಕಾರದ ಅನುಮೋದನೆಯನ್ನು ಕಾಯ್ದಿರಿಸಿ, ಕುಲಸಚಿವರ ಆದೇಶ ಸಂಖ್ಯೆ:ಮವಿವಿ/52/ಸಿಬ್ಬಂದಿ(2)/ 2010-11/ ದಿ:16.04.2015 ರ ಆದೇಶದಲ್ಲಿ ದಿನಾಂಕ:14.01.2015 ರಿಂದ ಪೂರ್ವಾನ್ವಯವಾಗುವಂತೆ ಗ್ರಂಥಾಲಯ ಸಹಾಯಕರ ಹುದ್ದೆಯಿಂದ ಸಹಾಯಕ ಗ್ರಂಥಪಾಲಕರ ಹುದ್ದೆಗೆ ಪದೋನ್ನತಿಯನ್ನು ನೀಡಿ ದಿನಾಂಕ:14.01.2015 ರಿಂದ ಅನ್ವಯವಾಗುವಂತೆ ಯು.ಜಿ.ಸಿ ವೇತನ ಶ್ರೇಣಿಯನ್ನು ನಿಗದಿಪಡಿಸಿ ವೇತನವನ್ನು ಪಾವತಿಸಲಾಗಿರುತ್ತದೆ. | ಮಂಗಳೂರು ವಿಶ್ವವಿದ್ಯಾನಿಲಯದ ಪರಿನಿಯಮದ ಪ್ರಕಾರವೇ ಗ್ರಂಥಾಲಯ ಸಹಾಯಕರುಗಳಿಗೆ ರಾಜ್ಯ ವೇತನ ಶ್ರೇಣಿಯ ಸಹಾಯಕ ಗ್ರಂಥಪಾಲಕರ ಹುದ್ದೆಗೆ ಪದೋನ್ನತಿ ನೀಡಲಾಗಿರುತ್ತದೆ. ಆದರೆ ದಿನಾಂಕ 14.01.2015 ರಂದು ನಡೆದ ಸಿಂಡಿಕೇಟು ಸಭೆಯ ನಿರ್ಣಯದಂತೆ ಸದರಿ ಸಿಬ್ಬಂದಿಗಳಿಗೂ ಯುಜಿಸಿ ವೇತನ ಶ್ರೇಣಿಯನ್ನು ವಿಸ್ತರಿಸಲಾಗಿರುತ್ತದೆ.<br>ಈ ವಿಷಯಕ್ಕೆ ಸಂಬಂಧಿಸಿದಂತೆ, ಈ ಕಚೇರಿ ಟಿಪ್ಪಣಿ ಸಮ ಸಂಖ್ಯೆ ದಿನಾಂಕ 14.02.2019ರಲ್ಲಿ ಅನುಸರಣಾ ವರದಿಯನ್ನು ಸಲ್ಲಿಸಲಾಗಿದೆ. ಸದರಿ ವರದಿಯಲ್ಲಿ ತಿಳಿಸಿರುವಂತೆ ಮಂಗಳೂರು ವಿಶ್ವವಿದ್ಯಾನಿಲಯದ 5 ಮಂದಿ ರಾಜ್ಯ ವೇತನ ಶ್ರೇಣಿಯ ಸಹಾಯಕ ಗ್ರಂಥಪಾಲಕರುಗಳಿಗೆ ವಿಸ್ತರಿಸಲಾದ ಯು.ಜಿ.ಸಿ. ವೇತನ ಶ್ರೇಣಿಯನ್ನು ಹಾಗೂ ಈಗಾಗಲೇ ಪಾವತಿಸಲಾದ ಹೆಚ್ಚುವರಿ ವೇತನ ಮೊತ್ತವನ್ನು ವಸೂಲಾತಿ ಮಾಡಲು ಆದೇಶಿಸಲಾಗಿರುತ್ತದೆ. |

| | | |
|---|---|---|
| | ಆದರೆ ಯು.ಜಿ.ಸಿ 6ನೇ ವೇತನ ಆಯೋಗದ ಪರಿಷ್ಕೃತ ನಿಯಮಾವಳಿಯನ್ವಯ ಗ್ರಂಥಾಲಯ ಸಹಾಯಕರುಗಳ ಹುದ್ದೆಯಿಂದ ಸಹಾಯಕ ಗ್ರಂಥಪಾಲಕರುಗಳ ಹುದ್ದೆಗೆ ಯು.ಜಿ.ಸಿ Regulations on minimum qualifications for appointment of teachers and other Academic staff in universities & colleges & other academic staff in universities, colleges and measures for the maintenance of standards in higher education 2010 ರ ನಿಯಮ 4, 5, 3 ರಲ್ಲಿ ಗೊತ್ತು ಪಡಿಸಲಾಗಿರುವ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಯನ್ನು ನೇರ ನೇಮಕಾತಿ ವಿಧಾನದ ಮೂಲಕ ಮಾತ್ರ ಸಹಾಯಕ ಗ್ರಂಥಪಾಲಕರ ಹುದ್ದೆಗೆ ನೇಮಿಸಬಹುದಾಗಿರುತ್ತದೆ. ಅಂತಹ ಪೋಷಕ ವೃಂದದಲ್ಲಿ ಗ್ರಂಥಾಲಯ ಸಹಾಯಕರ ವೃಂದದಿಂದ ಸಹಾಯಕ ಗ್ರಂಥಪಾಲಕರ ಹುದ್ದೆಗೆ ನೇಮಕ ಮಾಡಲು ಅವಕಾಶವಿರುವುದಿಲ್ಲ ಎಂಬ ಯು.ಜಿ.ಸಿ ಯ ನಿಯಮಗಳನ್ನು ಅಳವಡಿಸಿಕೊಂಡು ರಾಜ್ಯ ಸರ್ಕಾರದ ಆದೇಶ ಸಂಖ್ಯೆ:ಇಡಿ31/ಯು.ಎನ್.ಇ/2009/ ದಿ:24.12.2009 ರಲ್ಲಿ ಅಳವಡಿಸಿಕೊಂಡು ಕಾರ್ಯನೀತಿಯನ್ನು ರೂಪಿಸಲಾಗಿರುತ್ತದೆ.<br>ಅಲ್ಲದೆ ವಿಶ್ವವಿದ್ಯಾನಿಲಯದ ಧನಸಹಾಯ ಆಯೋಗದ ಪತ್ರ ಸಂಖ್ಯೆ: ಎಫ್2-16/2002 (ಪಿ.ಎಸ್) ಪಿ.ಟಿ, ಈ i-ii ದಿನಾಂಕ:02.05.2017 ರ ಪತ್ರದಲ್ಲೂ ಸಹ ಗ್ರಂಥಾಲಯ ಸಹಾಯಕರ ವೃಂದದಿಂದ ಸಹಾಯಕ ಗ್ರಂಥಪಾಲಕರ ಹುದ್ದೆಗೆ ಪದೋನ್ನತಿ ನೀಡಲು ಅವಕಾಶವಿರುವುದಿಲ್ಲವೆಂದು ಸ್ಪಷ್ಟಪಡಿಸಲಾಗಿದೆ. ಇಂತಹ ಆದೇಶಗಳು ಸ್ಪಷ್ಟವಾಗಿದ್ದರೂ ಸಹ ಗ್ರಂಥಾಲಯ ಸಹಾಯಕರುಗಳಿಗೆ ಸಹಾಯಕ ಗ್ರಂಥಪಾಲಕರುಗಳ ಹುದ್ದೆಗೆ ಪದೋನ್ನತಿ ನೀಡಲಾಗಿರುವ ಕುರಿತು ಸೂಕ್ತ ವಿವರಣೆಯನ್ನು ನೀಡುವಂತೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:149/ ದಿ:30.01.2019 ರಲ್ಲಿ ನೀಡಲಾಗಿ ನ್ಯಾಯಾಲಯದಲ್ಲಿ ದಾವೆ ಹೂಡಲಾಗಿದೆ ಎಂದು ದಿನಾಂಕ:14.02.2019 ರ ಪತ್ರದಲ್ಲಿ ವಿವರಣೆ ಒದಗಿಸಲಾಗಿದೆ. ಆದರೆ ನ್ಯಾಯಾಲಯಕ್ಕೆ ದಾವೆ ಹೂಡಿರುವ ಪ್ರತಿಯನ್ನು ಒದಗಿಸಿ ಕೊಟ್ಟಿರುವುದಿಲ್ಲ<br>ರಾಜ್ಯ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ಆದೇಶ ಸಂಖ್ಯೆ: ಇಡಿ/85/ಯು.ಡಿ.ವಿ/2017 ದಿನಾಂಕ:16.09.2017 ರ ಆದೇಶದಲ್ಲಿ ಗ್ರಂಥಾಲಯ ಸಹಾಯಕರುಗಳಿಗೆ ಸಹಾಯಕ ಗ್ರಂಥಪಾಲಕರ ಹುದ್ದೆಗೆ ಪದೋನ್ನತಿ ನೀಡಿರುವುದನ್ನು ಹಿಂಪಡೆಯುವಂತೆ ಆದೇಶವಿರುವುದರಿಂದ ದಿನಾಂಕ:14.01.2015 ರಿಂದ ದಿ:07.02.2017 ರವರೆಗೆ ಶ್ರೀ ಕೆ.ಕೆ.ಬಾದಾಮಿ, ಶ್ರೀಮತಿ ಸುಮಂಗಳ.ಕೆ.ಎಸ್, ಶ್ರೀಮತಿ ಜಯಲಕ್ಷ್ಮಿ, ಶ್ರೀ ಜಯಪ್ಪ.ಎಂ.ಸಿ, ಹಾಗೂ ಡಾ॥ ಕೆ.ಪುಷ್ಪಲತಾ ರವರಿಗೆ ದಿನಾಂಕ:30.11.2013 ರಿಂದ 13.01.2015 ರವರೆಗೆ ಯು.ಜಿ.ಸಿ ವೇತನವನ್ನು ಕಾಲ್ಪನಿಕವಾಗಿ ನಿಗದಿಪಡಿಸಿ ದಿ:14.01.2015 ರಿಂದ 07.02.2017 ರವರೆಗೆ ಹೆಚ್ಚುವರಿ ವೇತನ ಮೊತ್ತವನ್ನು ಈ ಕೆಳಗಿನಂತೆ ಪಾವತಿಸಲಾಗಿರುವ ಮೊತ್ತವನ್ನು ವಸೂಲಿಸಬೇಕಾಗಿರುತ್ತದೆ.<br><br>ಕ್ರ.ಸಂ / ಹೆಸರು / ಮೊತ್ತ (ರೂ.)<br>1 / ಡಾ॥ ಕೆ.ಪುಷ್ಪಲತಾ ರವರಿಗೆ ರೂ. / 3,95,555<br>2 / ಶ್ರೀ ಕೆ.ಕೆ.ಬಾದಾಮಿ ರವರಿಗೆ ರೂ. / 81,257<br>3 / ಶ್ರೀಮತಿ ಜಯಲಕ್ಷ್ಮಿ, ರವರಿಗೆ ರೂ. / 2,75,316<br>4 / ಶ್ರೀ ಜಯಪ್ಪ.ಎಂ.ಸಿ, ರವರಿಗೆ ರೂ. / 2,81,702<br>5 / ಶ್ರೀಮತಿ ಸುಮಂಗಳ.ಕೆ.ಎಸ್, ರವರಿಗೆ ರೂ. / 81,257<br>ಒಟ್ಟು ಮೊತ್ತ / 11,15,087<br><br>ಈ ಮೇಲೆ ತಿಳಿಸಿರುವ 5 ಜನ ಗ್ರಂಥಾಲಯ ಸಹಾಯಕರುಗಳಿಗೆ ಯು.ಜಿ.ಸಿ ವೇತನ ಶ್ರೇಣಿಯನ್ನು ರದ್ದುಪಡಿಸಿ ರಾಜ್ಯ ವೇತನ ಶ್ರೇಣಿಯಲ್ಲಿ ವೇತನವನ್ನು ಮರುನಿಗದಿಪಡಿಸುವಂತೆ ಹಾಗೂ ಹೆಚ್ಚುವರಿ ಪಾವತಿಸಿರುವ ಒಟ್ಟು ಮೊತ್ತ ರೂ.11,15,087/-ಗಳನ್ನು ವಸೂಲಿಸಿ ವಿಶ್ವವಿದ್ಯಾನಿಲಯದ ಲೆಕ್ಕಶೀರ್ಷಿಕೆಗೆ ಜಮೆ ಮಾಡಿ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಸೂಚಿಸಿದೆ.<br>ದಿನಾಂಕ:10.05.2019 ರ ಪುನರ್ ಪರಿಶೀಲನಾ ವೇಳೆಯಲ್ಲಿ ಘನ ಉಚ್ಚ ನ್ಯಾಯಾಲಯದಲ್ಲಿ ಹೂಡಿರುವ ದಾವೆಯ ಪ್ರತಿಯನ್ನು ಸಲ್ಲಿಸಿರುವುದಿಲ್ಲ. ರಿಟ್ ಪಿಟಿಶನ್ ಸಂಖ್ಯೆ:11317/2018 (ಎಸ್.ಆರ್.ಇ.ಎಸ್) ರ ಅಂತಿಮ ತೀರ್ಮಾನದಂತೆ ಕ್ರಮ ಕೈಗೊಳ್ಳಲು ಸೂಚಿಸಿದೆ. | ಆದರೆ ಸದರಿ ಸಿಬ್ಬಂದಿಗಳು ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ನ್ಯಾಯಾಲಯದ ಮಧ್ಯಂತರ ತಡೆಯಾಜ್ಞೆಯನುಸಾರ ಹೆಚ್ಚುವರಿ ವೇತನ ಮೊತ್ತವನ್ನು ವಸೂಲಾತಿ ಮಾಡುವುದನ್ನು ತಡೆಹಿಡಿಯಲಾಗಿದೆ.<br><br>ಪ್ರಸ್ತುತ ಸದರಿ ಸಿಬ್ಬಂದಿಗಳಿಗೆ ರಾಜ್ಯ ವೇತನ ಶ್ರೇಣಿಯನ್ನು ನೀಡಲಾಗುತ್ತಿದೆ. |

| ಕ್ರ.ಸಂ | ಹೆಸರು | ಮೊತ್ತ (ರೂ.) |
|---|---|---|
| 1 | ಡಾ॥ ಕೆ.ಪುಷ್ಪಲತಾ ರವರಿಗೆ ರೂ. | 3,95,555 |
| 2 | ಶ್ರೀ ಕೆ.ಕೆ.ಬಾದಾಮಿ ರವರಿಗೆ ರೂ. | 81,257 |
| 3 | ಶ್ರೀಮತಿ ಜಯಲಕ್ಷ್ಮಿ, ರವರಿಗೆ ರೂ. | 2,75,316 |
| 4 | ಶ್ರೀ ಜಯಪ್ಪ.ಎಂ.ಸಿ, ರವರಿಗೆ ರೂ. | 2,81,702 |
| 5 | ಶ್ರೀಮತಿ ಸುಮಂಗಳ.ಕೆ.ಎಸ್, ರವರಿಗೆ ರೂ. | 81,257 |
| ಒಟ್ಟು ಮೊತ್ತ | | 11,15,087 |

| | | |
|---|---|---|
| 44 | <u>17 ಜನ ಬೋಧಕೇತರ ನೌಕರರನ್ನು ತಾತ್ಕಾಲಿಕವಾಗಿ ಸೇರಿದ ದಿನಾಂಕದಿಂದ ಎಲ್ಲಾ ಸೌಲಭ್ಯಗಳನ್ನು ವಿಸ್ತರಿಸಿರುವ ಬಗ್ಗೆ :</u><br>ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ತಾತ್ಕಾಲಿಕವಾಗಿ ಕರ್ತವ್ಯ ನಿರ್ವಹಿಸುತ್ತಿದ್ದ 17 ಮಂದಿ ವಿವಿಧ ಪದನಾಮದ ಬೋಧಕೇತರ ಸಿಬ್ಬಂದಿಗಳನ್ನು ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ: ಎಂ.ಯು/33/ಸಿ2/97-98 ದಿ:28.09.2005 ರಲ್ಲಿ ತಾತ್ಕಾಲಿಕ ನೆಲೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಹುದ್ದೆಯ ಸಮಾನ ಹುದ್ದೆಗೆ ಖಾಯಂಗೊಳಿಸಲಾಗಿರುತ್ತದೆ. ವಿಶ್ವವಿದ್ಯಾಲಯದ ಆದೇಶದಲ್ಲಿ ತಾತ್ಕಾಲಿಕ ನೆಲೆಯಲ್ಲಿ ಕಾರ್ಯನಿರ್ವಹಿಸಿರುವ ಅವಧಿಯ ಸೇವೆಯನ್ನು ಖಾಯಂಗೆ ಪರಿಗಣಿಸಲಾಗುವುದಿಲ್ಲವೆಂದು ಆದೇಶದಲ್ಲಿ ತಿಳಿಸಲಾಗಿರುತ್ತದೆ. ನಂತರ ಖಾಯಂಗೊಂಡ ನೌಕರರ ತಾತ್ಕಾಲಿಕ ಸೇವೆಯನ್ನು ಪಿಂಚಣಿ ಸೌಲಭ್ಯಕ್ಕಾಗಿ ಪರಿಗಣಿಸಲು ಮನವಿ ಸಲ್ಲಿಸಿದ್ದ ಮೇರೆಗೆ ವಿಶ್ವವಿದ್ಯಾನಿಲಯದ ವತಿಯಿಂದ ಪರಿನಿಯಮ ರಚಿಸಿ ಸರ್ಕಾರದ ಅನುಮೋದನೆಗೆ ಸಲ್ಲಿಸಿದ್ದು, ಸರ್ಕಾರದ ಆದೇಶ ಸಂಖ್ಯೆ: ಇಡಿ/63/ಯು.ಡಿ.ಇ/2009 ದಿ:30.11.2010 ರಲ್ಲಿ 17 ಮಂದಿ ಸಿಬ್ಬಂದಿಯನ್ನು ಖಾಯಂಗೊಳಿಸಿರುವ ವಿಶ್ವವಿದ್ಯಾಲಯ ಕ್ರಮವನ್ನು ರದ್ದುಪಡಿಸಿ ಸಿಬ್ಬಂದಿಗೆ ಪಾವತಿಯಾದ ವೇತನ ಬಾಕಿ ವ್ಯತ್ಯಾಸದ ಮೊತ್ತವನ್ನು ವಸೂಲು ಮಾಡಿ ಕಾನೂನಿಗೆ ವಿರುದ್ಧವಾಗಿ ನಿರ್ಧಾರ ಕೈಗೊಂಡ ಅಧಿಕಾರಿಗಳು/ ನೌಕರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಸೂಚಿಸಲಾಗಿರುತ್ತದೆ.<br>ನಂತರ 17 ಸಿಬ್ಬಂದಿಗಳು ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದ ರಿಟ್ ಅರ್ಜಿ ಸಂಖ್ಯೆ: 40264-40279/2010 ರಲ್ಲಿ ದಿ:07.12.2011ರ ಉಚ್ಚ ನ್ಯಾಯಾಲಯದ ಆದೇಶದಲ್ಲಿ ಸರ್ಕಾರದ ಆದೇಶ ಸಂಖ್ಯೆ: ಇಡಿ/63/ಯು.ಡಿ.ಇ/2009 ದಿನಾಂಕ: 30.11.2010ರ ಆದೇಶವನ್ನು ರದ್ದುಪಡಿಸಿ, ಖಾಯಂಗೊಳಿಸಿರುವ ವಿಶ್ವವಿದ್ಯಾಲಯದ ಕ್ರಮವನ್ನು ಎತ್ತಿ ಹಿಡಿದಿದ್ದಾರೆ. ದಿನಾಂಕ:26.02.2014 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಸದರಿ ನೌಕರರಿಗೆ ಸೇವಾ ಸವಲತ್ತುಗಳನ್ನು ಯಾವ ದಿನಾಂಕದಿಂದ ವಿಸ್ತರಿಸಬೇಕೆಂಬ ಬಗ್ಗೆ ಸರ್ಕಾರದ ಸ್ಪಷ್ಟನೆ ಕೋರಲು ನಿರ್ಧರಿಸಿದ್ದು, ಅದರಂತೆ ಸರ್ಕಾರಕ್ಕೆ ಪತ್ರ ಬರೆಯಲಾಗಿದ್ದು, ಸರ್ಕಾರದ ಪತ್ರ ಸಂಖ್ಯೆ: ಇಡಿ73/ಯು.ಡಿ.ವಿ/2013/ ದಿ:04.08.2014 ರಲ್ಲಿ ಉಚ್ಚ ನ್ಯಾಯಾಲಯದ ಆದೇಶದಂತೆ ಕ್ರಮ ಕೈಗೊಳ್ಳಲು ಸೂಚಿಸಲಾಗಿರುತ್ತದೆ.<br>ದಿನಾಂಕ:03.12.2014 ರಲ್ಲಿ ನಡೆದ ಸಿಂಡಿಕೇಟ್ ಸಭೆಯಲ್ಲಿ ತಾತ್ಕಾಲಿಕ ನೆಲೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಖಾಯಂಗೊಂಡ 17 ಜನ ಸಿಬ್ಬಂದಿಗೆ ತಾತ್ಕಾಲಿಕ ನೆಲೆಯಲ್ಲಿ ಸೇರಿದ ದಿನಾಂಕದಿಂದ ಎಲ್ಲಾ ಸೌಲಭ್ಯಗಳನ್ನು ವಿಸ್ತರಿಸಲು ನಿರ್ಧರಿಸಿದ್ದು ಸಿಂಡಿಕೇಟ್ ಅನುಮೋದನೆಯೊಡನೆ ಪರಿನಿಯಮವನ್ನು ರಚಿಸಿ ಅದಕ್ಕೆ ಮಾನ್ಯ ರಾಜ್ಯಪಾಲರ ಅನುಮೋದನೆ ದೊರೆತಿರುವುದಿಲ್ಲ. ಆದರೆ ಮಾನ್ಯ ರಾಜ್ಯಪಾಲರ ಆದೇಶ ಸಂಖ್ಯೆ:ಜಿಎಸ್/04/ಎಂ.ಎಲ್.ಎಂ/2017 ದಿನಾಂಕ: 23.09.2017 ರನ್ವಯ ಸಿಂಡಿಕೇಟ್ ಸಭೆಯಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ಅವಶ್ಯಕತೆ ಇದ್ದರೆ ಹಿರಿಯ ನ್ಯಾಯವಾದಿಗಳಿಂದ ಕಾನೂನು ಸಲಹೆ ಪಡೆದು ಅದರನ್ವಯ ಕ್ರಮ ಕೈಗೊಳ್ಳುವಂತೆ ತಿಳಿಸಲಾಗಿದ್ದು, ಅದರನ್ವಯ ಕ್ರಮ ಕೈಗೊಂಡ ಬಗೆಗಿನ ಕಡತಗಳನ್ನು ಮುಂದಿನ ಲೆಕ್ಕತಪಾಸಣೆಗೆ ಹಾಜರುಪಡಿಸುವಂತೆ ಸೂಚಿಸಿದೆ. | ಮಂಗಳೂರು ವಿಶ್ವವಿದ್ಯಾನಿಲಯದ 17 ಮಂದಿ ಬೋಧಕೇತರ ಸಿಬ್ಬಂದಿಗಳಿಗೆ ಖಾಯಂ ಪೂರ್ವದ ಸೇವಾ ಸೌಲಭ್ಯಗಳನ್ನು ನೀಡುವುದಕ್ಕಾಗಿ ರಚಿಸಲಾದ ಪರಿನಿಯಮದ ಬಗ್ಗೆ ದಿನಾಂಕ 15.05.2019ರ ಪತ್ರದಲ್ಲಿ ಮಾಹಿತಿಯನ್ನು ಸಲ್ಲಿಸಲಾಗಿರುತ್ತದೆ. ಸದರಿ ಪತ್ರದ ಪ್ರತಿಯನ್ನು ಲಗತ್ತಿಸಲಾಗಿದೆ. ಅಲ್ಲದೆ, ಮಾನ್ಯ ರಾಜ್ಯಪಾಲರ ಆದೇಶ ಸಂಖ್ಯೆ ಜಿಎಸ್/04/ಎಂ.ಎಲ್.ಎಂ./2017 ದಿನಾಂಕ 23.09.2017ರನ್ವಯ ಹಿರಿಯ ನ್ಯಾಯವಾದಿಗಳಿಂದ ಕಾನೂನು ಸಲಹೆ ಪಡೆದುಕೊಂಡು ಸಿಂಡಿಕೇಟು ಸಭೆಗೆ ಮಂಡಿಸಿ, ಸಿಂಡಿಕೇಟು ನಿರ್ಣಯದಂತೆ ಸದರಿ ಮೊತ್ತವನ್ನು ಸಿಬ್ಬಂದಿಗಳಿಂದ ವಸೂಲಾತಿ ಮಾಡಲು ದಿನಾಂಕ 31.05.2018 ರಂದು ಆದೇಶಿಸಲಾಗಿರುತ್ತದೆ.<br>ಸಿಬ್ಬಂದಿಗಳು ಮಾನವೀಯ ನೆಲೆಯಲ್ಲಿ ವಸೂಲಾತಿ ಮಾಡಬಾರದಾಗಿ ಮನವಿ ಸಲ್ಲಿಸಿರುವ ಹಿನ್ನೆಲೆಯಲ್ಲಿ ದಿನಾಂಕ04.06.2018 ರಂದು ನಡೆದ ಸಿಂಡಿಕೇಟು ಸಭೆಯ ನಿರ್ಣಯದಂತೆ ಅಪರ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆ ಇವರಿಗೆ ಪತ್ರ ಬರೆದು ಅಭಿಪ್ರಾಯವನ್ನು ನೀಡುವಂತೆ ಕೋರಲಾಗಿರುತ್ತದೆ. ಈ ಮಾಹಿತಿಯನ್ನು ಈ ಕಚೇರಿ ಟಿಪ್ಪಣಿ ದಿನಾಂಕ 12.12.2018ರಲ್ಲಿ ಒದಗಿಸಲಾಗಿದೆ. ಸರ್ಕಾರದ ಸೂಚನೆ ಪ್ರಕಾರ ರಚಿಸಲಾದ ಪರಿನಿಯಮವನ್ನು ವಿಶ್ವವಿದ್ಯಾನಿಲಯದ ಅಗತ್ಯ ಪ್ರಾಧಿಕಾರಗಳ ಅನುಮೋದನೆ ಪಡೆದುಕೊಂಡು ಸರ್ಕಾರದ ಅನುಮೋದನೆಗೆ ಸಲ್ಲಿಸಲು ಕ್ರಮಕೈಗೊಳ್ಳಲಾಗುತ್ತಿದೆ. ಸಂಬಂಧಪಟ್ಟ ಕಡತಗಳನ್ನು ಈಗಾಗಲೇ ಲೆಕ್ಕ ತಪಾಸಣೆಗೆ ಹಾಜರುಪಡಿಸಲಾಗಿರುತ್ತದೆ. |
| <u>45 (ಎ).</u> | <u>ಅತಿಥಿ ಉಪನ್ಯಾಸಕರುಗಳ ನೇಮಕಾತಿ ಪ್ರಕ್ರಿಯೆಗಳ ಕಡತಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು :</u><br>2016-17ನೇ ಸಾಲಿನಲ್ಲಿ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಂಡು ರೂ.5,46,25,302/-ಗಳ ವೇತನ ಪಾವತಿಸಲಾಗಿದೆ. ಅತಿಥಿ ಉಪನ್ಯಾಸಕರುಗಳನ್ನು ನೇಮಕ ಮಾಡಿಕೊಳ್ಳುವಾಗ ವಿಷಯವಾರು, ತರಗತಿವಾರು, ಪಠ್ಯಕ್ರಮದನ್ವಯ, ಪಠ್ಯಕ್ರಮ ರಚನಾ ತಜ್ಞರ ಸಮಿತಿ ಮತ್ತು ಯು.ಜಿ.ಸಿ ನಿಗದಿಪಡಿಸಿರುವ ಬೋಧನಾ ಅವಧಿ, ಖಾಯಂ ಬೋಧಕರ ಲಭ್ಯ ಬೋಧನಾ ಅವಧಿ-ಇತ್ಯಾದಿ ಮಾನದಂಡಗಳಡಿ ನೇಮಕ ಮಾಡಿಕೊಳ್ಳಬೇಕಿರುತ್ತದೆ. ಈ ಸಂಬಂಧ ವಿಚಾರಣಾ ಪತ್ರ ಸಂಖ್ಯೆ: 19/2018-19/ ದಿ:16.11.2018, 55/2018-19 ದಿ:19.12.2018 ಹಾಗೂ 78/2018-19 ದಿ:27.12.2018 ರಲ್ಲಿ ಜಾರಿ ಮಾಡಲಾಗಿತ್ತು. ಸಲ್ಲಿಸಿರುವ ದಾಖಲೆಗಳಲ್ಲಿ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ-2000ನಿಯಮ 55, 56 ರನ್ವಯ ನೇಮಕಗೊಂಡಿರುವುದು ಕಡತಗಳಲ್ಲಿ ಕಂಡು ಬಂದಿರುವುದಿಲ್ಲ. ಈ ಸಂಬಂಧ ಅತಿಥಿ ಉಪನ್ಯಾಸಕರುಗಳಿಗೆ ಪಾವತಿಸಿರುವ ವೇತನ ಮೊತ್ತ ರೂ.5,46,25,302/-ಗಳನ್ನು ಆಕ್ಷೇಪಣೆಗೆ ಸೂಚಿಸಿದೆ. ವಿವರಗಳನ್ನು <u>ಅನುಬಂಧ-22 ರಲ್ಲಿ</u> ವರದಿಗೆ ಲಗತ್ತಿಸಿದೆ. | 2016–17ನೇ ಸಾಲಿನಲ್ಲಿ ಅತಿಥಿ ಉಪನ್ಯಾಸಕರ ನೇಮಕಾತಿಗೆ ಸಂಬಂಧಪಟ್ಟ ಕಡತಗಳನ್ನು ಹಾಗೂ ನೇಮಕಗೊಂಡ ಅತಿಥಿ ಉಪನ್ಯಾಸಕರ ವಿವರವನ್ನೊಳಗೊಂಡ ತಃಖ್ತೆಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲಾಗಿದೆ. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆ 2000ರ ಸೆಕ್ಷನ್ 56ರಂತೆ ಒಂದು ವರ್ಷದ ಅವಧಿಯವರೆಗಿನ ತಾತ್ಕಾಲಿಕ ನೇಮಕಾತಿಗೆ ಕುಲಪತಿಯವರಿಗೆ ಪ್ರದತ್ತವಾದ ಅಧಿಕಾರದಂತೆ ಖಾಯಂ ಅಧ್ಯಾಪಕರಿಗೆ ಹಂಚಿಕೆ ಮಾಡಿ ಉಳಿಕೆಯಾದ ಕಾರ್ಯಭಾರಕ್ಕೆ ಅನುಗುಣವಾಗಿ ಅತಿಥಿ ಉಪನ್ಯಾಸಕರ ನೇಮಕಾತಿ ಪ್ರಕ್ರಿಯೆ ಕೈಗೊಳ್ಳಲಾಗಿದೆ. ಅದರಂತೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿದ್ದು, ಆಯ್ಕೆ ಸಮಿತಿಯು ಸಂದರ್ಶನ ನಡೆಸಿದ್ದು, ಆಯ್ಕೆಯಾದ ಅಭ್ಯರ್ಥಿಗಳನ್ನು ಅತಿಥಿ ಉಪನ್ಯಾಸಕರಾಗಿ ನೇಮಕ ಮಾಡಲಾಗಿದೆ. ಅತಿಥಿ ಉಪನ್ಯಾಸಕರ ನೇಮಕಾತಿಯನ್ನು ನಿಯಮಾನುಸಾರ ಮಾಡಿರುವುದರಿಂದ ಈ ಆಕ್ಷೇಪಣೆಯನ್ನು ಕೈಬಿಡುವಂತೆ ಕೋರಲಾಗಿದೆ. |

| | | |
|---|---|---|
| 45 (ಬಿ). | ತಾತ್ಕಾಲಿಕ/ ಸಂಚಿತ ವೇತನದಡಿಯಲ್ಲಿ ನೇಮಕಾತಿ ಮಾಡಿಕೊಂಡಿರುವ ಬೋಧಕೇತರ ನೌಕರರುಗಳ ನೇಮಕಾತಿಯ ಬಗ್ಗೆ :<br>2016-17ನೇ ಸಾಲಿನಲ್ಲಿ ತಾತ್ಕಾಲಿಕ ಬೋಧಕೇತರ ನೌಕರರು/ ಸಂಚಿತ ವೇತನದಡಿ ನೇಮಕ ಮಾಡಿಕೊಳ್ಳಲಾಗಿರುತ್ತದೆ. ನೇಮಕ ಮಾಡಿಕೊಳ್ಳುವ ಪೂರ್ವದಲ್ಲಿ ವಿಶ್ವವಿದ್ಯಾನಿಲಯದಲ್ಲಿ ಮಂಜೂರಾಗಿರುವ ಹುದ್ದೆಗಳು, ವೇತನ ಶ್ರೇಣಿ, ಕರ್ತವ್ಯ ನಿರ್ವಹಿಸುತ್ತಿರುವ ಸಂಖ್ಯೆ, ಖಾಲಿ ಹುದ್ದೆಗಳ ಸಂಖ್ಯೆ, ಅವಶ್ಯಕವಾಗಿ ಬೇಕಾಗಿರುವ ಹೆಚ್ಚುವರಿ ಹುದ್ದೆಗಳ ಸಂಖ್ಯೆ ವಿವರಗಳನ್ನು ಒದಗಿಸಿ ಸರ್ಕಾರದಿಂದ ಪೂರ್ವಾನುಮೋದನೆ ಪಡೆಯಬೇಕಾಗಿರುತ್ತದೆ. ಈ ಸಂಬಂಧ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ: 54/2018-19 ದಿ:19.12.2018 ಹಾಗೂ 77/2018-19 ದಿ:27.12.2018 ರಲ್ಲಿ ವಿವರಣೆ ಒದಗಿಸುವಂತೆ ಕೋರಲಾಗಿತ್ತು. ವಿಶ್ವವಿದ್ಯಾನಿಲಯವು ಸಲ್ಲಿಸಿರುವ ಲಭ್ಯ ದಾಖಲೆಗಳ ಪ್ರಕಾರ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ-2000 ರ ನಿಯಮ 56 ಮತ್ತು 57 ರನ್ವಯ ನೇಮಕಾತಿ ಪ್ರಕ್ರಿಯೆ ಕೈಗೊಂಡಿರುವುದಿಲ್ಲ. ಆದ್ದರಿಂದ ಈ ಸಂಬಂಧ ಪಾವತಿಸಿರುವ ರೂ.2,37,21,510/-ಗಳನ್ನು ಆಕ್ಷೇಪಣೆಗೆ ಸೂಚಿಸಿದೆ. ವಿವರಗಳನ್ನು ಅನುಬಂಧ-23 ರಲ್ಲಿ ವರದಿಗೆ ಲಗತ್ತಿಸಿದೆ. | ಇದಕ್ಕೆ ಸಂಬಂಧಿಸಿದ ನೇಮಕಾತಿ ಪ್ರಕ್ರಿಯೆ ಎಲ್ಲಾ ಕಡತಗಳನ್ನು ಹಾಗೂ ವಿವರಗಳನ್ನು ಈಗಾಗಲೇ ಲೆಕ್ಕ ಪರಿಶೋಧಕರಿಗೆ ನೀಡಲಾಗಿರುತ್ತದೆ. ವಿಶ್ವವಿದ್ಯಾನಿಲಯದಲ್ಲಿ ಸುಮಾರು 80 ಗ್ರೂಪ್ 'ಸಿ' ಮತ್ತು 100 ಗ್ರೂಪ್ 'ಡಿ' ಹುದ್ದೆಗಳು ಖಾಲಿ ಇರುವ ಕಾರಣ ಮತ್ತು ಇದಕ್ಕೆ ಸಂಬಂಧಿಸಿ ಹುದ್ದೆಗಳನ್ನು ತುಂಬಲು ಸರಕಾರದಿಂದ ಅನುಮತಿ ಪಡೆಯದೇ ಇರುವ ಕಾರಣ ವಿಶ್ವವಿದ್ಯಾನಿಲಯದ ದೈನಂದಿನ ಕೆಲಸಕಾರ್ಯಗಳನ್ನು ಕ್ಲಪ್ತ ಸಮಯದಲ್ಲಿ ನಿರ್ವಹಿಸಲು ತಾತ್ಕಾಲಿಕ ವ್ಯವಸ್ಥೆ ಮಾಡಲಾಗಿದೆ. Job Typist, Lab Technician, ಗ್ರೂಪ್ 'ಡಿ' ಸೇವೆಯನ್ನು ಬಳಸಿಕೊಳ್ಳಲಾಗಿರುತ್ತದೆ. ಯಾರನ್ನು ತಾತ್ಕಾಲಿಕವಾಗಿ ನೇಮಕಾತಿ ಮಾಡಿರುವುದಿಲ್ಲ. ಆದುದರಿಂದ ಆಕ್ಷೇಪಣೆಯನ್ನು ಕೈಬಿಡುವಂತೆ ಕೋರಲಾಗಿದೆ. |
| 46 | ಬೋಧಕ ವರ್ಗದವರಿಗೆ ಪಿ.ಹೆಚ್.ಡಿ ಪದವಿ ಪಡೆದಿದ್ದಕ್ಕಾಗಿ ಮುಂಗಡ ವೇತನ ಬಡ್ತಿ ಹಾಗೂ ಸಿ.ಎ.ಎಸ್ ಸ್ಕೀಂ ಸೌಲಭ್ಯಗಳೆರಡನ್ನು ನೀಡಿರುವುದು :<br>2016-17ನೇ ಸಾಲಿನ ಲೆಕ್ಕತಪಾಸಣೆಯಲ್ಲಿ ಬೋಧಕವರ್ಗದ ಸೇವಾ ವಹಿಗಳನ್ನು ಪರಿಶೀಲಿಸಲಾಗಿ ಬೋಧಕ ವರ್ಗದವರು ಸೇವೆಗೆ ಸೇರುವ ಮೊದಲು ಅಥವಾ ಸೇವೆಗೆ ಸೇರಿದ ನಂತರ ಪಿ.ಹೆಚ್.ಡಿ ಪದವಿಯನ್ನು ಪಡೆದುಕೊಂಡಿದ್ದರೆ, ಅಂತಹವರಿಗೆ 2 ಅಥವಾ 3 ಮುಂಗಡ ವೇತನ ಬಡ್ತಿಗಳನ್ನು ನೀಡಲು ಸರ್ಕಾರದ ಆದೇಶಸಂಖ್ಯೆ:ಇಡಿ/100/ಯು.ಎನ್.ಇ/99 ದಿ:15.11.1999 ಮತ್ತು ಸರ್ಕಾರಿ ಆದೇಶ ಸಂಖ್ಯೆ: ಇಡಿ37/ಯು.ಎನ್.ಇ/2009 ದಿ:24.12.2009 ರ ರೀತ್ಯಾ ಅವಕಾಶ ಕಲ್ಪಿಸಿದೆ. ಆದರೆ ಸರ್ಕಾರಿ ಆದೇಶ ಸಂಖ್ಯೆ: ಇಡಿ100/ಯು.ಎನ್.ಇ/99 ದಿ:15.11.99 ರ ಪ್ಯಾರಾ 12 ಮತ್ತು ಸರ್ಕಾರಿ ಆದೇಶ ಸಂಖ್ಯೆ: ಇಡಿ37/ಯು.ಎನ್.ಇ/2009/ 24.12.2009 ರ ಅಪೆಂಡಿಕ್ಸ್-IV ರ XXVI ರೀತ್ಯಾ ಪಿ.ಹೆಚ್.ಡಿ ಪದವಿ ಪಡೆದಿದ್ದಕ್ಕಾಗಿ ಮುಂಗಡ ವೇತನ ಬಡ್ತಿ ಸೌಲಭ್ಯ ಪಡೆದವರು ಸಿ.ಎ.ಎಸ್ ಸ್ಕೀಂನಡಿಯಲ್ಲಿ ಮುಂಗಡ ವೇತನ ಬಡ್ತಿಯನ್ನು 6 ವರ್ಷಗಳಿಗೆ ನೀಡಬೇಕಾಗಿರುತ್ತದೆ. ಪಿ.ಹೆಚ್.ಡಿ ಪದವಿಗಳಿಸಿದ್ದಕ್ಕಾಗಿ ಮುಂಗಡ ವೇತನ ಬಡ್ತಿಗಳನ್ನು ಪಡೆಯದಿದ್ದಲ್ಲಿ ಅಂತಹವರಿಗೆ 4 ವರ್ಷಗಳಿಗೆ ಸಿ.ಎ.ಎಸ್ ಸ್ಕೀಂನಡಿಯಲ್ಲಿ ಮುಂಗಡ ವೇತನ ಬಡ್ತಿಗಳನ್ನು ನೀಡಲು ಸರ್ಕಾರಿ ಆದೇಶಗಳಲ್ಲಿ ಅವಕಾಶವಿರುತ್ತದೆ. ಸರ್ಕಾರಿ ಆದೇಶಗಳನ್ನು ಉಲ್ಲಂಘಿಸಿ ಎರಡು ಸೌಲಭ್ಯಗಳನ್ನು ನೀಡಿರುವ ಬಗ್ಗೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ: 189/2018-19 ದಿ:11.02.2019 ರಲ್ಲಿ ಕೋರಲಾಗಿ ಯಾವುದೇ ಸೂಕ್ತ ವಿವರಣೆಯನ್ನು ನೀಡಿರುವುದಿಲ್ಲ. ಅನುಬಂಧ-24 ರಲ್ಲಿ ತಿಳಿಸಿರುವ ಬೋಧಕರುಗಳಿಗೆ ಸರ್ಕಾರಿ ಆದೇಶಗಳನ್ವಯ ಸಿ.ಎ.ಎಸ್ ಸ್ಕೀಂನಡಿ 4 ವರ್ಷಗಳಿಗೆ ಮುಂಗಡ ವೇತನ ಬಡ್ತಿ (ಸ್ಟೇಜ್-2_ಅಥವಾ ಪಿ.ಹೆಚ್.ಡಿ ಪದವಿ ಪಡೆದಿರುವುದಕ್ಕೆ ಮುಂಗಡ ವೇತನ ಬಡ್ತಿಗಳಲ್ಲಿ ಯಾವುದಾದರೂ ಒಂದು ಸೌಲಭ್ಯವನ್ನು ನೀಡಿ ವೇತನ ಭತ್ಯೆಗಳನ್ನು ಮರು ನಿಗದಿಪಡಿಸಿ ಹೆಚ್ಚುವರಿಯಾಗಿ ಪಾವತಿಸಿರುವ ಮೊತ್ತವನ್ನು ಲೆಕ್ಕಚಾರ ಮಾಡಿ ವಸೂಲಿಸಿ ವಿಶ್ವವಿದ್ಯಾನಿಲಯ ಖಾತೆಗೆ ಜಮೆ ಮಾಡುವಂತೆ ಹಾಗೂ ವಿಶ್ವವಿದ್ಯಾನಿಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ಬೋಧಕ ವರ್ಗದವರ ಸೇವಾ ವಹಿಗಳನ್ನು ಪರಿಶೀಲಸಿ ಮೇಲೆ ತಿಳಿಸಿರುವ ಸರ್ಕಾರಿ ಆದೇಶಗಳನ್ವಯ ಮುಂಗಡ ವೇತನ ಸೌಲಭ್ಯಗಳನ್ನು ನೀಡದಿದ್ದರೆ ತುರ್ತು ಕ್ರಮ ಕೈಗೊಳ್ಳುವಂತೆ ಸೂಚಿಸಿದೆ.<br>ದಿನಾಂಕ:10.05.2019 ರ ಪುನರ್ ಪರಿಶೀಲನಾ ವೇಳೆಯಲ್ಲಿ ಕುಲಸಚಿವರು, ಹಣಕಾಸು ಅಧಿಕಾರಿಯವರಿಗೆ ಸೂಚಿಸಿರುವ ಪತ್ರ ಸಂಖ್ಯೆ:ಮವಿ/ಸಿಬ್ಬಂದಿ/32/2018-19/ಇ1 ದಿನಾಂಕ:04.05.2019 ನ್ನು ಪರಿಶೀಲಿಸಲಾಯಿತು. ಈ ಬಗ್ಗೆ ಕೂಡಲೇ ಕ್ರಮವಹಿಸಿದ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಸೂಚಿಸುತ್ತಾ ಅಲ್ಲಿಯವರೆಗೂ ಈ ಕಂಡಿಕೆಯನ್ನು ಮುಂದುವರೆಸಲಾಗಿದೆ. | ಮಂಗಳೂರು ವಿಶ್ವವಿದ್ಯಾನಿಲಯದ 2014-15ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯಲ್ಲಿ ಬೋಧಕ ವರ್ಗದವರಿಗೆ ಪಿ.ಹೆಚ್.ಡಿ ಪದವಿ ಪಡೆದಿದ್ದಕ್ಕಾಗಿ ಮುಂಗಡ ವೇತನ ಬಡ್ತಿ ಅಥವಾ ಸಿ.ಎ.ಎಸ್. ನಡಿಯಲ್ಲಿ ಅರ್ಹತಾದಾಯಕ ಸೇವೆಗೆ ವಿನಾಯಿತಿ ಇವೆರಡರಲ್ಲಿ ಯಾವುದಾದರೂ ಒಂದನ್ನು ನೀಡಿ ಇನ್ನೊಂದನ್ನು ರದ್ದುಪಡಿಸುವಂತೆ ಲೆಕ್ಕ ಪರಿಶೋಧಕರು ಈಗಾಗಲೇ ಸೂಚಿಸಿರುತ್ತಾರೆ. ಅದರಂತೆ ಸದರಿ ಲೆಕ್ಕ ಪರಿಶೋಧನಾ ಆಕ್ಷೇಪಣೆಯ ಪ್ರಸ್ತಾವನೆಯನ್ನು ದಿನಾಂಕ 05.12.2017ರಂದು ನಡೆದ ಸಿಂಡಿಕೇಟು ಸಭೆಗೆ ಮಂಡಿಸಿದ್ದು, ಸದರಿ ಸಿಂಡಿಕೇಟು ಸಭೆಯ ನಿರ್ಣಯದಲ್ಲಿ ಮುಂಗಡ ವೇತನ ಭಡ್ತಿ ಅಥವಾ ಮುಂಗಡ ವಾರ್ಷಿಕ ಭಡ್ತಿ ಇವೆರಡರಲ್ಲಿ ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳಲು ಸಂಬಂಧಿತ ಬೋಧಕರಿಗೆ ಸೂಚಿಸಲು ನಿರ್ಣಯಿಸಲಾಯಿತು. ಅದರಂತೆ ಈ ಕಚೇರಿ ಅಧಿಕೃತ ಜ್ಞಾಪನ ಪತ್ರ ದಿನಾಂಕ 01.01.2018ರಲ್ಲಿ ಸಂಬಂಧಪಟ್ಟ ಬೋಧಕರಿಗೆ ತಿಳಿಸಲಾಗಿರುತ್ತದೆ ಹಾಗೂ ಆಯ್ಕೆಯನ್ನು ಸೂಚಿಸದಿದ್ದಲ್ಲಿ, ಮುಂಗಡ ವೇತನ ಭಡ್ತಿಯನ್ನು ರದ್ದುಪಡಿಸಲಾಗುವುದು ಎಂದು ತಿಳಿಸಲಾಗಿರುತ್ತದೆ. ಅದರಂತೆ ಮಾನ್ಯ ಕುಲಪತಿಯವರ ಅನುಮೋದನೆ ಪಡೆದು ಲೆಕ್ಕ ಪರಿಶೋಧಕರ ಆಕ್ಷೇಪಣೆಯಂತೆ ಎಂ.ಫಿಲ್/ಪಿಹೆಚ್.ಡಿ ಪದವಿಗೆ ನೀಡಿರುವ ಮುಂಗಡ ವೇತನ ಭಡ್ತಿಯನ್ನು ರದ್ದುಪಡಿಸಿ, ವೇತನ ಮರುನಿಗದಿಪಡಿಸಲು ಹಣಕಾಸು ಅಧಿಕಾರಿಯವರಿಗೆ ಸೂಚಿಸುವ ಬಗ್ಗೆ ಕಡತವನ್ನು ಮಂಡಿಸಲಾಗಿತ್ತು. ಈ ಮಧ್ಯೆ ದಿನಾಂಕ 07.12.2018ರ ಯುಜಿಸಿ Public Notice ನಲ್ಲಿ (ಪ್ರತಿ ಲಗತ್ತಿಸಿದೆ) ಪಿಹೆಚ್.ಡಿ ಪದವಿಗೆ ಮುಂಗಡ ವೇತನ ಭಡ್ತಿ ಹಾಗೂ ಸಿ.ಎ.ಎಸ್.ನಲ್ಲಿ ಅರ್ಹತಾದಾಯಕ ಸೇವೆಯಲ್ಲಿ ವಿನಾಯಿತಿ ಸೌಲಭ್ಯ ಇವೆರಡೂ ಸೌಲಭ್ಯಗಳನ್ನು ನೀಡಬಹುದೆಂದು ತಿಳಿಸಿರುವುದರಿಂದ ಈ ಬಗ್ಗೆ ಸರ್ಕಾರದ ಸ್ಪಷ್ಟೀಕರಣವನ್ನು ಈ ಕಚೇರಿ ಪತ್ರ ದಿನಾಂಕ 22.12.2018ರಲ್ಲಿ (ಪ್ರತಿ ಲಗತ್ತಿಸಿದೆ) ಕೋರಲಾಗಿದೆ ಹಾಗೂ ಸದರಿ ಮಾಹಿತಿಯನ್ನು ಲೆಕ್ಕ ಪರಿಶೋಧಕರಿಗೆ ನೀಡಲಾಗಿದೆ (ಪ್ರತಿ ಲಗತ್ತಿಸಿದೆ). ಸರ್ಕಾರದಿಂದ ಈ ಬಗ್ಗೆ ಸ್ಪಷ್ಟೀಕರಣ ಬಂದ ನಂತರ ಸೂಕ್ತ ಕ್ರಮಕೈಗೊಳ್ಳಲಾಗುವುದು ಎಂಬ ಮಾಹಿತಿಯನ್ನು ನೀಡಲಾಗಿದೆ. |

| | | |
|---|---|---|
| 47 | <u>ಶ್ರೀ ಚಂದ್ರಶೇಖರ್.ಆರ್ ಸಹಾಯಕ ಪ್ರಾಧ್ಯಾಪಕರು ಇವರು ಜಾತಿ ಸಿಂಧುತ್ವ ಪ್ರಮಾಣ ಪತ್ರವನ್ನು ಹಾಜರುಪಡಿಸದಿರುವುದು :</u><br>2016-17ನೇ ಸಾಲಿನಲ್ಲಿ ಶ್ರೀ ಚಂದ್ರಶೇಖರ್.ಆರ್, ಸಹಾಯಕ ಪ್ರಾಧ್ಯಾಪಕರು ಇವರ ಸೇವಾ ವಹಿ ಮತ್ತು ವೈಯಕ್ತಿಕ ಕಡತಗಳನ್ನು ಪರಿಶೀಲಿಸಲಾಗಿ- ಇವರು ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಹಾಯಕ ಪ್ರಾಧ್ಯಾಪಕರಾಗಿ ಕುಲಸಚಿವರ ಆದೇಶ ಸಂಖ್ಯೆ:ಎಂ.ಯು/9/ಇ.ಎಸ್.ಟಿ1/01/02 ದಿನಾಂಕ:28.01.2003 ರ ಆದೇಶದನ್ವಯ ನೇಮಕಾತಿ ಹೊಂದಿರುತ್ತಾರೆ. ದಿನಾಂಕ: 28.01.2003 ರ ಪೂರ್ವಾಹ್ನ ಕೆಲಸಕ್ಕೆ ವರದಿ ಮಾಡಿಕೊಂಡಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ. ಯಾವುದೇ ಅಭ್ಯರ್ಥಿ ಸಿಂಧುತ್ವ ಪ್ರಮಾಣ ಪತ್ರವನ್ನು ಹಾಜರುಪಡಿಸಿದ ನಂತರವಷ್ಟೇ ನೇಮಕಾತಿ ಆದೇಶವನ್ನು ನೀಡಬೇಕಿರುತ್ತದೆ. ಆನಂತರವಷ್ಟೇ ಆತ ಸರ್ಕಾರಿ ನೌಕರನಾಗಲು ಅರ್ಹನಾಗುತ್ತಾನೆ.<br>ಸರ್ಕಾರಿ, ನಿಗಮ ಮಂಡಳಿಗಳು, ವಿಶ್ವವಿದ್ಯಾನಿಲಯಗಳು ಹಾಗೂ ಇನ್ನಿತರೆ ಸರ್ಕಾರಿ ಸ್ವಾಮ್ಯಕ್ಕೊಳಪಡುವ ಕಛೇರಿಗಳಿಗೆ ನೌಕರರನ್ನು ನೇಮಕಾತಿ ಪ್ರಕ್ರಿಯೆ ಕೈಗೊಂಡು ನೇಮಕಾತಿ ಪಡೆದ ಅಭ್ಯರ್ಥಿಗಳು ಆಯ್ಕೆಯಾಗಿರುವ ಮೀಸಲಾತಿಗನುಗುಣವಾಗಿ ಸಿಂಧುತ್ವ ಪ್ರಮಾಣ ಪತ್ರವನ್ನು ಸಲ್ಲಿಸಿದ ನಂತರ ನೇಮಕಾತಿ ಆದೇಶವನ್ನು ನೀಡುವ ಮೂಲಕ ಅಭ್ಯರ್ಥಿಯನ್ನು ಕೆಲಸಕ್ಕೆ ವರದಿ ಮಾಡಿಸಿಕೊಳ್ಳುವಂತೆ ಸರ್ಕಾರದ ಆದೇಶ ಸಂಖ್ಯೆ: ಸಕಾ/247/ಎಸ್.ಎ.ಡಿ/90 ದಿ:22.02.1993 ರ ಆದೇಶದಲ್ಲಿ ತಿಳಿಸಿದ್ದರೂ ಸಹ ಇಲ್ಲಿ ಶ್ರೀ ಚಂದ್ರಶೇಖರ್ ರವರಿಗೆ ಜಾತಿ ಸಿಂಧುತ್ವ ಪ್ರಮಾಣ ಪತ್ರವನ್ನು ಪಡೆಯದೇ ಕೇವಲ ಷರತ್ತು ವಿಧಿಸಿ ನೇಮಕಾತಿಯ ಆದೇಶ ನೀಡಲಾಗಿದೆ.<br>ಆದರೆ, ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು ಜಿಲ್ಲಾ ಜಾತಿ ಪರಿಶೀಲನಾ ಸಮಿತಿ ದಕ್ಷಿಣ ಕನ್ನಡ ಜಿಲ್ಲೆ ರವರ ಪತ್ರ ಸಂಖ್ಯೆ: ಜಿ.ಸ.ಕ/ಅತಸ/ಸಿ.ಆರ್-16/2003-04 ದಿನಾಂಕ:02.08.2004 ರಲ್ಲಿ ಸಿಂಧುತ್ವ ಪ್ರಮಾಣ ಪತ್ರ ನೀಡಲು ನಿರಾಕರಿಸಿದ್ದು, ನಂತರ ಮೇಲ್ಮನವಿ ಪ್ರಾಧಿಕಾರವಾದ ಆಯುಕ್ತರು ಹಾಗೂ ಮೇಲ್ಮನವಿ ಪ್ರಾಧಿಕಾರಿಗಳು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಆದೇಶ ಸಂಖ್ಯೆ:ಸಕನಿ/G&v/ಸಿ.ಆರ್10/2004-05 ಬೆಂಗಳೂರು ದಿನಾಂಕ:26.08.2005 ರಲ್ಲಿ ಜಾತಿ ಸಿಂಧುತ್ವ ಪ್ರಮಾಣ ಪತ್ರವನ್ನು ನೀಡಲು ನಿರಾಕರಿಸಿರುವ ಆದೇಶವನ್ನು ಎತ್ತಿ ಹಿಡಿದಿದ್ದರೂ ಸಹ (ಇವರು ನೇಮಕಾತಿ ಹೊಂದಿ ಇಲ್ಲಿಯವರೆಗೆ ಅಂದರೆ 16 ವರ್ಷಗಳು, 1 ತಿಂಗಳೂ, 14 ದಿನಗಳಾಗಿದ್ದರೂ ಸಹ) ಯಾವುದೇ ಆಡಳಿತಾತ್ಮಕ ಕ್ರಮ ವಹಿಸದಿರುವುದು ಲೆಕ್ಕಪರಿಶೋಧನೆಯಲ್ಲಿ ಕಂಡು ಬಂದಿರುತ್ತದೆ. ಈ ಬಗ್ಗೆ ಸ್ಪಷ್ಟನೆಯನ್ನು ನೀಡುವಂತೆ ಲೆಕ್ಕತಪಾಸಣಾ ವಿಚಾರಣಾ ಪತ್ರ ಸಂಖ್ಯೆ:179/ ದಿ:06.02.2019 ರಲ್ಲಿ ಜಾರಿ ಮಾಡಿದ್ದರೂ ಸಹ ಯಾವುದೇ ಸೂಕ್ತ ವಿವರಣೆಯನ್ನು ನೀಡಿರುವುದಿಲ್ಲ. ಆದುದರಿಂದ ಸದರಿ ನೌಕರರ ನೇಮಕಾತಿಯನ್ನು ರದ್ದುಪಡಿಸಲು ಸರ್ಕಾರದ ನಿರ್ದೇಶನಗಳ ಹಿನ್ನೆಲೆಯಲ್ಲಿ ಪರಿಶೀಲಿಸಿ ಸೂಕ್ತ ಆಡಳಿತಾತ್ಮಕ ಕ್ರಮ ವಹಿಸುವಂತೆ ಸೂಚಿಸಿದೆ. | ಶ್ರೀ ಚಂದ್ರಶೇಖರ್, ಸಹಾಯಕ ಪ್ರಾಧ್ಯಾಪಕರು, ವ್ಯವಹಾರ ಆಡಳಿತ ವಿಭಾಗ ಇವರು ಪರಿಶಿಷ್ಟ ಜಾತಿಗೆ ಸೇರಿದ ಪಲ್ಲನ್ ಉಪಜಾತಿಗೆ ಸೇರಿದವರಾಗಿರುತ್ತಾರೆ ಎಂದು ಜಾತಿ ಪ್ರಮಾಣ ಪತ್ರದಲ್ಲಿ ನಮೂದಿಸಿರುತ್ತಾರೆ. ಸದರಿಯವರು 2003ರಲ್ಲಿ ನೇರ ನೇಮಕಾತಿಗೊಂಡಿದ್ದು, ದಿನಾಂಕ 28.01.2003ರ ಪೂವಾಹ್ನ ಕರ್ತವ್ಯಕ್ಕೆ ಹಾಜರಾಗಿರುತ್ತಾರೆ. ಆ ಸಮಯದಲ್ಲಿ ಜಾತಿ ಪ್ರಮಾಣ ಪತ್ರದ ಆಧಾರದಲ್ಲಿ ನೇಮಕಾತಿ ಆದೇಶ ನೀಡಿ ತದನಂತರ ಸಿಂಧುತ್ವ ಪ್ರಮಾಣ ಪತ್ರವನ್ನು ಪಡೆಯಲಾಗುತ್ತಿತ್ತು. ಶ್ರೀ ಚಂದ್ರಶೇಖರ ಇವರ ಸಿಂಧುತ್ವ ಪ್ರಮಾಣ ಪತ್ರಕ್ಕೆ ಸಂಬಂಧಿಸಿ 2014-15ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯಲ್ಲಿ ಆಕ್ಷೇಪಣೆಯಾಗಿರುವುದರಿಂದ ಸದರಿ ಪ್ರಮಾಣ ಪತ್ರವನ್ನು ಸಲ್ಲಿಸುವಂತೆ ಸದರಿಯವರಿಗೆ ತಿಳಿಸಲಾಗಿರುತ್ತದೆ ಹಾಗೂ ಜಿಲ್ಲಾಧಿಕಾರಿ / ಅಧ್ಯಕ್ಷರು, ಜಿಲ್ಲಾ ಜಾತಿ ಪರಿಶೀಲನಾ ಸಮಿತಿ ಇವರಿಗೆ ಈ ಕಚೇರಿಯಿಂದ ದಿನಾಂಕ 19.11.2016ರಂದು ಪತ್ರ ಕಳುಹಿಸಿ ಸದರಿಯವರ ಸಿಂಧುತ್ವ ಪ್ರಮಾಣ ಪತ್ರವನ್ನು ನೀಡುವಂತೆ ಕೋರಲಾಗಿತ್ತು. ಶ್ರೀ ಚಂದ್ರಶೇಖರ್ ಇವರ ಸಿಂಧುತ್ವ ಪ್ರಮಾಣ ಪತ್ರದ ಸ್ವೀಕೃತಿಯಾಗಿರದೇ ಇರುವುದರಿಂದ ಸದರಿಯವರ ಪರಿವೀಕ್ಷಣಾ ಅವಧಿಯನ್ನು ಘೋಷಿಸಿರುವುದಿಲ್ಲ ಹಾಗೂ ಸದರಿಯವರ ವಾರ್ಷಿಕ ವೇತನ ಭಡ್ತಿಯನ್ನು ತಡೆಹಿಡಿಯಲಾಗಿದೆ. ತಾಲೂಕು ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ, ಸುಳ್ಯ ಹಾಗೂ ತಹಶೀಲ್ದಾರ್, ಸುಳ್ಯ ಇವರು ದಿನಾಂಕ 08.05.2015ರಂದು ಮಹಜರು ನಡೆಸಿ ಶ್ರೀ ಚಂದ್ರಶೇಖರ್ ಇವರಿಗೆ ಜಾತಿ ಸಿಂಧುತ್ವ ಪ್ರಮಾಣ ಪತ್ರ ನೀಡಬಹುದು ಎಂದು ದೃಢೀಕರಿಸಿರುತ್ತಾರೆ<br>ಸಹಾಯಕ ನಿರ್ದೇಶಕರು (ಗ್ರೇಡ್-2) ರವರ ಕಚೇರಿ, ಸಮಾಜ ಕಲ್ಯಾಣ ಇಲಾಖೆ, ಸುಳ್ಯ ತಾಲೂಕು ಇವರ ಪತ್ರ ದಿನಾಂಕ 15.09.2018ರಲ್ಲಿ ತಹಶೀಲ್ದಾರರು ತಾಲೂಕು ಕಚೇರಿ, ಸುಳ್ಯ ಇವರಿಗೆ ಶ್ರೀ ಚಂದ್ರಶೇಖರ್ ಇವರ ಜಾತಿಯ ಬಗ್ಗೆ ದಿನಾಂಕ 15.12.2017ರಂದು ದಾಖಲೆಗಳ ಪರಿಶೀಲನೆ ನಡೆಸಲಾಗಿ ಸದರಿಯವರು ಪರಿಶಿಷ್ಟ ಜಾತಿಗೆ ಸೇರಿದ ಪಲ್ಲನ್ ಉಪಜಾತಿಗೆ ಸೇರಿರುವುದು ದೃಢಪಟ್ಟಿದೆ. ಅದರಂತೆ ಅರ್ಜಿದಾರರಿಗೆ ಜಾತಿ ಸಿಂಧುತ್ವ ನೀಡಬಹುದೆಂದು ಶಿಫಾರಸ್ಸು ಮಾಡಿರುತ್ತಾರೆ.<br>ತಹಶೀಲ್ದಾರರು, ಸುಳ್ಯ ತಾಲೂಕು ಇವರು ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆ ಇವರಿಗೆ ಕಳುಹಿಸಿದ ಪತ್ರ ದಿನಾಂಕ 23.09.2018ರಲ್ಲಿ ಕಂದಾಯ ನಿರೀಕ್ಷಕರು, ಸುಳ್ಯ ಹೋಬಳಿಯವರ ಹಾಗೂ ಸಹಾಯಕ ನಿರ್ದೇಶಕರು (ಗ್ರೇಡ್-2) ಸಮಾಜ ಕಲ್ಯಾಣ ಇಲಾಖೆ ಇವರು ನೀಡಿರುವ ವರದಿಯನ್ನು ಅನುಸರಿಸಿ ಶ್ರೀ ಚಂದ್ರಶೇಖರ್ ಇವರು ಪರಿಶಿಷ್ಟ ಜಾತಿಗೆ ಸೇರಿದ ಪಲ್ಲನ್ ಉಪಜಾತಿಗೆ ಸೇರಿದ್ದು, ಸದರಿಯವರಿಗೆ ನೀಡಿದ ಜಾತಿ ದೃಢ ಪತ್ರವು ನೈಜತೆಯಿಂದ ಕೂಡಿದೆ. ಇವರ ಜಾತಿ ಪ್ರಮಾಣದ ಪಟ್ಟಿಯನ್ನು ಪರಿಶೀಲಿಸಲಾಗಿದೆ. ಈ ಪಟ್ಟಿಯಲ್ಲಿ ಸದರಿಯವರ ಜಾತಿಯು ಪಲ್ಲನ್ ಉಪಜಾತಿಗೆ ಸೇರಿರುವುದಾಗಿ ತಿಳಿದು ಬರುತ್ತದೆ ಎಂದು ದೃಢೀಕರಿಸಿರುತ್ತಾರೆ.<br>ಆದುದರಿಂದ ಕುಲಸಚಿವರ ಕಚೇರಿ ಪತ್ರ ದಿನಾಂಕ 04.12.2018ರಲ್ಲಿ ಶ್ರೀ ಚಂದ್ರಶೇಖರ್ ಇವರ ಜಾತಿ ಸಿಂಧುತ್ವ ಪ್ರಕರಣವನ್ನು ಜರೂರು ಎಂದು ಪರಿಗಣಿಸಿ, ಇವರ ಸಿಂಧುತ್ವ ಪ್ರಮಾಣ ಪತ್ರವನ್ನು ಶೀಘ್ರವಾಗಿ ನೀಡಬೇಕೆಂದು ಉಪನಿರ್ದೇಶಕರು, ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆ ಇವರನ್ನು ಕೋರಲಾಗಿದೆ.<br>ಪ್ರಸ್ತುತ ಆಗಿರುವ ಲೆಕ್ಕ ಪರಿಶೋಧನಾ ಆಕ್ಷೇಪಣೆಯನ್ನು ಶ್ರೀ ಚಂದ್ರಶೇಖರ ಇವರಿಗೆ ತಿಳಿಸಲಾಗಿದ್ದು, ಶೀಘ್ರದಲ್ಲಿಯೇ ಸಿಂಧುತ್ವ ಪ್ರಮಾಣ ಪತ್ರವನ್ನು ತಂದು ಒಪ್ಪಿಸುವುದಾಗಿ ತಿಳಿಸಿರುತ್ತಾರೆ. |

| | | |
|---|---|---|
| 48 | <u>ಶ್ರೇಣಿ ವಹಿ (Scale register) ಯನ್ನು ನಿಯಮಾನುಸಾರ ನಿರ್ವಹಿಸದಿರುವ ಕುರಿತು:</u><br>ಮಂಗಳೂರು ವಿಶ್ವವಿದ್ಯಾನಿಲಯದ 2016-17ನೇ ಸಾಲಿನ ಲೆಕ್ಕಪರಿಶೋಧನೆ ಕೈಗೊಂಡ ಅವಧಿಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಹಾಗೂ ವಿಶ್ವವಿದ್ಯಾನಿಲಯದ ವಿವಿಧ ಅಧ್ಯಯನ ವಿಭಾಗಗಳು, ಪ್ರಾದೇಶಿಕ ಕೇಂದ್ರಗಳು, ಎಲ್ಲಾ ಕಾಲೇಜುಗಳು, ಕಛೇರಿಗಳಿಗೆ ಸಂಬಂಧಿಸಿದಂತೆ, ವಿವಿಧ ವೃಂದಗಳು/ ವಿವಿಧ ಶ್ರೇಣಿಗಳಿಗೆ ಸರ್ಕಾರದಿಂದ ಮಂಜೂರಾಗಿರುವ ಹುದ್ದೆಗಳು, ಮಂಜೂರಾದ ಹುದ್ದೆಗಳಿಗೆ ಎದುರಾಗಿ ಕಾರ್ಯ ನಿರ್ವಹಿಸುತ್ತಿರುವ ವಿವರಗಳು, ಖಾಲಿ ಇರುವ ಹುದ್ದೆಗಳ ವಿವರಗಳು ಹಾಗೂ ವಿವಿಧ ವೃಂದದ ವೇತನ ಶ್ರೇಣಿಯ ವಿವರಕ್ಕೆ ಸಂಬಂಧಿಸಿದಂತೆ ನಿರ್ವಹಿಸುವ ಶ್ರೇಣಿ ವಹಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ: 26/2018-19 ದಿ:21.11.2018 ರಲ್ಲಿ ಕೋರಲಾಗಿ, ಹಾಜರುಪಡಿಸಿರುವ ಶ್ರೇಣಿ ವಹಿಯನ್ನು ಕರ್ನಾಟಕ ಖಜಾನೆ ಸಂಹಿತೆ (KTC)-1963 ರ ಅನುಚ್ಛೇದ-93(4) ರಲ್ಲಿ ಸೂಚಿಸಿದಂತೆ ನಮೂನೆ-19 ಹಾಗೂ ನಮೂನೆ-20 ರನ್ವಯ ನಿರ್ವಹಿಸದಿರುವುದು ಕಂಡು ಬಂದಿದ್ದು, ವಿಶ್ವವಿದ್ಯಾನಿಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹಾಗೂ ಖಾಲಿ ಉಳಿದಿರುವ ವಿವಿಧ ವೃಂದಗಳ ಒಟ್ಟು ಹುದ್ದೆಗಳ ಬಗ್ಗೆ ನಿಖರ ಮಾಹಿತಿಯನ್ನು ತಿಳಿದುಕೊಳ್ಳಲು ಸಾಧ್ಯವಾಗಿರುವುದಿಲ್ಲ. ಆದುದರಿಂದ ನಿಯಮಾನುಸಾರ ಶ್ರೇಣಿವಹಿಯನ್ನು ನಿರ್ವಹಿಸಿ ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಸೂಚಿಸಿದೆ. | ಶ್ರೇಣಿ ವಹಿಯನ್ನು ಕರ್ನಾಟಕ ಖಜಾನೆ ಸಂಹಿತೆ 1963ರ ಅನುಚ್ಛೇದ 93(4)ರಲ್ಲಿ ಸೂಚಿಸಿದಂತೆ ನಮೂನೆ 19 ಮತ್ತು 20ರಲ್ಲಿ ನಿರ್ವಹಿಸಲು ಕ್ರಮಕೈಗೊಳ್ಳಲಾಗುವುದು. ಆದುದರಿಂದ ಆಕ್ಷೇಪಣೆಯನ್ನು ಕೈಬಿಡುವಂತೆ ಕೋರಲಾಗಿದೆ. |
| 49 | <u>ನೌಕರರು/ ಅಧಿಕಾರಿಗಳ ತಂದೆ ಮತ್ತು ತಾಯಿಯವರ ವೈದ್ಯಕೀಯ ಬಿಲ್ಲುಗಳನ್ನು ಪಾಸು ಮಾಡುವಾಗ ನಿಯಮಗಳನ್ನು ಉಲ್ಲಂಘಿಸಿರುವುದು :</u><br>2016-17ನೇ ಸಾಲಿನ ಏಪ್ರಿಲ್-2016 ಮತ್ತು ಏಪ್ರಿಲ್-16 ರ ವೋಚರ್‌ಗಳ ಪರಿಶೀಲನೆಯಲ್ಲಿ ಕೆಲವು ನೌಕರರುಗಳ ತಂದೆ ಹಾಗೂ ತಾಯಿಯವರ ವೈದ್ಯಕೀಯ ವೆಚ್ಚದ ಮರುಭರಿಕೆ ಬಿಲ್ಲುಗಳನ್ನು ಪಾಸು ಮಾಡುವ ಸಂದರ್ಭದಲ್ಲಿ ಈ ಕೆಳಗೆ ವಿವರಿಸಲಾಗಿರುವ ವೈದ್ಯಕೀಯ ಬಿಲ್ಲುಗಳನ್ನು ವೈದ್ಯಕೀಯ ನಿಯಮಗಳ 1963 ರ ನಿಯಮಗಳನ್ನು ಉಲ್ಲಂಘಿಸಿ ಪಾಸು ಮಾಡಿರುವುದು ಕಂಡು ಬಂದಿರುತ್ತದೆ.<br>1) ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ/26/ಎಸ್.ಎಂ.ಆರ್/2011 ದಿನಾಂಕ:27.03.2012 ರ ಪ್ರಕಾರ ಸರ್ಕಾರಿ ನೌಕರರ ತಂದೆ ತಾಯಿಯವರ ತಿಂಗಳ ಒಟ್ಟು ಆದಾಯ ರೂ.6,000/- ಕ್ಕಿಂತ ಕಡಿಮೆ ಇರುತ್ತದೆಂದು ತಹಸೀಲ್ದಾರ್ ಕಛೇರಿಯಿಂದ ನೀಡಲಾಗಿರುವ ವರಮಾನ ಪ್ರಮಾಣ ಪತ್ರವನ್ನು ಪಡೆಯದೆ ಬಿಲ್ಲು ಪಾಸು ಮಾಡಲಾಗಿದೆ.<br>2) ಸರ್ಕಾರದ ಅಧಿಸೂಚನೆ ಸಂಖ್ಯೆ: GAD/07/OMR/63 ದಿ:25.03.1963 ರಲ್ಲಿನ ನಿಯಮದಂತೆ ತಂದೆ ತಾಯಿಯವರು ನೌಕರರ ಜೊತೆಯಲ್ಲಿ ವಾಸವಾಗಿರುವುದಕ್ಕೆ ದೃಢೀಕರಣ ಪತ್ರ ಪಡೆಯದೆ ಬಿಲ್ಲು ಪಾಸು ಮಾಡಲಾಗಿದೆ.<br>3) ತಂದೆ/ ತಾಯಿಯವರು ನೌಕರರ ಆದಾಯದ ಮೇಲೆಯೇ ಅವಲಂಬಿತರಾಗಿರುತ್ತಾರೆಂದು ಬೇರೆ ಯಾವುದೇ ಪ್ರಕಾರದ ಆದಾಯ ಮೂಲಗಳು ತಂದೆ/ತಾಯಿಯವರಿಗೆ ಇರುವುದಿಲ್ಲ ಎಂಬ ಬಗ್ಗೆ ದೃಢೀಕರಣ ಪಡೆಯದೇ ಬಿಲ್ಲು ಪಾಸು ಮಾಡಲಾಗಿದೆ.<br>4) ತಂದೆ/ ತಾಯಿಯರು ನೌಕರರ ಜೊತೆಯಲ್ಲಿಯೇ ವಾಸವಾಗಿರುತ್ತಾರೆ ಎಂಬುವುದಕ್ಕೆ ವೋಟರ್/ ಆಧಾರ್ ಕಾರ್ಡ್, ಐ.ಡಿ ಕಾರ್ಡ್ ಅಥವಾ ರೇಷನ್ ಕಾರ್ಡ್‌ಗಳ ಜೆರಾಕ್ಸ್ ಪ್ರತಿಗಳನ್ನು ಪಡೆಯದೇ ಬಿಲ್ಲು ಪಾಸು ಮಾಡಲಾಗಿದೆ.<br>ಮೇಲೆ ವಿವರಿಸಲಾಗಿರುವ ಯಾವುದೇ ದಾಖಲಾತಿಗಳನ್ನು ಪಡೆಯದೆ ಈ ಕೆಳಗೆ ಪಾವತಿಸಲಾಗಿರುವ ವೈದ್ಯಕೀಯ ಬಿಲ್ಲುಗಳ ವೆಚ್ಚದ ಒಟ್ಟು ಮೊತ್ತ ರೂ.72,083/-ಗಳನ್ನು ಸಂಬಂಧಪಟ್ಟವರಿಂದ ವಸೂಲಿಸಿ ವರದಿ ಸಲ್ಲಿಸಲು ಸೂಚಿಸಲಾಗಿದೆ. ಹಾಗೂ ವಿಷಯ ನಿರ್ವಹಕರುಗಳು ಇನ್ನು ಮುಂದೆ ನಿಯಮಗಳನ್ನು ಪಾಲಿಸಿ ಬಿಲ್ಲುಗಳನ್ನು ಪಾಸು ಮಾಡಲು ನಿಯಮಾನುಸಾರ ಗಮನ ನೀಡಬೇಕೆಂದು ಸೂಚಿಸಲಾಗಿದೆ. | ಸದ್ರಿ ಬಿಲ್ಲುಗಳನ್ನು ಪಾವತಿಸುವಾಗ ನೌಕರರ ತಂದೆ ತಾಯಿಯವರು ನೌಕರರ ಅವಲಂಬಿತರು ಎಂದು ಪರಿಶೀಲಿಸಿ ಪಾವತಿಸಲಾಗಿದೆ. ಮುಂದಿನ ದಿನಗಳಲ್ಲಿ ಆಕ್ಷೇಪಣೆಯಲ್ಲಿ ಸೂಚಿಸಿದಂತೆ ಕ್ರಮ ಕೈಗೊಳ್ಳಲಾಗುವುದು. ಆಕ್ಷೇಪಣೆಯನ್ನು ಕೈಬಿಡಲು ಕೋರಲಾಗಿದೆ. |

| ಕ್ರ. ಸಂ | ನೌಕರರುಗಳ ಹೆಸರು | ಪದನಾಮ | ವೋಚರ್ ಸಂಖ್ಯೆ | ಧನಾದೇಶ ಸಂಖ್ಯೆ/ ದಿನಾಂಕ | ಬಿಲ್ಲುಗಳ ಮೊತ್ತ |
|---|---|---|---|---|---|
| 1 | ಶ್ರೀಮತಿ ಭಾರತಿವಿಲಾಸ್ | ಸಹ ಪ್ರಾಧ್ಯಾಪಕರು | 1012/ 4.3.16 | 998417/ 10.5.16 | 33,595 |
| 2 | ದಾಮೋದರ್ ಗೋಪಾಲ್ | ಡಿ-ಗ್ರೂಪ್ | 1108/11.5.16 | 494291/ 17.05.2016 | 31,634 |
| 3 | ವಿಶ್ವನಾಥನಾಯ್ಕ | ಡಿ-ಗ್ರೂಪ್ | 2611/26.7.16 | 232658/ 26.07.2016 | 1.155 |
| | | | 2611/26.7.16 | 232658/ 26.07.2016 | 1,155 |
| | | | 2611/26.7.16 | 232658/ 26.07.2016 | 1,155 |
| | | | 2611/26.7.16 | 232658/ 26.07.2016 | 1,155 |
| | | | 3842/28.9.18 | 235243/ 28.09.2018 | 2,234 |
| ಒಟ್ಟು ರೂ. | | | | | 72,083 |

50

<u>ವೈದ್ಯಕೀಯ ಮುಂಗಡ ಹುಂಡಿಯ ಧನಾದೇಶವನ್ನು ರೋಗಿಯ ಹೆಸರಿಗೆ ನೀಡಿರುವುದು:</u>

ಮಂಗಳೂರು ವಿಶ್ವವಿದ್ಯಾನಿಲಯದ 2016-17ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಸಾಮಾನ್ಯ ನಿಧಿಯಲ್ಲಿ ಡಿಸೆಂಬರ್-2016ರ ಮಾಹೆಯಲ್ಲಿ ವೆಚ್ಚ ಭರಿಸಿ ಹಾಜರುಪಡಿಸಿದ ವೋಚರ್ ಸಂಖ್ಯೆ: 5341 ಅನ್ನು ಪರಿಶೀಲಿಸಲಾಗಿ ವೈದ್ಯಕೀಯ ವೆಚ್ಚ ಭರಿಸಲು ಶ್ರೀ ಪರಮೇಶ್ವರ, ವಿಶೇಷಾಧಿಕಾರಿಗಳು ಇವರ ಹೆಸರಿಗೆ ಧನಾದೇಶ ಸಂಖ್ಯೆ:202466 ಮುಂಗಡ ಹುಂಡಿಯ ಮೂಲಕ ರೂ.2,25,000/-ಗಳನ್ನು ಪಾವತಿಸಿರುವುದನ್ನು ಗಮನಿಸಲಾಗಿದೆ.

Karnataka Government Servant's (Medical Attendance) Rules-1963 ರನ್ವಯ ವೈದ್ಯಕೀಯ ವೆಚ್ಚ ಭರಿಸಲು ನೀಡುವ ಮುಂಗಡ ಠೇವಣಿ ಹಣದ ಧನಾದೇಶವನ್ನು ಸಂಬಂಧಪಟ್ಟ ಆಸ್ಪತ್ರೆಯ ಹೆಸರಿನಲ್ಲೇ ನೀಡಬೇಕಾಗಿರುತ್ತದೆ ಹಾಗೂ ವೆಚ್ಚಕ್ಕಾಗಿ ಉಳಿದ ಹಣವನ್ನು ಆಸ್ಪತ್ರೆಯಿಂದಲೇ ನೇರವಾಗಿ ಹಣ ಮಂಜೂರು ಮಾಡುವ ಇಲಾಖೆಗೆ ಮರುಜಮೆ ಮಾಡಬೇಕಾಗಿರುತ್ತದೆ. ಆದರೆ ಆ ಸಂದರ್ಭದಲ್ಲಿ ಮುಂಗಡ ಹಣದ ಧನಾದೇಶವನ್ನು ನೇರವಾಗಿ ರೋಗಿಯ ಹೆಸರಿಗೆ ನೀಡಿರುವುದರಿಂದ ಕರ್ನಾಟಕ ವೈದ್ಯಕೀಯ ಹಾಜರಾತಿ ನಿಯಮಗಳು 1963 ರ ಉಲ್ಲಂಘನೆಯಾಗಿರುತ್ತದೆ. ಆದ್ದರಿಂದ ವೈದ್ಯಕೀಯ ವೆಚ್ಚ ಭರಿಸಲು ನೀಡಲಾಗಿರುವ ಮುಂಗಡ ಹುಂಡಿಯ ಒಟ್ಟು ಮೊತ್ತ ರೂ.2,25,000/-ಗಳನ್ನು ಆಕ್ಷೇಪಣೆಗೆ ಸೂಚಿಸಲಾಗಿದೆ. (ವಿಚಾರಣಾ ಪತ್ರ ಸಂಖ್ಯೆ: 27/2018-19 ದಿ:21.11.2018 ರಂದು ನೀಡಲಾಗಿತ್ತು.)

ಶ್ರೀ ಪರಮೇಶ್ವರ, ವಿಶೇಷಾಧಿಕಾರಿಗಳು ಇವರ ತುರ್ತು ಚಿಕಿತ್ಸೆಗಾಗಿ ಅನಿವಾರ್ಯ ಕಾರಣದಿಂದಾಗಿ ಮಾಡಿದ ಮುಂಗಡವನ್ನು ಹೊಂದಾಣಿಕೆ ಮಾಡಲಾಗಿದೆ. ಮುಂದೆ ಇಂತಹ ಪ್ರಕರಣಗಳು ನಡೆಯದಂತೆ ನಿಗಾ ವಹಿಸಲಾಗುವುದು. ಆಕ್ಷೇಪಣೆಯನ್ನು ಕೈಬಿಡಲು ಕೋರಲಾಗಿದೆ.

51

<u>ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ವಿದ್ಯಾರ್ಥಿ ವೇತನ ಮಂಜೂರಾತಿಯ ವಿವರಗಳು :</u>

2016–17ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಪರಿಶಿಷ್ಟ ಜಾತಿ/ಪಂಗಡ ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನಕ್ಕೆ ಸಂಬಂಧಪಟ್ಟ ಕಡತಗಳನ್ನು ಪರಿಶೀಲಿಸಲಾಗಿ 2015–16 ಮತ್ತು 2016–17ನೇ ಸಾಲಿನ ಬೇಡಿಕೆ, ಮಂಜೂರಾತಿ ಮತ್ತು ಬಾಕಿಯ ವಿವರಗಳು ಈ ಕೆಳಕಂಡಂತಿವೆ.

| ವರ್ಷ | ವರ್ಗ | ಬೇಡಿಕೆ | ಮಂಜೂರಾದದ್ದು | ಬಾಕಿ ಉಳಿದಿರುವುದು |
|---|---|---|---|---|
| 2015-16 | ಎಸ್.ಸಿ | 37,08,265 | 32,94,940 | 4,13,325 |
| | ಎಸ್.ಟಿ | 23,33,333 | 20,75,000 | 2,58,333 |
| 2016-17 | ಎಸ್.ಸಿ | 47,64,888 | 45,66,300 | 1,98,588 |
| | ಎಸ್.ಟಿ | 28,93,087 | 26,19,860 | 2,73,227 |
| ಒಟ್ಟು | | 1,36,99,573 | 1,25,56,100 | 11,43,473 |

ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ವೇತನದ ಬೇಡಿಕೆ ತ:ಖ್ತೆಯಲ್ಲಿ ಹಾಸ್ಟೆಲ್ ನಿರ್ವಹಣಾ ವೆಚ್ಚ ಅಲ್ಲದೆ Tuition Fee/ Exam Fee/ Lab Fee/ Development Fee/ Library Fee/ Reading Room/ Special Fee/ Internet & magazine Fee/ Medical Fee/other fee ಶುಲ್ಕಗಳನ್ನು ಮರು ಭರಿಸಲು ಬೇಡಿಕೆ ಸಲ್ಲಿಸಲಾಗುತ್ತದೆ. ಸಮಾಜ ಕಲ್ಯಾಣ ಇಲಾಖೆಯಿಂದ ಹಾಸ್ಟೆಲ್ ನಿರ್ವಹಣಾ ವೆಚ್ಚದೊಂದಿಗೆ ಬೇಡಿಕೆ ಸಲ್ಲಿಸಿದ ಶುಲ್ಕಗಳಲ್ಲಿ ಕೇವಲ Tuition Fee/ Exam Fee/ Lab Fee/ other fee ಮಾತ್ರ ವಿದ್ಯಾರ್ಥಿ ವೇತನದ ಮೊತ್ತದಲ್ಲಿ ಮರುಭರಣೆಯಾಗುವುದರಿಂದ ಬೇಡಿಕೆ ಮತ್ತು ಮಂಜೂರಾದ ಮೊತ್ತದಲ್ಲಿ 11,43,473.00 ವ್ಯತ್ಯಾಸ (ಕೊರತೆ) ವಾಗಿರುತ್ತದೆ.

2016-17ನೇ ಸಾಲಿನಲ್ಲಿ ಒಟ್ಟು ರೂ.11,43,473/-ಗಳು ಸರ್ಕಾರದಿಂದ ಬಾಕಿ ಮೊತ್ತ ಮಂಜೂರಾಗಬೇಕಾಗಿದ್ದು, ಕೂಡಲೇ ಸರ್ಕಾರದಿಂದ ಮರುಭರಿಕೆ ಮಾಡಿಕೊಳ್ಳಲು ಸೂಚಿಸಿದೆ. ಆದರೆ ಸರ್ಕಾರದಿಂದ ಮರುಭರಿಕೆಯಾಗದಿದ್ದಲ್ಲಿ ಸದರಿ ವಿದ್ಯಾರ್ಥಿಗಳಿಂದ ವಸೂಲಿಸಿ ವಿಶ್ವವಿದ್ಯಾನಿಲಯದ ಖಾತೆಗೆ ಜಮೆ ಮಾಡಿ, ಜಮೆ ಮಾಡಲಾದ ವಿವರಗಳನ್ನು ಲೆಕ್ಕತಪಾಸಣಾ ಕಛೇರಿಗೆ ಹಾಜರುಪಡಿಸುವಂತೆ ಸೂಚಿಸಿದೆ. ಈ ಕುರಿತು ವಿಚಾರಣಾ ಪತ್ರ ಸಂಖ್ಯೆ:135/2018-19 ದಿನಾಂಕ:29.01.2019 ರಲ್ಲಿ ಜಾರಿ ಮಾಡಲಾಗಿ ಶೀಘ್ರವಾಗಿ ಸರ್ಕಾರದೊಂದಿಗೆ ಪತ್ರ ವ್ಯವಹಾರ ಮಾಡಿ ಬಾಕಿ ವಿದ್ಯಾರ್ಥಿ ವೇತನವನ್ನು ಮರುಭರಿಕೆ ಮಾಡಿಕೊಳ್ಳುವುದಾಗಿ ಉತ್ತರ ಒದಗಿಸಲಾಗಿದೆ.

ಮುಂದುವರಿಕೆಯಾಗಿ, ವಿವಿ ಅಧೀನದಲ್ಲಿರುವ ಹಾಸ್ಟೆಲ್‌ಗಳಲ್ಲಿರುವ ವಿದ್ಯಾರ್ಥಿಗಳ ಊಟೋಪಚಾರ ಖರ್ಚು ವೆಚ್ಚಗಳನ್ನು ವಿವಿ ವತಿಯಿಂದ ಪೂರ್ಣವಾಗಿ ಭರಿಸುತ್ತಿರುವುದರಿಂದ ಸಮಾಜಕಲ್ಯಾಣ ಇಲಾಖೆಯಿಂದ ಮಂಜೂರಾಗುವ ವಿದ್ಯಾರ್ಥಿ ವೇತನದ ಮೊತ್ತದಲ್ಲಿ ಸೇರಿರುವ ಹಾಸ್ಟೆಲ್ ನಿರ್ವಹಣಾ ಮೊತ್ತವನ್ನು ವಿವಿಯ ಸಾಮಾನ್ಯ ಖಾತೆಗೆ ಜಮೆ ಮಾಡಿಕೊಳ್ಳಲಾಗುತ್ತದೆ. ಹೀಗೆ ಮಂಜೂರಾದ ವೆಚ್ಚಕ್ಕಿಂತ ಹೆಚ್ಚುವರಿ ಆಗಿರುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ 1434 ಪರಿಶಿಷ್ಟ ಜಾತಿ/ಪಂಗಡದ ವಿದ್ಯಾರ್ಥಿಗಳ ಕ್ಷೇಮಾಭ್ಯುಧಯ ನಿಧಿಯಿಂದ ಭರಿಸಲು ಪರಿನಿಯಮದಲ್ಲಿರುವ ಅವಕಾಶದಂತೆ ಭರಿಸಲಾಗುತ್ತಿದೆ. ಆದುದರಿಂದ ಮೇಲಿನ ಅಕ್ಷೇಪಣೆಯನ್ನು ಕೈ ಬಿಡುವಂತೆ ಕೋರಲಾಗಿದೆ.

52 <u>ನಿಯಮಾನುಸಾರ ನಿಗದಿಪಡಿಸಲಾಗಿರುವ ಗ್ರಂಥಾಲಯದ ಪುಸ್ತಕಗಳ ಸಂಖ್ಯೆಗಳಿಗಿಂತ ಹೆಚ್ಚುವರಿ ಪುಸ್ತಕಗಳನ್ನು ಪಡೆದಿರುವುದು</u>

2016-17ನೇ ಸಾಲಿನ ಮಂಗಳೂರು ವಿಶ್ವವಿದ್ಯಾನಿಲಯದ ಕೇಂದ್ರ ಗ್ರಂಥಾಲಯದ ವತಿಯಿಂದ ಬೋಧಕೇತರ ನೌಕರರುಗಳಿಗೆ ನಿಯಮಾನುಸಾರ ಎರಡು ಪುಸ್ತಕಗಳನ್ನು ಮಾತ್ರ ನೀಡಬೇಕಾಗಿರುತ್ತದೆ. 15 ದಿನಗಳವರೆಗೆ ಆ ಪುಸ್ತಕಗಳನ್ನು ಇಟ್ಟುಕೊಳ್ಳಲು ಅವಕಾಶವಿರುತ್ತದೆ. 15 ದಿನಗಳ ನಂತರ ಹಿಂದಿರುಗಿಸಿದ್ದಲ್ಲಿ ದಂಡ ಶುಲ್ಕ ವಿಧಿಸಲಾಗುತ್ತದೆ.

ಆದರೆ ಶ್ರೀಯುತ ಟಿ.ವೈ.ಮಲ್ಲಯ್ಯ ಇವರಿಗೆ 201 ಪುಸ್ತಕಗಳನ್ನು ವಿತರಿಸಲಾಗಿದೆ. ಇವುಗಳಲ್ಲಿ ಸದರಿಯವರು 65 ಪುಸ್ತಕಗಳನ್ನು ಮಾತ್ರ ಗ್ರಂಥಾಲಯಕ್ಕೆ ಹಿಂದಿರುಗಿಸಲಾಗಿದ್ದು, ಉಳಿಕೆ 136 ಪುಸ್ತಕಗಳನ್ನು ಈವರೆವಿಗೂ ಹಿಂದಿರುಗಿಸಿರುವುದಿಲ್ಲ. ಈ ಬಗ್ಗೆ ಲೆಕ್ಕಪರಿಶೋಧನೆ ವಿಚಾರಣಾ ಸಂಖ್ಯೆ:155/18-19/ ದಿ:30.01.2019 ರಲ್ಲಿ ನೀಡಲಾಗಿದ್ದು ಯಾವುದೇ ಉತ್ತರವನ್ನು ಸಲ್ಲಿಸಿರುವುದಿಲ್ಲ. ಮೂಲ ದಾಸ್ತಾನು ವಹಿ ಪರಿಶೀಲಿಸಲಾಗಿ ಹಿಂದಿನ ಸಾಲುಗಳಲ್ಲಿ ಪುಸ್ತಕಗಳ ಖರೀದಿ ಮೊತ್ತ ದಾಖಲಿಸದಿರುವುದರಿಂದ ಅಷ್ಟು ಸಂಖ್ಯೆಯ ಪುಸ್ತಕಗಳ ಇತ್ತೀಚಿನ ಮುದ್ರಣದ ದರದಂತೆ ಅಥವಾ 7 ಪಟ್ಟು ಲೆಕ್ಕಚಾರ ಹಾಕಿ 136 ಪುಸ್ತಕಗಳ ಬೆಲೆಯನ್ನು ಒಟ್ಟುಗೂಡಿಸಿ ಸಂಬಂಧಪಟ್ಟ ಗ್ರಂಥಪಾಲಕಾರಾದ ಶ್ರೀಯುತ ಮಲ್ಲಯ್ಯ ರವರಿಂದ ವಸೂಲಿ ಮಾಡಿ ವರದಿಯನ್ನು ಲೆಕ್ಕತಪಾಸಣೆಗೆ ಹಾಜರುಪಡಿಸಲು ಸೂಚಿಸಿದೆ. ದಿನಾಂಕ:10.05.2019 ರ ಪುನರ್ ಪರಿಶೀಲನಾ ಅವಧಿಯಲ್ಲಿ ಟಿ.ವೈ.ಮಲ್ಲಯ್ಯ ಇವರಿಗೆ ದಿನಾಂಕ:21.03.2019 ರಲ್ಲಿ ನೋ ಡ್ಯೂ ಸರ್ಟಿಫಿಕೇಟ್ ವಿತರಿಸಿರುವುದನ್ನು ಹಾಜರುಪಡಿಸಲಾಗಿರುವುದನ್ನು ಸಹ ಪರಿಶೀಲಿಸಲಾಗಿದ್ದು. ನಿರಾಪೇಕ್ಷಣಾ ಪತ್ರ ನೀಡಿದ ಅಧಿಕಾರಿಗೆ ಜವಾಬ್ದಾರಿ ನಿಗದಿಪಡಿಸಿ ನಷ್ಟವನ್ನು ವಸೂಲಿಸಲು ಸೂಚಿಸಿದೆ.

ಶ್ರೀ ಮಲ್ಲಯ್ಯನವರು ಪಡಕೊಂಡಿದ್ದ ಪುಸ್ತಕಗಳಲ್ಲಿ 56 ಪುಸ್ತಕಗಳನ್ನು ಬಿಟ್ಟು ಉಳಿದ ಎಲ್ಲಾ ಪುಸ್ತಕಗಳನ್ನು ಹಿಂದಿರುಗಿಸಿರುತ್ತಾರೆ. 56 ಪುಸ್ತಕಗಳ ದ್ವಿಗುಣ ಮೌಲ್ಯ ರೂ. 25517.00 ಮತ್ತು ದಂಡ ರೂ. 43.00 ಸೇರಿಸಿ ಒಟ್ಟು ರೂ. 25560.00ನ್ನು ರಶೀದಿ ಸಂಖ್ಯೆ 82219/3.19ರಲ್ಲಿ ಪಡೆದುಕೊಂಡು ಚಲನ್ ಸಂಖ್ಯೆ 10580 ದಿನಾಂಕ 22.03.2019ರಲ್ಲಿ ವಿ.ವಿ. ಖಾತೆಗೆ ಜಮೆ ಮಾಡಲಾಗಿದೆ. ಆದುದರಿಂದ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ.

53 <u>ಎ.ಸಿ ಬಿಲ್ಲುಗಳಿಗೆ ಎನ್.ಡಿ.ಸಿ ಬಿಲ್ಲುಗಳನ್ನು ಸಲ್ಲಿಸದಿರುವುದು ಮತ್ತು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು:</u>

<u>(ಎ) ಎನ್.ಡಿ.ಸಿ ವೋಚರ್‌ಗಳನ್ನು ಈವರೆವಿಗೂ ಸಲ್ಲಿಸದಿರುವುದು :</u>

ಸಾದಿಲ್ವಾರು ವೆಚ್ಚ ಕೈಪಿಡಿ (ಎಂ.ಸಿ.ಇ) ನಿಯಮ 36 ಮತ್ತು 37 ರ ರೀತ್ಯಾ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಮೂಲಕ ಹಣ ತೆಗೆಯಲು ಅಧಿಕಾರ ಹೊಂದಿರುವ ಎಲ್ಲಾ ಕಛೇರಿ ಮುಖ್ಯಸ್ಥರು ತಮ್ಮ ಸವಿವರ ಸಾದಿಲ್ವಾರು ಬಿಲ್ಲನ್ನು ಯಾವ ತಿಂಗಳಿಗೆ ಆ ಬಿಲ್ಲು ಸಂಬಂಧಪಟ್ಟಿದೆಯೋ ಆ ನಂತರದ ತಿಂಗಳಿನ ಮೊದಲ ವಾರ ಮುಗಿಯುವುದಕ್ಕೆ ಮುಂಚೆ ಮೇಲು ರುಜು ಮಾಡುವ ತಮ್ಮ ಅಧಿಕಾರಿಗಳಿಗೆ ಕಳುಹಿಸಿಕೊಡತಕ್ಕದ್ದು.

| ಕ್ರ.ಸಂ | ಎ.ಸಿ ಬಿಲ್ ಪಡೆದಿರುವವರ ವಿವರ | ಪದನಾಮ | ವೋಚರ್ ಸಂಖ್ಯೆ | ಮೊತ್ತ (ರೂ.) | ಎನ್.ಡಿ.ಸಿ ಸಲ್ಲಿಸುವ ಅಂತಿಮ ದಿನಾಂಕ |
|---|---|---|---|---|---|
| 1 | ಶ್ರೀ ದಿನೇಶ್ ಭಟ್, | (ಪ್ರ.ದ.ಸ (ಎಫ್-10) | 22/16-17 | 42,500 | ಹಣ ಸ್ವೀಕರಿಸಿದ ದಿನಾಂಕದಿಂದ ಒಂದು ತಿಂಗಳ ಅವಧಿ, |
| | | | 23/16-17 | 12,500 | |
| | | | 24/16-17 | 30,000 | |
| | | | 40/16-17 | 5,00,000 | |
| | | | 45/16-17 | 1,25,000 | |
| 2 | ಶ್ರೀಮತಿ ಶ್ವೇತಾ | ಜಾಬ್ ಟೈಪಿಸ್ಟ್, (ಎಫ್-16) | 43/16-17 | 30,000 | |
| ಒಟ್ಟು | | | | 7,40,000 | |

ಎ)

| ಕ್ರ.ಸಂ | ವೋಚರ್ ಸಂಖ್ಯೆ | ಮೊತ್ತ (ರೂ.) | ಹೊಂದಾಣಿಕೆಯಾದ ದಿನಾಂಕ |
|---|---|---|---|
| 1 | 22/16-17 | 42,500.00 | ದಿ.23..01.2019 |
| 2 | 23/16-17 | 12,500.00 | ದಿ.02.02.2019 |
| 3 | 24/16-17 | 30,000.00 | ದಿ.15.04.2019 |
| 4 | 40/16-17 | 5,00,000.00. | ವಸೂಲಾತಿಗೆ ಕ್ರಮ ಕೈಗೊಳ್ಳಲಾಗುತ್ತಿದೆ. |
| 5 | 45/16-17 | 1,25,000.00 | 16.10.2017 |
| 6 | 43/16-17 | 30,000.000 | 3.09.2019 |
| | ಒಟ್ಟು | **740000.00** | |

ತಡ ಮಾಡಿ ಸಲ್ಲಿಸಿದ ಬಗ್ಗೆ ಜ್ಞಾಪನ ಪತ್ರ ನೀಡಲಾಗಿದೆ.

2 ವರ್ಷಗಳು ಕಳೆದರೂ ಸಹ ಎನ್.ಡಿ.ಸಿ ವೋಚರ್‌ಗಳನ್ನು ಸಲ್ಲಿಸಿರುವುದಿಲ್ಲ. ಆದುದರಿಂದ ಕರ್ನಾಟಕ ಆರ್ಥಿಕ ಸಂಹಿತೆ-1958 ಸಂಪುಟ-1 ರ ಅನುಚ್ಛೇದ 63 ರ ರೀತ್ಯಾ ಕ್ರಮ ಕೈಗೊಂಡು ಎನ್.ಡಿ.ಸಿ ಬಿಲ್ಲು ಪಡೆದುಕೊಂಡು ಹೊಂದಾಣಿಕೆ ಮಾಡಿದ ವಿವರಗಳನ್ನು ಹಾಜರುಪಡಿಸುವವರೆಗೆ ರೂ.7,40,000/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರಗಳನ್ನು ಅನುಬಂಧ-25 ರಲ್ಲಿ ವರದಿಗೆ ಲಗತ್ತಿಸಿದೆ.

| ಕ್ರ.ಸಂ | ಪೀಠಗಳ ವಿವರ | ಬ್ಯಾಂಕ್ ಖಾತೆ ಸಂಖ್ಯೆ/ ಬ್ಯಾಂಕ್ | ಎ.ಸಿ ಬಿಲ್ಲುಗಳ ಮೂಲಕ ನಗದಿ ಕರಿಸಿರುವ ಮೊತ್ತ | ಧನಾದೇಶ ಸಂಖ್ಯೆ/ ದಿನಾಂಕ |
|---|---|---|---|---|
| 1 | ಅಂಬಿಗರ ಚೌಡಯ್ಯ ಪೀಠ | ಎಸ್.ಬಿ.ಐ 30358813697 | 8,000 | 481768/ 21.07.2016 |
| 2 | ಅಂಬಿಗರ ಚೌಡಯ್ಯ ಪೀಠ | ಎಸ್.ಬಿ.ಐ 30358813697 | 5,000 | 481776/ 16.01.2017 |
| 3 | ಯಕ್ಷಗಾನ ಅಧ್ಯಯನ ಕೇಂದ್ರ | ಎಸ್.ಬಿ.ಐ 30654992305 | 50,000 | 081963/ 19.05.2016 |
| 4 | ಯಕ್ಷಗಾನ ಅಧ್ಯಯನ ಕೇಂದ್ರ | ಎಸ್.ಬಿ.ಐ 30654992305 | 25,000 | 081997/ 19.08.2016 |
| | ಒಟ್ಟು ರೂ. | | 88,000 | |

2016-17ನೇ ಸಾಲಿನಲ್ಲಿ ಪೀಠಗಳ ವೆಚ್ಚಗಳಿಗೆ ಸಂಬಂಧಪಟ್ಟಂತೆ ಹಾಜರುಪಡಿಸಲಾದ 17 ಪೀಠಗಳ ಪೂರಕ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಈ ಮೇಲೆ ತಿಳಿಸಲಾದ ಪೀಠಗಳಿಗೆ ಎನ್.ಡಿ.ಸಿ ವೋಚರ್ಸ್‌ಗಳನ್ನು ಹಾಜರು ಪಡಿಸಿರುವುದಿಲ್ಲ. ಇದಕ್ಕಾಗಿ ಲೆಕ್ಕತಪಾಸಣೆ ವಿಚಾರಣೆ ಪತ್ರ ಸಂಖ್ಯೆ:169/18-19 ದಿ:05.02.2019 ಕ್ಕೆ ವಿವರಣೆ ಒದಗಿಸದ ಕಾರಣ ಎ.ಸಿ ಬಿಲ್ಲುಗಳ ಒಟ್ಟು ಮೊತ್ತ ರೂ.8,28,000/-ಗಳನ್ನು ಶಾಲಿಯಾನ ಶೇ% 8 ರಂತೆ ಬಡ್ಡಿಯೊಂದಿಗೆ ಕೂಡಲೇ ವಸೂಲಾತಿ ಮಾಡಲು ಸೂಚಿಸಿದೆ.

(ಬಿ) ಎನ್.ಡಿ.ಸಿ ವೋಚರ್‌ಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು :

2016-17ನೇ ಸಾಲಿನಲ್ಲಿ ಪಾವತಿಸಲಾಗಿರುವ ಎ.ಸಿ ಬಿಲ್ಲುಗಳಿಗೆ ಎದುರಾಗಿ ಹೊಂದಾಣಿಕೆಯಾಗಿರುವ ಎನ್.ಡಿ.ಸಿ ವೋಚರ್‌ಗಳಲ್ಲಿ ಭಾಗಶಃ ಮಾತ್ರ ಲೆಕ್ಕಪರಿಶೋಧನೆಗೆ ಹಾಜರುಪಡಿಸಲಾಗಿದೆ. ಇದರಲ್ಲಿ ಶ್ರೀಮತಿ ಶಾಂಭವಿ, ಬೆರಳಚ್ಚುಗಾರರು (ಎಫ್-6) ರವರ ಕಾರ್ಯಭಾರದಲ್ಲಿರುವ ರೂ.16,35,874/-ಗಳು ಶ್ರೀ ತ್ರಿಶೂಲ್, ದ್ವಿ.ದ.ಸ (ಎಫ್-11) ರವರ ಕಾರ್ಯಭಾರದಲ್ಲಿರುವ ರೂ.34,56,350/-ಗಳು ಹಾಗೂ ಶ್ರೀಮತಿ ಶ್ರೀಲತಾ, ದ್ವಿ.ದ.ಸ (ಎಫ್-14) ರವರ ಕಾರ್ಯಭಾರದಲ್ಲಿರುವ ರೂ.14,04,507/-ಗಳಿಗೆ ಎನ್.ಡಿ.ಸಿ ಓಚರ್‌ಗಳನ್ನು ಹಾಜರುಪಡಿಸುವಂತೆ ಕೋರಿ ವಿಚಾರಣಾ ಪತ್ರ ಸಂಖ್ಯೆ:01/2018-19ದಿನಾಂಕ:13.11.2018, 14/2018-19 ದಿ:14.11.2018, 114/2018-19 ದಿ:10.01.2019 ಹಾಗೂ 197/2018-19 ದಿ:12.02.2019 ರಂದು ನೀಡಲಾಗಿತ್ತಾದರೂ ಸಕಾಲದಲ್ಲಿ ವೋಚರ್‌ಗಳನ್ನು ಹಾಜರುಪಡಿಸದೆ ಲೆಕ್ಕಪರಿಶೋಧನಾ ಕಾರ್ಯವು ಮುಕ್ತಾಯಗೊಳ್ಳುವ ಸಂದರ್ಭದಲ್ಲಿ ಹಾಜರುಪಡಿಸಿರುವುದನ್ನು ಪರಿಶೋಧಿಸಲು ಸಾಧ್ಯವಾಗಿರುವುದಿಲ್ಲ. ಆದುದರಿಂದ ಲೆಕ್ಕಪರಿಶೋಧನಾ ಸಂದರ್ಭದಲ್ಲಿ ಹಾಜರುಪಡಿಸದ ಕಾರಣ ಒಟ್ಟು ಮೊತ್ತ ರೂ.64,96,731/-ಗಳನ್ನು ಆಕ್ಷೇಪಣೆಗೆ ಸೂಚಿಸಿದೆ. ವಿವರಗಳನ್ನು ಅನುಬಂಧ-26ರಲ್ಲಿ ಒದಗಿಸಿದೆ. ದಿನಾಂಕ:10.05.2019 ರ ಪುನರ್ ಪರಿಶೀಲನಾ ವೇಳೆಯಲ್ಲಿ ಹಾಜರುಪಡಿಸಲು ಅವಕಾಶ ಕೋರಲಾಗಿ, ಅನುಪಾಲನಾ ವರದಿಯೊಂದಿಗೆ ಹೊಂದಾಣಿಕೆ ವಿವರಗಳನ್ನು ಸಲ್ಲಿಸಲು ಸೂಚಿಸಲಾಯಿತು.

**ಘೋಷ್ವಾರೆ**

ದಿನಾಂಕ:31.03.2017 ಕ್ಕೆ ಬಾಕಿ ಎನ್.ಡಿ.ಸಿ ಬಿಲ್ಲುಗಳ (ಘೋಷ್ವಾರೆ) ವಿವರ ತಃಖ್ತೆ:

2016-17ನೇ ಸಾಲಿನಲ್ಲಿ ಡ್ರಾ ಮಾಡಲಾದ ಎನ್.ಡಿ.ಸಿ ಬಿಲ್ಲುಗಳಲ್ಲಿ ರೂ.7,40,000/-ಗಳಿಗೆ ಬಾಕಿ ಉಳಿದಿವೆ.

| ಕ್ರ.ಸಂ | ವೋಚರ್ ಸಂಖ್ಯೆ | ಮೊತ್ತ (ರೂ.) | ಹೊಂದಾಣಿಕೆಯಾದ ದಿನಾಂಕ |
|---|---|---|---|
| 1 | 481768/ 21.07.2016 | 8000.00 | ದಿ. 3.11.16ರಂದು ಹೊಂದಾಣಿಕೆ ಮಾಡಲಾಗಿದೆ. |
| 2 | 481776/ 16.01.2017 | 5000.00 | ದಿ. 22.08.17ರಂದು ಹೊಂದಾಣಿಕೆ ಮಾಡಲಾಗಿದೆ. |
| 3 | 081963/ 19.05.2016 | 50000.00 | ದಿ. 14.02.19ರಂದು ಹೊಂದಾಣಿಕೆ ಮಾಡಲಾಗಿದೆ. |
| 4 | 081997/ 19.08.2016 | 25000.00 | ದಿ. 14.02.19ರಂದು ಹೊಂದಾಣಿಕೆ ಮಾಡಲಾಗಿದೆ. |
| | | **88000.00** | |

ವೋಚರ್‌ಗಳನ್ನು ಹಾಜರುಪಡಿಸಲಾಗಿದೆ.
ಆದಾಗ್ಯೂ ಅದರ ಪ್ರತಿಗಳನ್ನು ಲಗ್ತೀಕರಿಸಲಾಗಿದೆ.

ಬಿ)

| ಕ್ರ.ಸಂ | ವಿಷಯ ನಿರ್ವಾಹಕರು | ಮೊತ್ತ (ರೂ.) | ಹೊಂದಾಣಿಕೆಯಾದ ದಿನಾಂಕ |
|---|---|---|---|
| 1 | ಶ್ರೀಮತಿ ಶಾಂಭವಿ ಎಫ್ 6 | ರೂ. 1635874.00 | ದಿನಾಂಕ 23.01.19ರಂದು ಹೊಂದಾಣಿಕೆಯಾಗಿರುತ್ತದೆ. |
| 2 | ಶ್ರೀ ತ್ರಿಶೂಲ್ ಎಫ್ 11 | ರೂ. 3456350.00 | 2016-17 ಮತ್ತು 17-18ರಲ್ಲಿ |
| 3 | ಶ್ರೀಮತಿ ಶ್ರೀಲತಾ ಎಫ್14 | ರೂ. 1404507.00 | 2016-17 ಮತ್ತು 2017-18ರಲ್ಲಿ |
| | ಒಟ್ಟು | ರೂ. 6496731.00 | |

ಮೇಲ್ಕಂಡ ಎಲ್ಲಾ ಎನ್ ಡಿ.ಸಿ. ಬಿಲ್ಲುಗಳು ಹೊಂದಾಣಿಕೆಯಾಗಿರುತ್ತವೆ.
ಆಕ್ಷೇಪಣೆಯನ್ನು ಕೈಬಿಡಲು ಕೋರಲಾಗಿದೆ.

| | | |
|---|---|---|
| ಪ್ರಾರಂಭಿಕ ಶಿಲ್ಕು (2015-16 ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಕಂಡಿಕೆ ಸಂಖ್ಯೆ:25 ರಲ್ಲಿದ್ದಂತೆ)<br>(+) 2016-17ನೇ ಸಾಲಿನಲ್ಲಿ ಡ್ರಾ ಮಾಡಲಾದ ಎ.ಸಿ ಬಿಲ್ ವೋಚರ್‌ಗಳ ಒಟ್ಟು ಮೊತ್ತ | | 2,55,82,875<br>4,33,20,068 |
| ಒಟ್ಟು ರೂ. | | 6,89,02,943 |
| (-) ಸಲ್ಲಿಸಲಾದ ಹೊಂದಾಣಿಕೆ (ಎನ್.ಡಿ.ಸಿ) ವೋಚರ್‌ಗಳ ಒಟ್ಟು ಮೊತ್ತ | | 4,25,80,068 |
| ದಿನಾಂಕ:31.03.2017 ಕ್ಕೆ ಬಾಕಿ ಉಳಿದಿರುವ ಎನ್.ಡಿ.ಸಿ ಬಿಲ್ಲುಗಳ ಮೊತ್ತ | | 2,63,22,875 |
| • ಹಿಂದಿನ ಸಾಲಿನ ಬಾಕಿ | 2,55,82,875 | |
| • 2016-17ನೇ ಸಾಲಿನ ಬಾಕಿ | 7,40,000 | |
| ಒಟ್ಟು ಬಾಕಿ ಮೊತ್ತ ರೂ. | 2,63,22,875 | |

ಬಾಕಿ ಇರುವ ಮೊತ್ತದ ಎನ್.ಡಿ.ಸಿ ಬಿಲ್ಲುಗಳಲ್ಲಿ 2015-16ನೇ ಸಾಲಿನಲ್ಲಿ ಡ್ರಾ ಮಾಡಿದ ಹಣವೇ ಅಧಿಕವಿದ್ದು ಎ.ಸಿ ಬಿಲ್ಲುಗಳ ಮೂಲಕ ಡ್ರಾ ಮಾಡಿದ ಹಣಕ್ಕೆ 30 ದಿವಸಗಳೊಳಗಾಗಿ ಎನ್.ಡಿ.ಸಿ ಬಿಲ್ಲುಗಳನ್ನು ಸಲ್ಲಿಸಿ ಲೆಕ್ಕ ಮುಕ್ತಾಯಗೊಳಿಸಬೇಕಾಗಿರುತ್ತದೆ. ಎನ್.ಡಿ.ಸಿ ಬಿಲ್ಲುಗಳನ್ನು ಸಲ್ಲಿಸದ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದೆ ಹಾಗೂ ಈ ಬಗ್ಗೆ ಮೇಲ್ವಿಚಾರಣೆ ನಡೆಸಿ ಲೆಕ್ಕ ಪಡೆಯಬೇಕಾಗಿದ್ದ ಹಣಕಾಸು ವಿಭಾಗದ ಸಿಬ್ಬಂದಿಗಳ ವಿರುದ್ಧವು ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದೆ.

<u>(ಸಿ) ಅಪಹೊಂದಾಣಿಕೆಯಾಗಿರುವ (**Non Admissible**) ಎನ್.ಡಿ.ಸಿ ವೋಚರ್ ಬಗ್ಗೆ :</u>

| ಕ್ರ.ಸಂ | ಹೆಸರು/ಪೀಠ | ಎ.ಸಿ ವೋಚರ್ ವಿವರ | | ಎನ್.ಡಿ.ಸಿ ವೋಚರ್‌ನ ವಿವರ | |
|---|---|---|---|---|---|
| | | ಸಂಖ್ಯೆ | ಮೊತ್ತ (ರೂ.) | ಸಂಖ್ಯೆ | ಮೊತ್ತ (ರೂ.) |
| 1 | ಶ್ರೀಮತಿ ಶ್ವೇತಾ, ಜಾಬ್ ಟೈಪಿಸ್ಟ್ | 28/ :12.07.2016 | 8,699 | 7321/ 08.06.2016 | 8,699 |
| 2 | ಕನಕದಾಸ ಸಂಶೋಧನಾ ಪೀಠ | ಧನಾದೇಶ ಸಂಖ್ಯೆ: 084259/22.03.2016 | 1,00,000 | ಜೆರಾಕ್ಸ್ ಬಿಲ್ಲುಗಳು | 1,00,000 |
| ಒಟ್ಟು | | | 1,08,699 | | 1,08,699 |

ಶ್ರೀಮತಿ ಶ್ವೇತಾ, ಜಾಬ್ ಟೈಪಿಸ್ಟ್ (ಹ-16) ರವರು ಎ.ಸಿ ವೋಚರ್ ಸಂಖ್ಯೆ:28/ ದಿ:12.07.2016 ರಲ್ಲಿ ರೂ.8,699/-ಗಳನ್ನು ಪಡೆದಿರುತ್ತಾರೆ. ಇದಕ್ಕೆ ಎದುರಾಗಿ ಎನ್.ಡಿ.ಸಿ ವೋಚರ್‌ನ ಬಿಲ್ ಸಂಖ್ಯೆ:7321 ದಿನಾಂಕ: 08.06.2016 ರಂದು ಪಾಲ್ಗುಣಿ ಕ್ಯಾಶ್ಯೂ ಸೆಂಟರ್ ರವರಿಂದ ಗೋಡಂಬಿ ಖರೀದಿಸಿದ ಬಾಬ್ತು ಎಂದು ಸಲ್ಲಿಸಿರುವುದು ಅಪಹೊಂದಾಣಿಕೆಯಾಗಿರುತ್ತದೆ. ಏಕೆಂದರೆ ಸದರಿ ಗೋಡಂಬಿ ಖರೀದಿಯ ಈ ವೋಚರ್ ದಿನಾಂಕ:08.06.2016 ರಂದು ಖರೀದಿಸಲಾಗಿರುತ್ತದೆ. ಅಂದರೆ ಎ.ಸಿ ಬಿಲ್ ಪಡೆಯುವ ಮುನ್ನವೇ ಗೋಡಂಬಿ ಖರೀದಿಯಾಗಿರುತ್ತದೆ. ಆದ್ದರಿಂದ ಇವರ ಈ ಎನ್.ಡಿ.ಸಿ ಬಿಲ್ಲನ್ನು ಸದರಿ ಎ.ಸಿ ಬಿಲ್ ಮೊತ್ತಕ್ಕೆ ಹೊಂದಾಣಿಕೆ ಮಾಡಲು ಸಾಧ್ಯವಿಲ್ಲ. ಸದರಿ ಮೊತ್ತ ರೂ.8,699/-ಗಳನ್ನು ಆಕ್ಷೇಪಿಸಲಾಗಿದೆ.

ಕನಕದಾಸ ಸಂಶೋಧನಾ ಪೀಠದಲ್ಲಿ ಕುಲಸಚಿವರ ಆದೇಶ ಸಂಖ್ಯೆ:ಮಂವಿ/ಡಿ.ಇ.ವಿ/42/2015-16/ಡಿ-5/ ದಿ:17.03.2016 ರ ಆದೇಶದಂತೆ ಕನಕ ಚಿಂತನೆ ಎಂಬ ವಿಷಯದ ಮೇಲೆ ಪ್ರಚಾರ ಉಪನ್ಯಾಸ ಮಾಲಿಕೆಯ ಉಪನ್ಯಾಸ ಕಾರ್ಯಕ್ರಮಗಳನ್ನು ನಡೆಸುವುದಕ್ಕಾಗಿ ಹಣಕಾಸು ಶಾಖೆಯಿಂದ ಈ ಪೀಠದ ಬ್ಯಾಂಕ್ ಖಾತೆ ಸಂಖ್ಯೆ:30366636821 ರಲ್ಲಿ ಧನಾದೇಶ ಸಂಖ್ಯೆ:084259 ದಿನಾಂಕ:22.03.2016 ರಂದು ರೂ.1,00,000/-ಗಳನ್ನು ಎ.ಸಿ ಬಿಲ್ ಮೂಲಕ ನಗದೀಕರಿಸಿ ಸಂಬಂಧಪಟ್ಟ ಸಂಯೋಜನಾಧಿಕಾರಿಗೆ ನೀಡಿರುತ್ತಾರೆ. ಈ ಮೊತ್ತಕ್ಕೆ ಸಲ್ಲಿಸಿರುವ ಎನ್.ಡಿ.ಸಿ ವೋಚರ್‌ಗಳು ಪೂರ್ಣ ಪ್ರಮಾಣದಲ್ಲಿ ಜೆರಾಕ್ಸ್ ಪ್ರತಿಗಳಾಗಿರುತ್ತವೆ. ಹಾಗೂ 2015-16ನೇ ಸಾಲಿನ ಎನ್.ಡಿ.ಸಿ ವೋಚರ್‌ಗಳನ್ನು ಸಹ ಇದರೊಂದಿಗೆ ಲಗತ್ತಿಸಿರುವುದನ್ನು ಪರಿಗಣಿಸಲು ಸಾಧ್ಯವಿಲ್ಲ. ಈ ಬಗ್ಗೆ ವಿಚಾರಣೆ ಸಂಖ್ಯೆ:156/18-19 ದಿ:30.01.2019 ರನ್ವಯ ನೀಡಲಾಗಿ ಸಲ್ಲಿಸಲಾಗಿರುವ ಉತ್ತರ ಸಮಂಜಸವಾಗಿರುವುದಿಲ್ಲ. ಆದ್ದರಿಂದ ಸದರಿ ಮೊತ್ತ ರೂ.1,00,000/-ಗಳನ್ನು ಆಕ್ಷೇಪಿಸಲಾಗಿದೆ.

| | | | |
|---|---|---|---|
| 1 | ಶ್ರೀಮತಿ ಶ್ವೇತಾ | 8699.00 | ವಿವರಣೆ ನೀಡಲಾಗಿದೆ |
| 2 | ಕನಕದಾಸ ಸಂಶೋಧನಾ ಪೀಠ | 100000.00 | ಪರಿಶೀಲನೆಯಲ್ಲಿದೆ. |
| | | 108699.00 | |

ಸಿ) 1. ಈ ಬಗ್ಗೆ ಸಂಬಂಧಪಟ್ಟ ರೂಸಾ ಸಂಯೋಜಕರು ತಾವು ದಿ. 6.6.2016 ರಂದು ನಡೆದ ಬೇರೆ ಸಭೆಗಾಗಿ ಸದ್ರಿ ಗೋಡಂಬಿಯನ್ನು ಖರೀದಿಸಿದ್ದು ಆ ಸಭೆಗೆ ಉಪಯೋಗಿಸದೆಯಿದ್ದುದರಿಂದ 12.07.16 ರಂದು ನಡೆದ ಸಭೆಗೆ ಉಪಯೋಗಿಸಿಕೊಳ್ಳಲಾಗಿದೆಯೆಂದು ವಿವರಣೆ ಕೊಟ್ಟಿದ್ದಾರೆ. ವಿವರಣೆಯನ್ನು ಒಪ್ಪಬಹುದಾಗಿದೆ.

| | | |
|---|---|---|
| 54 | <u>ದರಪಟ್ಟಿ ಆಹ್ವಾನಿಸದೇ (ಕೊಟೇಶನ್) ಸರಕು/ ಸೇವೆಯನ್ನು ನೇರವಾಗಿ ಖರೀದಿ ಮಾಡಿರುವುದು :</u><br>ರೂ.5 (ಐದು) ಸಾವಿರಕ್ಕಿಂತ ಮೇಲ್ಪಟ್ಟು ಸರಕುಗಳನ್ನು ಖರೀದಿಸಬೇಕಾದ್ದಲ್ಲಿ/ ಸೇವೆ ಪಡೆಯಬೇಕಾದ್ದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಕಾಯ್ದೆ-1999 ಮತ್ತು ಅಧಿನಿಯಮ-2000 ದನ್ವಯ ಹಾಗೂ ಸರ್ಕಾರಿ ಆದೇಶ ಸಂಖ್ಯೆ:ಆಇ01/ಟಿ.ಸಿ.ಇ/2012, ಬೆಂಗಳೂರು ದಿನಾಂಕ:21.06.2012 ರನ್ವಯ ದರಪಟ್ಟಿಯನ್ನು ಆಹ್ವಾನಿಸಬೇಕಿರುತ್ತದೆ. ರೂ.1.00 (ಒಂದು) ಲಕ್ಷ ಮೇಲ್ಪಟ್ಟಲ್ಲಿ ಟೆಂಡರ್ ಅವಶ್ಯಕವಾಗಿರುತ್ತದೆ.<br>2016-17ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಎ.ಸಿ/ಎನ್.ಡಿ.ಸಿ ವೋಚರ್‌ಗಳನ್ನು ಪರಿಶೀಲಿಸಲಾಗಿ, ರೂ.3,06,828/-ಗಳನ್ನು ಯಾವುದೇ ದರಪಟ್ಟಿ ಕರೆಯದೇ/ ಟೆಂಡರ್ ಮಾಡದೆ ಸರಕುಗಳನ್ನು ಖರೀದಿಸಿರುವ ಸಂಬಂಧ ವಿಚಾರಣಾ ಪತ್ರ ಸಂಖ್ಯೆ:197/2018-19 ದಿ:12.02.2019 ಅನ್ನು ನೀಡಲಾಗಿ, ಯಾವುದೇ ವಿವರಣೆ ಒದಗಿಸಿಲ್ಲದ ಕಾರಣ ರೂ.3,06,828/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರಗಳನ್ನು <u>ಅನುಬಂಧ-27 ರಲ್ಲಿ ನೀಡಲಾಗಿದೆ.</u> | ಅನುಪಾಲನಾ ವರದಿ ಕೆಳಕಂಡಂತೆ ನೀಡಲಾಗಿದೆ. |

ಕಂಡಿಕೆ-54

| ಕ್ರ. ಸಂ. | ವಿಷಯ ನಿರ್ವಾಹಕರು | ಎ.ಸಿ.ಬಿಲ್ ಸಂಖ್ಯೆ ಮತ್ತು ದಿನಾಂಕ | ಬಿಲ್ಲು ಸಂಖ್ಯೆ ಮತ್ತು ದಿನಾಂಕ | ಪಾವತಿ ಯಾರಿಗೆ? | ಉದ್ದೇಶ | ಮೊತ್ತ | ವಿಶ್ವವಿದ್ಯಾಲಯದ ಅನುಪಾಲನಾ ವರದಿ |
|---|---|---|---|---|---|---|---|
| 1 | ಎಫ್–02 | 16/13.2.17 | 1.12.16 | ಮಂಗಳ ಉಪಹಾರ ಗೃಹ (ಶ್ರೀ ದುರ್ಗಾಕ್ಯಾಂಟೀನ್) | ಉಪಹಾರ ವೆಚ್ಚ | 7390 | ವಿವಿಧ ತರದ ಉಪಹಾರ ವಸ್ತುಗಳನ್ನು ಖರೀದಿ ಮಾಡಿದ್ದು ಯಾವುದೂ ರೂ. 5000/- ಮೀರಿರುವುದಿಲ್ಲ. ಸಮಯಾವಕಾಶದ ಕೊರತೆಯಿಂದ ದರ ಪಟ್ಟಿ ಕರೆಯಲಾಗಿದೆ |
| 2 | ಎಫ್–02 | 07/19.1.16 | 151/18.10.16 | M/s Current Science Association | ಜಾಹಿರಾತು ವೆಚ್ಚ | 5000 | ರೂ.5000/-ದ ವರೆಗಿನ ವಸ್ತುವಿನ ಖರೀದಿ ಮಾಡಿರುವುದರಿಂದ ದರ ಪಟ್ಟಿ ಕರೆದಿಲ್ಲ. |
| 3 | ಎಫ್–08 | 15/13.8.16 | 687/15.8.16 | ಬೃಂದಕ್ಯಾಂಟೀನ್ | ಚಹಾ ಮತ್ತುತಿಂಡಿ ವೆಚ್ಚ | 7500 | ಸಮಯಾವಕಾಶದ ಕೊರತೆಯಿಂದ ದರ ಪಟ್ಟಿ ಕರೆಯಲಾಗಿಲ್ಲ. ದರಗಳು ಕನಿಷ್ಟ ವಾಗಿದ್ದು ಸಮಂಜಸವಾಗಿದೆ. ಮುಂದಿನ ದಿನಗಳಲ್ಲಿ ದರಪಟ್ಟಿ ಕರೆಯಲಾಗುವುದು. |
| 4 | ಎಫ್–08 | 12/9.8.16 | – | ಮಂಗಳ ಕ್ಯಾಂಟೀನ್ | ಉಪಹಾರ/ ಭೋಜನ ವೆಚ್ಚ | 25218 | ಸಮಯಾವಕಾಶದ ಕೊರತೆಯಿಂದ ದರ ಪಟ್ಟಿ ಕರೆಯಲಾಗಿಲ್ಲ. ದರಗಳು ಕನಿಷ್ಟ ವಾಗಿದ್ದು ಸಮಂಜಸವಾಗಿದೆ. ಮುಂದಿನ ದಿನಗಳಲ್ಲಿ ದರಪಟ್ಟಿ ಕರೆಯಲಾಗುವುದು. |
| 5 | ಎಫ್–08 | 33/24.1.17 | 560/28.01.17 | ಮಂಗಳ ಕ್ಯಾಂಟೀನ್ | ಉಪಹಾರ ವೆಚ್ಚ | 37075 | ಸಮಯಾವಕಾಶದ ಕೊರತೆಯಿಂದ ದರ ಪಟ್ಟಿ ಕರೆಯಲಾಗಿಲ್ಲ. ದರಗಳು ಕನಿಷ್ಟ ವಾಗಿದ್ದು ಸಮಂಜಸವಾಗಿದೆ. ಮುಂದಿನ ದಿನಗಳಲ್ಲಿ ದರಪಟ್ಟಿ ಕರೆಯಲಾಗುವುದು. |
| 6 | ಎಫ್–16 | 11/18.5.16 | 359/21.5.16 | ಶಂಕರ ಹಾಂಡಿಕ್ರಾಫ್ಟ್ | ಗಣೇಶ ವಿಗ್ರಹಗಳು (ಸ್ಮರಣಿಕೆಖರೀದಿ) | 18568 | ಸಮಯಾವಕಾಶದ ಕೊರತೆಯಿಂದ ದರ ಪಟ್ಟಿ ಕರೆಯಲಾಗಿಲ್ಲ. ದರಗಳು ಕನಿಷ್ಟ ವಾಗಿದ್ದು ಸಮಂಜಸವಾಗಿದೆ. ಮುಂದಿನ ದಿನಗಳಲ್ಲಿ ದರಪಟ್ಟಿ ಕರೆಯಲಾಗುವುದು. |
| 7 | ಎಫ್–16 | 2/5.4.16 | 04.5.16 | ಮಂಗಳ ಕ್ಯಾಂಟೀನ್ | ಉಪಹಾರ ವೆಚ್ಚ | 7975 | ಸಮಯಾವಕಾಶದ ಕೊರತೆಯಿಂದ ದರ ಪಟ್ಟಿ ಕರೆಯಲಾಗಿಲ್ಲ. ದರಗಳು ಕನಿಷ್ಟ ವಾಗಿದ್ದು ಸಮಂಜಸವಾಗಿದೆ. ಮುಂದಿನ ದಿನಗಳಲ್ಲಿ ದರಪಟ್ಟಿ ಕರೆಯಲಾಗುವುದು. |
| 8 | ಎಫ್–16 | 11/18.5.16 | 348/14.5.16 | ಶಂಕರ ಹಾಂಡಿಕ್ರಾಫ್ಟ್ | ಎಲಚಿಹಾರ ಮತ್ತು ಶಾಲ್‌ಖರೀದಿ ಬಾಬ್ತು | 22155 | ಸಮಯಾವಕಾಶದ ಕೊರತೆಯಿಂದ ದರ ಪಟ್ಟಿ ಕರೆಯಲಾಗಿಲ್ಲ. ದರಗಳು ಕನಿಷ್ಟ ವಾಗಿದ್ದು ಸಮಂಜಸವಾಗಿದೆ. ಮುಂದಿನ ದಿನಗಳಲ್ಲಿ ದರಪಟ್ಟಿ ಕರೆಯಲಾಗುವುದು. |
| 9 | ಎಫ್–16 | 11/18.5.16 | 1132/21.5.16 | ರವಿ ಕ್ಯಾಟರರ್ಸ್ | ಭೋಜನ ವೆಚ್ಚ | 60000 | ಸಮಯಾವಕಾಶದ ಕೊರತೆಯಿಂದ ದರ ಪಟ್ಟಿ ಕರೆಯಲಾಗಿಲ್ಲ. ದರಗಳು ಕನಿಷ್ಟ ವಾಗಿದ್ದು ಸಮಂಜಸವಾಗಿದೆ. ಮುಂದಿನ ದಿನಗಳಲ್ಲಿ ದರಪಟ್ಟಿ ಕರೆಯಲಾಗುವುದು. |
| 10 | ಎಫ್–16 | 11/18.5.16 | 181/24.5.16 | ರೈಟ್‌ಆಗಲ್ | Flex Print wite mounting | 11150 | ಸಮಯಾವಕಾಶದ ಕೊರತೆಯಿಂದ ದರ ಪಟ್ಟಿ ಕರೆಯಲಾಗಿಲ್ಲ. ದರಗಳು ಕನಿಷ್ಟ ವಾಗಿದ್ದು ಸಮಂಜಸವಾಗಿದೆ. ಮುಂದಿನ ದಿನಗಳಲ್ಲಿ ದರಪಟ್ಟಿ ಕರೆಯಲಾಗುವುದು. |
| 11 | ಎಫ್–16 | 21/14.6.16 | 21.6.16 | LM Electricals & Sound Systems | DG Set | 6500 | ಸಮಯಾವಕಾಶದ ಕೊರತೆಯಿಂದ ದರ ಪಟ್ಟಿ ಕರೆಯಲಾಗಿಲ್ಲ. ದರಗಳು ಕನಿಷ್ಟ ವಾಗಿದ್ದು ಸಮಂಜಸವಾಗಿದೆ. ಮುಂದಿನ ದಿನಗಳಲ್ಲಿ ದರಪಟ್ಟಿ ಕರೆಯಲಾಗುವುದು. |

| | | | | | | | | |
|---|---|---|---|---|---|---|---|---|
| | 12 | ಎಫ್–16 | 37/9.8.16 | 17.8.16 | LM Electricals & Sound Systems | DG set ಬಾಡಿಗೆ ಬಾಬ್ತು | 39672 | ಸಮಯಾವಕಾಶದ ಕೊರತೆಯಿಂದ ದರ ಪಟ್ಟಿ ಕರೆಯಲಾಗಿಲ್ಲ. ದರಗಳು ಕನಿಷ್ಟ ವಾಗಿದ್ದು ಸಮಂಜಸವಾಗಿದೆ. ಮುಂದಿನ ದಿನಗಳಲ್ಲಿ ದರಪಟ್ಟಿ ಕರೆಯಲಾಗುವುದು. |
| | 13 | ಎಫ್–16 | 37/9.8.16 | 85/17.8.16 | ಶ್ರೀ ಸಾಯಿ ಶಾಮಿಯಾನ | ಪ್ಲಾಸ್ಟಿಕ್ ಚೇರು, ಟೇಬಲ್ ಮತ್ತು ಶಾಮಿಯಾನ ಬಾಡಿಗೆ ಬಾಬ್ತು | 33250 | ಸಮಯಾವಕಾಶದ ಕೊರತೆಯಿಂದ ದರ ಪಟ್ಟಿ ಕರೆಯಲಾಗಿಲ್ಲ. ದರಗಳು ಕನಿಷ್ಟ ವಾಗಿದ್ದು ಸಮಂಜಸವಾಗಿದೆ. ಮುಂದಿನ ದಿನಗಳಲ್ಲಿ ದರಪಟ್ಟಿ ಕರೆಯಲಾಗುವುದು. |
| | 14 | ಎಫ್–16 | 39/18.8.16 | 970/22.8.16 | ಮಂಗಳ ಕ್ಯಾಂಟೀನ್ | ಉಪಹಾರ ವೆಚ್ಚ | 12140 | ಸಮಯಾವಕಾಶದ ಕೊರತೆಯಿಂದ ದರ ಪಟ್ಟಿ ಕರೆಯಲಾಗಿಲ್ಲ. ದರಗಳು ಕನಿಷ್ಟ ವಾಗಿದ್ದು ಸಮಂಜಸವಾಗಿದೆ. ಮುಂದಿನ ದಿನಗಳಲ್ಲಿ ದರಪಟ್ಟಿ ಕರೆಯಲಾಗುವುದು. |
| | 15 | ಎಫ್–16 | 58/1.12.16 | 3701/1.12.16 | Print Shoppe | Invitations & certificates | 6108 | ಸಮಯಾವಕಾಶದ ಕೊರತೆಯಿಂದ ದರ ಪಟ್ಟಿ ಕರೆಯಲಾಗಿಲ್ಲ. ದರಗಳು ಕನಿಷ್ಟ ವಾಗಿದ್ದು ಸಮಂಜಸವಾಗಿದೆ. ಮುಂದಿನ ದಿನಗಳಲ್ಲಿ ದರಪಟ್ಟಿ ಕರೆಯಲಾಗುವುದು. |
| | 16 | ಎಫ್–16 | 58/1.12.16 | 22399/7.12.16 | S. L. Shet Diamond House | Fancy Plate | 7127 | ಸಮಯಾವಕಾಶದ ಕೊರತೆಯಿಂದ ದರ ಪಟ್ಟಿ ಕರೆಯಲಾಗಿಲ್ಲ. ದರಗಳು ಕನಿಷ್ಟ ವಾಗಿದ್ದು ಸಮಂಜಸವಾಗಿದೆ. ಮುಂದಿನ ದಿನಗಳಲ್ಲಿ ದರಪಟ್ಟಿ ಕರೆಯಲಾಗುವುದು. |
| | | | | | | | **3,06,828/-** | |

| | | |
|---|---|---|
| 55 | <u>1507 ಲೆಕ್ಕಶೀರ್ಷಿಕೆಯಡಿ ಹಾಜರುಪಡಿಸಲಾದ ಓಚರ್‌ಗಳಲ್ಲಿ ಕಂಡು ಬಂದ ನ್ಯೂನ್ಯತೆಗಳ ವಿವರ :</u><br>2016-17ನೇ ಸಾಲಿನಲ್ಲಿ ಕಾರ್ಯಕಾರಿ ಅಭಿಯಂತರರ ಕಛೇರಿಯಿಂದ 4 ಸಂಖ್ಯೆ ಎ.ಸಿ ಬಿಲ್ಲುಗಳ ಮೂಲಕ ಒಟ್ಟು ರೂ.2,50,000/-ಗಳನ್ನು ಡ್ರಾ ಮಾಡಿದ್ದು ವಿಳಂಬವಾಗಿ ಎನ್.ಡಿ.ಸಿ ಬಿಲ್ಲುಗಳನ್ನು ಸಲ್ಲಿಸಿದ್ದು, ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲಾಗಿದ್ದು ಪರಿಶೀಲಿಸಲಾಗಿ ಕೆಳಕಂಡ ನ್ಯೂನ್ಯತೆಗಳನ್ನು ಗಮನಿಸಲಾಗಿದೆ.<br>1) ವಾರ್ಷಿಕ ಅಂದಾಜು (ಅನುಮೋದಿತ) ಪಟ್ಟಿಯಲ್ಲಿ ನಿರ್ವಹಣೆ ಬಗ್ಗೆ ಅನುದಾನ ಲಭ್ಯವಿರಿಸಿಕೊಂಡಿಲ್ಲ.<br>2) ವೋಚರ್‌ಗಳನ್ನು 'ಅಳತೆ ಪುಸ್ತಕದಲ್ಲಿ' ದಾಖಲಿಸಿಲ್ಲ.<br>3) ಸಂಬಂಧಿತ ವಿಭಾಗಗಳಿಂದ/ ಸಾರ್ವಜನಿಕರಿಂದ ಅಂದರೇ ಗಿಡಗಂಟಿ ತೆರೆವು ಮಾಡಿದ ಸ್ಥಳದಲ್ಲಿ ಹಾಜರಿದ್ದ ಅಧಿಕಾರಿ/ ಸಿಬ್ಬಂದಿಗಳ ಸಹಿ ಇರುವುದಿಲ್ಲ.<br>4) ಶೇಕಡ 30 void (ಸವಕಳಿ) ಕಳೆಯದೇ ಶೇ.100 ಹಣ ಪಾವತಿಸಲಾಗಿದೆ.<br>ಹಾಗಾಗಿ ಈ ಬಗ್ಗೆ ಸೂಕ್ತ ಸಮಜಾಯಿಷಿ ನೀಡಲು ವಿಚಾರಣಾ ಪತ್ರ: 183/18-19 ಕ್ಕೆ ದಿ:07.02/19 ಕ್ಕೆ ನೀಡಲಾಗಿದ್ದು ಯಾವುದೇ ಉತ್ತರ ಬಂದಿಲ್ಲ.<br>ಆದ ಕಾರಣ ಒಟ್ಟು ರೂ.2,50,000/-ಗಳನ್ನು ಆಕ್ಷೇಪಣೆಯಲ್ಲಿಟ್ಟಿದೆ. | 1) ಇಂತಹ ತುರ್ತು ಕಾಮಗಾರಿಗಳ ವೆಚ್ಚವನ್ನು ಲೆಕ್ಕಶೀರ್ಷಿಕೆ 1507 ರಡಿಯಲ್ಲಿ ಭರಿಸಲು ಅವಕಾಶವನ್ನು ಇರಿಸಲಾಗಿದ್ದು, ಎಲ್ಲಾ ತುರ್ತು ಕೆಲಸಗಳನ್ನು ಈ ಲೆಕ್ಕಶೀರ್ಷಿಕೆಯಡಿ ನಿರ್ವಹಿಸಲಾಗಿರುತ್ತದೆ.<br>2) ಮುಂಗಡವನ್ನು ಪಡೆದು ನಿರ್ವಹಿಸಿದ ಕಾಮಗಾರಿಗಳ ಬಗ್ಗೆ ಈವರೆಗೆ ಅಳತೆ ಪುಸ್ತಕಗಳಲ್ಲಿ ದಾಖಲಿಸಿರುವುದಿಲ್ಲ. ಅದಲ್ಲದೆ ರೂ.50,000/-ದಂತೆ ಮೂರು ಬಾರಿ ಪಡೆದ ಮುಂಗಡದ ಒಟ್ಟು ಮೊತ್ತ 1,50,000/- ದಿಂದ ಕಟ್ಟಡಗಳಿಗೆ ಸಣ್ಣಪುಟ್ಟ ನಿರ್ವಹಣೆ ಕೆಲಸಗಳನ್ನು ಮಾಡಿದ್ದು, ಅದರ ಬಗ್ಗೆ ಸೂಕ್ತ ಅಳತೆ ದಾಖಲಿಸಲು ಸಾಧ್ಯವಾಗುವುದಿಲ್ಲ. ಇದು ಸಣ್ಣಪುಟ್ಟ ದುರಸ್ತಿ/ನಿರ್ವಹಣೆ ಕೆಲಸವಾಗಿರುವುದರಿಂದ ಇದನ್ನು ಅಳತೆ ಪುಸ್ತಕದಲ್ಲಿ ದಾಖಲಿಸಿರುವುದಿಲ್ಲ.<br>3) ಗಿಡಗಂಟಿ ತೆರವು ಮಾಡಿದ ಸ್ಥಳದಲ್ಲಿ ಹಾಜರಿದ್ದ ಕಿರಿಯಅಭಿಯಂತರರು ಹಾಗೂ ಕಾರ್ಯಕಾರಿ ಅಭಿಯಂತರರು ನಿರ್ವಹಿಸಿದ ಕಾಮಗಾರಿಯನ್ನು ದೃಢೀಕರಿಸಿ ಸಹಿ ಮಾಡಿರುತ್ತಾರೆ.<br>4) ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿ 'ಎ' ಮತ್ತು'ಬಿ' ಮಾದರಿ ವಸತಿಗೃಹಗಳಲ್ಲಿ ಗಿಡಗಂಟಿಗಳನ್ನು ತೆರವುಗೊಳಿಸುವ ಕಾಮಗಾರಿಯ (ಜೆ.ಸಿ.ಬಿ. ಯಂತ್ರ ಹಾಗೂ ಕೆಲಸಗಾರರಿಗೆ ಪಾವತಿಸಲು) ವೆಚ್ಚವನ್ನು ಭರಿಸಲು ಕುಲಸಚಿವರ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಮಂವಿ/ಡಿಇವಿ/74 /2016-17/ಡಿ1 ದಿನಾಂಕ 28.10.2016ರಲ್ಲಿ ರೂ. 1,00,000.00 ಮೊತ್ತವನ್ನು ಲೆಕ್ಕಶೀರ್ಷಿಕೆ 1507ರಡಿಯಲ್ಲಿ ಭರಿಸಲು ಮಂಜೂರಾತಿ ನೀಡಲಾಗಿರುತ್ತದೆ. ಅದರಂತೆ ಚೆಕ್ ಸಂಖ್ಯೆ 195979 ದಿನಾಂಕ 09.12.2016ರಲ್ಲಿ ರೂ. 56,000/-ವನ್ನು ಶ್ರೀ. ಭೀಮ ಶರ್ಮ ಹಾಗೂ ಚೆಕ್ ಸಂಖ್ಯೆ 195980 ದಿನಾಂಕ 09.12.2016ರಲ್ಲಿ ರೂ. 44,000/-ವನ್ನು ಶ್ರೀ ಪ್ರಸನ್ನಕುಮಾರ್ ಇವರಿಗೆ ಪಾವತಿಸಲಾಗಿರುತ್ತದೆ. |

| | | |
|---|---|---|
| | | ಮುಂದುವರಿದು, ವಿಸ್ತೀರ್ಣವಾರು ಗಿಡಗಂಟಿ ಇತ್ಯಾದಿಗಳನ್ನು ತೆಗೆದು ಶುಚಿಗೊಳಿಸುವಲ್ಲಿ ಮಾತ್ರ ನಿರ್ಧಾರಿತ ಪ್ರಮಾಣ ಸವಕಳಿಯನ್ನು ಕಳೆಯಬೇಕಾಗಿರುತ್ತದೆ. ಮಾನ್ಯ ಕುಲಪತಿಯವರ ಆದೇಶದ ಮೇರೆಗೆ 'ಎ' ಮತ್ತು 'ಬಿ' ಮಾದರಿ ವಸತಿ ಗೃಹದ ಬಳಿಯಲ್ಲಿದ್ದ ಗಿಡಗಂಟಿಗಳನ್ನು ಜೆ.ಸಿ.ಬಿ. ಯಂತ್ರದ ಮೂಲಕ 2015-16ರ ಲೋಕೋಪಯೋಗಿ ಇಲಾಖಾ ಅನುಮೋದಿತ ಗಂಟೆ ಒಂದರ ದರದಲ್ಲಿ ನಿರ್ವಹಿಸಿ ಪಾವತಿಸಿರುವುದರಿಂದ ಇಲ್ಲಿ ಸವಕಳಿ ಕಳೆಯುವ ಪ್ರಮೇಯ ಬರುವುದಿಲ್ಲ.<br>ಅಂತೆಯೇ ಈ ಕಚೇರಿಯಲ್ಲಿ ಗಿಡಗಂಟಿಗಳನ್ನು ತೆರವುಗೊಳಿಸಲು ರೂ.1,00,000.00 ಹಾಗೂ ಕಟ್ಟಡ ನಿರ್ವಹಣೆಗಾಗಿ ರೂ. 1,50,000.00 ಅಂದರೆ ಪಡೆದ ಒಟ್ಟು ಮುಂಗಡ ಮೊತ್ತ ರೂ. 2,50,000/-ಗಳ ಹೊಂದಾಣಿಕೆ ಬಿಲ್ಲುಗಳನ್ನು ಕಳುಹಿಸುವಲ್ಲಿ ಸ್ವಲ್ಪ ವಿಳಂಬವಾಗಿದ್ದು, ಮೇಲೆ ನೀಡಿರುವ ಸಮಜಾಯಿಷಿಕೆಗಳನ್ನು ಪರಿಶೀಲಿಸಿ ಲೆಕ್ಕ ಪರಿಶೋಧನಾ ಆಕ್ಷೇಪಣೆಯನ್ನು ಕೈಬಿಡಲು ಕೋರಲಾಗಿದೆ. |
| 56 | <u>Microtron ಸೇವಾ ಶುಲ್ಕ ಪಾವತಿಸಿರುವ ಬಗ್ಗೆ :</u><br>ಶ್ರೀಯುತ ಸುನೀಲ್ ಭಟ್, ಚಾರ್ಟೆಡ್ ಅಕೌಂಟೆಂಟ್ ಇವರಿಗೆ ವೋಚರ್ ಸಂಖ್ಯೆ:133/ ಧನಾದೇಶ ಸಂಖ್ಯೆ:77614/ ದಿ:19.05.2016 ರನ್ವಯ ರೂ.3,48,513/-ಗಳನ್ನು ಕೇಂದ್ರ ಸೇವಾ ಶುಲ್ಕ ಇಲಾಖೆಗೆ ಪಾವತಿಸಲು ನೀಡಲಾಗಿದೆ. ಇಂತಹ ಸೇವಾ ಶುಲ್ಕವನ್ನು ಪಾವತಿಸಲು ಕರಾರು ಮಾಡಿಕೊಂಡಿರುವ ಪತ್ರಗಳು ಮತ್ತು ಪಾವತಿ ವಿವರವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ವಿಚಾರಣೆಸಂಖ್ಯೆ:92/18-19 ದಿ:01.01.2019 ರಲ್ಲಿ ಕೋರಲಾಗಿ ದಾಖಲಾತಿಗಳನ್ನು ತಪಾಸಣೆಗೆ ಹಾಜರುಪಡಿಸಿರುವುದಿಲ್ಲ. ಇದರಿಂದಾಗಿ ಸೇವಾ ಶುಲ್ಕದ ಪಾವತಿಯನ್ನು ಹೇಗೆ ಕಟಾಯಿಸಲಾಗುತ್ತಿದೆ ಹಾಗೂ ಇನ್ನಿತರೆ ಮಾನದಂಡಗಳ ವಿವರಗಳನ್ನು ಸಹ ಲೆಕ್ಕಪರಿಶೋಧನೆಗೆ ಹಾಜರುಪಡಿಸಿಲ್ಲದಿರುವುದರಿಂದ ಸದರಿ ಮೊತ್ತ ರೂ.3,48,513/-ಗಳನ್ನು ಆಕ್ಷೇಪಿಸಿದೆ. | ಸದ್ರಿ ಮೊತ್ತವನ್ನು ಸಂಬಂಧಪಟ್ಟ ಇಲಾಖೆಗೆ ಪಾವತಿಸಿ ಅದರ ರಶೀದಿಯನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ.<br>1. ಚಲನ್ ಸಂಖ್ಯೆ:50594 ದಿನಾಂಕ 31.05.2016=ರೂ.38917.00<br>2. ಚಲನ್ ಸಂಖ್ಯೆ:50606 ದಿನಾಂಕ 31.05.2016=ರೂ.153214.00<br>3. ಚಲನ್ ಸಂಖ್ಯೆ:50620 ದಿನಾಂಕ 31.05.2016=ರೂ.156382.00<br>ಒಟ್ಟು.............................................................. **ರೂ.348513.00** |
| 57 | <u>ಬ್ಯಾಂಕ್ ಖಾತೆಯಲ್ಲಿ ನಿಗದಿತ ಮೊತ್ತಕ್ಕಿಂತ ಹೆಚ್ಚುವರಿ debit ಆಗಿರುವುದು :</u><br>2016-17ನೇ ಸಾಲಿನ ತಪಾಸಣೆಯಲ್ಲಿ ಸುಮಾರು 17 ಪೀಠಗಳ ಪೈಕಿ ಎನ್.ಜಿ.ಪವನ್ ಪೀಠಕ್ಕೆ ಸಂಬಂಧಪಟ್ಟ ಬ್ಯಾಂಕ್ ಖಾತೆ ಸಂಖ್ಯೆ:10094966605 ರ ಪಾಸ್ ಪುಸ್ತಕವನ್ನು ಪರಿಶೀಲಿಸಲಾಗಿ, ಈ ಪೀಠದಡಿಯಲ್ಲಿ ಹೂಡಿಕೆ ಮಾಡಲಾಗಿರುವ ಹೂಡಿಕೆ ಪ್ರಮಾಣ ಪತ್ರ ಸಂಖ್ಯೆ:32266193413/24/11/16 ರನ್ವಯ ರೂ.5,00,000/-ಗಳ ಹೂಡಿಕೆ ಮೊತ್ತಕ್ಕೆ ಪಾಸ್ ಪುಸ್ತಕದಲ್ಲಿ ರೂ.5,10,938/-ಗಳಿಗೆ Debit ಆಗಿರುವುದು ಕಂಡು ಬಂದಿರುತ್ತದೆ. ಈ 5,10,938/- ಗಳಲ್ಲಿ ರೂ.5,00,000/-ಗಳ ಹೂಡಿಕೆ ಮೊತ್ತವನ್ನು ಹೊರತುಪಡಿಸಿ ಬಾಕಿ ರೂ.10,938/-ಗಳ ಮೊತ್ತವನ್ನು ಹೆಚ್ಚುವರಿಯಾಗಿ ಡೆಬಿಟ್ ಮಾಡಿರುವುದಕ್ಕೆ ಸ್ಪಷ್ಟೀಕರಣವನ್ನು ಹಾಜರುಪಡಿಸದೆ ಇರುವುದರಿಂದ ವ್ಯತ್ಯಾಸದ ಮೊತ್ತ ರೂ.10,938/-ಗಳನ್ನು ವಸೂಲಾತಿಗೆ ಸೂಚಿಸಲಾಗಿದೆ. | ರೂ.10938.00ರ ವ್ಯತ್ಯಾಸದ ಬಗ್ಗೆ ಸದ್ರಿ ಬ್ಯಾಂಕ್‌ನವರು ಪತ್ರ ಸಂ.ಎಂಯು/2020-21/64 ದಿನಾಂಕ 11.09.2020 ರಂದು ಸ್ಪಷ್ಟೀಕರಣವನ್ನು ನೀಡಿದ್ದು ದಿನಾಂಕ24.11.2016 ರಂದು ರೂ. 510938.00 ಕ್ಕೆ ಮರು ಹೂಡಿಕೆ ಮಾಡಲಾಗಿರುವುದಾಗಿ ಹೂಡಿಕೆ ಪ್ರಮಾಣ ಪತ್ರದ ಪ್ರತಿಯನ್ನು ಕಳುಹಿಸಿರುತ್ತಾರೆ. ಆದುದರಿಂದ ಯಾವುದೇ ವ್ಯತ್ಯಾಸವಿರುವುದಿಲ್ಲ. ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ. |
| 58 | <u>ಪೀಠಗಳ ಆರ್ಥಿಕ ಪರಿಸ್ಥಿತಿ :</u><br>ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಒಟ್ಟು 17 ಪೀಠಗಳಿವೆ. ಇವುಗಳಿಗೆ ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳ ಅನುದಾನಗಳು ಮತ್ತು ಇತರೆ ಸಂಸ್ಥೆ/ವ್ಯಕ್ತಿಗಳ ಕೊಡುಗೆಗಳಿಂದ ಹಣ ಸ್ವೀಕೃತಿಯಾಗುತ್ತದೆ. ಒಟ್ಟು 17 ಬ್ಯಾಂಕ್ ಖಾತೆಗಳು ಹಾಲಿ ಚಾಲ್ತಿಯಲ್ಲಿರುತ್ತವೆ. ಇವುಗಳ ಆರ್ಥಿಕ ಪರಿಸ್ಥಿತಿಯನ್ನು <u>ಅನುಬಂಧ-28 ರಲ್ಲಿ</u> ವರದಿಗೆ ಲಗತ್ತಿಸಿದೆ. | ಸಾಮಾನ್ಯ ಮಾಹಿತಿ |

| | | |
|---|---|---|
| 59 | ಯು.ಜಿ.ಸಿ ವೇತನ ಶ್ರೇಣಿಯಲ್ಲಿ ಸಂಭಾವನೆ ಪಡೆಯುತ್ತಿರುವ ಬೋಧಕ ವೃಂದ ಹಾಗೂ ಖಾಯಂ ಗ್ರೂಪ್-ಡಿ ನೌಕರರಿಗೆ ಪರೀಕ್ಷಾ ಸಂಭಾವನೆ ಪಾವತಿಸಿರುವುದು:<br>2016-17ನೇ ಸಾಲಿಗೆ ಸಂಬಂಧಿಸಿದಂತೆ, ಹಾಜರುಪಡಿಸಲಾದ ಪರೀಕ್ಷಾಂಗ ವಿಭಾಗದ ಟಿ.ಎ/ ಡಿ.ಎ ಹಾಗೂ ಸಂಭಾವನೆ ವೋಚರ್‌ಗಳನ್ನು ಪರಿಶೀಲಿಸಲಾಗಿ, ಮಂಗಳೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಟ್ಟ ಹಾಗೂ ಅದರ ಸಂಯೋಜನೆಗೆ (affiliation) ಒಳಪಟ್ಟ ಕಾಲೇಜುಗಳಲ್ಲಿ ಯು.ಜಿ.ಸಿ ವೇತನ ಶ್ರೇಣಿಯಲ್ಲಿ ವೇತನ ಪಡೆಯುತ್ತಿರುವ ಬೋಧಕ ವೃಂದದವರಿಗೆ ಹಾಗೂ ಖಾಯಂ ಗ್ರೂಪ್-ಡಿ ನೌಕರರಿಗೆ ಪರೀಕ್ಷಾ ಸಂಭಾವನೆ ನೀಡಿರುವುದು ಕಂಡು ಬಂದಿರುತ್ತದೆ. ಮತ್ತು ಆ ವಿವರಗಳನ್ನು ಅನುಬಂಧ-29 ಮತ್ತು 29(ಎ) ರಲ್ಲಿ ಒದಗಿಸಿದೆ. (ಈ ಕುರಿತು ವಿಚಾರಣಾ ಪತ್ರ ಸಂಖ್ಯೆ:196/2018-19/ ದಿ:12.02.2019 ಅನ್ನು ನೀಡಿದೆ) ಆದರೆ, ಇದು ಮಂಗಳೂರು ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:MU/ACC/TA/DA/ Exam/99-99/2010-11/o8 ದಿನಾಂಕ: 02.02.2011 ರ ಪ್ಯಾರಾ 3(i) (ii) ಹಾಗೂ ಕೆ.ಸಿ.ಎಸ್.ಆರ್ ನಿಯಮಾವಳಿಗಳಿಗೆ ವಿರುದ್ಧವಾಗಿರುತ್ತದೆ. ಆದ ಕಾರಣ, ಸದರಿ ಅನುಬಂಧಗಳಲ್ಲಿ ಪಟ್ಟಿ ಮಾಡಲಾಗಿರುವ ಒಟ್ಟು ಮೊತ್ತ ರೂ.5,67,072/- (2,86,607+2,80,465) ಗಳನ್ನು ಸಂಬಂಧಪಟ್ಟವರಿಂದ ವಸೂಲಿಸಿ ವಿಶ್ವವಿದ್ಯಾನಿಲಯದ ನಿಧಿಗೆ ಜಮೆ ಮಾಡಿ ಅನುಪಾಲನಾ ವರದಿ ಸಲ್ಲಿಸಲು ಸೂಚಿಸಿದೆ. | ಮಂಗಳೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಟ್ಟ ಹಾಗೂ ಸಂಯೋಜನೆಗೊಳಪಟ್ಟ ಖಾಸಗಿ ಕಾಲೇಜುಗಳಲ್ಲಿ ಪರೀಕ್ಷಾ ಕಾರ್ಯಗಳಿಗೆ ವಿಶ್ವವಿದ್ಯಾನಿಲಯದ ಪರೀಕ್ಷಾ ಕಾರ್ಯಗಳನ್ನು ಖಾಸಗಿ ಕಾಲೇಜಿನ ಸಿಬ್ಬಂದಿಗಳು ರಜಾದಿನಗಳಲ್ಲಿ ನಿರ್ವಹಿಸಿರುವುದರಿಂದ ವಿದ್ಯಾರ್ಥಿಗಳಿಂದ ಸ್ವೀಕರಿಸುವ ಪರೀಕ್ಷಾ ಶುಲ್ಕದ ನಿಧಿಯಿಂದ ಯುಜಿಸಿ ವೇತನ ಪಡೆಯದ ಸಿಬ್ಬಂದಿಗಳಿಗೆ ಸಂಭಾವನೆ ಪಾವತಿಸಲಾಗಿರುತ್ತದೆ. ಸದರಿ ಖಾಸಗಿ ಕಾಲೇಜಿನ ಸಿಬ್ಬಂದಿಗಳು ರಜಾಕಾಲದಲ್ಲಿ ಪರೀಕ್ಷಾ ಕಾರ್ಯವನ್ನು ಹೆಚ್ಚುವರಿ ಕರ್ತವ್ಯವೆಂದು ನಿರ್ವಹಿಸಿರುವುದರಿಂದ ಸಂಭಾವನೆ ಪಾವತಿಸಲಾಗಿರುತ್ತದೆ. ಯುಜಿಸಿ ವೇತನ ಶ್ರೇಣಿ ಪಡೆಯುವ ಶಿಕ್ಷಕರಿಗೆ ಯಾವುದೇ ಸಂಭಾವನೆಯನ್ನು ನೀಡುವುದನ್ನು ನಿಲ್ಲಿಸಲಾಗಿದೆ. |
| 60 | ಪರೀಕ್ಷಾ ವಿಭಾಗ<br>ಪರೀಕ್ಷಾ ವಿಭಾಗದ ವೋಚರ್‌ಗಳಲ್ಲಿ ಕಂಡು ಬಂದ ನ್ಯೂನ್ಯತೆಗಳು :<br>2016-17ನೇ ಸಾಲಿಗೆ ಸಂಬಂಧಿಸಿದಂತೆ, ಹಾಜರುಪಡಿಸಲಾದ ಪರೀಕ್ಷಾ/ ಮೌಲ್ಯಮಾಪನ ವಿಭಾಗದ ಟಿ.ಎ/ ಡಿ.ಎ ಹಾಗೂ ಸಂಭಾವನೆ ವೋಚರ್‌ಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ನ್ಯೂನ್ಯತೆಗಳು ಇಂತಿವೆ.<br>1) ಟಿ.ಎ/ ಡಿ.ಎ ಹಾಗೂ ಸಂಭಾವನೆ ವೋಚರ್‌ಗಳಲ್ಲಿ ಪರೀಕ್ಷಕರ ಮೂಲ ವೇತನವನ್ನು ದಾಖಲಿಸಿರುವುದಿಲ್ಲ.<br>2) ಪರೀಕ್ಷಾ/ ಮೌಲ್ಯಮಾಪನ ಕಾರ್ಯಗಳಿಗೆ ಹಾಜರಾಗಿರುವುದರ ಸಂಬಂಧ ಹಾಜರಾತಿ ಪ್ರಮಾಣ ಪತ್ರಗಳನ್ನು ಹಾಜರುಪಡಿಸಿರುವುದಿಲ್ಲ. (ಹಾಜರುಪಡಿಸಲಾದ ಕೆಲವು ಪ್ರಮಾಣ ಪತ್ರಗಳಲ್ಲಿ ಈ ಸಂಬಂಧ ಅಗತ್ಯ)<br>3) U.G.C/ Non U.G.C ಪ್ರಮಾಣ ಪತ್ರಗಳನ್ನು ಹಾಜರುಪಡಿಸಿರುವುದಿಲ್ಲ. (ಹಾಜರುಪಡಿಸಲಾದ ಕೆಲವು ಪ್ರಮಾಣ ಪತ್ರಗಳಲ್ಲಿ ಅಗತ್ಯ ವಿವರಗಳನ್ನು ನಮೂದಿಸಿ ದೃಢೀಕರಿಸಿರುವುದಿಲ್ಲ)<br>4) ತಾತ್ಕಾಲಿಕ ಅತಿಥಿ ಉಪನ್ಯಾಸಕರುಗಳನ್ನು ಪರೀಕ್ಷಾ/ ಮೌಲ್ಯಮಾಪನ ಕಾರ್ಯಗಳಿಗೆ ನಿಯೋಜಿಸಬೇಕಾದರೆ ನಿಯಮಗಳನ್ವಯ ಅವರು ಕನಿಷ್ಠ ಮೂರು ವರ್ಷಗಳ ಬೋಧನಾ ಸೇವಾವಧಿಯನ್ನು ಪೂರೈಸಿರಬೇಕಾಗಿರುತ್ತದೆ. ಈ ಸಂಬಂಧ ಸದರಿ ಕಾಲೇಜು ಪ್ರಾಂಶುಪಾಲರಿಂದ ದೃಢೀಕರಿಸಲ್ಪಟ್ಟ ಬೋಧನಾ ಸೇವಾನುಭವ ಪ್ರಮಾಣ ಪತ್ರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. (ಹಾಜರುಪಡಿಸಲಾದ ಕೆಲವು ಪ್ರಮಾಣ ಪತ್ರಗಳಲ್ಲಿ 3 ವರ್ಷಗಳಿಗಿಂತಲೂ ಕಡಿಮೆ ಸೇವಾನುಭವ ಹೊಂದಿರುವುದಾಗಿ ದೃಢೀಕರಿಸಿರುತ್ತಾರೆ.)<br>ಈ ಮೇಲಿನ ನ್ಯೂನ್ಯತೆಗಳ ಕುರಿತು ವಿಚಾರಣಾ ಪತ್ರ ಸಂಖ್ಯೆ:37/2018-19/ ದಿ:04.12.2018 ಹಾಗೂ 97/2018-19 ದಿ:02.01.2019 ಜಾರಿ ಮಾಡಲಾಗಿತ್ತು.<br>ಲೆಕ್ಕಪರಿಶೋಧನೆಗೆ ಅಗತ್ಯವಿರುವ ಪೂರಕ ದಾಖಲೆ ಪತ್ರಗಳನ್ನು ಪೂರ್ಣ ಪ್ರಮಾಣದಲ್ಲಿ ಹಾಜರುಪಡಿಸಿಲ್ಲದ ಕಾರಣ ಅನುಬಂಧ-30ರಲ್ಲಿ ಪಟ್ಟಿ ಮಾಡಲಾಗಿರುವ ಒಟ್ಟು ಸಂಭಾವನೆ ಪಾವತಿ ಮೊತ್ತ ರೂ.4,90,855/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. | 1) ಟಿ.ಎ/ ಡಿ.ಎ ಹಾಗೂ ಸಂಭಾವನೆ ವೋಚರುಗಳಲ್ಲಿ ಪರೀಕ್ಷಕರ ಮೂಲ ವೇತನವನ್ನು ಕಡ್ಡಾಯವಾಗಿ ನಮೂದಿಸಲು ಕ್ರಮಕೈಗೊಳ್ಳಲಾಗುತ್ತದೆ.<br>2) ಪ್ರಯಾಣ ಭತ್ಯೆ ಬಿಲ್ಲುಗಳನ್ನು ಹಾಜರಾತಿ ಪ್ರಮಾಣ ಪತ್ರದ ಆಧಾರದಲ್ಲಿ ಪಾವತಿಸಲಾಗುತ್ತದೆ ಮತ್ತು ವೋಚರುಗಳೊಂದಿಗೆ ಅದನ್ನು ಲಗತ್ತಿಸಲಾಗುತ್ತದೆ.<br>3) ಸಂಭಾವನೆ ಬಿಲ್ಲುಗಳನ್ನು ಪಾವತಿಸುವಾಗ Non U.G.C ಪ್ರಮಾಣ ಪತ್ರಗಳನ್ನು ಕಡ್ಡಾಯವಾಗಿ ಲಗತ್ತಿಸಲು ಕ್ರಮ ಕೈಗೊಳ್ಳಲಾಗುತ್ತದೆ.<br>4) ಪರೀಕ್ಷಾ ಕರ್ತವ್ಯಕ್ಕೆ ನೇಮಕಾತಿ ಮಾಡುವಾಗ ಕನಿಷ್ಠ ಮೂರು ವರ್ಷಗಳ ಬೋಧನಾ ಸೇವಾವಧಿಯನ್ನು ಪರಿಶೀಲಿಸಿಯೇ ನೇಮಕಾತಿ ಮಾಡಲಾಗುತ್ತದೆ. ಉಪನ್ಯಾಸಕರ ಜೇಷ್ಠತಾ ಪಟ್ಟಿ (Gradation List) ನ ಆಧಾರದಲ್ಲಿ ಪರೀಕ್ಷಾ ಕಾರ್ಯಕ್ಕೆ ನಿಯೋಜನೆ ಮಾಡಲಾಗುತ್ತದೆ. |
| 61 | 2016-17ನೇ ಸಾಲಿನಲ್ಲಿ ಪರೀಕ್ಷಾ ವಿಭಾಗದಲ್ಲಿ ನಿರ್ವಹಿಸಲಾದ ಚಿನ್ನದ ಪದಕ/ ಉತ್ತರ ಪತ್ರಿಕೆ/ ಅಂಕಪಟ್ಟಿ/ ಪದವಿ ಪ್ರಮಾಣ ಪತ್ರಗಳ/ ದಾಸ್ತಾನು ಸ್ವೀಕೃತಿ/ ವಿತರಣೆ/ ಅಂತಿಮ ಶಿಲ್ಕಿನ ವಿವರಗಳ ಬಗ್ಗೆ:<br>2016-17ನೇ ಸಾಲಿನಲ್ಲಿ ಹಿಂದಿನ ಸಾಲಿನ ಬಾಕಿ ಉಳಿದಿದ್ದ ಚಿನ್ನದ ಪದಕ/ ಅಂಕಪಟ್ಟಿ/ ಪದವಿ ಪ್ರಮಾಣ ಪತ್ರಗಳು ಹಾಗೂ ಉತ್ತರ ಪತ್ರಿಕೆಗಳ ದಾಸ್ತಾನು ವಿವರ ಹಾಗೂ 2016-17 ರಲ್ಲಿ ಮುದ್ರಿಸಿದ ಸಂಖ್ಯೆ ಹಾಗೂ ಒಟ್ಟಾರೆ 2016-17ನೇ ಸಾಲಿನಲ್ಲಿ ವಿತರಣೆ ವಿವರ ಮತ್ತು ದಿನಾಂಕ: 31.03.2017 ಕ್ಕೆ ಬಾಕಿ ಉಳಿದಿದ್ದ ದಾಸ್ತಾನು ಶಿಲ್ಕುಗಳ ವಿವರಗಳನ್ನು ಅನುಬಂಧ-31 ರಲ್ಲಿ ವರದಿಗೆ ಲಗತ್ತಿಸಿದೆ. | ಸಾಮಾನ್ಯ ಮಾಹಿತಿ ಆಕ್ಷೇಪಣೆ ಇರುವುದಿಲ್ಲ. |

| | | |
|---|---|---|
| 62 | <u>ಮೆ. ಆಟ್ರಿಸ್ ಟೆಕ್ನಾಲಜೀಸ್, ಬೆಂಗಳೂರು ರವರಿಂದ ವಸೂಲು ಮಾಡಬೇಕಾಗಿದ್ದ ಬಾಕಿ ಮೊತ್ತ ರೂ.5,40,875/- ಗಳನ್ನು ಈವರೆವಿಗೂ ವಸೂಲಾತಿ ಮಾಡದಿರುವ ಬಗ್ಗೆ :</u><br>2016-17ನೇ ಸಾಲಿನಲ್ಲಿ 2015-16 ರ ಯಶಸ್ವೀ ಟೆಂಡರ್‌ದಾರರಾದ (2015-16 ರ ಟೆಂಡರ್‌ದಾರರು) ಮೆ. ಆಟ್ರಿಸ್ ಟೆಕ್ನಾಲಜೀಸ್ ಪ್ರೈವೇಟ್ (ಲಿ) ಬೆಂಗಳೂರು ರವರಿಗೆ 2016-17ನೇ ಸಾಲಿನಲ್ಲಿ ಪರೀಕ್ಷಾ ಗಣಕೀಕರಣ ಕಾರ್ಯವನ್ನು ನಿರ್ವಹಿಸಲು ಕಾರ್ಯದೇಶ ನೀಡಿದ್ದು, ಕಾರ್ಯಾದೇಶದೊಂದಿಗೆ ವಿಶ್ವವಿದ್ಯಾನಿಲಯದ ಈ ಹಿಂದೆ ಮುದ್ರಿಸಿದ್ದ ದಾಸ್ತಾನಿನಲ್ಲಿ ಉಳಿದಿದ್ದ ಉತ್ತರ ಪತ್ರಿಕೆಗಳು/ಸ್ಟೇಷನರಿ ಪದಾರ್ಥಗಳನ್ನು ಉಪಯೋಗಿಸಿಕೊಂಡು ಬಿಲ್ಲಿನಲ್ಲಿ ಸದರಿ ಐಟಂಗಳ ಬಾಬ್ತು ಒಟ್ಟು ರೂ.46,12,546/-ಗಳನ್ನು ಕಟಾಯಿಸಿಕೊಂಡು ಬಾಕಿ ಹಣ ಪಾವತಿಸುವ ಷರತ್ತಿನೊಂದಿಗೆ ಕರಾರು ಮಾಡಿಕೊಳ್ಳಲಾಗಿತ್ತು.<br>ತದನಂತರ ಆಟ್ರಿಸ್ ಕಂಪೆನಿಯ ಬಿಲ್ಲಿನಲ್ಲಿ ರೂ.29,46,877/-ಗಳನ್ನು ಮಾತ್ರ ಕಟಾವಣೆ ಮಾಡಿದ್ದು ಉಳಿದ ರೂ.16,65,669/-ಗಳನ್ನು ಕಟಾವಣೆ ಮಾಡಲಾಗಿರುವುದಿಲ್ಲ.<br>ದಿನಾಂಕ:07.10.2016 ರ ಪಾವತಿ ಬಿಲ್ಲಿನಲ್ಲಿ ಸದರಿ ಮೊತ್ತವನ್ನು ಬಾಕಿ ಉಳಿದಿದ್ದ ಮೊತ್ತ ಎಂದು ಬರೆದು ಕಟಾಯಿಸಲಾಗಿತ್ತು. ಪುನಃ ಸದರಿ ಬಾಕಿ ಮೊತ್ತ ರೂ.16,65,669/-ಗಳನ್ನು ಮೆ. ಆಟ್ರಿಸ್ ಟೆಕ್ನಾಲಜೀಸ್ ರವರಿಗೆ ಚೆಕ್ ನಂ:148800 ರಲ್ಲಿ ಪಾವತಿಸಲಾಗಿದೆ.<br>ಹಾಗಾಗಿ ರೂ.16,65,669/-ಗಳು ಕಟಾವಣೆ ಬಾಕಿ ಇರುತ್ತದೆ. ಈ ದಿವಸದವರೆವಿಗೆ ಸಾಲಿಯಾನ ಕನಿಷ್ಠ ಶೇ. 8 ಬಡ್ಡಿಯೊಂದಿಗೆ ಅಂದರೇ ರೂ.3,99,768/-ಗಳ ಬಡ್ಡಿ ಸೇರಿ ಒಟ್ಟಾರೆ ರೂ.20,65,467/-ಗಳನ್ನು ವಸೂಲಿ ಮಾಡಲು ಸೂಚಿಸಿ ಲೆಕ್ಕಪಾಸಣಾ ವಿಚಾರಣಾ ಪತ್ರ ಸಂಖ್ಯೆ:173 ದಿ:05.02.2019 ಜಾರಿ ಮಾಡಲಾಗಿದೆ.<br>ಈ ಬಗ್ಗೆ ಯಾವುದೇ ವಸೂಲಾತಿ ಮಾಡಿದ ವಿವರ ಹಾಜರುಪಡಿಸದ ಕಾರಣ ಒಟ್ಟು ರೂ.20,65,467/-ಗಳನ್ನು ಮೆ. ಆಟ್ರಿಸ್ ಟೆಕ್ನಾಲಜೀಸ್ ಪ್ರೈವೇಟ್ (ಲಿ) ಬೆಂಗಳೂರು ರವರಿಂದ ವಸೂಲಾತಿಗೆ ಸೂಚಿಸಿಲಾಗಿತ್ತು, ದಿನಾಂಕ:10.05.2019 ರ ಪುನರ್ ಪರಿಶೀಲನಾ ವೇಳೆಯಲ್ಲಿ ರೂ.11,24,794/-ಗಳಿಗೆ ಮಾಹಿತಿ ನೀಡಿರುವುದನ್ನು ಅಂಗೀಕರಿಸಲಾಗಿದ್ದು, ಬಾಕಿ ರೂ.5,40,875/-ಗಳಿಗೆ ನೀಡಿರುವ ವಿವರಣೆಯು ಸಮರ್ಪಕವಾಗಿಲ್ಲದ ಕಾರಣ ಈ ಮೊತ್ತಕ್ಕೆ ಕಡಿತಗೊಳಿಸಿದ ಬಿಲ್ಲುಗಳ ವಿವರಗಳನ್ನು ಒದಗಿಸಲು ಸೂಚಿಸುತ್ತಾ, ತಪ್ಪಿದಲ್ಲಿ ರೂ.5,40,875/-ಗಳನ್ನು ವಸೂಲಿಸಲು ಕ್ರಮವಹಿಸುವುದು. | ಆಟ್ರಿಸ್ ಟೆಕ್ನೋಲೊಜಿಸ್‌ರೊಂದಿಗೆ ಆಗಿರುವ ಒಪ್ಪಂದದಂತೆ ವಿಶ್ವವಿದ್ಯಾನಿಲಯದಲ್ಲಿ ಬಾಕಿ ಉಳಿದಿದ್ದ ಮತ್ತು ಸಧ್ರಿ ಸಂಸ್ಥೆಗೆ ನೀಡಬೇಕಾದ ಖಾಲಿ ಉತ್ತರ ಪತ್ರಿಕೆ ಮತ್ತು ಪರೀಕ್ಷಾ ಸಾಮಾಗ್ರಿಗಳ ಮೌಲ್ಯ ಕೆಳಕಂಡಂತಿದೆ.<br>1. ಖಾಲಿ ಉತ್ತರ ಪತ್ರಿಕೆಗಳ ಮೌಲ್ಯ = ರೂ. 4072653.00<br>2. ಪರೀಕ್ಷಾ ಸಾಧನಗಳ ಮೌಲ್ಯ = ರೂ. 526736.00<br>ಒಟ್ಟು = ರೂ. 4599389.00<br>3. <u>ಕಳೆ:</u><br>ಇದರಲ್ಲಿ ಕಾಲೇಜಿನಲ್ಲಿ ಉಪಯೋಗಿಸದೆ ಬಾಕಿ ಇದ್ದ ಸಾಮಾಗ್ರಿಗಳನ್ನು ಹಿಂದೆ ತಂದಿರುವ ಬಗ್ಗೆ.<br>ಅ) ಖಾಲಿ ಉತ್ತರ ಪತ್ರಕೆಗಳ ಮೌಲ್ಯ = ರೂ. 851665.00<br>ಆ) ಪರೀಕ್ಷಾ ಸಾಮಾಗ್ರಿಗಳ ಮೌಲ್ಯ = ರೂ. 273129.00<br>ಒಟ್ಟು = ರೂ. **1124794.00**<br><u>ವಸೂಲಾತಿ ಮಾಡಬೇಕಾದ ಮೊತ್ತ</u> = 4599389–1124794 = ರೂ. **3474595.00**<br>ಸೇರಿಸು: ಕಾಲೇಜಿನಿಂದ ಸಾಮಾಗ್ರಿಗಳನ್ನು ಸಾಗಿಸಿದ ಬಾಬ್ತು ಸಾಗಣಿಕೆ ವೆಚ್ಚ = ರೂ. 11000.00<br>ಒಟ್ಟು ವಸೂಲಾತಿ ಮೊತ್ತ ರೂ. 3485595.00<br><u>ವಸೂಲಾದ ಮೊತ್ತ</u><br>1. ಒಂದನೇ ಬಿಲ್ಲಿನಲ್ಲಿ ರೂ. 2946877.00<br>2. ಎರಡನೇ ಬಿಲ್ಲಿನಲ್ಲಿ ರೂ. 538718.00<br>ಒಟ್ಟು ವಸೂಲಾತಿ ರೂ. 3485595.00<br>ವಸೂಲಾತಿಗಾಗಿ ಬಾಕಿ ರೂ. ಇಲ್ಲ<br>ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ. |
| 63 | <u>ಮೆ\|\| **Cerbrera integrated Tech. Ltd** ಬೆಂಗಳೂರು ರವರಿಂದ ಖರೀದಿ ಪ್ರಕ್ರಿಯೆಯಲ್ಲಿರುವ ನ್ಯೂನ್ಯತೆಗಳು :</u><br>ಪರೀಕ್ಷಾ ಗಣಕೀಕರಣ ದತ್ತಾಂಶಗಳನ್ನು ಸುರಕ್ಷಿತವಾಗಿ ಕಾಪಾಡುವ ಸಂಬಂಧವಾಗಿ 2 ಸರ್ವರ್‌ಗಳನ್ನು ಮೆ॥ Cerbrera integrated Tech.Ltd ಬೆಂಗಳೂರು ರವರಿಂದ ಖರೀದಿಸಲಾಗಿರುತ್ತದೆ. ಒಟ್ಟು ರೂ.13,86,880/-ಗಳನ್ನು ಪಾವತಿಸಲಾಗಿದೆ.<br>ಇ ಪೋರ್ಟಲ್ ಮೂಲಕ 2 ಸರ್ವರ್‌ಗಳ ಖರೀದಿಗಾಗಿ ಟೆಂಡರ್ ಕರೆದು ದಿನಾಂಕ:26.04.2016 ರ ತಾಂತ್ರಿಕ ಟೆಂಡರ್ ಪರಿಶೀಲನಾ ಸಮಿತಿಯ ಸಭೆ (ಟಿ.ಎಸ್.ಇ) ನಡವಳಿ ರೀತ್ಯಾ 2 ಟೆಂಡರ್‌ಗಳನ್ನು ಮಾತ್ರ ಅಂಗೀಕರಿಸಿ, ಅದರಲ್ಲಿ ಒಂದನ್ನು ತಿರಸ್ಕರಿಸಲಾಗಿರುತ್ತದೆ. ಇದು ಕೆ.ಟಿ.ಪಿ.ಪಿ ಕಾಯಿದೆ-PWD/1359/SO/FC 2001(P-2) ಬೆಂಗಳೂರು ದಿ:03.12.2002 ರ ರೀತ್ಯಾ ಸಿಂಗಲ್ ಟೆಂಡರ್ ಆದಲ್ಲಿ ಮೊದಲ ಆದ್ಯತೆ ಟೆಂಡರ್‌ನ್ನು ರದ್ದುಪಡಿಸಬೇಕಿರುತ್ತದೆ. ನಂತರ ಅದರ ಅವಶ್ಯಕತೆಯ ಮೇಲೆ ದರ ಸಂದಾನಕ್ಕೆ ಆಹ್ವಾನಿಸಬೇಕಿರುತ್ತದೆ. | ಪರೀಕ್ಷಾ ಗಣಕೀಕರಣ ದತ್ತಾಂಶಗಳನ್ನು ಸುರಕ್ಷಿತವಾಗಿ ಕಾಪಾಡುವ ಸಲುವಾಗಿ ಸರ್ವರ್‌ಗಳನ್ನು ಅತೀ ತುರ್ತಾಗಿ ಖರೀದಿಸಬೇಕಾಗಿದ್ದು ಟೆಂಡರ್ ಕರೆದಾಗ ತಾಂತ್ರಿಕ ಬಿಡ್‌ನಲ್ಲಿ ಇಬ್ಬರು ಟೆಂಡರ್‌ದಾರರು ಭಾಗವಹಿಸಿದ್ದು ಒಬ್ಬ ಟೆಂಡರ್‌ದಾರರಾದ ಮೆ॥ Cerbrera integrated Tech.Ltd ಬೆಂಗಳೂರು ಇವರ ಟೆಂಡರ್ ದರವು ಮಾರುಕಟ್ಟೆ ದರದಲ್ಲಿ ಕನಿಷ್ಟವಾಗಿದ್ದುದರಿಂದ ಸಿಂಡಿಕೇಟ್ ಸಭೆಯಲ್ಲಿ ಅನುಮೋದಿಸಲಾಗಿದೆ.ಇವರಿಂದ ಖರೀದಿಸಿರುವ ಸರ್ವರ್‌ಗಳು ಸರಿಯಾಗಿ ಕಾರ್ಯ ನಿರ್ವಹಿಸುತ್ತಿವೆ ಮತ್ತು ಉಪಕರಣದ ಕಾರ್ಯನಿರ್ವಹಣೆ ಗುಣಮಟ್ಟದ ಬಗ್ಗೆ ತಾಂತ್ರಿಕ ತಜ್ಞರಿಂದ ಪ್ರಮಾಣ ಪತ್ರವನ್ನು ಪಡೆಯಲಾಗಿದೆ. ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ. |

ಕೆ.ಟಿ.ಪಿ.ಪಿ ನಿಯಮ 2000 ರ ರೀತ್ಯಾ ಅತೀ ತುರ್ತು ಎಂದು ನಮೂದಿಸಿರುವ ಐಟಂಗಳನ್ನು ಒಂದು ಟೆಂಡರ್‌ಗೆ ಮುಕ್ತಾಯ ಮಾಡಿ, ಮರು ಟೆಂಡರ್ ಕರೆಯದೇ, NOA ಷರತ್ತುಗಳನ್ನು ಕರಾರಿಗೆ ಅಳವಡಿಸಿಕೊಳ್ಳದೆ ಸರಬರಾಜು ಆದೇಶ ನೀಡಿ, ಸಿಂಡಿಕೇಟ್ ನಿರ್ಣಯದ ಆಧಾರದ ಮೇಲೆ 2 ಸರ್ವರ್‌ಗಳನ್ನು ಖರೀದಿಸಲಾಗಿದೆ.

ಹಾಗೂ ಸದರಿ ಸರ್ವರ್‌ಗಳ Installation ಮಾಡಲಾಗಿದೆ ಎಂದು ವರದಿ ನೀಡಿರುವುದು ಸರಿಯಷ್ಟೇ. ಆದರೆ, ತಾಂತ್ರಿಕ ತಜ್ಞರ ಗುಣಮಟ್ಟದ ಪ್ರಮಾಣ ಪತ್ರ, ಸದರಿ ಉಪಕರಣದ Accessories ಗುಣಮಟ್ಟ, ದಾಸ್ತಾನು ಸ್ವೀಕೃತಿ, ಉಪಕರಣದ ಕಾರ್ಯ ನಿರ್ವಹಣೆ ಇತ್ಯಾದಿ ವಿವರಗಳನ್ನು ಪರೀಕ್ಷಿಸಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸುವಂತೆ ಲೆಕ್ಕತಪಾಸಣಾ ವಿಚಾರಣಾ ಪತ್ರ ಸಂಖ್ಯೆ:174 ದಿ:05.02.2019 ಕ್ಕೆ ನೀಡಿದ್ದು ಸೂಕ್ತ ಸಮಜಾಯಿಷಿ ನೀಡಿರುವುದಿಲ್ಲ. ಈ ಕಾರಣದಿಂದ ಮೆ॥ Cerbrera integrated Tech. Ltd ಬೆಂಗಳೂರು ರವರಿಗೆ ಪಾವತಿಸಿರುವ ಮೊತ್ತ ರೂ.13,86,880/-ಗಳನ್ನು ಆಕ್ಷೇಪಿಸಲಾಗಿದೆ.

64

ಚಿನ್ನದ ಪದಕಗಳ ಖರೀದಿ ನ್ಯೂನ್ಯತೆಗಳು :

2016-17ನೇ ಸಾಲಿನಲ್ಲಿ ಮೆ॥ ಸನಾತನ ಜ್ಯೂವೆಲರಿ ವರ್ಕ್ಸ್ ಮಂಗಳೂರು ರವರಿಂದ 43 ಸಂಖ್ಯೆ ಚಿನ್ನದ ಪದಕಗಳನ್ನು ಖರೀದಿಸಲಾಗಿದೆ.

ರೂ.2,00,000/-ಗಳನ್ನು ಮುಂಗಡ ಹಣ ನೀಡಲಾಗಿದೆ. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಮುಂಗಡ ನೀಡಲು ನಿಯಮಗಳಲ್ಲಿ ಅವಕಾಶವಿರದಿದ್ದರೂ ಸಹ ಮುಂಗಡ ನೀಡಲಾಗಿದೆ. ಪ್ರತಿ ಪದಕಕ್ಕೆ ರೂ.6,670/-ಗಳಂತೆ 43 ಸಂಖ್ಯೆ ಚಿನ್ನದ ಪದಕಗಳ ಬಾಬ್ತು ಒಟ್ಟ ರೂ.2,86,810/-ಗಳಾಗಿದ್ದು, ಬಾಕಿ ಹಣವನ್ನು ಚೆಕ್ ನಂ:195168 ದಿ:'23.03.2017 ಕ್ಕೆ ರೂ.81,074/- ಪಾವತಿಸಲಾಗಿದೆ.

ಕರಾರು ಒಪ್ಪಂದಕ್ಕೆ ಮುನ್ನ ಚಿನ್ನದ ಪದಕಗಳ ಮಾದರಿ ತರಿಸಿ ಪರಿಶೀಲಿಸಲು ಒಂದು ಕಮಿಟಿ ಸ್ಥಾಪಿಸಿ ಪರಿಣಿತ ಅಕ್ಕಸಾಲಿಗರನ್ನು ಒಳಗೊಂಡಂತೆ ಕಮಿಟಿಯಲ್ಲಿ ಚಿನ್ನದ ಅಂಶದ ಬಗ್ಗೆ ನಿಖರತೆ/ ಗುಣಮಟ್ಟ ಪರಿಶೀಲಿಸಿ, ನಂತರ ಚಿನ್ನದ ಪದಕ ತಯಾರಿಕಾ ಅಂಗಡಿಗೆ ಸರಬರಾಜು ಆದೇಶ ನೀಡಬೇಕಾಗಿರುತ್ತದೆ. ಹಾಗೂ ಖರೀದಿ ನಂತರ ಎಲ್ಲಾ ಪದಕಗಳನ್ನು ಮತ್ತೆ ಪರೀಕ್ಷೆಗೆ ಒಳಪಡಿಸಿ ಗುಣಮಟ್ಟ ಹೊಂದಿರುವ ಬಗ್ಗೆ ಖಾತರಿಗೊಳಿಸಬೇಕಿದೆ. ಈ ಸಂಬಂಧದ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರು ಪಡಿಸಿರುವುದಿಲ್ಲ.

ಮೆ॥ ಸನಾತನ ಜ್ಯೂವೆಲರಿ ವರ್ಕ್ಸ್ ಮಂಗಳೂರು ರವರಿಗೆ ನಿಯಮಬಾಹಿರವಾಗಿ ಮುಂಗಡ ಪಾವತಿಸಿರುವ ಬಗ್ಗೆ ಹಾಗೂ ಖರೀದಿ ಪ್ರಕ್ರಿಯೆಯಲ್ಲಿ ಉಂಟಾಗಿರುವ ನಷ್ಟದ ಬಗ್ಗೆ ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ಆಡಳಿತಾತ್ಮಕ ಕ್ರಮ ವಹಿಸಲು ಸೂಚಿಸಲಾಗಿದೆ. ಈ ಬಗ್ಗೆ ಸೂಕ್ತ ಸಮಜಾಯಿಷಿ ನೀಡುವವರೆವಿಗೆ ಪಾವತಿ ಮೊತ್ತ ರೂ.2,86,810/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

ಮಂಗಳೂರು ವಿಶ್ವವಿದ್ಯಾಲಯ ಸ್ಥಾಪನೆಯಾದಂದಿನಿಂದಲೂ ವಾರ್ಷಿಕ ಘಟಿಕೋತ್ಸವದಂದು ಚಿನ್ನದ ಪದಕ ವಿಜೇತ ವಿದ್ಯಾರ್ಥಿಗಳಿಗೆ ನೀಡುವ ಚಿನ್ನದ ಪದಕಗಳ ಬಗ್ಗೆ ಚಿನ್ನದ ಪದಕಗಳ ಪರೀಕ್ಷಕರ ಕಮಿಟಿಯನ್ನು ರಚಿಸಿರುವುದಿಲ್ಲ. ಚಿನ್ನದ ಕ್ರಯವು ದಿನವಹಿ ದರಗಳಾಗಿರುವುದರಿಂದ ಚಿನ್ನದ ಪದಕಗಳ ತಯಾರಕರು ಪದಕಗಳ ಆದೇಶ ನೀಡಿದಾಗಲೇ ಮುಂಗಡಕ್ಕೆ ಬೇಡಿಕೆಯಿಡುತ್ತಿದ್ದರು. ಈ ಬಗ್ಗೆ ಕುಲಪತಿಗಳ ಅನುಮೋದನೆ ಪಡೆದು ಮುಂಗಡ ನೀಡಲಾಗುತ್ತಿದೆ. ಆಕ್ಷೇಪಣೆಯಲ್ಲಿ ಸೂಚಿಸಿರುವ ಸೂಚನೆಯಂತೆ ಮುಂದಿನ ಘಟಿಕೋತ್ಸವದಲ್ಲಿ ಕ್ರಮ ಕೈಗೊಳ್ಳಲಾಗುವುದು. ಆಕ್ಷೇಪಣೆಯನ್ನು ಕೈ ಬಿಡುವಂತೆ ಕೋರಲಾಗಿದೆ.

65

ಪ್ರಶ್ನೆಪತ್ರಿಕೆ ಮುದ್ರಣಕ್ಕೆ ಸಂಬಂಧಿಸಿದ ಟೆಂಡರ್ ಪ್ರಕ್ರಿಯೆ ಕೈಗೊಳ್ಳದಿರುವುದು :

2016-17ನೇ ಸಾಲಿನಲ್ಲಿ ಪ್ರಶ್ನೆ ಪತ್ರಿಕೆಗಳನ್ನು ಮೆ॥ Quick Fix Printers ಮಣಿಪಾಲ ರವರಿಂದ ಮುದ್ರಿಸಿದ್ದು ಒಟ್ಟು ರೂ.39,11,415/-ಗಳನ್ನು ಪಾವತಿಸಲಾಗಿದೆ. ಪಾವತಿ ವಿವರ ಕೆಳಕಂಡಂತಿದೆ:

| ಕ್ರ.ಸಂ | ಒಟ್ಟು ಬಿಲ್ಲಿನ ಮೊತ್ತ | ಆದಾಯ ತೆರಿಗೆ ಕಟಾವಣೆ | ಪಾವತಿ | ಚೆಕ್ ನಂ/ ದಿನಾಂಕ |
|---|---|---|---|---|
| 1 | 19,94,015 | 38,300 | 19,55,715 | 148402/ 20.09.2016 |
| 2 | 1,12,648 | 2,164 | 1,10,484 | 146516/ 24.10.2016 |
| 3 | 14,70,630 | 28,247 | 14,42,383 | 203256/ 23.01.2017 |
| 4 | 3,34,122 | 6,418 | 3,27,704 | 294502/ 27.03.2017 |
| ಒಟ್ಟು ರೂ. | 39,11,415 | 75,129 | 38,36,286 | |

ಪರೀಕ್ಷಾ ಮುದ್ರಣಕ್ಕೆ ಸಂಬಂಧಿಸಿ ಸರಕಾರದಿಂದ 4 ಜಿ ವಿನಾಯಿತಿಯನ್ನು ಪ್ರತಿ ವರ್ಷ ಪಡೆಯುವ ಬಗ್ಗೆ ಕ್ರಮ ವಹಿಸಲಾಗುವುದು ಹಾಗೂ 2016-17ನೇ ಸಾಲಿಗೆ ಕೆ.ಟಿ.ಪಿ.ಪಿ ಕಾಯಿದೆ-2000 ರ ಕಲಂ 4(ಜಿ) ವಿನಾಯಿತಿಯನ್ನು ಪಡೆದು ಮುಂದಿನ ಲೆಕ್ಕ ಪರಿಶೋಧನಾ ಸಂದರ್ಭದಲ್ಲಿ ಒದಗಿಸಲಾಗುವುದು. ಆದುದರಿಂದ ಆಕ್ಷೇಪಣೆಯನ್ನು ಕೈಬಿಡಲು ಕೋರಲಾಗಿದೆ

| | | |
|---|---|---|
| | ಕರ್ನಾಟಕ ಪಾರದರ್ಶಕದ ಸಾರ್ವಜನಿಕ ಸಂಗ್ರಹಣೆ ನಿಯಮ 1999 ಹಾಗೂ ಅಧಿನಿಯಮ 2000 ರ ರೀತ್ಯಾ ಯಾವುದೇ ಒಡಂಬಡಿಕೆ ಅವಧಿ 1 (ಒಂದು) ವರ್ಷಕ್ಕೆ ಸೀಮಿತವಾಗಿರಬೇಕು.<br>ಸರ್ಕಾರದ ಆದೇಶ 2003 ರಲ್ಲಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ 4(ಜಿ) ವಿನಾಯಿತಿ ನೀಡಲಾಗಿದೆ. ಸದರಿ ವಿನಾಯಿತಿಯು ಕೇವಲ 1 ವರ್ಷದ ಅವಧಿಗೆ ಮಾತ್ರ ಸೀಮಿತವಾಗಿದೆ. 4(ಜಿ) ವಿನಾಯಿತಿಯನ್ನು ಸರ್ಕಾರದಿಂದ ಪ್ರತಿ ವರ್ಷ ಪಡೆಯಬೇಕಾಗಿರುತ್ತದೆ. ಆದರೆ 2003 ರ ಸಾಲಿಗೆ ಸರ್ಕಾರದಿಂದ ಕೆ.ಟಿ.ಪಿ.ಪಿ ಕಾಯಿದೆ-2000 ರ ಕಲಂ 4(ಜಿ) ವಿನಾಯಿತಿ ಪಡೆದಿರುವುದನ್ನು ಪರಿಗಣಿಸಿ 2016-17 ನೇ ಸಾಲಿಗೂ ವಿನಾಯಿತಿಯನ್ನು ಮುಂದುವರೆಸಿಕೊಂಡು ಬಂದಿರುವುದು ಆಕ್ಷೇಪಾರ್ಹವಾಗಿದೆ.<br>ಪ್ರಶ್ನೆ ಪತ್ರಿಕೆ ಮುದ್ರಣ ಕಾರ್ಯವೂ ಗೌಪ್ಯ ಎಂದು ಷರಾ ಬರೆದು M/S Quick Fix Printers ಮಣಿಪಾಲರವರಿಗೆ ಕಾರ್ಯಾದೇಶ ನೀಡಿರುವ ಕ್ರಮ ಗೌಪ್ಯತೆಯನ್ನು ಕಾಪಾಡುವಲ್ಲಿ ಸಂಸ್ಥೆಯು ವಿಫಲವಾಗಿದೆ. ಅದರ ಸಾಧಕ ಬಾದಕಗಳಿಗೂ ಸಹ ಸಂಸ್ಥೆಯೇ ಜವಾಬ್ದಾರಿಯಾಗಿರುತ್ತದೆ. ಈ ಕಾರ್ಯಕ್ಕೆ ಅಗತ್ಯವಿರುವ 4(ಜಿ) ವಿನಾಯಿತಿಯನ್ನು ಇನ್ನು ಮುಂದೆ ಪ್ರತಿ ವರ್ಷ ಪಡೆದುಕೊಂಡು, ಲೆಕ್ಕಪರಿಶೋಧನೆಗೆ ಹಾಜರುಪಡಿಸುವವರೆಗೂ ರೂ.39,11,415/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. | |
| 66 | <u>ಸರ್ಕಾರದ ಆದೇಶ ಉಲ್ಲಂಘನೆ ಮಾಡಿ ಹೊರ ಸಂಸ್ಥೆಗಳಿಂದ ಅಂಕಪಟ್ಟಿ/ ಪದವಿ ಪ್ರಮಾಣ ಪತ್ರಗಳನ್ನು ಮುದ್ರಿಸಿ ಹಣ ಪಾವತಿಸಿರುವ ಬಗ್ಗೆ</u><br>2016-17ನೇ ಸಾಲಿನಲ್ಲಿ ಈ ಹಿಂದೆ ಮಂಗಳೂರು ವಿಶ್ವವಿದ್ಯಾನಿಲಯದ ಕರಾರು ಒಪ್ಪಂದವನ್ನು ಮಾಡಿಕೊಂಡಿದ್ದ ಮೆ॥ ಮದ್ದಾಲ ಇಂಡಸ್ಟ್ರೀಸ್ ಗುಂಟೂರು ರವರಿಂದಲೇ ಅಂಕಪಟ್ಟಿ/ ಪದವಿ ಪ್ರಮಾಣ ಪತ್ರಗಳನ್ನು ಮುದ್ರಣ ಮಾಡಿಸಿ ಹಣ ಪಾವತಿಸಲಾಗಿದೆ.<br>ಕರಾರು ಒಪ್ಪಂದವನ್ನು ಕೆ.ಟಿ.ಪಿ.ಪಿ ಕಾಯ್ದೆ 1999 ನಿಯಮಗಳು 2000 ರ ಪ್ರಕಾರ ಕರಾರು ಪತ್ರ ಒಂದು ವರ್ಷದವರೆವಿಗೆ ಮಾತ್ರ ಚಾಲ್ತಿಯಲ್ಲಿರುತ್ತದೆ. ಆದರೆ, ಕಾಯ್ದೆ ನಿಯಮಗಳನ್ನು ಉಲ್ಲಂಘಿಸಿ ಅವೈಜ್ಞಾನಿಕವಾಗಿ ದಿ;07.05.2015 ರಿಂದ 5 ವರ್ಷಗಳವರೆವಿಗೆ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕರಾರು ಒಪ್ಪಂದ ಮಾಡಿಕೊಂಡಿರುವ ಕ್ರಮ ಅಸ್ವಾಭಾವಿಕ ಪ್ರಕ್ರಿಯೆ ಆಗಿರುತ್ತದೆ.<br>ತದನಂತರ ಸರ್ಕಾರದಿಂದದಿ;29.09.2016 ಕ್ಕೆ ಆದೇಶ ಸಂಖ್ಯೆ:ಇಡಿ/386/ಯು.ಎನ್.ಇ/2016 ರಲ್ಲಿಅಂಕಪಟ್ಟಿ/ ಪದವಿ ಪ್ರಮಾಣ ಪತ್ರಗಳನ್ನು ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಸಂಸ್ಥೆಯಿಂದ ಮುದ್ರಿಸಲು ಸೂಚನೆ ನೀಡಲಾಗಿದೆ.<br>ಅದಾಗ್ಯೂ ಸಹ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ 2016-17 ರ ಅಂತ್ಯದವರೆವಿಗಿನ ಎಲ್ಲಾ ಪರೀಕ್ಷೆಗಳ ಅಂಕಪಟ್ಟಿ/ ಪದವಿ ಪ್ರಮಾಣ ಪತ್ರ ಮುದ್ರಣವನ್ನು ಮೆ॥ ಮದ್ದಾಲ ಇಂಡಸ್ಟ್ರೀಸ್ ಗುಂಟೂರುರವರಿಂದಲೇ ಕರಾರು ಒಪ್ಪಂದ 5 ವರ್ಷಗಳಿಗೆ ಮಾಡಿಕೊಂಡಿರುವುದರಿಂದ ಎಂದು ಷರಾ ಬರೆದು ಮತ್ತು ಸರ್ಕಾರಕ್ಕೆ ಪುನಃ ಸ್ಪಷ್ಟೀಕರಣ ಕೋರಿ ಪತ್ರ ಬರೆಯಲಾಗಿದೆ. ಮೆ॥ ಮದ್ದಾಲ ಇಂಡಸ್ಟ್ರೀಸ್ ಗುಂಟೂರು ರವರಿಂದಲೇ ಮುದ್ರಣ ಮಾಡಿಸಿ ಹಣ ಪಾವತಿಸಲಾಗಿದೆ.<br>ಇದು ಸರ್ಕಾರಿ ಆದೇಶದ ಸ್ಪಷ್ಟ ಉಲ್ಲಂಘನೆ ಆಗಿದ್ದು ಸೂಕ್ತ ಸಮಜಾಯಿಷಿ ನೀಡಲು ಕೋರಿ ಲೆಕ್ಕತಪಾಸಣಾ ವಿಚಾರಣಾ ಪತ್ರ ಸಂಖ್ಯೆ; 184 ದಿ:07.02.2019 ರಂದು ಜಾರಿ ಮಾಡಲಾಗಿದ್ದು, ಇದಕ್ಕೆ ಅನುಸರಣಾ ವರದಿ ನೀಡಿದ್ದು, ಸರ್ಕಾರಿ ಆದೇಶ ಜಾರಿಯಾದ ದಿನಾಂಕದಲ್ಲಿ ಅತಿ ಸಮೀಪದಲ್ಲಿ ಪರೀಕ್ಷಾ ಕಾರ್ಯಗಳು ನಡೆಸಬೇಕಾದ್ದರಿಂದ ಈ ಆದೇಶವನ್ನು ತಕ್ಷಣ ಪಾಲಿಸಲು ಸಾಧ್ಯವಾಗಿರುವುದಿಲ್ಲ ಎಂದು ಉತ್ತರಿಸಲಾಗಿದೆ. ಈ ಬಗ್ಗೆ ನಿಯಮಗಳಿಗೆ ವಿರುದ್ಧವಾಗಿ ಹಾಗೂ ಸರ್ಕಾರದ ನಿರ್ದೇಶನವನ್ನು ಪಾಲಿಸದೆ ಮುಂದಿನ ಪರೀಕ್ಷೆಗಳಿಗೆ ಅಂಕಪಟ್ಟಿಯನ್ನು ಮೆ॥ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಸಂಸ್ಥೆಯಿಂದ ಮುದ್ರಿಸಲು ಕ್ರಮಕೈಗೊಳ್ಳುವುದು. ಇಲ್ಲದಿದ್ದಲ್ಲಿ ಈ ಬಗ್ಗೆ ಆಡಳಿತಾತ್ಮಕವಾಗಿ ಪರಿಶೀಲಿಸಿ, ಅಧಿಕಾರಿ/ ಸಿಬ್ಬಂದಿಗಳ ವಿರುದ್ಧ ಸೂಕ್ತ ಕ್ರಮ ಜರುಗಿಸುಲು ಸೂಚಿಸಿದೆ. | ಮೆ॥ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಸಂಸ್ಥೆಯಿಂದ ಮುದ್ರಣ ಕಾರ್ಯ ನಿರ್ವಹಿಸುವ ಬಗ್ಗೆ ಈಗಾಗಲೇ ಕ್ರಮ ವಹಿಸಲಾಗಿದೆ. |
| 67 | <u>ಹಾಸ್ಟೆಲ್ ವಿಭಾಗ</u><br><u>ಆರ್ಥಿಕ ಪರಿಸ್ಥಿತಿ :</u><br>ಪುರುಷ/ ಮಹಿಳೆಯರ ವಸತಿನಿಲಯ, ಮಂಗಳೂರು, ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯ, ಮಂಗಳೂರು, ಪುರುಷ/ ಮಹಿಳೆಯರ ವಸತಿ ನಿಲಯ, ಮಡಿಕೇರಿ ಹಾಗೂ ಪುರುಷರ ವಸತಿ ನಿಲಯ ಚಿಕ್ಕಳುವಾರ ಇಲ್ಲಿನ ವಸತಿ ನಿಲಯಗಳ ಆರ್ಥಿಕ ಪರಿಸ್ಥಿತಿಯನ್ನು ಪರಿಶೀಲಿಸಲಾಗಿದ್ದು ವಿವರಗಳನ್ನು <u>ಅನುಬಂಧ-32 ರಲ್ಲಿ</u> ವರದಿಗೆ ಲಗತ್ತಿಸಿದೆ. ಅನುಬಂಧದಲ್ಲಿ ವಿವರಿಸಿರುವಂತೆ ಕೆಳಕಂಡ ವಸತಿ ನಿಲಯಗಳಲ್ಲಿ ನಗದು ವಹಿಯನ್ನು ಕರ್ನಾಟಕ ಆರ್ಥಿಕ ಸಂಹಿತೆಯಲ್ಲಿ ಸೂಚಿಸಿರುವ ಪ್ರಕಾರ ನಿರ್ವಹಿಸಿರುವುದಿಲ್ಲ. ಈ ಬಗ್ಗೆ ನಿಲಯಪಾಲಕರ ಮೇಲೆ ಆಡಳಿತ್ಮಾಕ ಕ್ರಮ ಕೈಗೊಳ್ಳುವಂತೆ ಸೂಚಿಸಿದೆ. | |

| | | |
|---|---|---|
| | | ನಗದು ವಹಿಯನ್ನು ನಿರ್ವಹಿಸಲಾಗುತ್ತಿದೆ. ಮುಂದಿನ ಲೆಕ್ಕತಪಾಸಣೆ ವೇಳೆ ಹಾಜರುಪಡಿಸಲಾಗುವುದು. |
| | 1 – Canara Bank ಮಹಿಳೆಯರ ವಸತಿ ನಿಲಯ ಮಡಿಕೇರಿ<br>2 – Canara Bank ಪುರುಷರ ವಸತಿ ನಿಲಯ ಚಿಕ್ಕಳುವಾರ<br>3 – ಪುರುಷರ ವಸತಿ ನಿಲಯ ಮಡಿಕೇರಿ | |
| 68 | ನಗದು ಶಿಲ್ಕಿನ ಪರಿಶೀಲನೆ :<br>ಮಂಗಳೂರು ವಿಶ್ವವಿದ್ಯಾನಿಲಯದ ಅಧೀನಕ್ಕೊಳಪಡುವ ವಸತಿನಿಲಯಗಳ 2016-17ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ನಗದು ಪುಸ್ತಕವನ್ನು ಪರಿಶೀಲಿಸಲಾಗಿ ನಗದು ರೂಪದಲ್ಲಿರುವ ಶಿಲ್ಕು ಈ ಕೆಳಗಿನಂತಿವೆ ಈ ಮೊತ್ತವು ಭೌತಿಕವಾಗಿ ತಾಳೆಯಾಗಿರುತ್ತದೆ. | ಸಾಮಾನ್ಯ ಮಾಹಿತಿ |

| ಕ್ರ.ಸಂ | ವಸತಿ ನಿಲಯಗಳ ಹೆಸರು | ಲೆಕ್ಕಪರಿಶೋಧನೆ ಪ್ರಾರಂಭದ ದಿನಾಂಕ | ನಗದು ಶಿಲ್ಕು |
|---|---|---|---|
| 1 | ಮಹಿಳೆಯರ ವಸತಿ ನಿಲಯ | 17.01.2019 | 35,888 |
| 2 | ಪುರುಷರ ವಸತಿ ನಿಲಯ | 01.02.2019 | 2,293 |
| 3 | ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯ | 29.01.2019 | 23,778 |

| | | |
|---|---|---|
| 69 | ಮಂಗಳೂರು ವಿಶ್ವವಿದ್ಯಾನಿಲಯದ ವಸತಿ ನಿಲಯಗಳಿಗೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ವಿವರಗಳು :<br>ಮಂಗಳೂರು ವಿಶ್ವವಿದ್ಯಾನಿಲಯದ ಅಧೀನಕ್ಕೊಳಪಡುವ ವಸತಿ ನಿಲಯಗಳಿಗೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಂದ ವಸೂಲಾತಿ ಮಾಡಿದ ಪ್ರವೇಶಾತಿ ಶುಲ್ಕ ಹಾಗೂ ಬಾಕಿ ಇರುವ ಪ್ರವೇಶಾತಿ ಶುಲ್ಕದ ವರ್ಗವಾರು ವಿವರಗಳನ್ನು ಅನುಬಂಧ-33 ರಲ್ಲಿ ವರದಿಗೆ ಲಗತ್ತಿಸಿದೆ. ಬಾಕಿ ವಸೂಲಾಗಬೇಕಾದ ಪ್ರವೇಶಾತಿ ಶುಲ್ಕ ರೂ.20,03,100/- ಗಳಾಗಿದ್ದು ಸಂಬಂಧಿಸಿದವರಿಂದ ವಸೂಲಿಸಿ ವಿಶ್ವವಿದ್ಯಾನಿಲಯದ ಖಾತೆಗೆ ಜಮೆ ಮಾಡಿ ವಿವರಗಳನ್ನು ಲೆಕ್ಕತಪಾಸಣೆಗೆ ಹಾಜರುಪಡಿಸಲು ಸೂಚಿಸಿದೆ. | ವಿದ್ಯಾರ್ಥಿಗಳಿಂದ ಪ್ರವೇಶಾತಿ ಶುಲ್ಕ ವಸೂಲು ಮಾಡುವ ಕ್ರಮ ಇರುವುದಿಲ್ಲ. ಆದರೆ ಭದ್ರತಾ ಶುಲ್ಕವನ್ನು ಪಡೆಯಲಾಗುತ್ತಿದ್ದು ಸದ್ರಿ ವಿದ್ಯಾರ್ಥಿಗಳು ವಿದ್ಯಾಭ್ಯಾಸವನ್ನು ಮುಗಿಸಿ ಮರಳುವಾಗ ಹಿಂತಿರುಗಿಸಲಾಗುತ್ತಿದೆ. ಎಲ್ಲವೂ ಬ್ಯಾಂಕ್ ಮೂಲಕ ವ್ಯವಹರಿಸಲಾಗುತ್ತಿದೆ. ಆದುದರಿಂದ ಆಕ್ಷೇಪಣೆಯನ್ನು ಕೈ ಬಿಡಲು ಕೋರಲಾಗಿದೆ. |
| 70 | ವಸತಿ ನಿಲಯಗಳಲ್ಲಿ ಹೂಡಿಕೆ ಮಾಡಲಾಗಿರುವ ನಿಶ್ಚಿತ ಠೇವಣಿಗಳ ಬಗ್ಗೆ :<br>2016-17ನೇ ಸಾಲಿನ ಮಂಗಳೂರು ವಿಶ್ವವಿದ್ಯಾನಿಲಯದ ಅಧೀನಕ್ಕೊಳಪಡುವ ವಸತಿನಿಲಯಗಳಲ್ಲಿ ಹೂಡಿಕೆ ಮಾಡಿರುವ ದಾಖಲೆಗಳನ್ನು ಒದಗಿಸುವ ಸಂಬಂಧವಾಗಿ ವಿಚಾರಣಾ ಪತ್ರ ಸಂಖ್ಯೆ:142/18-19 ದಿ:30.01.2019 ರಲ್ಲಿ ನೀಡಲಾಗಿ, ಹಾಜರುಪಡಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ, ಇಲ್ಲಿನ ನಿಶ್ಚಿತ ಠೇವಣಿಗಳನ್ನು ನಿಲಯಪಾಲಕರ ಹೆಸರಿನಲ್ಲಿ ಹೂಡಿಕೆ ಮಾಡಲಾಗಿದೆ. ಅವುಗಳನ್ನು ವಿವಿಧ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ, ಸಹಕಾರಿ ಬ್ಯಾಂಕುಗಳಲ್ಲಿ, ಖಾಸಗಿ ಹಣಕಾಸು ಸಂಸ್ಥೆಗಳಲ್ಲಿ ಹೂಡಿಕೆ ಮಾಡಲಾಗಿದೆ. ವಾಸ್ತವವಾಗಿ ವಿಶ್ವವಿದ್ಯಾನಿಲಯದ ಹಣಕಾಸು ಅಧಿಕಾರಿಗಳ ಹೆಸರಿನಲ್ಲಿ ಹೂಡಿಕೆ ಮಾಡಬೇಕಿರುತ್ತದೆ. ಪ್ರತ್ಯೇಕವಾಗಿ ಹೂಡಿಕೆ ಮಾಡಿರುವುದಕ್ಕೆ ವಿಶ್ವವಿದ್ಯಾನಿಲಯದಿಂದ ಅನುಮತಿಯನ್ನು ಪಡೆದಿರುವುದಿಲ್ಲ. ವಿವರಗಳನ್ನು ಅನುಬಂಧ-34 ರಲ್ಲಿ ವಿವರಿಸಲಾಗಿದ್ದು ವರದಿಗೆ ಲಗತ್ತಿಸಿದೆ.<br>ಈ ಹೂಡಿಕೆಗಳಲ್ಲಿ ಅತಿ ಹೆಚ್ಚಿನ ಬಡ್ಡಿ ನೀಡುವ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಹೂಡಿಕೆ ಮಾಡದ ಕಾರಣ ರೂ.56,095/ಗಳ ಬಡ್ಡಿ ನಷ್ಟವಾಗಿರುತ್ತದೆ. ಆದ್ದರಿಂದ ರೂ.56,095/-ಗಳನ್ನು ಕಡಿಮೆ ಬಡ್ಡಿ ನೀಡುವ ಬ್ಯಾಂಕುಗಳಲ್ಲಿ ಹೂಡಿಕೆ ಮಾಡಲು ಕಾರಣರಾದವರಿಂದ ವಸೂಲಾತಿಗೆ ಸೂಚಿಸಿದೆ. | ಮಂಗಳೂರು ವಿಶ್ವವಿದ್ಯಾನಿಲಯದ ಅಧೀನಕ್ಕೊಳಪಡುವ ವಸತಿನಿಲಯಗಳಲ್ಲಿ ವಿದ್ಯಾರ್ಥಿಗಳು ದಾಖಲಾಗುವ ಸಮಯದಲ್ಲಿ ಅರ್ಜಿ ಶುಲ್ಕ, ನೋಂದಣಿ ಶುಲ್ಕ, ಕೊಠಡಿ ಬಾಡಿಗೆ, ನಿರ್ವಹಣಾ ಶುಲ್ಕ, ಪ್ರವೇಶ ಶುಲ್ಕ, ವಸ್ತು ಸವಕಳಿ ಶುಲ್ಕ, ಕ್ರೀಡೆ ಮತ್ತು ವಾಚನಾಲಯ ಶುಲ್ಕ, ಸಾಂಸ್ಕೃತಿಕ ಚಟುವಟಿಕೆಗಳ ಶುಲ್ಕ, ನೀರಿನ ಶುಲ್ಕ, ವೈದ್ಯಕೀಯ ಶುಲ್ಕ ಮತ್ತು ಹಿಂದಿರುಗಿಸಲಾಗುವ ಭದ್ರತಾ ಠೇವಣಿ ಗಳನ್ನು ಪಡೆಯಲಾಗುತ್ತದೆ. ಇದರಲ್ಲಿ ಕೊಠಡಿ ಬಾಡಿಗೆಯನ್ನು ವಿಶ್ವವಿದ್ಯಾನಿಲಯಕ್ಕೆ ಪಾವತಿಸಲಾಗುತ್ತದೆ. ಭದ್ರತಾ ಠೇವಣಿಯನ್ನು ವಿದ್ಯಾರ್ಥಿಗಳು ವಸತಿನಿಲಯದಿಂದ ಮರಳಿ ಹೋಗುವ ವೇಳೆ ಹಿಂದಿರುಗಿಸಲಾಗುತ್ತದೆ. ಉಳಿದಂತೆ ಎಲ್ಲಾ ಶುಲ್ಕಗಳು ವಸತಿನಿಲಯದ ನಿಧಿಯಲ್ಲಿ ಜಮಾವಣೆಗೊಂಡಿರುತ್ತದೆ.<br>ವಸತಿನಿಲಯದ ನಿಧಿಯಲ್ಲಿ ಜಮಾವಣೆಗೊಂಡ ಮೊತ್ತದಲ್ಲಿ ಪ್ರಥಮ ತಿಂಗಳ ವಿದ್ಯಾರ್ಥಿಗಳ ಊಟೋಪಚಾರದ ಶುಲ್ಕ ಮತ್ತು |

| | | |
|---|---|---|
| | ಮಾಹೆವಾರು ಠೇವಣಿಗಳ ವಿವರ ಹಾಗೂ ಅತ್ಯಂತ ಹೆಚ್ಚಿನ ಬಡ್ಡಿದರ ನೀಡಿರುವ ಠೇವಣಿ ಮೊತ್ತಗಳಿಗೆ ತುಲನಾತ್ಮಕ ಪಟ್ಟಿ ತಯಾರಿಸಿ ಅನುಬಂಧ-35 ರಲ್ಲಿ ಲಗತ್ತಿಸಲಾಗಿದೆ. ಈ ಬಗ್ಗೆ ಸಂಬಂಧಿಸಿದವರಿಂದ ಆಗಿರುವ ಆರ್ಥಿಕ ನಷ್ಟಕ್ಕೆ ಹೊಣೆ ನಿಗದಿಪಡಿಸಿ ಆಡಳಿತಾತ್ಮಕ ಕ್ರಮ ತೆಗೆದುಕೊಳ್ಳಲು ಸೂಚಿಸಿದೆ.<br>ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ: DPE/30/ARU/2010 ದಿನಾಂಕ:19.06.2012 ಮತ್ತು ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: FD/38/TAR/2018 ದಿ:27.08.2018 ರ ಕ್ರ.ಸಂ 4 ರ (i) ರಲ್ಲಿ ನಿರ್ದೇಶಿಸಿರುವಂತೆ ಹೂಡಿಕೆ ಮಾಡುವಾಗ ನಿಧಿಯ ಸಂರಕ್ಷಣೆಗೆ ಮೊದಲ ಆದ್ಯತೆ ನೀಡಬೇಕಿರುತ್ತದೆ. ಹಾಗೂ ಆದೇಶ ಸಂಖ್ಯೆ: FDS/TAR/2017 ದಿ:30.01.2017 ರ ಆದೇಶದನ್ವಯ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿಯೇ ಹೂಡಿಕೆ ಮಾಡಬೇಕಿರುತ್ತದೆ. ಈ ಆದೇಶಗಳನ್ನು ಉಲ್ಲಂಘಿಸಿ ಹೂಡಿಕೆ ಮಾಡಿರುವುದನ್ನು ತಡೆಹಿಡಿದು ಇನ್ನು ಮುಂದೆ ವಿಶ್ವವಿದ್ಯಾನಿಲಯದ ಹಣಕಾಸು ಅಧಿಕಾರಿಗಳ ಸಮನ್ವಯದೊಂದಿಗೆ ರಚಿಸಲು ಸೂಚಿಸಿದಂತೆ ಇನ್ವೆಸ್ಟ್‌ಮೆಂಟ್ ಕಮಿಟಿಯನ್ನು ರಚಿಸಿ ಅದರ ಅನುಮೋದನೆ ಮೇರೆಗೆ ರಾಷ್ಟ್ರೀಕೃತ ಬ್ಯಾಂಕುಗಳಿಂದ ದರಪಟ್ಟಿ ಅಥವಾ Mail ಮೂಲಕ ಬಡ್ಡಿ ದರಗಳನ್ನು ಆಹ್ವಾನಿಸಿ ಹೂಡಿಕೆ ಮಾಡಲು ತಿಳಿಸಿದೆ. | ನಿರ್ವಹಣಾ ಶುಲ್ಕವನ್ನು ಭರಿಸಲಾಗುತ್ತದೆ. ತದನಂತರ ತಿಂಗಳ ಊಟೋಪಚಾರದ ಖರ್ಚನ್ನು ಸಮನಾಗಿ ಹಂಚಿ ಖರ್ಚನ್ನು ವಿದ್ಯಾರ್ಥಿಗಳಿಂದ ವಸತಿನಿಲಯದ ನಿಧಿಗೆ ಮರುಭರಿಸಿಕೊಳ್ಳಲಾಗುತ್ತದೆ.<br>ಪ್ರತಿ ತಿಂಗಳ ಊಟೋಪಚಾರದ ಖರ್ಚು (ವಿದ್ಯುತ್ ಶುಲ್ಕ, ನಿರ್ವಹಣಾ ಶುಲ್ಕ ಮತ್ತು ಊಟೋಪಚಾರದ ಶುಲ್ಕ) ನಲ್ಲಿ ನಿರ್ವಹಣಾ ಶುಲ್ಕವನ್ನು ವಸತಿನಿಲಯದ ಸಿಬ್ಬಂದಿ (ಕಚೇರಿ ಸಿಬ್ಬಂದಿ, ಭದ್ರತಾ ಸಿಬ್ಬಂದಿ, ಸ್ವಚ್ಛತಾ ಸಿಬ್ಬಂದಿ, ಗಾರ್ಡನರ್ ಮತ್ತು ಅಡುಗೆ ಸಿಬ್ಬಂದಿ)ಗಳ ವೇತನ, ದಿನನಿತ್ಯದ ನಿರ್ವಹಣಾ ಖರ್ಚುಗಳನ್ನು ಭರಿಸಲಾಗುತ್ತದೆ.<br>ಸದ್ರಿ ಮೊತ್ತದಲ್ಲಿ ವಸತಿನಿಲಯದ ನಿರ್ವಹಣಾ ಖರ್ಚನ್ನು ಕಳೆದು ಉಳಿದ ಮೊತ್ತ ಮತ್ತು ವಿದ್ಯಾರ್ಥಿಗಳ ಹಿಂದಿರುಗಿಸಲಾಗುವ ಭದ್ರತಾ ಠೇವಣಿಯನ್ನು ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಮತ್ತು ಕೆಲವು ಸಲ ಹೆಚ್ಚಿಗೆ ಬಡ್ಡಿ ನೀಡುವ ಮಂಗಳೂರು ವಿಶ್ವವಿದ್ಯಾನಿಲಯದ ನೌಕರರ ಪತ್ತಿನ ಸಹಕಾರಿ ಸಂಘ(ರಿ)ದಲ್ಲಿಯೂ ನಿಶ್ಚಿತ ಠೇವಣಿ ಇಡಲಾಗುತ್ತದೆ.<br>ವಸತಿನಿಲಯದ ವಿದ್ಯಾರ್ಥಿಗಳು ಪಾವತಿಸಿದ ಪ್ರತಿಯೊಂದು ಮೊತ್ತಗಳು ವಸತಿನಿಲಯದ ನಿಧಿಯಲ್ಲಿ ಜಮಾವಣೆಯಾಗುವುದರಿಂದ ನಿಲಯಪಾಲಕರ ಹೆಸರಿನಲ್ಲಿಯೇ ನಿಶ್ಚಿತ ಠೇವಣಿಯನ್ನು ಹೂಡಿಕೆ ಮಾಡಲಾಗುತ್ತಿದೆ. ಈ ವ್ಯವಸ್ಥೆಯು ಮೊದಲಿನಿಂದಲೂ ನಡೆದು ಬಂದುದಾಗಿದೆ. ಆದುದರಿಂದ ಹಣಕಾಸು ಅಧಿಕಾರಿಗಳ ಹೆಸರಲ್ಲಿ ಠೇವಣಿ ಇಟ್ಟಿರುವುದಿಲ್ಲ. ಈ ವಿಷಯವನ್ನು ವಿಶ್ವವಿದ್ಯಾನಿಲಯದ ಅಧಿಕಾರಿ ವರ್ಗದವರಲ್ಲಿ ಚರ್ಚಿಸಲಾಗಿದೆ.<br>ಇನ್ನು ಮುಂದಕ್ಕೆ ವಿಶ್ವವಿದ್ಯಾನಿಲಯದ ಅಧಿಕಾರಿಗಳ ಸಮನ್ವಯದೊಂದಿಗೆ ಅನುಮೋದನೆ ಮೇರೆಗೆ ರಾಷ್ಟ್ರೀಕೃತ ಬ್ಯಾಂಕುಗಳಿಂದ ದರಪಟ್ಟಿ ಮತ್ತು ಬಡ್ಡಿ ದರಗಳನ್ನು ಆಹ್ವಾನಿಸಿ ಹೂಡಿಕೆ ಮಾಡಲಾಗುವುದು. |
| 71 | ವಸತಿ ನಿಲಯಗಳಲ್ಲಿ ಪ್ರವೇಶಾತಿ ಪಡೆದಿರುವ ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳಿಗೆ ನೀಡಲಾಗಿರುವ ಶುಲ್ಕ ವಿನಾಯಿತಿ ಮತ್ತು ಅಧಿಕ ಭೋಜನ ವೆಚ್ಚವನ್ನು ಸರ್ಕಾರದಿಂದ ಮರುಭರಿಕೆ ಮಾಡಿಕೊಳ್ಳದಿರುವುದು :<br>ಮಂಗಳೂರು ವಿಶ್ವವಿದ್ಯಾನಿಲಯದ ಅಧೀನಕ್ಕೊಳಪಡುವ ಮಹಿಳೆಯರ ವಸತಿ ನಿಲಯ, ಮಂಗಳೂರು, ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯ, ಮಂಗಳೂರು, ಪುರುಷರ ವಸತಿ ನಿಲಯ, ಮಂಗಳೂರು, ಪುರುಷ/ ಮಹಿಳೆಯರ ವಸತಿ ನಿಲಯ, ಮಡಿಕೇರಿ, ಪುರುಷರ/ ಮಹಿಳೆಯರ ವಸತಿ ನಿಲಯ, ಚಿಕ್ಕಳುವಾರ ಇಲ್ಲಿನ ವಸತಿ ನಿಲಯಗಳಿಗೆ ಪ್ರವೇಶಾತಿ ಪಡೆದಿರುವ ಎಸ್.ಸಿ/ ಎಸ್.ಟಿ ವಿದ್ಯಾರ್ಥಿಗಳಿಗೆ ಪ್ರವೇಶಾತಿ ಶುಲ್ಕದಲ್ಲಿ ವಿನಾಯಿತಿ ನೀಡಲು ಹಾಗೂ ಅಧಿಕ ಭೋಜನ ವೆಚ್ಚ ಭರಿಸಲು ವಿಶ್ವವಿದ್ಯಾನಿಲಯದ ವತಿಯಿಂದ ಮಂಜೂರು ಮಾಡಲಾಗಿದ್ದು ಸದರಿ ವೆಚ್ಚವು ಸರ್ಕಾರದಿಂದ ವಿಶ್ವವಿದ್ಯಾನಿಲಯಕ್ಕೆ ಮರುಭರಿಕೆಯಾಗಬೇಕಾಗಿರುತ್ತದೆ. ಮರುಭರಿಕೆ ಮಾಡಿಕೊಂಡಿರುವ ವ್ಯವಹಾರಗಳ ಬಗ್ಗೆ ಲೆಕ್ಕಪತ್ರ ದಾಖಲೆಗಳನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:131/ ದಿ:25.01.2019 ರಂದು ಜಾರಿ ಮಾಡಲಾಗಿದ್ದು, ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ವಿಶ್ವವಿದ್ಯಾನಿಲಯದಿಂದ ವೆಚ್ಚವಾಗಿರುವ ಮೊತ್ತದ ವಿವರಗಳು ಈ ಕೆಳಗಿನಂತಿದ್ದು ಈ ಮೊತ್ತವನ್ನು ಶೀಘ್ರವಾಗಿ ಸರ್ಕಾರದಿಂದ ಮರುಭರಿಕೆ ಮಾಡಿಕೊಳ್ಳಲು ಸೂಕ್ತ ಕ್ರಮ ವಹಿಸುವಂತೆ ಸೂಚಿಸಿದೆ. ಹಾಗೂ ಮರುಭರಿಕೆ ಮಾಡಿಕೊಂಡ ವಿವರಗಳನ್ನು ಮುಂದಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಸೂಚಿಸಿದೆ. | ಮಹಿಳಾ ವಿದ್ಯಾರ್ಥಿನಿ ನಿಲಯಕ್ಕೆ ಪ್ರವೇಶಾತಿ ಪಡೆದಿರುವ SC/ST ವಿದ್ಯಾರ್ಥಿಗಳಲ್ಲಿ ಶುಲ್ಕ ವಿನಾಯಿತಿಯನ್ನು ಪಡೆದ ವಿದ್ಯಾರ್ಥಿನಿಯರು ಸರ್ಕಾರದ (ಸಮಾಜ ಕಲ್ಯಾಣ ಇಲಾಖೆ)ಯ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸುವುದು ಕಡ್ಡಾಯವಾಗಿದ್ದು, ಸಮಾಜ ಕಲ್ಯಾಣ ಇಲಾಖೆಯಿಂದ ಮಂಜೂರಾಗುವ ವಿದ್ಯಾರ್ಥಿ ವೇತನದ ಮೊತ್ತ ಸೇರಿರುವ ಹಾಸ್ಟೆಲ್ ನಿರ್ವಹಣಾ ಮೊತ್ತವನ್ನು ವಿಶ್ವವಿದ್ಯಾನಿಲಯದ ಸಾಮಾನ್ಯ ನಿಧಿಗೆ ವರ್ಗಾಯಿಸಿ ವಿವಿಯಿಂದ ಭರಿಸಲಾದ ಶುಲ್ಕ ವಿನಾಯಿತಿಯನ್ನು ಮರುಭರಿಸಿಕೊಳ್ಳಲಾಗುತ್ತದೆ. |

| | | |
|---|---|---|
| | (see table below) | ಮಹಿಳಾ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿನಿಯರ ಊಟೋಪಚಾರದ ಎಲ್ಲಾ ವೆಚ್ಚವನ್ನು ವಿವಿ ವತಿಯಿಂದಲೇ ಭರಿಸಲಾಗುತ್ತಿದೆ. ಸಮಾಜ ಕಲ್ಯಾಣ ಇಲಾಖೆಯಿಂದ ಮಂಜೂರಾಗುವ ವಿದ್ಯಾರ್ಥಿ ವೇತನದ ಮೊತ್ತದಲ್ಲಿ ಸೇರಿರುವ ಹಾಸ್ಟೆಲ್ ನಿರ್ವಹಣಾ ಮೊತ್ತಕ್ಕಿಂತ ಹೆಚ್ಚುವರಿ ಆದ ವೆಚ್ಚವನ್ನು ವಿವಿಯ ಲೆಕ್ಕ ಶೀರ್ಷಿಕೆ 1434 ಪರಿಶಿಷ್ಟ ಜಾತಿ/ಪಂಗಡದ ವಿದ್ಯಾರ್ಥಿಗಳ ಕ್ಷೇಮಾಭ್ಯುದಯ ನಿಧಿಯಿಂದ ಭರಿಸಲು ಪರಿನಿಯಮದಲ್ಲಿ ಅವಕಾಶವಿರುವುದರಿಂದ ಭರಿಸಲಾಗುತ್ತಿದೆ. ಆದಾಗ್ಯೂ ಸಮಾಜ ಕಲ್ಯಾಣ ಇಲಾಖೆಯವರಿಗೆ ದಿನಾಂಕ 2.07.2018ರಂದು ಪತ್ರ ಬರೆಯಲಾಗಿದೆ. ಆಕ್ಷೇಪಣೆಯನ್ನು ಕೈ ಬಿಡಲು ಕೋರಿದೆ. |
| 72 | <u>ಟೆಂಡರ್ ಪ್ರಕ್ರಿಯೆ ಕೈಗೊಳ್ಳದೆ ಮೆಸ್ ಬಿಲ್ಲನ್ನು ಪಾವತಿಸಿರುವುದು :</u><br>ಪುರುಷರ ವಸತಿ ನಿಲಯ, ಮಡಿಕೇರಿ, ಮಹಿಳಾ ವಸತಿ ನಿಲಯ ಚಿಕ್ಕಳುವಾರ ಮತ್ತು ಮಡಿಕೇರಿ ಇಲ್ಲಿ ಮೆಸ್ ವೆಚ್ಚಕ್ಕೆ ಸಂಬಂಧಪಟ್ಟಂತೆ ನೇರವಾಗಿ ಕಂಟ್ರಾಕ್ಟರ್‌ಗಳಿಗೆ/ವಿದ್ಯಾರ್ಥಿಗಳ ಮೆಸ್ ಬಿಲ್ಲನ್ನು ಪಾವತಿಸಲಾಗಿರುವುದನ್ನು 2016-17ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ.<br>ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಮತ್ತು ಪಾರದರ್ಶಕ ಕಾಯ್ದೆ 2000 ರ ನಿಯಮ 4 ರನ್ವಯ ಹಾಗೂ ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ: ಲೋಇ/513/ಆಕೋ3/2001 ದಿನಾಂಕ:19.11.2001 ಹಾಗೂ ಆದೇಶ ಸಂಖ್ಯೆ: ಸಿಆಸು/ಇ2/ಇ.ಸಂಗ್ರ /2009 ದಿನಾಂಕ:09.10.2012 ರಲ್ಲಿ ಸೂಚಿಸಿರುವಂತೆ ಯಾವುದೇ ಸರಕು ಖರೀದಿ ಅಥವಾ ಸೇವೆ ಪಡೆಯುವ ಸಂದರ್ಭದಲ್ಲಿ ರೂ.1,00,000/-ಗಳಿಗೆ ಮೀರಿದ ಮೊತ್ತದ ಪ್ರಕ್ರಿಯೆಗೆ ಟೆಂಡರ್ ತೆರೆಯಬೇಕಾಗಿರುತ್ತದೆ. ಹಾಗೂ ರೂ.5,00,000/- ಮೀರಿದ ಖರೀದಿ ಪ್ರಕ್ರಿಯೆಗೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಬೇಕಾಗಿರುತ್ತದೆ. ವಸತಿ ನಿಲಯಗಳ ವಾರ್ಷಿಕ ಮೆಸ್ ವೆಚ್ಚವು ರೂ.1,00,000 ಮೀರಿರುವುದರಿಂದ ಟೆಂಡರ್ ಕೈಗೊಳ್ಳಬೇಕಾಗಿದ್ದು, ಈ ಸಂಬಂಧ ಟೆಂಡರ್ ಪ್ರಕ್ರಿಯೆ ಕಡತಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:191/2018-19 ದಿ:12.02.2019 ರಂದು ಜಾರಿ ಮಾಡಲಾಗಿತ್ತು. ಆದರೆ ಯಾವುದೇ ಕಡತಗಳನ್ನು ಹಾಜರುಪಡಿಸಿರುವುದಿಲ್ಲ. ವಸತಿ ನಿಲಯಗಳಲ್ಲಿ ಟೆಂಡರ್ ಕರೆಯದೇ ನೇರವಾಗಿ ಕಂಟ್ರಾಕ್ಟರ್‌ಗಳಿಗೆ ಮೆಸ್ ಬಿಲ್ಲನ್ನು ಪಾವತಿಸಲಾಗಿದೆ. ವೆಚ್ಚ ರೂ.11,77,084/-ಗಳು ಪಾರದರ್ಶಕ ಅಧಿನಿಯಮ/ನಿಯಮಗಳಿಗೆ ವಿರುದ್ಧವಾದ ವೆಚ್ಚವಾಗಿರುವುದರಿಂದ ಆಕ್ಷೇಪಣೆಯಲ್ಲಿಡಲಾಗಿದೆ, ವಿವರಗಳನ್ನು <u>ಅನುಬಂಧ-36 ರಲ್ಲಿ</u> ವರದಿಗೆ ಲಗತ್ತಿಸಿದೆ. | ಹಾಸ್ಟೆಲ್‌ನಲ್ಲಿ ವಾಸ್ತವ್ಯವಿರುವ ವಿದ್ಯಾರ್ಥಿಗಳಿಗೆ ವ್ಯಯಿಸಲಾಗುವ ಮೆಸ್ ವೆಚ್ಚವನ್ನು ವಿಂಗಡಣಾ ಪದ್ಧತಿಯಲ್ಲಿ ವಿದ್ಯಾರ್ಥಿಗಳಿಂದ ವಸೂಲು ಮಾಡಲಾಗುತ್ತಿದ್ದು ಸದ್ರಿ ಮೊತ್ತವನ್ನು ವಿದ್ಯಾರ್ಥಿಗಳೇ ಪ್ರಾಂಶುಪಾಲರು/ನಿಲಯಪಾಲಕರ ಹೆಸರಲ್ಲಿರುವ ಬ್ಯಾಂಕ್ ಖಾತೆಗೆ ಜಮೆ ಮಾಡುತ್ತಾರೆ. ಯಾವುದೇ ನಗದು ವ್ಯವಹಾರ ಇರುವುದಿಲ್ಲ. ವಿದ್ಯಾರ್ಥಿಗಳ ಅಭಿರುಚಿಗೆ ತಕ್ಕಂತೆ ವ್ಯವಸ್ಥೆ ಮಾಡಲಾಗುತ್ತಿರುವುದರಿಂದ ಈ ಖರೀದಿಗಳನ್ನು ಟೆಂಡರ್ ಮೂಲಕ ನಿರ್ವಹಿಸುವುದು ಕಷ್ಟಸಾಧ್ಯವೆಂದು ಅವಗಾಹನೆಗೆ ತರುತ್ತಾ ಆಕ್ಷೇಪಣೆಯನ್ನು ಕೈ ಬಿಡಲು ಕೋರಲಾಗಿದೆ. |
| 73 | <u>ವಿದ್ಯಾರ್ಥಿಗಳಿಂದ ಸ್ವೀಕರಿಸಿದ ಬಾಡಿಗೆ ಮೊತ್ತವನ್ನು ವಿಶ್ವವಿದ್ಯಾನಿಲಯದ ನಿಧಿಗೆ ಜಮಾ ಮಾಡದಿರುವುದು:</u><br>2016-17ನೇ ಸಾಲಿನ ಮಂಗಳೂರು ವಿಶ್ವವಿದ್ಯಾನಿಲಯದ ಪುರುಷರ ವಸತಿ ನಿಲಯ, ಮಂಗಳೂರು ಇಲ್ಲಿಗೆ ಸ್ನಾತಕೋತ್ತರ ವಿದ್ಯಾರ್ಥಿಗಳು ಮತ್ತು ಸಂಶೋಧನಾ ವಿದ್ಯಾರ್ಥಿಗಳನ್ನು ಪ್ರವೇಶಾತಿ ಮಾಡಿಕೊಳ್ಳಲಾಗಿದೆ. ಸ್ನಾತಕೋತ್ತರ ವಿದ್ಯಾರ್ಥಿಗಳಿಂದ ವಾರ್ಷಿಕವಾಗಿ ಹಾಗೂ ಸಂಶೋಧನಾ ವಿದ್ಯಾರ್ಥಿಗಳಿಂದ ಮಾಸಿಕವಾಗಿ ಕೊಠಡಿ ಬಾಡಿಗೆಯನ್ನು ಪಡೆಯಲಾಗುತ್ತಿದೆ. ಈ ಹಣವನ್ನು 48 ಗಂಟೆಗಳೊಳಗೆ ಸಂಬಂಧಿಸಿದ ಲೆಕ್ಕ ಖಾತೆಗೆ ಜಮೆಗೊಳಿಸಬೇಕು. ಇದರ ವಿವರ/ದಾಖಲೆಗಳನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ: 165/2018-19 ದಿ:02.02.2019 ರಂದು ಜಾರಿ ಮಾಡಲಾಗಿ, ಜಮಾ ಮಾಡಲಾದ ವಿವರಗಳನ್ನು ಹಾಜರುಪಡಿಸಿರುವುದಿಲ್ಲ. 2015-16 ಹಾಗೂ 2016-17ನೇ ಸಾಲುಗಳಲ್ಲಿ ವಸೂಲಾಗಿರುವ ಇಂತಹ ಬಾಡಿಗೆ ಮೊತ್ತ ರೂ.25,29,135/-ಗಳು ವಸತಿ ನಿಲಯದ ಖಾತೆಯಲ್ಲಿಯೇ ಉಳಿದಿರುತ್ತದೆ. ಈ ಮೊತ್ತವನ್ನು ಸಕಾಲದಲ್ಲಿ ಹೂಡಿಕೆ ಮಾಡಿದ್ದಲ್ಲಿ ಬಡ್ಡಿ ಆದಾಯ ಲಭ್ಯವಾಗುತ್ತಿತ್ತು. ಈ ನಷ್ಟಕ್ಕೆ ಕಾರಣ ಆಂತರಿಕ ನಿಯಂತ್ರಣ ಇಲ್ಲದಿರುವುದಾಗಿದೆ. ವಿವರಗಳನ್ನು ಅನುಬಂಧ-37 ರಲ್ಲಿ ವರದಿಗೆ ಲಗತ್ತಿಸಿದೆ. ಹಣಕಾಸು ನಿರ್ವಹಣೆಯಲ್ಲಿ ಆಂತರಿಕ ನಿಯಂತ್ರಣ ವ್ಯವಸ್ಥೆ ಇಲ್ಲದ ಕಾರಣ ಇಂತಹ ನ್ಯೂನ್ಯತೆಗಳು ಮರುಕಳಿಸದಂತೆ ಕ್ರಮಬದ್ಧವಾಗಿ ಲೆಕ್ಕ ನಿರ್ವಹಣೆ ಮಾಡಲು ಸೂಚಿಸಿದೆ. | ಸದ್ರಿ ಮೊತ್ತವನ್ನು ದಿನಾಂಕ 18.06.2019 ರಂದು ವಿಶ್ವವಿದ್ಯಾನಿಲಯ ಖಾತೆಗೆ ಜಮೆ ಮಾಡಲಾಗಿದೆ. ಆಕ್ಷೇಪಣೆಯನ್ನು ಕೈ ಬಿಡಲು ಕೋರಲಾಗಿದೆ |

| ಕ್ರ.ಸಂ | ವಸತಿ ನಿಲಯಗಳ ಹೆಸರು | ಮೊತ್ತ |
|---|---|---|
| 1 | ಮಹಿಳೆಯರ ವಸತಿ ನಿಲಯ | 30,26,970 |
| 2 | ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯ | 8,90,532 |
| 3 | ಮಹಿಳೆಯರ ವಸತಿ ನಿಲಯ, ಚಿಕ್ಕಳುವಾರ | 3,50,000 |
| 4 | ಪುರುಷರ ವಸತಿ ನಿಲಯ | 47,42,800 |
| 5 | ಪುರುಷರ ವಸತಿ ನಿಲಯ, ಚಿಕ್ಕಳುವಾರ | 1,53,000 |

74

<u>ತಾತ್ಕಾಲಿಕ/ ಸಂಚಿತ ವೇತನದಡಿಯಲ್ಲಿ ನೌಕರರನ್ನು ನೇಮಕ ಮಾಡಿಕೊಂಡಿರುವ ಬಗ್ಗೆ :</u>

ಮಹಿಳೆಯರ/ಪುರುಷರ ವಸತಿ ನಿಲಯ ಮತ್ತು ಉದ್ಯೋಗಸ್ಥ ಮಹಿಳೆಯರ ವಸತಿನಿಲಯ, ಮಂಗಳೂರು ಇಲ್ಲಿಗೆ ತಾತ್ಕಾಲಿಕ/ ಸಂಚಿತ ವೇತನದಡಿಯಲ್ಲಿ ನೌಕರರನ್ನು ನೇಮಕ ಮಾಡಿಕೊಂಡು ವಿವಿಧ ಪದನಾಮಗಳಲ್ಲಿ ವೇತನ ಪಾವತಿಸಿರುವುದನ್ನು ಗಮನಿಸಲಾಗಿದೆ. ಈ ರೀತಿ ಕರ್ತವ್ಯ ನಿರ್ವಹಿಸುತ್ತಿರುವವರ ನೇಮಕಾತಿಯು ವಸತಿ ನಿಲಯಗಳಿಗೆ ಮಂಜೂರಾದ ಹುದ್ದೆಗಳಿಗೆ ಎದುರಾಗಿ ನೇಮಕ ಮಾಡಿಕೊಳ್ಳಲಾಗಿದೆಯೇ ಎಂಬುದನ್ನು ತಿಳಿದುಕೊಳ್ಳಲು ನೇಮಕಾತಿ ಪ್ರಕ್ರಿಯೆ ಕಡತಗಳನ್ನು ಹಾಗೂ ಖಾಲಿ ಹುದ್ದೆಗಳಿಗೆ ಎದುರಾಗಿ ಖಾಯಂ ನೌಕರರುಗಳನ್ನು ವಿಶ್ವವಿದ್ಯಾನಿಲಯ ಕಾಯ್ದೆ-2000 ರ ನಿಯಮಗಳು 56 ಮತ್ತು 57 ರನ್ವಯ ನೇಮಕಾತಿ ಪ್ರಕ್ರಿಯೆಗಳಿಗೆ ಕೈಗೊಳ್ಳಲಾಗಿರುವ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾಪತ್ರ ಸಂಖ್ಯೆ:134/2018-19 ದಿ:29.01.2019 ಮತ್ತು 125/2018-19 ದಿ:24.01.2019 ಮತ್ತು 162/2018-19 ದಿ:01.02.2019 ರಂದು ಜಾರಿ ಮಾಡಲಾಗಿ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ <u>ಅನುಬಂಧ-38 ರಲ್ಲಿ</u> ವಿವರಿಸಲಾಗಿರುವಂತೆ ಇವರುಗಳಿಗೆ ಪಾವತಿಸಿರುವ ಒಟ್ಟು ವೇತನ ಮೊತ್ತ ರೂ.53,02,075/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

ವಸತಿನಿಲಯಗಳಲ್ಲಿ ವರ್ಷಂಪ್ರತಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಿರುವುದರಿಂದ ವಸತಿ ನಿಲಯದ ದೈನಂದಿನ ಕಾರ್ಯಗಳಿಗೆ ನೌಕರರ ಅವಶ್ಯಕತೆ ಇದ್ದುದರಿಂದ ಕಾಲ ಕಾಲಕ್ಕನುಗುಣವಾಗಿ ವಿಶ್ವವಿದ್ಯಾಲಯದ ಅಧಿಕಾರಿಗಳ ಗಮನಕ್ಕೆ ತಂದು ಸಿಬ್ಬಂದಿಗಳ ನೇಮಕಾತಿ ಮಾಡಿ ವೇತನ ಪಾವತಿ ಮಾಡಲಾಗಿದೆ. ಆಕ್ಷೇಪಣೆಯನ್ನು ಕೈ ಬಿಡಲು ಕೋರಲಾಗಿದೆ.

75

<u>ಇ-ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೆ ಕೈಗೊಳ್ಳದೆ ವಸತಿ ನಿಲಯಗಳಿಗೆ ದಿನಸಿ ಪದಾರ್ಥಗಳನ್ನು ಖರೀದಿಸಿರುವುದು:</u>

ಮಂಗಳೂರು ವಿಶ್ವವಿದ್ಯಾನಿಲಯದ ಅಧೀನಕ್ಕೊಳಪಡುವ ಪುರುಷ/ ಮಹಿಳಾ ವಸತಿ ನಿಲಯ, ಮಂಗಳೂರು ಹಾಗೂ ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯಗಳಿಗೆ ಅವಶ್ಯಕವಿರುವ ದಿನಸಿ ಪದಾರ್ಥಗಳನ್ನು ಖರೀದಿಸಿ ಈ ಕೆಳಕಂಡಂತೆ ವೆಚ್ಚ ಭರಿಸಲಾಗಿದೆ.

| ಕ್ರ.ಸಂ | ವಸತಿ ನಿಲಯದ ಹೆಸರು | ಮೊಬಲಗು |
|---|---|---|
| 1 | ಪುರುಷರ ವಸತಿ ನಿಲಯ | 37,76,809 |
| 2 | ಮಹಿಳೆಯರ ವಸತಿ ನಿಲಯ | 28,94,108 |
| 3 | ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯ | 18,80,925 |
| ಒಟ್ಟು | | 85,51,842 |

ಈ ಮೇಲೆ ನಮೂದಿಸಿರುವಂತೆ ವಸತಿ ನಿಲಯಗಳು ದಿನಸಿ ಪದಾರ್ಥಗಳನ್ನು ಖರೀದಿಸಲು ಭರಿಸಿರುವ ವಾರ್ಷಿಕ ವೆಚ್ಚ ರೂ.5 ಲಕ್ಷ ಮೀರಿರುವುದರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಮತ್ತು ಪಾರದರ್ಶಕ ಕಾಯ್ದೆ 2000 ರ ಕಲಂ 4 ರನ್ವಯ ಹಾಗೂ ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ:ಲೋಇ/513/ಆಕೋ3/2001 ದಿ:19.11.2001 ರನ್ವಯ ಹಾಗೂ ಆದೇಶ ಸಂಖ್ಯೆ: ಸಿಆಸು/ಇ2/ಇ-ಸಂಗ್ರ/2009 ದಿ:09.10.2012 ರಲ್ಲಿ ಸೂಚಿಸಿರುವಂತೆ ಯಾವುದೇ ಸರಕು ಖರೀದಿ ಅಥವಾ ಸೇವೆ ಪಡೆಯುವ ಸಂದರ್ಭದಲ್ಲಿ ರೂ.5 ಲಕ್ಷ ಮೀರಿದ ಖರೀದಿ ಪ್ರಕ್ರಿಯೆಗೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯಬೇಕಾಗಿತ್ತು. ಇ-ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೆ ಕೈಗೊಂಡಿರುವ ಕಡತಗಳನ್ನು ಹಾಗೂ ದಾಸ್ತಾನು ಸ್ವೀಕೃತಿ ಮತ್ತು ವಿತರಣಾ ವಹಿಯನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:122/2018-19 ದಿ:24.01.2019 ಮತ್ತು 141/2018-19 ದಿ:30.01.2019, 168/2018-19 ದಿ:04.02.2019 ರಂದು ಜಾರಿ ಮಾಡಲಾಗಿದ್ದು, ಇ-ಪ್ರೊಕ್ಯೂರ್ಮೆಂಟ್ ಪ್ರಕ್ರಿಯೆ ಕೈಗೊಂಡ ಕಡತಗಳನ್ನು ಹಾಗೂ ದಾಸ್ತಾನು ಸ್ವೀಕೃತಿ ಮತ್ತು ವಿತರಣೆ ವಹಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.

ದಿನಸಿ ಪದಾರ್ಥಗಳನ್ನು ಖರೀದಿಸಿದ ನಂತರ ವಸತಿ ನಿಲಯದ ದಾಸ್ತಾನಿಗೆ ತೆಗೆದುಕೊಂಡು ಪ್ರತಿ ದಿನ ಅವಶ್ಯಕವಿರುವಷ್ಟು ದಿನಸಿ ಪದಾರ್ಥಗಳನ್ನು ವಿತರಿಸಿ ವಿತರಣಾ ವಹಿಯಲ್ಲಿ ನಮೂದಿಸಿ ದೃಢೀಕರಿಸಬೇಕಾಗಿರುತ್ತದೆ. ಆದರೆ ವಸತಿ ನಿಲಯದಲ್ಲಿ ದಾಸ್ತಾನು ಮತ್ತು ವಿತರಣಾ ವಹಿಯನ್ನು ನಿರ್ವಹಿಸದಿರುವುದರಿಂದ ನಿಖರವಾಗಿ, ದಿನಸಿ ಪದಾರ್ಥಗಳ ಬಳಕೆಯ ಬಗ್ಗೆ ತಿಳಿಯಲು ಸಾಧ್ಯವಾಗಿರುವುದಿಲ್ಲ. ಕೆ.ಟಿ.ಪಿ.ಪಿ ನಿಯಮಗಳನ್ನು ಪಾಲಿಸುವ ಮೂಲಕ ಇ-ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೆ ಕೈಗೊಳ್ಳದೆ ನೇರವಾಗಿ ಖರೀದಿಸಿರುವುದರಿಂದ ಮತ್ತು ದಾಸ್ತಾನು ವಹಿಯನ್ನು ಸಮರ್ಪಕವಾಗಿ ನಿರ್ವಹಿಸದಿರುವುದರಿಂದ ದಿನಸಿ ಪದಾರ್ಥಗಳನ್ನು ಖರೀದಿಸಿರುವ ಒಟ್ಟು ಮೊತ್ತ ರೂ.85,51,842/-ಗಳನ್ನು ಆಕ್ಷೇಪಣೆಗೆ ಸೂಚಿಸಲಾಗಿದೆ. ವಿವರಗಳನ್ನು <u>ಅನುಬಂಧ-39 ರಲ್ಲಿ</u> ವರದಿಗೆ ಲಗತ್ತಿಸಿದೆ.

ವಸತಿನಿಲಯದ ವಿದ್ಯಾರ್ಥಿಗಳ ಊಟೋಪಚಾರಗಳ ವೆಚ್ಚವನ್ನು ವಿದ್ಯಾರ್ಥಿಗಳೇ ವಿಂಗಡಿಸಿ ಭರಿಸುವುದರಿಂದ ದಿನಸಿ ಪದಾರ್ಥಗಳ ಖರೀದಿಗೆ ಟೆಂಡರ್ ಕರೆದಿರುವುದಿಲ್ಲ. ಆಕ್ಷೇಪಣೆಯನ್ನು ಕೈ ಬಿಡಲು ಕೋರಲಾಗಿದೆ.

| | | |
|---|---|---|
| 76 | **ಟೆಂಡರ್ ಪ್ರಕ್ರಿಯೆ ಕೈಗೊಳ್ಳದೆ ವಸತಿ ನಿಲಯಗಳಿಗೆ ತರಕಾರಿಗಳನ್ನು ಖರೀದಿಸಿರುವುದು :**<br>ಮಂಗಳೂರು ವಿಶ್ವವಿದ್ಯಾನಿಲಯದ ಅಧೀನಕ್ಕೊಳಪಡುವ ಪುರುಷ/ ಮಹಿಳಾ ವಸತಿ ನಿಲಯ, ಮಂಗಳೂರು ಹಾಗೂ ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯಗಳಿಗೆ ಅವಶ್ಯಕವಿರುವ ತರಕಾರಿಗಳನ್ನು ಖರೀದಿಸಲು ವೆಚ್ಚ ಭರಿಸಿರುವ ವಿವರಗಳನ್ನು ಗಮನಿಸಲಾಗಿದ್ದು, ವಿವರಗಳು ಈ ಕೆಳಕಂಡಂತಿದೆ.<br><table><tr><th>ಕ್ರ.ಸಂ</th><th>ವಸತಿ ನಿಲಯದ ಹೆಸರು</th><th>ಮೊಬಲಗು</th></tr><tr><td>1</td><td>ಪುರುಷರ ವಸತಿ ನಿಲಯ</td><td>11,36,906</td></tr><tr><td>2</td><td>ಮಹಿಳೆಯರ ವಸತಿ ನಿಲಯ</td><td>8,85,595</td></tr><tr><td>3</td><td>ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯ</td><td>7,55,378</td></tr><tr><td colspan="2">ಒಟ್ಟು ರೂ.</td><td>27,77,879</td></tr></table>ಈ ಮೇಲೆ ನಮೂದಿಸಿರುವಂತೆ ವಸತಿ ನಿಲಯಗಳು ತರಕಾರಿ ಪದಾರ್ಥಗಳನ್ನು ಖರೀದಿಸಲು ಭರಿಸಿರುವ ವಾರ್ಷಿಕ ವೆಚ್ಚವು ರೂ. 1.00 ಲಕ್ಷಗಳಿಗೆ ಮೀರಿರುವುದರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಮತ್ತು ಪಾರದರ್ಶಕ ಕಾಯ್ದೆ-2000ರ ಕಲಂ 4ರನ್ವಯ ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ ಲೋಇ/513/ಆಕೋ3/2001 ದಿ. 19.11.2011ರಲ್ಲಿ ಸೂಚಿಸಿರುವಂತೆ ರೂ.1.00 ಲಕ್ಷ ಮೀರಿದ ಸರಕು ಖರೀದಿ ಮತ್ತು ಸೇವೆ ಪಡೆಯುವುದಕ್ಕೆ ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ಪ್ರಕ್ರಿಯೆ ಕೈಗೊಳ್ಳಬೇಕಾಗುತ್ತದೆ. ಟೆಂಡರ್ ಪ್ರಕ್ರಿಯೆ ಕೈಗೊಂಡ ಕಡತಗಳನ್ನು ಹಾಗೂ ದಾಸ್ತಾನು ವಹಿಯನ್ನು ಹಾಜರುಪಡಿಸುವಂತೆ ವಿಚಾರಣಾಪತ್ರ ಸಂಖ್ಯೆ123/2018-19 ದಿನಾಂಕ 24.01.2019, 143/2018-19,30.01.2019 ಮತ್ತು 167/2018-19 ದಿ.04.02.2019ರಂದು ಜಾರಿ ಮಾಡಲಾಗಿ ಯಾವುದೇ ಟೆಂಡರ್ ಪ್ರಕ್ರಿಯೆ ಕಡತಗಳನ್ನು ಹಾಗೂ ದಾಸ್ತಾನು ವಹಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.<br>ತರಕಾರಿಗಳನ್ನು ಖರೀದಿಸಿದ ನಂತರ ವಸತಿ ನಿಲಯದ ವಹಿಯಲ್ಲಿ ದಾಸ್ತಾನಿಗೆ ತೆಗೆದುಕೊಂಡು ಪ್ರತಿ ದಿನ ಅವಶ್ಯಕವಿರುವಷ್ಟು ತರಕಾರಿ ಪದಾರ್ಥಗಳನ್ನು ವಿತರಿಸಿ ವಿತರಣಾ ವಹಿಯಲ್ಲಿ ನಮೂದಿಸಿ ದೃಢೀಕರಿಸಬೇಕಾಗಿರುತ್ತದೆ. ಆದರೆ ವಸತಿ ನಿಲಯದಲ್ಲಿ ದಾಸ್ತಾನು ವಹಿಯನ್ನು ನಿರ್ವಹಿಸದಿರುವುದರಿಂದ ನಿಖರವಾಗಿ ತರಕಾರಿ ಪದಾರ್ಥಗಳ ಬಳಕೆಯ ಬಗ್ಗೆ ತಿಳಿಯಲು ಸಾಧ್ಯವಾಗಿರುವುದಿಲ್ಲ. ಕೆ.ಟಿ.ಪಿ.ಪಿ ನಿಯಮಗಳನ್ನು ಪಾಲಿಸಿ ಟೆಂಡರ್ ಪ್ರಕ್ರಿಯೆ ಕೈಗೊಳ್ಳದೆ ಖರೀದಿಸಿರುವುದರಿಂದ ಹಾಗೂ ದಾಸ್ತಾನು ವಹಿಯನ್ನು ನಿರ್ವಹಿಸದಿರುವುದರಿಂದ ತರಕಾರಿಗಳನ್ನು ಖರೀದಿಸಲು ಭರಿಸಿರುವ ಒಟ್ಟು ಮೊತ್ತ ರೂ.27,77,879/-ಗಳನ್ನು ಆಕ್ಷೇಪಣೆಗೆ ಸೂಚಿಸಲಾಗಿದೆ. ವಿವರಗಳನ್ನು <u>ಅನುಬಂಧ-40ರಲ್ಲಿ</u> ವರದಿಗೆ ಲಗತ್ತಿಸಿದೆ. | ವಸತಿನಿಲಯದ ವಿದ್ಯಾರ್ಥಿಗಳ ಊಟೋಪಚಾರಗಳ ವೆಚ್ಚವನ್ನು ವಿದ್ಯಾರ್ಥಿಗಳೇ ವಿಂಗಡಿಸಿ ಭರಿಸುವುದರಿಂದ ದಿನಸಿ ಪದಾರ್ಥಗಳ ಖರೀದಿಗೆ ಟೆಂಡರ್ ಕರೆದಿರುವುದಿಲ್ಲ. ಆಕ್ಷೇಪಣೆಯನ್ನು ಕೈ ಬಿಡಲು ಕೋರಲಾಗಿದೆ. |
| 77 | **ದೂರ ಶಿಕ್ಷಣ ಕೇಂದ್ರ (Distance Learning Centre)**<br>**ಆರ್ಥಿಕ ಪರಿಸ್ಥಿತಿ ವಿವರ:**<br>2016-17ನೇ ಸಾಲಿನ ಮಂಗಳೂರು ವಿಶ್ವವಿದ್ಯಾನಿಲಯದ ಅಧೀನಕ್ಕೆ ಒಳಪಟ್ಟಿರುವ ದೂರಶಿಕ್ಷಣ ಕೇಂದ್ರದಲ್ಲಿ ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ ದಾಖಲೆಗಳನ್ವಯ ನಿರ್ದೇಶಕರು, ದೂರಶಿಕ್ಷಣ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ ರವರ ಹೆಸರಿನಲ್ಲಿ ಆರ್ಥಿಕ ವಹಿವಾಟನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮಂಗಳಗಂಗೋತ್ರಿ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು ಈ ಬ್ಯಾಂಕಿನ ಖಾತೆ ಸಂಖ್ಯೆ: 30772744765 ರಲ್ಲಿ ನಿರ್ವಹಿಸುತ್ತಿದ್ದು, 2016-17ನೇ ಸಾಲಿನ ಆರ್ಥಿಕ ಪರಿಸ್ಥಿತಿ ವಿವರ ಈ ಕೆಳಕಂಡಂತಿದೆ. | |

| | |
|---|---|
| ದಿನಾಂಕ:01.04.2016 ರಂತೆ ಪ್ರಾರಂಭಿಕ ಶಿಲ್ಕು | 11,502 |
| (+) 2016-17 ಬ್ಯಾಂಕ್ ಬಡ್ಡಿ ಸೇರಿ ಸ್ವೀಕೃತಿಯಾದ ಮೊತ್ತ | 3,65,326 |
| ಒಟ್ಟು ಮೊತ್ತ ರೂ. | 3,76,828 |
| (-) 2016-17ನೇ ಸಾಲಿನಲ್ಲಿ ಪಾವತಿಸಲಾದ ಒಟ್ಟು ಮೊತ್ತ | 3,22,164 |
| ದಿನಾಂಕ:31.03.2017 ರಂತೆ ಅಂತಿಮ ಶಿಲ್ಕು | 54,664 |

ದಿನಾಂಕ: 31.03.2017 ರ ಅಂತ್ಯಕ್ಕೆ ನಗದು ಪುಸ್ತಕದ ಅಂತಿಮ ಶಿಲ್ಕು ಹಾಗೂ ಬ್ಯಾಂಕ್ ಪಾಸ್ ಬುಕ್‌ನ ಅಂತಿಮ ಶಿಲ್ಕು ತಾಳೆಯಾಗಿರುತ್ತದೆ.

ಸಾಮಾನ್ಯ ಮಾಹಿತಿ

78 ವಿದ್ಯಾರ್ಥಿಗಳ ಪ್ರವೇಶಾತಿ ಹಾಗೂ ಪ್ರವೇಶ ಶುಲ್ಕದ ವಸೂಲಾತಿ ವಿವರಗಳ ಕುರಿತಂತೆ :

2016-17ನೇ ಶೈಕ್ಷಣಿಕ ಸಾಲಿನಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ದೂರ ಶಿಕ್ಷಣ ಕೇಂದ್ರದಲ್ಲಿ ವಿವಿಧ ಸ್ನಾತಕ ಹಾಗೂ ಸ್ನಾತಕೋತ್ತರ ಕೋರ್ಸುಗಳಿಗೆ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳ ಬೋಧನಾ ಶುಲ್ಕದ ಜೊತೆ ಇನ್ನಿತರ ಶುಲ್ಕಗಳ ವಿವರಗಳ ಮೂಲ ಚಲನ್‌ಗಳು ಹಾಗೂ ಪ್ರವೇಶಾತಿ ವಹಿಯೊಂದಿಗೆ ಪರಿಶೀಲಿಸಲಾಗಿದ್ದು. ವಿವಿಧ ಸ್ನಾತಕ ಹಾಗೂ ಸ್ನಾತಕೋತ್ತರ ಕೋರ್ಸುಗಳಿಗೆ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳ ವಿವರ ಈ ಕೆಳಕಂಡಂತಿದೆ.

ಮಂಗಳೂರು ವಿಶ್ವವಿದ್ಯಾನಿಲಯ, ದೂರ ಶಿಕ್ಷಣ ಕೇಂದ್ರ, ಮಂಗಳೂರು
2016-17ನೇ ಸಾಲಿನಲ್ಲಿ ಸ್ನಾತಕ ಹಾಗೂ ಸ್ನಾತಕೋತ್ತರ ಕೋರ್ಸ್‌ಗಳಿಗೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ವಿಷಯವಾರು (**Subject wise**) ವಿವರ

**COURSEWISE/ CENTRE WISE STUDENT STRENGTH 2016-17**

| Sl.No | Course | Student Strength | | | | |
|---|---|---|---|---|---|---|
| | | CDE, MG | UCM | FMKMC | GFGU | TOTAL |
| 1 | I B.A | 195 | 178 | 71 | 64 | 508 |
| 2 | II B.A | 278 | -- | 2 | -- | 280 |
| 3 | III B.A | 147 | -- | -- | -- | 147 |
| 4 | I B.COM | 75 | 112 | 10 | 37 | 234 |
| 5 | II B.COM | 172 | -- | 1 | -- | 173 |
| 6 | III B.COM | 171 | -- | 2 | -- | 173 |
| 7 | I BBA | 14 | 22 | 3 | 9 | 48 |
| 8 | II BBA | 39 | -- | 1 | -- | 40 |
| 9 | III BBA | 27 | -- | -- | -- | 27 |
| 10 | I M.A ECONOMICS | 62 | 37 | 22 | 24 | 145 |
| 11 | II M.A ECONOMICS | 98 | -- | -- | -- | 98 |
| 12 | I M.A ENGLISH | 90 | 52 | 13 | 26 | 181 |
| 13 | II M.A ENGLISH | 107 | -- | -- | -- | 107 |
| 14 | I M.A HISTORY | 32 | 27 | 9 | 6 | 74 |
| 15 | II M.A HISTORY | 47 | -- | -- | -- | 47 |
| 16 | I M.A KANNADA | 51 | 40 | 18 | 21 | 130 |
| 17 | II M.A KANNADA | 89 | -- | -- | -- | 89 |

2016-17ನೇ ಸಾಲಿನಲ್ಲಿ ವಿದ್ಯಾರ್ಥಿಗಳಿಂದ ಸ್ವೀಕರಿಸಲಾಗಿರುವ ಶುಲ್ಕದ ವಿವರಗಳು 640 ಪುಟಗಳಲ್ಲಿ ಲಭ್ಯವಿದ್ದು ಒಟ್ಟು 240.53 ಲಕ್ಷ ಸ್ವೀಕೃತಿಯಾಗಿದೆ. ಇದರಲ್ಲಿ ಪ್ರವೇಶಾತಿ ಶುಲ್ಕದ ರೂ. 215.34ಲಕ್ಷ ಕೂಡಾ ಸೇರ್ಪಡೆಯಾಗಿರುತ್ತದೆ. ಸದ್ರಿ ವಿವರಗಳನ್ನು ಮುಂದಿನ ಲೆಕ್ಕ ತಪಾಸಣಾ ಸಮಯದಲ್ಲಿ ಹಾಜರುಪಡಿಸಲಾಗುವುದು.

| | | | | | | |
|---|---|---|---|---|---|---|
| 18 | I M.A POLITICAL SCIENCE | 18 | 18 | 8 | 7 | 51 |
| 19 | II M.A POLITICAL SCIENCE | 27 | -- | -- | -- | 27 |
| 20 | I M.A SOCIOLOGY | 30 | 14 | 3 | 10 | 57 |
| 21 | I M.A SOCIOLOGY | 34 | -- | -- | -- | 34 |
| 22 | I M.COM | 302 | 286 | 80 | 177 | 845 |
| 23 | II M.COM | 695 | -- | -- | -- | 695 |
| 24 | II MBA | 12 | -- | -- | -- | 12 |
| 25 | II M.A HINDI | 26 | -- | -- | -- | 12 |
| **TOTAL** | | **2838** | **786** | **243** | **381** | **4248** |

ಮುಂದುವರಿದಂತೆ, ಮೇಲ್ಕಂಡ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳಿಂದ ವಿಶ್ವವಿದ್ಯಾನಿಲಯವು ನಿಗದಿಪಡಿಸಿರುವ ಪ್ರವೇಶ ಶುಲ್ಕ ಹಾಗೂ ಇನ್ನಿತರ ಶುಲ್ಕಗಳ ರೂಪದಲ್ಲಿ ವಸೂಲಾತಿ ಮಾಡಿರುವ ಹಾಗೂ ಬಾಕಿ ಉಳಿದಿರುವ ಪ್ರವೇಶಾತಿ ಶುಲ್ಕದ ವಿವರ (ಡಿ.ಸಿ.ಬಿ) ಈ ಕೆಳಗಿನಂತಿದೆ :

2016-17ನೇ ಸಾಲಿನ ದೂರಶಿಕ್ಷಣ ಕೇಂದ್ರದ ಪ್ರವೇಶಾತಿ ಶುಲ್ಕದ ವಿವರ **(DCB STATEMENT)**

| ಕ್ರ.ಸಂ | ಕೋರ್ಸ್ | ಬೇಡಿಕೆ | ವಸೂಲಾತಿ | ಬಾಕಿ | ಷರಾ |
|---|---|---|---|---|---|
| 1 | B.A | 25,19,400 | 25,19,400 | - | |
| 2 | B.COM | 17,10,300 | 17,10,300 | - | |
| 3 | BBA | 3,75,500 | 3,75,500 | - | |
| 4 | MA ECONOMICS | 15,78,700 | 15,78,700 | - | |
| 5 | MA ENGLISH | 18,80,200 | 18,80,200 | - | |
| 6 | MA HISTORY | 7,87,900 | 7,87,900 | - | |
| 7 | MA KANNADA | 14,22,100 | 14,22,100 | - | |
| 8 | MA POLITICAL SCIENCE | 5,11,200 | 5,11,200 | - | |
| 9 | MA SOCIOLOGY | 5,93,900 | 5,93,900 | - | |
| 10 | M.COM | 99,31,000 | 99,31,000 | - | |
| 11 | MBA (TOURISM) | 70,800 | 70,800 | - | Second year admission |
| 12 | MA HINDI | 1,53,400 | 1,53,400 | - | |
| **ಒಟ್ಟು ಮೊತ್ತ ರೂ.** | | **2,15,34,400** | **2,15,34,400** | - | |

2015-16ನೇ ಸಾಲಿನಲ್ಲಿ ಪ್ರವೇಶಾತಿ ಪಡೆದ ವಿದ್ಯಾರ್ಥಿ/ವಿದ್ಯಾರ್ಥಿನಿಯರು ದ್ವಿತೀಯ ವರ್ಷಕ್ಕೆ ಪ್ರವೇಶಾತಿ ಪಡೆದಿರುತ್ತಾರೆ.

2016-17ನೇ ಸಾಲಿನಲ್ಲಿ ಪ್ರವೇಶಾತಿ ಪಡೆದವರು ಚಲನ್ ಮೂಲಕ ವಿಶ್ವವಿದ್ಯಾನಿಲಯದ ಸಂಬಂಧಪಟ್ಟ ಖಾತೆಗೆ ಜಮೆ ಮಾಡಿ, ಪ್ರವೇಶಾತಿ ವಹಿಯಲ್ಲಿ ಚಲನ್ ನಂಬರ್, ಸ್ವೀಕೃತಿ ಮೊತ್ತಗಳನ್ನು ದಾಖಲಿಸಿ ಸಂಬಂಧಪಟ್ಟ ನಿರ್ದೇಶಕರು ದೃಢೀಕರಿಸಿ ಸದರಿ ಮೊತ್ತ ಜಮೆ ಮಾಡಿರುವ ವಿವರಗಳ ಮೊತ್ತಕ್ಕೆ ಹಣಕಾಸು ಅಧಿಕಾರಿಗಳಿಂದ ದೃಢೀಕರಣಗೊಳಿಸಬೇಕಿರುತ್ತದೆ. ಆ ದೃಢೀಕರಣ ಪತ್ರವನ್ನು ಅಥವಾ ಜಿ.ಆರ್.ಎ ಖಾತೆಗೆ ಜಮೆ ಮಾಡಿರುವ ವಿವರಗಳ ಬ್ಯಾಂಕ್ ಸ್ಕ್ರೋಲ್ ಅನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಜಿ.ಆರ್.ಎ ಖಾತೆಗೆ ಜಮೆಯಾಗಿರುವ ಬಗ್ಗೆ ಪರಿಶೀಲಿಸಲು ಸಾಧ್ಯವಾಗದಿರುವುದರಿಂದ ಕಛೇರಿ ಮುಖ್ಯಸ್ಥರು ಸೂಕ್ತ ಕ್ರಮ ಕೈಗೊಂಡು ಹಣಕಾಸು ಅಧಿಕಾರಿಗಳಿಂದ ಜಮೆಯಾಗಿರುವ ಬಗ್ಗೆ ದೃಢೀಕರಣವನ್ನು ಪಡೆದು ಮುಂದಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಸೂಚಿಸಿದೆ. ಆ ವರೆಗೆ ರೂ. 2,15,34,400 ಆಕ್ಷೇಪಣೆಗೆ ಸೂಚಿಸಲಾಗಿದೆ.

| | | |
|---|---|---|
| 79 | <u>ಅಧ್ಯಯನ ಸಾಮಾಗ್ರಿ **(Study Material)** ಗಳ ಬೈಂಡಿಂಗ್ ಹಾಗೂ ಜೆರಾಕ್ಸ್‌ನ ಟೆಂಡರ್ ಕಡತವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು :</u><br>ದೂರ ಶಿಕ್ಷಣ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ 2016-17ನೇ ಸಾಲಿನಲ್ಲಿ ವಿವಿಧ ಸ್ನಾತಕ ಹಾಗೂ ಸ್ನಾತಕೋತ್ತರ ಕೋರ್ಸ್‌ಗಳಿಗೆ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳಿಗೆ ವಿತರಣೆಯಾಗುವ ಅಧ್ಯಯನ ಸಾಮಾಗ್ರಿಗಳನ್ನು ವಿಶ್ವವಿದ್ಯಾನಿಲಯವು ಸಂಬಂಧಪಟ್ಟ ಕೋರ್ಸ್‌ನ ಒಂದು ಮೂಲ ಪ್ರತಿಯನ್ನು ಪ್ರವೇಶ ಪಡೆದ ವಿದ್ಯಾರ್ಥಿಗಳ ಸಂಖ್ಯೆಗಳಿಗನುಗುಣವಾಗಿ ಜೆರಾಕ್ಸ್ ಮಾಡಿಸಿ ನಂತರ ಬೈಂಡ್ ಮಾಡಿಸಿ ವಿದ್ಯಾರ್ಥಿಗಳಿಗೆ ವಿತರಿಸಲಾಗುತ್ತದೆ. ಈ ಜೆರಾಕ್ಸ್ ಮತ್ತು ಬೈಂಡಿಂಗ್ ಕಾರ್ಯಕ್ಕೆ ಸಂಬಂಧಿಸಿದಂತೆ ದೂರ ಶಿಕ್ಷಣ ಕೇಂದ್ರವು ಸದರಿ ಸಾಲಿನಲ್ಲಿ ಸುಮಾರು 17,37,437/- ಲಕ್ಷ ರೂಪಾಯಿಗಳನ್ನು ವಿನಿಯೋಗಿಸಿರುವುದು ಲೆಕ್ಕಪರಿಶೋಧನೆಯಲ್ಲಿ ಕಂಡು ಬಂದಿರುತ್ತದೆ.<br>ಆದ್ದರಿಂದ ಅಧ್ಯಯನ ಸಾಮಾಗ್ರಿಗಳ ಬೈಂಡಿಂಗ್ ಹಾಗೂ ಜೆರಾಕ್ಸ್ ಕಾರ್ಯದ ನಿಮಿತ್ತ ಕರೆದಿರುವ ಟೆಂಡರ್ ಪ್ರಕ್ರಿಯೆ ಕಡತವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:33/2018-19/ ದಿ:03.12.2018 ರಂದು ಜಾರಿ ಮಾಡಲಾಗಿತ್ತು. ವಿಚಾರಣೆ ಪತ್ರದಲ್ಲಿ ಕೋರಿರುವ ಯಾವುದೇ ದಾಖಲೆ/ಕಡತಗಳನ್ನು ಹಾಜರುಪಡಿಸಿರುವುದಿಲ್ಲ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999 (ಕೆ.ಟಿ.ಪಿ.ಪಿ) ಹಾಗೂ ತಿದ್ದುಪಡಿ ನಿಯಮ 2001 ರ ಉಪನಿಯಮ 4(e) ಮತ್ತು 4(e) (e) ಹಾಗೂ ಸರ್ಕಾರದ ಇತ್ತೀಚಿನ ಅಧಿಸೂಚನೆ ಸಂಖ್ಯೆ: ಸಿಆಸುಇ/2/ಇಸಂಗ್ರ/2009 ದಿನಾಂಕ:09.10.2012 ರಲ್ಲಿ ವಿವರಿಸಿರುವಂತೆ, ರೂ.5 ಲಕ್ಷ ಮೌಲ್ಯಗಳಿಗೆ ಮೀರಿದ ಪ್ರತಿಯೊಂದು ಸಂಗ್ರಹಣೆ/ ಸೇವೆಯ ಸಂಬಂಧದಲ್ಲಿ ಎಲ್ಲಾ ಸಂಸ್ಥೆಗಳು/ ಇಲಾಖೆಗಳು 2012 ರ ಡಿಸೆಂಬರ್ 3ನೇ ದಿನಾಂಕದಿಂದ ಜಾರಿಗೆ ಬರುವಂತೆ ವಿದ್ಯುನ್ಮಾನ ಸಂಗ್ರಹಣಾ ವೇದಿಕೆ (ಇ-ಪ್ರೊಕ್ಯೂರ್‌ಮೆಂಟ್) ಮುಖಾಂತರ ಟೆಂಡರ್ ಕರೆದು ತಮ್ಮ ಸೇವೆಯನ್ನು ಪೂರೈಸಿಕೊಳ್ಳಬೇಕೆಂದು ನಿರ್ದಿಷ್ಟಪಡಿಸಿದೆ. ಆದರೆ, ಇಲ್ಲಿ ಇ-ಟೆಂಡರ್ ಕರೆಯದೇ ನೇರವಾಗಿ ದರಪಟ್ಟಿಯ ಮೂಲಕ ಗುತ್ತಿಗೆದಾರರನ್ನು ನೇಮಿಸಿಕೊಂಡು ಕೆಲಸದ ಆದೇಶವನ್ನು ನೀಡಿರುವುದು ಕೆ.ಟಿ.ಪಿ.ಪಿ ನಿಯಮದ ಉಲ್ಲಂಘನೆಯಾಗಿರುವುದರಿಂದ ಜೆರಾಕ್ಸ್ ಹಾಗೂ ಬೈಂಡಿಂಗ್ ಕಾರ್ಯಕ್ಕೆ ಪಾವತಿಸಲಾದ ವೆಚ್ಚ ಒಟ್ಟು ಮೊತ್ತ ರೂ.17,37,437/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರವನ್ನು <u>ಅನುಬಂಧ-41 ರಲ್ಲಿ</u> ಒದಗಿಸಲಾಗಿದೆ. | 2015-16 ಹಾಗೂ 2016-17ನೇ ಸಾಲಿನಲ್ಲಿ ದೂರ ಶಿಕ್ಷಣ ಕೇಂದ್ರದ ಅಧ್ಯಯನ ಸಾಮಾಗ್ರಿಗಳ ಜೆರಾಕ್ಸ್ ಗೆ ಸಂಬಂಧಿಸಿದಂತೆ ಶೈಕ್ಷಣಿಕ ವರ್ಷದಲ್ಲಿ ಅಗತ್ಯತೆಗೆ ಅನುಸಾರವಾಗಿ ಅಧ್ಯಯನ ಸಾಮಾಗ್ರಿಗಳನ್ನು ಜೆರಾಕ್ಸ್ ಮಾಡಬೇಕಾಗಿದ್ದು ಇದಕ್ಕೆ ಸಂಬಂಧಿಸಿದಂತೆ ಅರ್ಹ ಸಂಸ್ಥೆಗಳಿಂದ ದರಪಟ್ಟಿಗಳನ್ನು ಆಹ್ವಾನಿಸಲಾಗಿದ್ದು ಪ್ರತಿ ಪುಟದ ಜೆರಾಕ್ಸ್‌ಗೆ ರೂ. 0.32ರಂತೆ ಕನಿಷ್ಠ ದರ ನಮೂದಿಸಿದ ಸಂಸ್ಥೆ ಮೆ.ಶ್ಯಾಮ್ ಜೆರಾಕ್ಸ್ ಇವರನ್ನು ಅನುಮೋದಿಸಿದ್ದು ಸದ್ರಿ ಸಂಸ್ಥೆಯವರಿಂದ ಕಾಲ ಕಾಲಕ್ಕೆ ಅಗತ್ಯತೆಗೆ ಅನುಗುಣವಾಗಿ ಜೆರಾಕ್ಸ್ ಮಾಡಿಸಲಾಗಿದೆ. ಬೈಂಡಿಂಗ್ ಕಾರ್ಯಕ್ಕೂ ದರಪಟ್ಟಿ ಆಹ್ವಾನಿಸಲಾಗಿದ್ದು ಅತೀ ಕನಿಷ್ಠ ದರ ನಮೂದಿಸಿದ ಮೆ. ಪ್ರಿಂಟ್ ಶಾಪ್ ಮಂಗಳೂರು ಇವರಿಂದ ಅಗತ್ಯತೆಗೆ ಅನುಸಾರವಾಗಿ ಬೈಂಡಿಂಗ್ ಕೆಲಸವನ್ನು ನಿರ್ವಹಿಸಲಾಗಿದೆ. ರೂ. 1392637.00 ಮೊತ್ತವು ಇಡೀ ವರ್ಷದಲ್ಲಿ ಆಗಿರುವ ವೆಚ್ಚವಾಗಿದ್ದು, ಒಂದೇ ಸಲ ಮಾಡಿದ ವೆಚ್ಚವಾಗಿರುವುದಿಲ್ಲ. ಎರಡೂ ದರಪಟ್ಟಿಗಳು ಮಾರ್ಕೆಟ್ ದರಗಳಲ್ಲಿ ಕನಿಷ್ಠವಾಗಿದೆ. ಮುಂದೆ ಈ ಪ್ರಕ್ರಿಯೆಯನ್ನು ಇ ಟೆಂಡರ್ ಮೂಲಕ ನಿರ್ವಹಿಸಲಾಗುವುದು. ಆದುದರಿಂದ ಆಕ್ಷೇಪಣೆಯನ್ನು ಕೈ ಬಿಡಲು ಕೋರಿದೆ. |
| 80 | <u>ದರಪಟ್ಟಿ/ ಟೆಂಡರ್ ಪ್ರಕ್ರಿಯೆ ಕೈಗೊಳ್ಳದೇ ವಸ್ತುಗಳ ಖರೀದಿ ಮಾಡಿರುವ ಕುರಿತು :</u><br>2016-17ನೇ ಸಾಲಿನಲ್ಲಿ ದೂರ ಶಿಕ್ಷಣ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ ಕಛೇರಿಗೆ ಖರೀದಿಸಲಾದ ವಸ್ತುಗಳ ಸಂಬಂಧ ಪಾವತಿಸಲಾದ ಎಲ್ಲಾ ಓಚರ್‌ಗಳನ್ನು ಪರಿಶೀಲಿಸಲಾಗಿ ಲೇಖನ ಸಾಮಾಗ್ರಿ, ಮುದ್ರಣ ಸಾಮಾಗ್ರಿಗಳು ಹಾಗೂ ಸಲಕರಣೆಗಳ ಖರೀದಿ ಪ್ರಕ್ರಿಯೆಯಲ್ಲಿ ಕೆ.ಟಿ.ಪಿ.ಪಿ ನಿಯಮ 4(e) ಮತ್ತು 4(e) (e) ರಂತೆ ಟೆಂಡರ್ ಕರೆಯದೇ ವಸ್ತುಗಳನ್ನು ಖರೀದಿ ಮಾಡಿ ಸಂಬಂಧಪಟ್ಟ ಸರಬರಾಜುದಾರರಿಗೆ ಬಿಲ್ ಮೊತ್ತವನ್ನು ಪಾವತಿಸಿರುವುದು ಕಂಡು ಬಂದಿದ್ದು, ಇದಕ್ಕೆ ಸಂಬಂಧಿಸಿದಂತೆ ದರಪಟ್ಟಿ/ ಟೆಂಡರ್ ಪ್ರಕ್ರಿಯೆ ಕೈಗೊಂಡ ಬಗ್ಗೆ ದಾಖಲೆ/ ಕಡತಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ: 159/2018-19 ದಿ:31.01.2019 ರಲ್ಲಿ ಕೋರಲಾಗಿತ್ತು. ಕೋರಲಾಗಿರುವ ವಿಚಾರಕ್ಕೆ ಸಂಬಂಧಿಸಿದಂತೆ ದೂರ ಶಿಕ್ಷಣ ಕೇಂದ್ರದಿಂದ ದಾಖಲೆ/ ಮಾಹಿತಿಯನ್ನು ಪಡೆಯಲಾಗಿದ್ದು ಅದರಲ್ಲಿ ಕೆಲವೊಂದು ಉತ್ತರಗಳು ಮಾತ್ರ ಸಮರ್ಪಕವಾಗಿದ್ದು, ಇನ್ನುಳಿದಂತೆ ದರಪಟ್ಟಿ/ ಟೆಂಡರ್ ಪ್ರಕ್ರಿಯೆ ಕೈಗೊಳ್ಳದಿರುವುದು ಕೆ.ಟಿ.ಪಿ.ಪಿ ನಿಯಮದ ಉಲ್ಲಂಘನೆಯಾಗಿರುವುದರಿಂದ ಖರೀದಿ ಪ್ರಕ್ರಿಯೆಯ ಒಟ್ಟು ಮೊತ್ತ ರೂ.9,01,577/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರವನ್ನು <u>ಅನುಬಂಧ-42 ರಲ್ಲಿ</u> ಒದಗಿಸಲಾಗಿದೆ. | ವಿವರಗಳನ್ನು ಮುಂದಿನ ಲೆಕ್ಕ ತಪಾಸಣಾ ವೇಳೆ ಹಾಜರುಪಡಿಸಲಾಗುವುದು. |
| 81 | <u>ದೂರ ಶಿಕ್ಷಣ ಪರೀಕ್ಷಾ ಕಾರ್ಯಗಳಿಗೆ ಹಾಜರಾದ ಪ್ರಾಧ್ಯಾಪಕರುಗಳಿಗೆ/ ಅಧಿಕಾರಿಗಳಿಗೆ ನಿಯಮ ಮೀರಿ ಸಂಭಾವನೆಯನ್ನು ಪಾವತಿಸಿರುವುದರ ಕುರಿತು :</u><br>2016-17ನೇ ಸಾಲಿನ ದೂರ ಶಿಕ್ಷಣ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು. ಇಲ್ಲಿ ವಿವಿಧ ಸ್ನಾತಕ ಹಾಗೂ ಸ್ನಾತಕೋತ್ತರ ಪರೀಕ್ಷಾ ಕಾರ್ಯಗಳನ್ನು ನಿರ್ವಹಿಸಿದ ಹಲವು ಪ್ರಾಧ್ಯಾಪಕರುಗಳು ಹಾಗೂ ಅಧಿಕಾರಿಗಳಿಗೆ ದಿನಭತ್ಯೆ, ಪ್ರಯಾಣ ಭತ್ಯೆಗಳ ಜೊತೆಗೆ ಹೆಚ್ಚುವರಿಯಾಗಿ ಸಂಭಾವನೆಯನ್ನು ನೀಡಿರುವುದು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವ ಓಚರ್‌ಗಳನ್ನು | |

| | | |
|---|---|---|
| | ಪರಿಶೀಲಸಿದಾಗ ಕಂಡು ಬಂದಿರುತ್ತದೆ. ಈ ಸಂಬಂಧ ಪರೀಕ್ಷಾ ಸಂಭಾವನೆಯನ್ನು ನೀಡಲು ನಿರ್ದಿಷ್ಟಪಡಿಸಿದ ಸರ್ಕಾರದ ವಿಶ್ವವಿದ್ಯಾನಿಲಯದ ಆದೇಶ ಪ್ರತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ: 192/2018-19 ದಿನಾಂಕ:12.02.2019 ರಂದು ಜಾರಿ ಮಾಡಲಾಗಿತ್ತು. ಆದರೆ ಸದರಿ ದಾಖಲೆ ಹಾಜರುಪಡಿಸಿರುವುದಿಲ್ಲ. ವಾಸ್ತವವಾಗಿ ಯು.ಜಿ.ಸಿ ವೇತನ ಪಡೆಯುತ್ತಿರುವ ಪ್ರಾಧ್ಯಾಪಕರುಗಳಿಗೆ 6 ನೇ ಯು.ಜಿ.ಸಿ ವೇತನ ಪರಿಷ್ಕರಣೆ ನಿಯಮಾವಳಿಗಳಲ್ಲಿ ಯಾವುದೇ ಸಂಭಾವನೆ ಪಾವತಿಸಲು ಅವಕಾಶವಿರುವುದಿಲ್ಲ. ಹಾಗೂ ಕೆ.ಸಿ.ಎಸ್.ಆರ್ ನಿಯಮ-498 ರಿಂದ 516 ರ ನಿಯಮಗಳನ್ವಯ ವಾಸ್ತವಿಕ ತಂಗುವಿಕೆಗೆ ವೇತನ ಶ್ರೇಣಿಗೆ ಅನುಗುಣವಾಗಿ ದಿನಭತ್ಯೆಯನ್ನು ಪಾವತಿಸಬೇಕಾಗಿರುತ್ತದೆ. ಕೆ.ಸಿ.ಎಸ್.ಆರ್ ನಿಯಮ-28 (ಫೀಜು ಮತ್ತು ಗೌರವಧನ) ರನ್ವಯ ಖಾಯಂ ಸರ್ಕಾರಿ ನೌಕರನು ಪ್ರತಿನಿತ್ಯ ತಾನು ನಿರ್ವಹಿಸುವ ಕರ್ತವ್ಯದ ಹೆಚ್ಚುವರಿ ಕೆಲಸಕ್ಕೆ ಯಾವುದೇ ಸಂಭಾವನೆಯನ್ನು ಪಡೆಯಲು ಅವಕಾಶವಿಲ್ಲ ಎಂದು ಸೂಚಿಸುತ್ತದೆ.<br>ಆದರೆ, ಇಲ್ಲಿ ಕೆ.ಸಿ.ಎಸ್.ಆರ್ ನ ನಿಯಮಗಳನ್ನು ಉಲ್ಲಂಘನೆ ಮಾಡಿ ಹೆಚ್ಚುವರಿಯಾಗಿ ಸಂಭಾವನೆಯನ್ನು ಪಾವತಿಸಲಾಗಿರುತ್ತದೆ. ಹೀಗೆ ಹೆಚ್ಚುವರಿಯಾಗಿ ಪಾವತಿಸಿರುವ ಮೊತ್ತ ರೂ.2,43,060/-ಗಳನ್ನು ವಸೂಲಿಸುವುದು, ಇಲ್ಲವಾದಲ್ಲಿ ಸಿಂಡಿಕೇಟ್ ನಿರ್ಣಯವನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ-2000 ರ ನಿಯಮ-41 (5), (6), (7) ರನ್ವಯ ಸರ್ಕಾರದಿಂದ ಹಾಗೂ ಗೌರವಾನ್ವಿತ ಕುಲಾಧಿಪತಿಗಳಿಂದ ಅನುಮೋದನೆ ಪಡೆಯುವುದು. ಅಲ್ಲಿಯವರೆಗೂ ಸದರಿ ಮೊತ್ತ ರೂ.2,43,060/-ಗಳನ್ನು ವಸೂಲಾತಿಯಲ್ಲಿಡಲಾಗಿದೆ. ವಿವರವನ್ನು ಅನುಬಂಧ-43 ರಲ್ಲಿ ಒದಗಿಸಲಾಗಿದೆ. ದಿನಾಂಕ:10.05.2019 ರ ಪುನರ್ ಪರಿಶೀಲನಾ ವೇಳೆಯಲ್ಲಿ ಸದರಿ ವಿಷಯವನ್ನು ಚರ್ಚಿಸಲಾಗಿ, ಸಂಭಾವನೆ ನೀಡದಿದ್ದಲ್ಲಿ ಪರೀಕ್ಷಾ ಕಾರ್ಯ ನಡೆಯಲು ಸಾಧ್ಯವಿಲ್ಲ ಹಾಗೂ ಯು.ಜಿ.ಸಿ ಯ ಮಾನದಂಡದಂತೆ ಕಾರ್ಯ ನಿರ್ವಹಿಸಲಾಗಿದೆ. ಟಿ.ಎ/ಡಿ.ಎ/ಇತರೆ ಸಂಭಾವನೆಯನ್ನು ನಿಯಮಾನುಸಾರವೇ ನೀಡಲಾಗಿದೆಯೆಂದು ಕುಲಪತಿಗಳು ತಿಳಿಸಿರುವುದನ್ನು ದಾಖಲೆಗಳ ರೂಪದಲ್ಲಿ ಸಲ್ಲಿಸುವವರೆಗೂ ವಸೂಲಾತಿಯಲ್ಲಿ ಮುಂದುವರೆಸಲು ತೀರ್ಮಾನಿಸಲಾಯಿತು. | ಮಂಗಳೂರು ವಿಶ್ವವಿದ್ಯಾನಿಲಯದ ದೂರಶಿಕ್ಷಣ ಕೇಂದ್ರದಿಂದ ನಡೆಸುವ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಕೋರ್ಸುಗಳನ್ನು ನಡೆಸಲು ವಿಶ್ವವಿದ್ಯಾನಿಲಯವು ಯಾವುದೇ ಬೋಧಕ ಸಿಬ್ಬಂದಿಗಳನ್ನು ನೇಮಕಾತಿ ಮಾಡಿರುವುದಿಲ್ಲ. ದೂರಶಿಕ್ಷಣಕ್ಕೆ ಸಂಬಂಧಿಸಿ ಪಠ್ಯ ಪುಸ್ತಕದ ತಯಾರಿ ಮತ್ತು ಪರೀಕ್ಷಾ ಕಾರ್ಯದ ಎಲ್ಲಾ ಕೆಲಸಗಳಿಗೆ ವಿಶ್ವವಿದ್ಯಾನಿಲಯ ಸಂಯೋಜಿತ ಕಾಲೇಜುಗಳ ಅಧ್ಯಾಪಕರನ್ನು ಅವಲಂಬಿಸಬೇಕಾಗುತ್ತದೆ. ದೂರ ಶಿಕ್ಷಣಕ್ಕೆ ಬರುವ ವಿದ್ಯಾರ್ಥಿಗಳು ಈ ಅಧ್ಯಾಪಕರ ವ್ಯಾಪ್ತಿಯಲ್ಲಿ ಬರುವುದಿಲ್ಲ. ಸದ್ರಿ ಅಧ್ಯಾಪಕರು ದೂರ ಶಿಕ್ಷಣಕ್ಕೆ ಸಂಬಂಧಿಸಿದ ಕೆಲಸ ಕಾರ್ಯಗಳನ್ನು ತಮ್ಮ ರಜಾ ಅವಧಿಯಲ್ಲಿ ಮತ್ತು ಬಿಡುವಿನ ವೇಳೆಯಲ್ಲಿ ನಿರ್ವಹಿಸುತ್ತಾರೆ. ದೂರಶಿಕ್ಷಣದ ಮುಖಾಂತರ ಗುಣಮಟ್ಟದ ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ಒದಗಿಸಲು ದೂರಶಿಕ್ಷಣದ ಪಠ್ಯ ಪುಸ್ತಕದ ರಚನೆ, ಸಂಪರ್ಕ ತರಗತಿಗಳನ್ನು ನಡೆಸಲು ಮತ್ತು ಮೌಲ್ಯ ಮಾಪನ ಕಾರ್ಯಗಳಿಗೆ ಶಿಕ್ಷಕ ವೃತ್ತಿಯಲ್ಲಿ ಒಳ್ಳೆಯ ಅನುಭವವಿರುವ ಯುಜಿಸಿ ವೇತನ ಪಡೆಯುವ ಶಿಕ್ಷಕರನ್ನು ನಿಯೋಜಿಸಲಾಗುತ್ತದೆ. ಆದ್ದರಿಂದ ದೂರ ಶಿಕ್ಷಣ ಕಾರ್ಯಕ್ರಮದ ಪರೀಕ್ಷಾ ಕಾರ್ಯಗಳನ್ನು ನಿರ್ವಹಿಸುತ್ತಿರುವ ಯುಜಿಸಿ ವೇತನ ಪಡೆಯುತ್ತಿರುವ ಅಧ್ಯಾಪಕರುಗಳಿಗೂ ಸಂಭಾವನೆ ಪಾವತಿಸುವಂತೆ ದಿನಾಂಕ 25.08.2005 ರಂದು ನಡೆದ ಸಿಂಡಿಕೇಟು ಸಭೆಯು ನಿರ್ಣಯ ಕೈಗೊಂಡಿರುತ್ತದೆ. (ಕಾರ್ಯಸೂಚಿ ಸಂಖ್ಯೆ ಅಭಿವೃದ್ಧಿ 7-33(2005). ಈ ಹಿನ್ನಲೆಯಲ್ಲಿ ಸದರಿ ಆಕ್ಷೇಪಣೆಯನ್ನು ಕೈ ಬಿಡುವಂತೆ ಮತ್ತೊಮ್ಮೆ ಕೋರಲಾಗಿದೆ. |
| 82 | **ಅಧ್ಯಯನ ಸಾಮಾಗ್ರಿ (Study Material) ದಾಸ್ತಾನು ವಹಿ ಪರಿಶೀಲನೆ :**<br>2016-17ನೇ ಸಾಲಿನ ದೂರ ಶಿಕ್ಷಣ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ವಿತರಣೆಯಾಗಿರುವ ವಿವಿಧ ಅಧ್ಯಯನ ಸಾಮಾಗ್ರಿ ದಾಸ್ತಾನು ವಹಿಯನ್ನು ಪರಿಶೀಲಿಸಲಾಗಿ, ದಿನಾಂಕ:03.12.2018 ರ ಅಂತ್ಯಕ್ಕೆ ದಾಸ್ತಾನು ವಹಿಯಲ್ಲಿ ನಮೂದಿಸಿರುವ ಪುಸ್ತಕ ಸಂಖ್ಯೆ ಮತ್ತು ವಿವರಗಳನ್ನು ಅನುಬಂಧ-44 ರಲ್ಲಿ ಒದಗಿಸಲಾಗಿದೆ. ಹಾಗೂ 2016-17ನೇ ಸಾಲಿನಲ್ಲಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೆ ವಿತರಣೆಯಾಗಿರುವ ವಿವಿಧ ಕೋರ್ಸ್‌ಗಳ ಪುಸ್ತಕಗಳ ಸಂಖ್ಯೆಗೂ ಹಾಗೂ ದಾಸ್ತಾನು ವಹಿಯಲ್ಲಿ ನಮೂದಿಸಿರುವ ಸಂಖ್ಯೆಗೂ ಭೌತಿಕವಾಗಿ ತಾಳೆಯಾಗಿರುತ್ತದೆ. | ದಾಸ್ತಾನು ವಹಿ ತಾಳೆಯಾಗಿದ್ದು ಮುಂದಿನ ಲೆಕ್ಕ ತಪಾಸಣಾ ವೇಳೆ ಹಾಜರು ಪಡಿಸಲಾಗುವುದು. |
| 83 | **UGC Startup Research Project, ರಸಾಯನಶಾಸ್ತ್ರ ವಿಭಾಗದ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು**<br><br>ಡಾ॥ ಎಂ.ಆರ್ ಮದ್ದಾನಿ, ಪ್ರಧಾನ ಸಂಶೋಧಕರು, UGC Startup Research Project, ರಸಾಯನಶಾಸ್ತ್ರ ವಿಭಾಗ, ಇವರಿಗೆ ಪ್ರಾಜೆಕ್ಟ್‌ನ ಸಂಶೋಧನಾ ಕಾರ್ಯಗಳಿಗೆ ಅಗತ್ಯವಿರುವ ಉಪಕರಣ Rotary Evaporator Heildolph Model hei vap value digital with vaccum pump-rotavac value control (HEI-VAP Silver 4 package (230 v 50/60 Hz) IN PLUG-1 ಸಂಖ್ಯೆಯನ್ನು, INKARP INSTRUMENTD PVT LTD, Hyderabad ರವರ ಇನ್ವಾಯ್ಸ್ ನಂ:4116/ 29.03.2016 ರಲ್ಲಿ ಖರೀದಿಸಿ, ಧನಾದೇಶ ಸಂಖ್ಯೆ: 435134/ ದಿ:04.07.2016 ರಲ್ಲಿ ರೂ.3,30,000/-ಗಳನ್ನು ಪಾವತಿಸಲಾಗಿದೆ. | |

| | | |
|---|---|---|
| | ಈ ಖರೀದಿ ಸಂಬಂಧ, ಈ ಸಾಮಾಗ್ರಿಗಳ ಖರೀದಿಗಾಗಿ ಕರೆಯಲಾಗಿರುವ ಟೆಂಡರ್ ದಾಖಲೆಗಳು, ದಾಸ್ತಾನು ಸ್ವೀಕೃತಿ ಮತ್ತು ವಿತರಣಾ ಲೆಕ್ಕಪತ್ರಗಳು, ವಾರ್ಷಿಕ ದಾಸ್ತಾನು ಪರಿಶೀಲನಾ ವಿವರ ಪಟ್ಟಿ ಹಾಗೂ ಇನ್ನಿತರೇ ಪೂರಕ ದಾಖಲೆಗಳನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:65/ 2018-19 ನ್ನು ದಿನಾಂಕ:21.12.2018 ರಂದು ನೀಡಿದರೂ ಸಹ ಹಾಜರುಪಡಿಸದ ಕಾರಣ ಸದರಿ ಮೊತ್ತ ರೂ.3,30,000/-ಗಳನ್ನು ಆಕ್ಷೇಪಣೆಗೆ ಸೂಚಿಸಲಾಗಿದೆ. | UGC start-up ಪ್ರಾಜೆಕ್ಟ್‌ನಡಿ Rotary Evaporator ಖರೀದಿಗೆ ಸಂಬಂಧಿಸಿ, ಟೆಂಡರ್ ಆಹ್ವಾನ ಪತ್ರ, ತುಲನಾತ್ಮಕ ತಃಖ್ತೆ, ದಾಸ್ತಾನು ವಹಿ ಇತ್ಯಾದಿಗಳನ್ನು ಮುಂದಿನ ಲೆಕ್ಕ ತಪಾಸಣೆ ವೇಳೆ ಹಾಜರುಪಡಿಸಲಾಗುವುದು. ಆಕ್ಷೇಪಣೆಯನ್ನು ಕೈ ಬಿಡುವಂತೆ ಕೋರಲಾಗಿದೆ. |
| 84 | <u>ಯು.ಜಿ.ಸಿ ವಿವಿಧ ಯೋಜನೆಗಳ ಹಾಗೂ ಪ್ರಯೋಜಿತ ಕಾರ್ಯಕ್ರಮಗಳ ಆರ್ಥಿಕ ಪರಿಸ್ಥಿತಿ ವಿವರಗಳು :</u> | |

**1) UGC General (MRP)**

2016-17ನೇ ಸಾಲಿನ ಆರ್ಥಿಕ ವಹಿವಾಟನ್ನು ಎಸ್.ಬಿ.ಐ ಮಂಗಳಗಂಗೋತ್ರಿ, ಮಂಗಳೂರು ವಿಶ್ವವಿದ್ಯಾನಿಲಯ ಕ್ಯಾಂಪಸ್‌ನ ಶಾಖೆಯ ಖಾತೆ ಸಂಖ್ಯೆ:10094966491 ರಲ್ಲಿ ನಿರ್ವಹಿಸಿದೆ.

| | |
|---|---|
| ಪ್ರಾರಂಭಿಕ ಶಿಲ್ಕು | ರೂ.2,16,73,791 |
| ಜಮಾ ಒಟ್ಟು | ರೂ.4,07,57,864 |
| ಒಟ್ಟು | ರೂ.6,24,31,655 |
| ಖರ್ಚು ಒಟ್ಟು | ರೂ.5,89,33,519 |
| ಅಖೈರು ಶಿಲ್ಕು (ಲೆಕ್ಕಪರಿಶೋಧನೆಯಂತೆ) | ರೂ.34,98,136 |
| ಅಖೈರು ಶಿಲ್ಕು (ಬ್ಯಾಂಕ್ ಪಾಸ್ ಪುಸ್ತಕದಂತೆ) | ರೂ.36,11,572 |
| ವ್ಯತ್ಯಾಸ | ರೂ.1,13,436 |

ವ್ಯತ್ಯಾಸಕ್ಕೆ ಕಾರಣ :- ನಗದಾಗದ ಧನಾದೇಶಗಳು ಹಾಗೂ ಬ್ಯಾಂಕ್ ಖಾತೆಯಿಂದ ಹೆಚ್ಚುವರಿ ಖರ್ಚಾಗಿರುವುದು.

<u>ಅ. ನಗದಾಗದ ಧನಾದೇಶಗಳು:</u>

| | | |
|---|---|---|
| 1 | 435277/ 31.03.2017 | ರೂ.18,024 |
| 2 | 435279/ 31.03.2017 | ರೂ.717 |
| 3 | 435271/ 25.03.2017 | ರೂ.23,044 |
| 4 | 435272/ 27.03.2017 | ರೂ.38,069 |
| 5 | 435273/ 27.03.2017 | ರೂ.3,124 |
| 6 | 435274/ 27.03.2017 | ರೂ.18,342 |
| 7 | 435275/ 27.03.2017 | ರೂ.12,716 |
| | | (-) 1,14,036 |
| ಹೆಚ್ಚುವರಿ ಖರ್ಚು | | (-) 600 |
| ವ್ಯತ್ಯಾಸ | | 1,13,436 |

| | | |
|---|---|---|
| | ಆ. ಧನಾದೇಶ ಸಂಖ್ಯೆ :43511/ 20.05.2016 ರಲ್ಲಿ(ವೋಚರ್ ಸಂಖ್ಯೆ: 37/20.05.2016) ರೂ.1,23,200/-ಗಳ ಧನಾದೇಶ ಬರೆದಿದ್ದು, ಬ್ಯಾಂಕ್ ಖಾತೆಯಲ್ಲಿ ರೂ.1,23,800/-ಗಳು ಡ್ರಾ ಆಗಿದ್ದು, ರೂ.600/-ಗಳು ಹೆಚ್ಚುವರಿಯಾಗಿ ಬ್ಯಾಂಕ್‌ನಿಂದಲೇ ನೇರವಾಗಿ ನಿಧಿಗೆ ಖರ್ಚು ಹಾಕಲಾಗಿದೆ. ಈ ಮೊತ್ತವನ್ನು ಬ್ಯಾಂಕಿನವರಿಂದ ಹಿಂಪಡೆದು ವಿಶ್ವವಿದ್ಯಾನಿಯಲದ ಖಾತೆಗೆ ಜಮಾ ಮಾಡಿಸಿಕೊಳ್ಳಲು ಸೂಚಿಸಿದೆ. ಅಲ್ಲಿಯವರೆಗೆ ಈ ಮೊತ್ತವನ್ನು ವಸೂಲಾತಿಗೆ ಸೂಚಿಸಿದೆ.<br>2) **UGC Refresher Course**<br>2016-17ನೇ ಸಾಲಿನ ಆರ್ಥಿಕ ವಹಿವಾಟನ್ನು ಎಸ್.ಬಿ.ಐ, ಮಂಗಳಗಂಗೋತ್ರಿ, ಮಂಗಳೂರು ವಿಶ್ವವಿದ್ಯಾನಿಲಯ, ಕ್ಯಾಂಪಸ್ ಶಾಖೆಯ ಖಾತೆ ಸಂಖ್ಯೆ: 10094967279 ರಲ್ಲಿ ನಿರ್ವಹಿಸಿದೆ. | ಹೆಚ್ಚುವರಿ ಪಾವತಿಯಾದ ರೂ. 600.00ನ್ನು ದಿನಾಂಕ 26.04.17ರಂದು ಹಿಂದೆ ಪಡೆದಿದ್ದು ಬ್ಯಾಂಕ್ ಖಾತೆಗೆ ಜಮೆ ಮಾಡಲಾಗಿದೆ. |

| | |
|---|---|
| ಪ್ರಾರಂಭಿಕ ಶಿಲ್ಕು | ರೂ.7,62,791 |
| ಜಮಾ ಒಟ್ಟು | ರೂ.38,810 |
| ಒಟ್ಟು | ರೂ.8,01,601 |
| ಖರ್ಚು ಒಟ್ಟು | ಇಲ್ಲ |
| ಅಖೈರು ಶಿಲ್ಕು (ಲೆಕ್ಕಪರಿಶೋಧನೆಯಂತೆ) | ರೂ.8,01,601 |
| ಅಖೈರು ಶಿಲ್ಕು (ಬ್ಯಾಂಕ್ ಪಾಸ್ ಪುಸ್ತಕದಂತೆ) | ರೂ.8,01,601 |
| ವ್ಯತ್ಯಾಸ | ಇಲ್ಲ |

3) **Development Asstee to University (MCJ & Chemistry)**

2016-17ನೇ ಸಾಲಿನ ಆರ್ಥಿಕ ವಹಿವಾಟನ್ನು ಎಸ್.ಬಿ.ಐ, ಮಂಗಳಗಂಗೋತ್ರಿ, ಮಂಗಳೂರು ವಿಶ್ವವಿದ್ಯಾನಿಲಯ, ಕ್ಯಾಂಪಸ್ ಶಾಖೆಯ ಖಾತೆ ಸಂಖ್ಯೆ: 10094966322 ರಲ್ಲಿ ನಿರ್ವಹಿಸಿದೆ.

| | |
|---|---|
| ಪ್ರಾರಂಭಿಕ ಶಿಲ್ಕು | ರೂ.7,00,911 |
| ಜಮಾ ಒಟ್ಟು | ರೂ.3,42,452 |
| ಒಟ್ಟು | ರೂ.10,43,363 |
| ಖರ್ಚು ಒಟ್ಟು | ಇಲ್ಲ |
| ಅಖೈರು ಶಿಲ್ಕು (ಲೆಕ್ಕಪರಿಶೋಧನೆಯಂತೆ) | ರೂ.10,43,363 |
| ಅಖೈರು ಶಿಲ್ಕು (ಬ್ಯಾಂಕ್ ಪಾಸ್ ಪುಸ್ತಕದಂತೆ) | ರೂ.10,43,363 |
| ವ್ಯತ್ಯಾಸ | ಇಲ್ಲ |

4) **Centre for women's Studies-UGC:**

2016-17ನೇ ಸಾಲಿನ ಆರ್ಥಿಕ ವಹಿವಾಟನ್ನು ಎಸ್.ಬಿ.ಐ, ಮಂಗಳಗಂಗೋತ್ರಿ, ಮಂಗಳೂರು ವಿಶ್ವವಿದ್ಯಾನಿಲಯ, ಕ್ಯಾಂಪಸ್ ಶಾಖೆಯ ಖಾತೆ ಸಂಖ್ಯೆ: 3003650339 ರಲ್ಲಿ ನಿರ್ವಹಿಸಿದೆ.

| | |
|---|---|
| ಪ್ರಾರಂಭಿಕ ಶಿಲ್ಕು | ರೂ.69,118 |
| ಜಮಾ ಒಟ್ಟು | ರೂ.12,47,087 |
| ಒಟ್ಟು | ರೂ.13,16,205 |
| ಖರ್ಚು ಒಟ್ಟು | 2,58,644 |
| ಅಖೈರು ಶಿಲ್ಕು (ಲೆಕ್ಕಪರಿಶೋಧನೆಯಂತೆ) | ರೂ.10,57,561 |
| ಅಖೈರು ಶಿಲ್ಕು (ಬ್ಯಾಂಕ್ ಪಾಸ್ ಪುಸ್ತಕದಂತೆ) | ರೂ.10,57,561 |
| ವ್ಯತ್ಯಾಸ | ಇಲ್ಲ |

5) **<u>Canara Bank, Balmatta Mangalore (UGC Grant)</u>**

2016-17ನೇ ಸಾಲಿನ ಆರ್ಥಿಕ ವಹಿವಾಟನ್ನು Canara Bank, Mangalore Balmatta Road, Mangalore, ಇಲ್ಲಿನ ಖಾತೆ ಸಂಖ್ಯೆ: 1333101201861 ರಲ್ಲಿ ನಿರ್ವಹಿಸಿದೆ.

| | |
|---|---|
| ಪ್ರಾರಂಭಿಕ ಶಿಲ್ಕು | ರೂ.7,48,819 |
| ಜಮಾ ಒಟ್ಟು | ರೂ.13,67,367 |
| ಒಟ್ಟು | ರೂ.21,16,186 |
| ಖರ್ಚು ಒಟ್ಟು | ರೂ.13,31,399 |
| ಅಖೈರು ಶಿಲ್ಕು (ಲೆಕ್ಕಪರಿಶೋಧನೆಯಂತೆ) | ರೂ.7,84,787 |
| ಅಖೈರು ಶಿಲ್ಕು (ಬ್ಯಾಂಕ್ ಪಾಸ್ ಪುಸ್ತಕದಂತೆ) | ರೂ.7,84,787 |
| ವ್ಯತ್ಯಾಸ | ಇಲ್ಲ |

6) **<u>UGC XI Plan fund :</u>**

2016-17ನೇ ಸಾಲಿನ ಆರ್ಥಿಕ ವಹಿವಾಟನ್ನು ಎಸ್.ಬಿ.ಐ, ಮಂಗಳಗಂಗೋತ್ರಿ, ಮಂಗಳೂರು ವಿಶ್ವವಿದ್ಯಾನಿಲಯ, ಕ್ಯಾಂಪಸ್ ಶಾಖೆಯ ಖಾತೆ ಸಂಖ್ಯೆ: 30263309695 ರಲ್ಲಿ ನಿರ್ವಹಿಸಿದೆ.

| | |
|---|---|
| ಪ್ರಾರಂಭಿಕ ಶಿಲ್ಕು | ರೂ.17,06,231 |
| ಜಮಾ ಒಟ್ಟು | ರೂ.45,203 |
| ಒಟ್ಟು | ರೂ.17,51,434 |
| ಖರ್ಚು ಒಟ್ಟು | ರೂ.17,00,000 |
| ಅಖೈರು ಶಿಲ್ಕು (ಲೆಕ್ಕಪರಿಶೋಧನೆಯಂತೆ) | ರೂ.51,434 |
| ಅಖೈರು ಶಿಲ್ಕು (ಬ್ಯಾಂಕ್ ಪಾಸ್ ಪುಸ್ತಕದಂತೆ) | ರೂ.51,434 |
| ವ್ಯತ್ಯಾಸ | ಇಲ್ಲ |

| | | |
|---|---|---|
| | **7) Centre for Study of Social Exclusion & Inclusive policy (CSEIP) :**<br>2016-17ನೇ ಸಾಲಿನ ಆರ್ಥಿಕ ವಹಿವಾಟನ್ನು ಎಸ್.ಬಿ.ಐ, ಮಂಗಳಗಂಗೋತ್ರಿ, ಮಂಗಳೂರು ವಿಶ್ವವಿದ್ಯಾನಿಲಯ, ಕ್ಯಾಂಪಸ್ ಶಾಖೆಯ ಖಾತೆ ಸಂಖ್ಯೆ: 30164814089 ರಲ್ಲಿ ನಿರ್ವಹಿಸಿದೆ. | |

| | |
|---|---|
| ಪ್ರಾರಂಭಿಕ ಶಿಲ್ಕು | ರೂ.2,22,525 |
| ಜಮಾ ಒಟ್ಟು | ರೂ.22,12,550 |
| ಒಟ್ಟು | ರೂ.24,35,075 |
| ಖರ್ಚು ಒಟ್ಟು | ರೂ.21,90,902 |
| ಅಖೈರು ಶಿಲ್ಕು (ಲೆಕ್ಕಪರಿಶೋಧನೆಯಂತೆ) | ರೂ.2,44,173 |
| ಅಖೈರು ಶಿಲ್ಕು (ಬ್ಯಾಂಕ್ ಪಾಸ್ ಪುಸ್ತಕದಂತೆ) | ರೂ.2,44,173 |
| ವ್ಯತ್ಯಾಸ | ಇಲ್ಲ |

**8) Innovative Programme with Material Science :**

2016-17ನೇ ಸಾಲಿನ ಆರ್ಥಿಕ ವಹಿವಾಟನ್ನು ಎಸ್.ಬಿ.ಐ, ಮಂಗಳ ಗಂಗೋತ್ರಿ, ಮಂಗಳೂರು ವಿಶ್ವವಿದ್ಯಾನಿಲಯ, ಕ್ಯಾಂಪಸ್ ಶಾಖೆಯ ಖಾತೆ ಸಂಖ್ಯೆ: 30266313665 ರಲ್ಲಿ ನಿರ್ವಹಿಸಿದೆ.

| | |
|---|---|
| ಪ್ರಾರಂಭಿಕ ಶಿಲ್ಕು | ರೂ.4,841 |
| ಜಮಾ ಒಟ್ಟು | ರೂ.247 |
| ಒಟ್ಟು | ರೂ.5,088 |
| ಖರ್ಚು ಒಟ್ಟು | ಇಲ್ಲ |
| ಅಖೈರು ಶಿಲ್ಕು (ಲೆಕ್ಕಪರಿಶೋಧನೆಯಂತೆ) | ರೂ.5,088 |
| ಅಖೈರು ಶಿಲ್ಕು (ಬ್ಯಾಂಕ್ ಪಾಸ್ ಪುಸ್ತಕದಂತೆ) | ರೂ.5,088 |
| ವ್ಯತ್ಯಾಸ | ಇಲ್ಲ |

| | | |
|---|---|---|
| 85 | <u>ಇಂಜಿನಿಯರಿಂಗ್ ವಿಭಾಗದಲ್ಲಿ ದಾಖಲೆಗಳನ್ನು ನಿರ್ವಹಿಸದಿರುವುದು :</u><br>2016-17ನೇ ಸಾಲಿನ ಮಂಗಳೂರು ವಿಶ್ವವಿದ್ಯಾನಿಲಯದ ಇಂಜಿನಿಯರಿಂಗ್ ವಿಭಾಗದ ಲೆಕ್ಕಪರಿಶೋಧನೆಯಲ್ಲಿ ಗಮನಿಸಿದ ಬಹು ಮುಖ್ಯ ಅಂಶಗಳೆಂದರೆ ವರ್ಕ್ ಕ್ಯಾಷ್‌ಬುಕ್, ಗ್ರಾಂಟ್ & ಔಟ್‌ಲೇ, ಸಿ ರಿಜಿಸ್ಟರ್ ನಿರ್ವಹಿಸಿರುವುದಿಲ್ಲ. ಅಲ್ಲದೆ ಬಿ.ಆರ್.ಎಸ್ ಸ್ಟೇಟ್‌ಮೆಂಟ್ ಸಹ ಮಾಡಿರುವುದಿಲ್ಲ. ಹಣಕಾಸು ವಿಭಾಗದಿಂದ ಸ್ವೀಕರಿಸಿದ ಚೆಕ್/ಇತರೆ ನಗದುಗಳನ್ನು ನಗದು ಪುಸ್ತಕಕ್ಕೆ ತೆಗೆದುಕೊಂಡು ನಗದು ಪುಸ್ತಕವನ್ನು ಕರ್ನಾಟಕ ಆರ್ಥಿಕ ಸಂಹಿತೆ ಪ್ರಕಾರ ನಿರ್ವಹಿಸಿಲ್ಲದಿರುವುದು ಕಂಡು ಬಂದಿರುತ್ತದೆ. ಇದು ಗಂಭೀರ ಸ್ವರೂಪವಾಗಿದೆ. | |

| | | |
|---|---|---|
| | ಇದರಿಂದಾಗಿ ಹಣಕಾಸು ವಿಭಾಗದಿಂದ ಬಿಡುಗಡೆಯಾದ ಅನುದಾನ ಪಾವತಿಸಲಾದ ಮುಂಗಡ, ಇತರೇ ಸ್ವೀಕೃತಿ, ಧನಾದೇಶ, ಫೀ, ಶುಲ್ಕ, ಬಾಡಿಗೆ ಇತ್ಯಾದಿ ಬಾಬ್ತು ವಿವರಗಳನ್ನು ಲೆಕ್ಕಪರಿಶೋಧನೆಯಲ್ಲಿ ಖಚಿತಪಡಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ಆದ್ದರಿಂದ ದಾಖಲಾತಿಗಳ ಸಂಪೂರ್ಣ ನಿರ್ವಹಣೆಗೆ ಸಂಬಂಧಿಸಿದಂತೆ ಆಡಳಿತಾತ್ಮಕ ಕ್ರಮ ಕೈಗೊಳ್ಳಲು ತಿಳಿಸಿದೆ. ಮುಖ್ಯವಾಗಿ ಇಂಜಿನಿಯರಿಂಗ್ ವಿಭಾಗದಲ್ಲಿ ಕಾರ್ಯ ನಿರ್ವಹಿಸುವ ಅಧಿಕಾರಿ/ಸಿಬ್ಬಂದಿಗಳು ಈ ಬಗ್ಗೆ ಗಮನಹರಿಸಿ ದಾಖಲಾತಿಗಳನ್ನು ನಿಯಮಗಳ ಪ್ರಕಾರ ನಿರ್ವಹಿಸುವ ಅಗತ್ಯವಿರುತ್ತದೆ. | ಸದ್ರಿ ದಾಖಲೆಗಳನ್ನು ಪ್ರಸ್ತುತ ನಿರ್ವಹಿಸಲಾಗುತ್ತಿದೆ. |
| 86 | <u>ಕ್ರಿಯಾ ಯೋಜನೆ ತಯಾರಿಸದೇ ಕಾಮಗಾರಿ ನಡೆಸಿರುವುದು :</u><br>2016-17ನೇ ಸಾಲಿನ ಇಂಜಿನಿಯರಿಂಗ್ ವಿಭಾಗದ ಲೆಕ್ಕಪರಿಶೋಧನೆಯಲ್ಲಿ ಕ್ರಿಯಾ ಯೋಜನೆ ಸಿದ್ಧಪಡಿಸಿಕೊಂಡು ಸಕ್ಷಮ ಪ್ರಾಧಿಕಾರಗಳ ಅನುಮೋದನೆ ಪಡೆಯದೇ ಕಾಮಗಾರಿಗಳನ್ನು ನಿರ್ವಹಿಸಿ ವೆಚ್ಚ ಪಾವತಿಸಿರುವುದನ್ನು ಗಮನಿಸಲಾಗಿದೆ. ವಾರ್ಷಿಕವಾಗಿ ಲಭ್ಯ ಅನುದಾನ, ಮುಂದುವರೆದ ಕಾಮಗಾರಿಗಳು, ಹೊಸ ಕಾಮಗಾರಿಗಳು ಹಾಗೂ ಇತರೆ ಕಾಮಗಾರಿಗಳು ಅವುಗಳ ಅಂದಾಜು ವೆಚ್ಚ, ನಿಗದಿಪಡಿಸಲಾದ ಆಯವ್ಯಯ ಅವಕಾಶಕ್ಕೆದುರಾಗಿ ಕ್ರಿಯಾ ಯೋಜನೆ ಸಿದ್ಧಪಡಿಸಿಕೊಂಡು ಅನುಮೋದನೆ ಪಡೆಯಬೇಕಿರುತ್ತದೆ. ಆದರೆ, ಕ್ರಿಯಾ ಯೋಜನೆ ತಯಾರಿಸದೇ ಮುಂದುವರೆದ ಕಾಮಗಾರಿಗಳು ಮತ್ತು ಇತರೆ ಕಾಮಗಾರಿಗಳನ್ನು ನಿರ್ವಹಿಸಿರುವುದರಿಂದ ಆಡಳಿತಾತ್ಮಕ ಅನುಮೋದನೆ ಪಡೆಯದೆ ನಿರ್ವಹಿಸಿದಂತಾಗಿರುತ್ತದೆ. ಆದ್ದರಿಂದ ಈ ಹಿಂದಿನ ಸಾಲುಗಳವರೆಗಿನ ವೆಚ್ಚ, ಪ್ರಸ್ತುತ ಸಾಲಿನಲ್ಲಿ ಪಾವತಿಸಲಾದ ವೆಚ್ಚ, ಕ್ರೋಢೀಕೃತ ವೆಚ್ಚ, ಹೊಸ ಕಾಮಗಾರಿಗಳಿಗೆ ಪಾವತಿಸಬೇಕಾದ ವೆಚ್ಚ, ಅನುದಾನದ ಉಳಿಕೆ/ ಹೆಚ್ಚುವರಿ ವೆಚ್ಚ ಇತ್ಯಾದಿಗಳನ್ನು ನಿಖರವಾಗಿ ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ. ಆದ್ದರಿಂದ ಈ ಸಂಬಂಧ ಆಡಳಿತಾತ್ಮಕ ಕ್ರಮ ಕೈಗೊಳ್ಳಲು ತಿಳಿಸಿದೆ. | ನಿರ್ವಹಣಾ/ದುರಸ್ತಿ ಕಾಮಗಾರಿಗಳ ಕ್ರಿಯಾಯೋಜನೆಯನ್ನು ತಯಾರಿಸುವ ಬಗ್ಗೆ ಸಂಬಂಧಪಟ್ಟ ವಿಭಾಗಗಳಿಂದ ವಿವಿಧ ಕಾಮಗಾರಿಗಳ ಪಟ್ಟಿಯನ್ನು ಮುಂದಾಗಿಯೇ ನೀಡುವಂತೆ ತಿಳಿಸಲಾಗುವುದು. ನಿರ್ವಹಣಾ ಕಾಮಗಾರಿಗಳ ಪಟ್ಟಿಯು ಯಾವುದೇ ವಿಭಾಗಗಳಿಂದ ಬಾರದಿರುವ ಮೇರೆಗೆ ಕ್ರಿಯಾ ಯೋಜನೆಯನ್ನು ಇದುವರೆಗೆ ತಯಾರಿಸಲಾಗಿರುವುದಿಲ್ಲ. ನಿರ್ವಹಣೆ/ದುರಸ್ತಿ ಕಾಮಗಾರಿಗಳನ್ನು ಆಯಾಯ ಸಾಲಿನಲ್ಲಿಯೇ ಪೂರ್ಣಗೊಳಿಸಲಾಗಿದೆ. ಕಾಮಗಾರಿ ಒಂದು ವರ್ಷದ ಅವಧಿಯೊಳಗೆ ಪೂರ್ಣಗೊಳಿಸಲಾಗದ ಪ್ರಸ್ತಾಪ ಬಂದಲ್ಲಿ ಅವುಗಳ ಕ್ರಿಯಾ ಯೋಜನೆಯನ್ನು ತಯಾರಿಸಿ ಸಲ್ಲಿಸಲಾಗುವುದು. ಅಲ್ಲದೆ ಪ್ರಸ್ತುತ ನಿರ್ವಹಿಸಲಾಗುತ್ತಿದೆ. ಆದ್ದರಿಂದ ಈ ಲೆಕ್ಕ ಪರಿಶೋಧನಾ ಆಕ್ಷೇಪಣೆಯನ್ನು ಕೈಬಿಡುವಂತೆ ಕೋರಲಾಗಿದೆ. |
| 87 | <u>2016-17ನೇ ಸಾಲಿನ ಕೆಲವು ಕಾಮಗಾರಿ ಲೆಕ್ಕಪತ್ರ ದಾಖಲೆಗಳನ್ನು ಹಾಜರುಪಡಿಸದಿರುವುದು :</u><br>2016-17ನೇ ಸಾಲಿನಲ್ಲಿ ವಿವಿಧ ಲೆಕ್ಕ ಶೀರ್ಷಿಕೆಗಳಡಿಯಲ್ಲಿ ವೆಚ್ಚ ಭರಿಸಲಾದ ಕಾಮಗಾರಿ ಬಿಲ್ಲುಗಳಿಗೆ ಸಂಬಂಧಿಸಿದಂತೆ ಸಂಪೂರ್ಣ ಲೆಕ್ಕಪತ್ರ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ: 81/18-19 ದಿ:27.12.2018, 121/18-19 ದಿ:24.01.2019, 126/18-19 ದಿ:24.01.2019, 133/18-19 ದಿ:28.01.2019, 151/18-19 ದಿ:30.01.2019, 152/18-19 ದಿ:30.01.2019, 176/18-19 ದಿ:05.02.2019 ಹಾಗೂ 201/18-19 ದಿ:16.02.2019 ರಂದು ಜಾರಿ ಮಾಡಲಾಗಿದ್ದರೂ ಸಹ ಲೆಕ್ಕಪರಿಶೋಧನೆಯ ಅಂತ್ಯದವರೆಗೆ ಭಾಗಶಃ ದಾಖಲಾತಿಗಳನ್ನು ಮಾತ್ರ ಹಾಜರುಪಡಿಸಲಾಗಿದ್ದು, ಇನ್ನುಳಿದಂತೆ ಹಾಜರುಪಡಿಸದ ಕಾಮಗಾರಿ ಬಿಲ್ಲುಗಳ ಒಟ್ಟು ಮೊತ್ತ ರೂ.8,51,17,113/- ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ದಾಖಲೆಗಳನ್ನು ಹಾಜರುಪಡಿಸಲು ವಿಫಲರಾದ ಅಧಿಕಾರಿ/ಸಿಬ್ಬಂದಿ ವಿರುದ್ಧ ಆಡಳಿತಾತ್ಮಕ ಕ್ರಮ ಕೈಗೊಳ್ಳಲು ತಿಳಿಸಿದೆ. ವಿವರಗಳನ್ನು <u>ಅನುಬಂಧ-45 ರಲ್ಲಿ</u> ನೀಡಿದೆ. | ವರದಿಯಲ್ಲಿ ಸೂಚಿಸಿರುವ ಹೆಚ್ಚಿನ ಕಡತಗಳನ್ನು 2016-17ನೇ ಸಾಲಿನ ಲೆಕ್ಕಪರಿಶೋಧನಾ ಸಂದರ್ಭದಲ್ಲಿ ಸಲ್ಲಿಸಲಾಗಿದೆ. ಆದರೆ ಲೆಕ್ಕಪರಿಶೋಧನಾ ಸಂದರ್ಭದಲ್ಲಿ ಕೆಲವು ಶಾಖಾಧಿಕಾರಿಗಳು ಚುನಾವಣಾ ಕರ್ತವ್ಯಕ್ಕೆ ಹಾಜರಾಗಿರುವ ಮೇರೆಗೆ ಕೆಲವೊಂದು ದಾಖಲೆಗಳನ್ನು ಹಾಜರು ಪಡಿಸಲಾಗಿರುವುದಿಲ್ಲ. ಆದಾಗ್ಯೂ ಹಾಜರುಪಡಿಸದ ದಾಖಲೆಗಳನ್ನು ಮುಂದಿನ ಲೆಕ್ಕಪರಿಶೋಧನೆಯಲ್ಲಿ ಹಾಜರುಪಡಿಸಲಾಗುವುದು. ಆದ್ದರಿಂದ ಲೆಕ್ಕಪರಿಶೋಧನಾ ಆಕ್ಷೇಪಣೆಯನ್ನು ಕೈಬಿಡಲು ಕೋರಲಾಗಿದೆ. |
| 88 | <u>ಟೆಂಡರ್ ಕರಾರಿನ ಷರತ್ತನ್ನು ಉಲ್ಲಂಘಿಸಿ, ಹೆಚ್ಚುವರಿ ಪರಿಮಾಣಕ್ಕೆ ಬಿಲ್ ಪಾವತಿಸಿರುವುದು :</u><br>2016-17ನೇ ಸಾಲಿನಲ್ಲಿ ಪಾವತಿಸಿರುವ ಕಾಮಗಾರಿ ವೋಚರ್‌ಗಳನ್ನು (ಹಾಜರುಪಡಿಸಿರುವಷ್ಟು) ಸಂಬಂಧಿಸಿದ ಟೆಂಡರ್ ಲೆಕ್ಕಪತ್ರ ದಾಖಲೆಗಳೊಂದಿಗೆ ಪರಿಶೀಲಿಸಲಾಗಿ, Karnataka works Departmental code-2014 ರ codal ನಿಯಮಗಳಂತೆ Standard tender documents for procurement of works (STD) ನ KW ನ ಷರತ್ತಿನಂತೆ ಟೆಂಡರ್ ಕರೆದು, ಗುತ್ತಿಗೆ ಕರಾರು ಮಾಡಲಾಗಿರುತ್ತದೆ.<br>Standard tender document ನ ಕರಾರಿನ ಕಲಂ-30.4 ರನ್ವಯ ಪ್ರತೀ ಐಟಂ ನ ಪರಿಮಾಣವು ಅಂದಾಜು ಪಟ್ಟಿಯ ಪರಿಮಾಣಕ್ಕೆ ಸೀಮಿತಗೊಳಿಸಿ ಅಥವಾ ಶೇ.5 ರಷ್ಟರ ವರೆಗೆ ಏರಿಳಿತವಾಗಿ (Variation) ಕಾರ್ಯನಿರ್ವಹಿಸಿದ ಪರಿಮಾಣಕ್ಕೆ ಕಾರ್ಯಪಾಲಕ ಅಭಿಯಂತರರು ತಮ್ಮ ಅಧಿಕಾರದ ವಿವೇಚನೆಗೆ ಒಳಪಟ್ಟು ಪಾವತಿಸಬಹುದಾಗಿರುತ್ತದೆ. ಹಾಗೂ ಶೇ.5 ಕ್ಕಿಂತ ಹೆಚ್ಚಾದಲ್ಲಿ ವಿಶ್ವವಿದ್ಯಾನಿಲಯದಿಂದ ಮಂಜೂರಾತಿಯನ್ನು ಅಗತ್ಯವಾಗಿ ಪಡೆಯಬೇಕಾಗಿರುತ್ತದೆ. | ಪ್ರಸ್ತುತ ಕಾಮಗಾರಿಗಳ ಪರಿಮಾಣ ಅಂದಾಜು ಪಟ್ಟಿಯ ಪರಿಮಾಣಕ್ಕಿಂತ ಶೇ. 5 ರಷ್ಟನ್ನು ಮೀರಿ ಹೆಚ್ಚಿನ ಪರಿಮಾಣ ನಿರ್ವಹಿಸಿದಲ್ಲಿ ಆಡಳಿತ ಅನುಮೋದನೆ ಪಡೆದುಕೊಳ್ಳಲಾಗುತ್ತಿದೆ. ಸದ್ರಿ ಆಕ್ಷೇಪಣೆಗೆ ಸಂಬಂಧಿಸಿದಂತೆ ಹೆಚ್ಚುವರಿ ಪ್ರಮಾಣ ಬಗ್ಗೆ ಪರಿಶೀಲಿಸಿ ಅನುಮೋದನೆ ಪಡೆಯಲು ಕ್ರಮ ಕೈಗೊಳ್ಳಲಾಗುವುದು. ಆಕ್ಷೇಪಣೆಯನ್ನು ಕೈಬಿಡುವಂತೆ ಕೋರಲಾಗಿದೆ. |

| | | |
|---|---|---|
| | ಆದರೆ ಕೆಲವು ಕಾಮಗಾರಿ ಬಿಲ್ಲುಗಳಲ್ಲಿ ಅಂದಾಜು ಪಟ್ಟಿಯ ಪರಿಮಾಣಕ್ಕಿಂತ ಶೇ.5 ರಷ್ಟನ್ನು ಮೀರಿ ಹೆಚ್ಚಿನ ಪರಿಮಾಣ ನಿರ್ವಹಿಸಿರುವುದಕ್ಕೆ ಕಾರ್ಯಪಾಲಕ ಅಭಿಯಂತರರು ವಿಶ್ವವಿದ್ಯಾನಿಲಯದ ಮಂಜೂರಾತಿಯನ್ನು ಪಡೆಯದೇ ಮೇಲ್ಕಂಡ ನಿಯಮಗಳನ್ನು ಉಲ್ಲಂಘಿಸಿ, ಬಿಲ್ಲುಗಳನ್ನು ಪಾವತಿಸಿರುತ್ತಾರೆ.<br>ಹೀಗೆ ನಿಯಮಗಳನ್ನು ಉಲ್ಲಂಘಿಸಿ, ಹೆಚ್ಚುವರಿ ಪರಿಮಾಣಕ್ಕೆ ಪಾವತಿಸಿರುವ ಕಾಮಗಾರಿಗಳ ವಿವರಗಳನ್ನು <u>ಅನುಬಂಧ-46 ರಲ್ಲಿ</u> ವರದಿಗೆ ಲಗತ್ತಿಸಿದೆ. ಸಂಬಂಧಿಸಿದ ಕಾರ್ಯಪಾಲಕ ಅಭಿಯಂತರರು ಹಾಗೂ ಇತರೇ ಅಧಿಕಾರಗಳ ಮೇಲೆ ಆಡಳಿತಾತ್ಮಕ ಸೂಕ್ತ ಕ್ರಮ ಕೈಗೊಳ್ಳಲು ಹಾಗೂ ಈ ನ್ಯೂನ್ಯತೆ ಕುರಿತಂತೆ ಅನುಪಾಲನಾ ವರದಿ ಸಲ್ಲಿಸಲು ಸೂಚಿಸುತ್ತಾ, ಅನುಬಂಧ-46 ರಲ್ಲಿ ತಿಳಿಸಿರುವಂತೆ ಒಟ್ಟು ರೂ.34,95,820/- ಗಳನ್ನು ವಸೂಲಾತಿಗೆ ಸೂಚಿಸಲಾಗಿದೆ. (ವಿಚಾರಣಾ ಪತ್ರ ಸಂಖ್ಯೆ: 201/2018-19 ದಿನಾಂಕ:16.02.2019) | |
| 89 | <u>ಕಾಮಗಾರಿ ನಿರ್ವಹಿಸಿದ ಗುತ್ತಿಗೆದಾರರಿಗೆ ಸೇವಾ ತೆರಿಗೆಯನ್ನು ಪಾವತಿಸಿರುವುದು :</u><br>2016-17ನೇ ಸಾಲಿನ ಮಂಗಳೂರು ವಿಶ್ವವಿದ್ಯಾನಿಲಯದ ಇಂಜಿನಿಯರಿಂಗ್ ವಿಭಾಗದ ದಾಖಲಾತಿಗಳ ಲೆಕ್ಕಪರಿಶೋಧನೆಯಲ್ಲಿ ಬಿ.ಆರ್ ಸಂಖ್ಯೆ:253/2016-17 ರಲ್ಲಿ ವಿಶ್ವವಿದ್ಯಾನಿಲಯ ವ್ಯಾಪ್ತಿಯ ಕಾಮಗಾರಿಗಳನ್ನು ನಿರ್ವಹಿಸಿದ ಗುತ್ತಿಗೆದಾರರಾದ ಶ್ರೀ ಕ್ಲಿಫರ್ಡ್ ಡಿಸೋಜ ಇವರಿಗೆ ರೂ.2,00,008/-ಗಳ ಸೇವಾ ತೆರಿಗೆಯನ್ನು ಪಾವತಿಸಿರುವುದನ್ನು ಗಮನಿಸಲಾಗಿದ್ದು, ಹಾಜರುಪಡಿಸಿರುವ ದಾಖಲಾತಿಗಳನ್ನು ಪರಿಶೀಲಿಸಲಾಗಿ ಅಂದಾಜು ಪಟ್ಟಿಯಲ್ಲಿ ಸೇವಾ ತೆರಿಗೆ ಪಾವತಿಸುವ ಸಂಬಂಧ ಯಾವುದೇ ಅವಕಾಶ ಮಾಡಿಕೊಂಡಿರುವುದಿಲ್ಲ. ಅಲ್ಲದೆ ಆಡಳಿತಾತ್ಮಕ ಮಂಜೂರಾತಿಯಾದ ಟೆಂಡರ್ ಮೊತ್ತದಲ್ಲಿ ಸೇವಾ ತೆರಿಗೆ ಸೇರಿಲ್ಲದಿರುವುದರಿಂದ ಸದರಿ ಸೇವಾ ತೆರಿಗೆಯನ್ನು ಪಾವತಿಸಿರುವುದು ಹೆಚ್ಚುವರಿ ಪಾವತಿಯಾದಂತಾಗಿದ್ದು, ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ಹೊರೆಯಾಗಿ ನಷ್ಟ ಉಂಟಾಗಿರುತ್ತದೆ. ಆದ್ದರಿಂದ ಈ ಸಂಬಂಧ ಪಾವತಿಸಲಾದ ರೂ.2,00,008/-ಗಳನ್ನು ಸಂಬಂಧಪಟ್ಟವರಿಂದ ವಸೂಲಿಸಿ ವಿಶ್ವವಿದ್ಯಾನಿಲಯದ ಸಂಬಂಧಿತ ಖಾತೆಗೆ ಜಮಾ ಮಾಡಿ ವಿವರಗಳನ್ನು ಹಾಜರುಪಡಿಸಲು ಸೂಚಿಸಿದೆ. ಹಾಗೂ ದಾಖಲೆಗಳನ್ನು/ಕಡತಗಳನ್ನು ಪರಿಶೀಲಿಸದೆ ಈ ರೀತಿಯ ವೆಚ್ಚಗಳ ಬಿಲ್ಲುಗಳನ್ನು ಪಾವತಿಗೆ ಅಂಗೀಕರಿಸುವ ಹಣಕಾಸು ಇಲಾಖೆ ಹಾಗೂ ಇಂಜಿನಿಯರಿಂಗ್ ಶಾಖೆಯ ಸಿಬ್ಬಂದಿಗಳ ವಿರುದ್ಧ ಸೂಕ್ತ ಆಡಳಿತಾತ್ಮಕ ಕ್ರಮ ಜರುಗಿಸಲು ಸೂಚಿಸಿದೆ. | ಈ ಬಗ್ಗೆ ಕುಲಸಚಿವರ ಪತ್ರ ಸಂಖ್ಯೆ: ಮವಿ/ಡಿಇವಿ/43/ 2015-16/ಡಿ1 ದಿನಾಂಕ 01.04.2016 ರಲ್ಲಿ ನೀಡಿರುವ ಆದೇಶದನ್ವಯ ಗುತ್ತಿಗೆದಾರರಿಗೆ ಸೇವಾ ತೆರಿಗೆಯನ್ನು ವಿಶ್ವವಿದ್ಯಾನಿಲಯದಿಂದ ಪಾವತಿ ಮಾಡಲಾಗಿರುತ್ತದೆ. ಆದುದರಿಂದ ಆಕ್ಷೇಪಣೆಯನ್ನು ಕೈಬಿಡುವಂತೆ ಕೋರಲಾಗಿದೆ. |
| 90 | **<u>E.M.D, Security Deposit (Performance Security)</u>** <u>ಮತ್ತು</u> **<u>Additional Security (Unbalanced), Register of works</u>**<u>ಸಂಬಂಧದ ವಹಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು :</u><br>2016-17ನೇ ಸಾಲಿನ ಕಾಮಗಾರಿ ವೋಚರ್‌ಗಳಿಗೆ ಸಂಬಂಧಿಸದಿಂತೆ, Standard Tender documents (STD) for procurement of works ನ clause 24 ಮತ್ತು 24 (1), 25 ಮತ್ತು 25 (1) ಹಾಗೂ 29 ಮತ್ತು 29 (1) ರನ್ವಯ ಗುತ್ತಿಗೆದಾರರಿಂದ ಸ್ವೀಕರಿಸಲಾದ Security Deposit ಮತ್ತು Additional Security (Unbalanced) ಹಾಗೂ Clause 9 &9.1 ರನ್ವಯ ಸ್ವೀಕರಿಸಲಾದ Earnestr money deposit (EMD) ಗಳ ವಹಿಗಳು ಮತ್ತು ಸಂಪೂರ್ಣ ಲೆಕ್ಕಪತ್ರ ದಾಖಲೆಗಳು ಮತ್ತು 2016-17ನೇ ಸಾಲಿನಲ್ಲಿ ಗುತ್ತಿಗೆದಾರರಿಗೆ EMD, SD ಮತ್ತು AD ಗಳನ್ನು ಹಿಂದಿರುಗಿಸಿರುವುದಕ್ಕೆ ದಾಖಲೆಗಳನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:81/2018-19 ದಿನಾಂಕ:27.12.2018 ಹಾಗೂ ವಿಚಾರಣಾ ಪತ್ರ ಸಂಖ್ಯೆ:108/2018-19 ನ್ನು ದಿನಾಂಕ:08.01.2019 ನೀಡಿದ್ದರೂ ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.<br>ಮೇಲ್ಕಂಡ ಎಲ್ಲಾ ಲೆಕ್ಕಪತ್ರ ದಾಖಲೆಗಳನ್ನು ಲೆಕ್ಕತನಿಖೆಗೆ ಹಾಜರುಪಡಿಸದ ಕಾರಣ ಪರಿಶೀಲಿಸಲು ಹಾಗೂ ದೃಢೀಕರಿಸಲು ಸಾಧ್ಯವಾಗಿರುವುದಿಲ್ಲ. ದಿನಾಂಕ:10.05.2019 ರ ಪುನರ್ ಪರಿಶೀಲನಾ ವೇಳೆಯಲ್ಲಿ ಕಾರ್ಯಪಾಲ ಅಭಿಯಂತರರಿಗೆ ಈ ಬಗ್ಗೆ ವಿಶೇಷ ಗಮನ ಹರಿಸುವಂತೆ ಸೂಚಿಸುತ್ತಾ, Karnataka Public Works Departmental Code-2014 ರ ಪ್ಯಾರಾ-220 ರನ್ವಯ ಮತ್ತು Publics Works Accounts ನಮೂನೆ-7, 12 ಮತ್ತು 13 ರೀತ್ಯಾ ಕ್ರಮವಾಗಿ ದಾಖಲೆಗಳನ್ನು ಕ್ರಮಬದ್ಧಗೊಳಿಸಿ ಅನುಪಾಲನಾ ವರದಿಯನ್ನು ಸಲ್ಲಿಸುವಂತೆ ನಿರ್ದೇಶನ ನೀಡಲಾಯಿತು. | E.M.D, Security Deposit (Performance Security) ಮತ್ತು Additional Security (Unbalanced) ಸಂಬಂಧಿಸಿದ ವಹಿಗಳನ್ನು ಪ್ರಸ್ತುತ ನಿರ್ವಹಿಸಲಾಗುತ್ತಿದೆ.ಮುಂದಿನ ಲೆಕ್ಕ ತಪಾಸಣಾ ವೇಳೆ ಹಾಜರು ಪಡಿಸಲಾಗುವುದು. ಆಕ್ಷೇಪಣೆಯನ್ನು ಕೈ ಬಿಡುವಂತೆ ಕೋರಲಾಗಿದೆ. |

| | | |
|---|---|---|
| 91 | **<u>M/S Roy Constructuions, Mangalore</u>** <u>ರವರ ಕಾಮಗಾರಿ ಬಿಲ್ಲುಗಳಲ್ಲಿ ಆದಾಯ ತೆರಿಗೆಯನ್ನು ಕಡಿಮೆ ಕಟಾಯಿಸಿರುವುದು</u><br>2016-17ನೇ ಸಾಲಿನಲ್ಲಿ M/S Roy Constructuions, Mangalore ಎಂಬ ಸಂಸ್ಥೆಗೆ ಪಾವತಿಸಿರುವ ಕಾಮಗಾರಿ ವೋಚರ್‌ಗಳನ್ನು ಪರಿಶೀಲಿಸಲಾಗಿ, ಈ ಸಂಸ್ಥೆಯ ಹೆಸರಿಗೆ ಗುತ್ತಿಗೆ ಕರಾರು ಮಾಡಿಕೊಂಡು, ಕಾಮಗಾರಿ ಆದೇಶವನ್ನು ಸಂಸ್ಥೆಯ ಹೆಸರಿಗೇ ನೀಡಲಾಗಿರುತ್ತದೆ. ಹಾಗೂ ಕಾಮಗಾರಿ ಬಿಲ್ಲುಗಳಲ್ಲಿ ಶೇ.1 ರ ದರದಂತೆ ಆದಾಯ ತೆರಿಗೆಯನ್ನು ಕಟಾಯಿಸಲಾಗಿರುತ್ತದೆ.<br>ಆದಾಯ ತೆರಿಗೆ ಕಾಯಿದೆ-1961 ರ ಪರಿಚ್ಛೇದ 194-ಅ ರನ್ವಯ ಸಂಸ್ಥೆಯು ವ್ಯಕ್ತಿಯ ಹೆಸರಿನಲ್ಲದೆ ಸಂಸ್ಥೆಯೆಂದು ನೊಂದಯಿಸಿದ್ದಲ್ಲಿ ಗುತ್ತಿಗೆದಾರರ ಬಿಲ್ಲುಗಳಲ್ಲಿ ಶೇ.2 ರ ದರದಂತೆ ಆದಾಯ ತೆರಿಗೆಯನ್ನು ಸಂಸ್ಥೆಯ ಗುತ್ತಿಗೆ ಬಿಲ್ಲುಗಳಲ್ಲಿ ಕಟಾಯಿಸಿ ಪಾವತಿಸಬೇಕಾಗಿರುತ್ತದೆ. ಆದರೆ, ಇಲ್ಲಿ ಹೀಗೆ ಮಾಡದೆ ಶೇ.1 ರಷ್ಟನ್ನು ಮಾತ್ರ ಕಟಾಯಿಸಲಾಗಿದೆ.<br>ಆದುದರಿಂದ <u>ಅನುಬಂಧ-47</u> ರಲ್ಲಿ ತಿಳಿಸಿರುವ ಕಾಮಗಾರಿಗಳ ಪಾವತಿಗಳನ್ನು ಶೇ.2 ರ ದರದಂತೆ ಆದಾಯ ತೆರಿಗೆ ಕಟಾಯಿಸಬೇಕಾಗಿದ್ದು, ಕಡಿಮೆ ಕಟಾಯಿಸಿರುವ ಮೊತ್ತ ರೂ.34,057/-ಗಳನ್ನು ಸಂಸ್ಥೆಯವರಿಂದ ವಸೂಲಿಸಲು ತಿಳಿಸಿದೆ. ಹಾಗೂ ಇನ್ನುಮುಂದೆ ಈ ನ್ಯೂನ್ಯತೆ ಮರುಕಳಿಸದಂತೆ ಗಮನಹರಿಸಲು ಸೂಚಿಸಿದೆ. | ಸದರಿ ಗುತ್ತಿಗೆದಾರರು ಪಾನ್ ನಂಬರವನ್ನು ಒದಗಿಸಿದ್ದು ಸಂಖ್ಯೆ ABRPC0892J ಆಗಿರುತ್ತದೆ. ಪಾನ್ ಸಂಖ್ಯೆ ವೈಯಕ್ತಿಕವಾಗಿರುವುದರಿಂದ 1% ಆದಾಯ ತೆರಿಗೆ ಕಟಾಯಿಸಿದ್ದು ಸರಿಯಿರುತ್ತದೆ. ಆದುದರಿಂದ ಆಕ್ಷೇಪಣೆಯನ್ನು ಕೈಬಿಡುವಂತೆ ಕೋರಲಾಗಿದೆ. |
| 92 | <u>ಆಸ್ತಿವಹಿಯ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು :</u><br>ಮಂಗಳೂರು ವಿಶ್ವವಿದ್ಯಾನಿಲಯದ ಮಾಲೀಕತ್ವಕ್ಕೆ ಒಳಪಟ್ಟಿರುವ ಇಂಜಿನಿಯರಿಂಗ್ ವಿಭಾಗದಲ್ಲಿ ಎಲ್ಲಾ ಚರಾಸ್ತಿ ಮತ್ತು ಸ್ಥಿರಾಸ್ತಿಗಳು ಹಾಗೂ 2016-17ನೇ ಸಾಲಿನಲ್ಲಿ ಕಾಮಗಾರಿಗಳನ್ನು ನಿರ್ವಹಿಸಿ ಹೊಸದಾಗಿ ಸೃಜಿಸಲಾದ ಆಸ್ತಿಗಳ ಬಗ್ಗೆ ವಿವರಗಳನ್ನೊಳಗೊಂಡ ವಹಿಗಳು ಮತ್ತು ಸಂಪೂರ್ಣ ಲೆಕ್ಕ ಪತ್ರ ದಾಖಲೆಗಳನ್ನು ಲೆಕ್ಕ ಪರಿಶೋಧನೆಗೆ ಹಾಜರು ಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ 81/2018-19ನ್ನು ದಿನಾಂಕ 27.12.2018ರಂದು ನೀಡಿದರೂ ಸಹ ಹಾಜರುಪಡಿಸಿರುವುದಿಲ್ಲ.<br>ಈ ಬಗ್ಗೆ ಸಂಬಂಧಿಸಿದ ಅಧಿಕಾರಿಗಳ ಮೇಲೆ ಆಡಳಿತಾತ್ಮಕ ಸೂಕ್ತ ಕ್ರಮ ಕೈಗೊಂಡು. ಈ ನ್ಯೂನತೆ ಕುರಿತಂತೆ ಹಾಗೂ ಆಸ್ತಿ ವಹಿಯ ಬಗ್ಗೆ ಪೂರ್ಣ ವರದಿಯನ್ನು ಅನುಪಾಲನಾ ವರದಿಯಲ್ಲಿ ಸಲ್ಲಿಸಲು ತಿಳಿಸಿದೆ. | ಆಸ್ತಿವಹಿ (Property Register) ಹಾಗೂ ಲೆಕ್ಕಪತ್ರ ದಾಖಲೆಗಳನ್ನು ಮುಂದಿನ ಅವಧಿಗಳಲ್ಲಿ ನಿರ್ವಹಿಸಿ ಲೆಕ್ಕಪರಿಶೋಧನೆಗೆ ಹಾಜರು ಪಡಿಸಲಾಗುವುದು. ಆದುದರಿಂದ ಆಕ್ಷೇಪಣೆಯನ್ನು ಕೈಬಿಡುವಂತೆ ಕೋರಲಾಗಿದೆ. |
| 93 | <u>ಆರ್ಥಿಕ ಪ್ರತ್ಯಾಧಿಕಾರವನ್ನು ಮಿತಿ ಮೀರಿ ಕಾಮಗಾರಿಗೆ ತಾಂತ್ರಿಕ ಮಂಜೂರಾತಿ ನೀಡಿರುವುದು :</u><br>ಮಂಗಳೂರು ವಿಶ್ವವಿದ್ಯಾನಿಲಯದ ಮಂಗಳಗಂಗೋತ್ರಿಯಲ್ಲಿರುವ CARRT ಯೋಜನೆಯ ಸಂಶೋಧನೆಗಳಿಗಾಗಿ ಇಲಿ ಮತ್ತು ಮೊಲಗಳನ್ನು ವೈಜ್ಞಾನಿಕ ರೀತಿಯಲ್ಲಿ ಸಾಕಲು ಬೇಕಾದ ಪ್ರತ್ಯೇಕ ಹಾಗೂ ಸುಸಜ್ಜಿತ ಕಟ್ಟಡ ಅವಶ್ಯಕತೆಯನ್ನು ಪೂರೈಸಲು ರೂ.120.00 ಲಕ್ಷಗಳ ಅಂದಾಜು ಪಟ್ಟಿಗೆ ಕುಲಸಚಿವರ ಪತ್ರ ಸಂಖ್ಯೆ: ಮವಿ/ಡಿ.ಇ.ವಿ/47/2013-14/ಡಿ1 ದಿ:30.04.2014 ರಲ್ಲಿ ಆಡಳಿತ ಮಂಜೂರಾತಿ ದೊರಕಿದ್ದು ಕಾರ್ಯಪಾಲಕ ಅಭಿಯಂತರರ ನಡವಳಿಗಳ ಸಂಖ್ಯೆ: ಮಂ.ವಿ.ವಿ/ಇಡಿ/ಸಿ.ಆರ್-04/2014-15/ಎಸ್-6 ದಿನಾಂಕ:24.05.2014ರಲ್ಲಿ ತಾಂತ್ರಿಕ ಮಂಜೂರಾತಿಗೊಂಡಿರುತ್ತದೆ. ಸದರಿ ಕಾಮಗಾರಿಯನ್ನು ಟೆಂಡರ್ ಕರಾರು ಪತ್ರ ಸಂಖ್ಯೆ: MUA No:12/2015-16 (T) ದಲ್ಲಿ M/S Roy Constructions, Mangalore ರವರಿಗೆ ವಹಿಸಲಾಗಿರುತ್ತದೆ.<br>2016-17ನೇ ಸಾಲಿನಲ್ಲಿ ಈ ಕಾಮಗಾರಿಯ (Construction of Animal House for CARRT Project in Mangalore University Campus) ಎರಡನೇ ಮತ್ತು ಭಾಗಶಃ ಬಿಲ್ಲನ್ನು (ಬಿ.ಆರ್: 224/2016-17/ ದಿನಾಂಕ:01.10.2016) ಪರಿಶೀಲಿಸಿದ್ದು ಕಾರ್ಯಪಾಲಕ ಅಭಿಯಂತರರು ತಮ್ಮ ಆರ್ಥಿಕ ಪ್ರತ್ಯಾಧಿಕಾರದ ಮಿತಿ ಮೀರಿ ಸದರಿ ಕಾಮಗಾರಿಗೆ ತಾಂತ್ರಿಕ ಮಂಜೂರಾತಿ ನೀಡಲಾಗಿರುವುದು ಕಂಡು ಬಂದಿರುತ್ತದೆ.<br>ಕಾಮಗಾರಿ ಅಂದಾಜು ಪಟ್ಟಿಗೆ ತಾಂತ್ರಿಕ ಮಂಜೂರಾತಿ ನೀಡುವ ಸಂಬಂಧ ಸರ್ಕಾರಿ ಆದೇಶ ಸಂಖ್ಯೆ: PWD/671/Fc-1/2009 ಬೆಂಗಳೂರು ದಿನಾಂಕ:03.02.2010 ರ ಪ್ರಕಾರ ಆರ್ಥಿಕ ಪ್ರತ್ಯಾಧಿಕಾರದ ಮಿತಿಯನ್ನು ನಿಗದಿಪಡಿಸಿದ್ದು, ವಿವರಗಳು ಈ ಕೆಳಕಂಡಂತಿದೆ. | ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟ ಆರ್ಥಿಕ ಪ್ರತ್ಯಾಧಿಕಾರವು ಪುಟ ಸಂಖ್ಯೆ 282 ರಲ್ಲಿ ತಿಳಿಸಿರುವಂತೆ Statute relating to delegation of power to the Vice Chancellor ಅನುಬಂಧ 1.A,B,2.a.b 3 abcd ಯಲ್ಲಿ ಸಿಂಡಿಕೇಟ್ ಸಭೆಗೆ ಮಂಡಿಸಿ ನಿರ್ಣಯದಂತೆ ಕ್ರಮ ಕೈಗೊಳ್ಳುವ ಅಧಿಕಾರವಿರುತ್ತದೆ. (ಆದರೂ ಕಾಮಗಾರಿಗಳ ಬಗ್ಗೆ ತಾಂತ್ರಿಕವಾಗಿ ಪರಿಶೀಲಿಸಲು ಕುಲಪತಿಯವರು ಕಟ್ಟಡ ಸಮಿತಿ ಸಭೆಯನ್ನು ರಚಿಸಿದ್ದು,(ಕಟ್ಟಡ ಸಮಿತಿ ಸಭೆಯಲ್ಲಿ ಲೋಕೋಪಯೋಗಿ ಇಲಾಖೆಯ ಅಧೀಕ್ಷಕ ಅಭಿಯಂತರರು ಸೇರಿ 08 ಜನ ಸದಸ್ಯರಿರುತ್ತಾರೆ) ತಾಂತ್ರಿಕ ವಿಚಾರಗಳನ್ನು ಚರ್ಚಿಸಿ ಅನುಮೋದನೆಗಾಗಿ ಸಿಂಡಿಕೇಟ್ ಸಭೆಗೆ ಮಂಡಿಸಲಾಗು ವುದು) ಅದರಂತೆ ರೂ. 5.00 ಲಕ್ಷಕ್ಕಿಂತ ಮೇಲ್ಪಟ್ಟ ಎಲ್ಲಾ ಕಾಮಗಾರಿಗಳನ್ನು ಮಂಗಳೂರು ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳಾದ ಕಟ್ಟಡ ಸಮಿತಿ ಸಭೆ ಹಾಗೂ ಸಿಂಡಿಕೇಟ್ ಸಭೆಯ ಅನುಮೋದನೆಯೊಂದಿಗೆ ನಿರ್ವಹಿಸಲ್ಪಟ್ಟಿದೆ. ಸರ್ಕಾರಿ ಸುತ್ತೋಲೆ ದಿನಾಂಕ 03.02.2019ರಲ್ಲಿ ವಿಶ್ವವಿದ್ಯಾನಿಲಯ ತಾಂತ್ರಿಕ ಅಧಿಕಾರಿಗಳಿಗೆ ಪ್ರತಿನಿಯೋಜನಾಧಿಕಾರ ವ್ಯಾಪ್ತಿಯ ಬಗ್ಗೆ ಸ್ಪಷ್ಟತೆಯಿಲ್ಲದಿರುವುದರಿಂದ ಹಾಗೂ ಮಂಗಳೂರು ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳ ಅನುಮೋದನೆಯ ನಂತರವೇ |

<table>
<tr>
<td></td>
<td>
<table>
<tr><td>1</td><td>ಮುಖ್ಯ ಅಭಿಯಂತರರಿಗೆ</td><td>ಪೂರ್ಣ ಅಧಿಕಾರ (ಪ್ರತೀ ಕಾಮಗಾರಿಗೆ)</td></tr>
<tr><td>2</td><td>ಅಧೀಕ್ಷಕ ಅಭಿಯಂತರರಿಗೆ</td><td>ರೂ.50.00 ಲಕ್ಷಗಳು (ಪ್ರತೀ ಕಾಮಗಾರಿಗೆ)</td></tr>
<tr><td>3</td><td>ಕಾರ್ಯಪಾಲಕ ಅಭಿಯಂತರರಿಗೆ</td><td>ರೂ.10.00 ಲಕ್ಷಗಳು (ಪ್ರತೀ ಕಾಮಗಾರಿಗೆ)</td></tr>
</table>
ಸರ್ಕಾರ ನಿಗದಿಪಡಿಸಿರುವ ಆರ್ಥಿಕ ಪ್ರತ್ಯಾಧಿಕಾರ ಪ್ರಕಾರ (Delegation of financial power) ರೂ.10.00 ಲಕ್ಷಗಳನ್ನು ಮೀರಿ ಕಾರ್ಯಪಾಲಕ ಅಭಿಯಂತರರು ಮೇಲ್ಕಂಡ ಕಾಮಗಾರಿಯ ಅಂದಾಜು ಮೊತ್ತ ರೂ.120.00 ಗಳಿಗೆ ತಾಂತ್ರಿಕ ಮಂಜೂರಾತಿ ನೀಡಿರುವುದರಿಂದ, 2016-17ನೇ ಸಾಲಿನಲ್ಲಿ ಈ ಕಾಮಗಾರಿಗೆ ಪಾವತಿಸಿರುವ (ಧನಾದೇಶ ಸಂಖ್ಯೆ: 095966/ ದಿನಾಂಕ:11.10.2016) ರೂ.33,23,727/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.
</td>
<td>ಕಾರ್ಯಕಾರಿ ಅಭಿಯಂತರರು ಕುಲಪತಿಯವರ ಪರವಾಗಿ ತನ್ನ ಉಪಸ್ಥಿತಿಯಲ್ಲಿ ತಾಂತ್ರಿಕ ಮಂಜೂರಾತಿಯನ್ನು ನೀಡಿರುತ್ತಾರೆ ಹಾಗೂ ವಿಶ್ವವಿದ್ಯಾನಿಲಯದಲ್ಲಿ ಕಾರ್ಯಕಾರಿ ಅಭಿಯಂತರರಿಗೆ ಯಾವುದೇ ಆರ್ಥಿಕ ಪ್ರತ್ಯಾಧಿಕಾರವಿರುವುದಿಲ್ಲ ಎಂದು ಈ ಮೂಲಕ ತಿಳಿಸಲಾಗಿದೆ.<br>ಆದ್ದರಿಂದ ಆಕ್ಷೇಪಣೆಯನ್ನು ಕೈಬಿಡಲು ಕೋರಲಾಗಿದೆ.</td>
</tr>
<tr>
<td>94</td>
<td><u>ಅಳತೆ (ಎಂ.ಬಿ) ಪುಸ್ತಕಗಳಲ್ಲಿ Check Measurement ದಾಖಲಿಸದೇ ಬಿಲ್ಲು ಪಾವತಿಸಿರುವುದು :</u><br>
2016-17ನೇ ಸಾಲಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ ಕಾಮಗಾರಿ ದಾಖಲೆಗಳನ್ನು ಪರಿಶೀಲಿಸಲಾಗಿ, ಕಾರ್ಯಪಾಲಕ ಅಭಿಯಂತರರಾದ ಶ್ರೀ ಎನ್.ಎಸ್.ಮಹದೇವಸ್ವಾಮಿ, ದಿನಾಂಕ:01.04.2016 ರಿಂದ ದಿ:05.07.2016 ರವರೆಗೆ ಮತ್ತು ಶ್ರೀ ಎಂ.ಚಂದ್ರಶೇಖರ್ ದಿನಾಂಕ:05.07.2016 ರಿಂದ ದಿ:31.03.2017 ಅವಧಿಗಳಲ್ಲಿ Check Measurement, ನ್ನು ಎಂ.ಬಿ ಪುಸ್ತಕಗಳಲ್ಲಿ ದಾಖಲಿಸಿರುವುದಿಲ್ಲ. ಹಾಗೂ ಹಣಕಾಸು ಅಧಿಕಾರಿಗಳಾದ ಪ್ರೊ. ಪಿ.ಎ.ರೇಗೋ, ದಿನಾಂಕ:01.04.2016 ರಿಂದ ದಿ:15.05.2016 ರವರೆಗೆ ಶ್ರೀ ಪಾಂಡುರಂಗ ಪ್ರಭು, ದಿನಾಂಕ: 16.05.2016 ರಿಂದ ದಿ:05.06.2016 ರವರೆಗೂ ಮತ್ತು ಪ್ರೋ. ಶ್ರೀಪತಿ ಕಲ್ಲೂರಾಯ, ದಿನಾಂಕ: 06.06.2016 ರಿಂದ ದಿನಾಂಕ:31.03.2017 ಅವಧಿಗಳಲ್ಲಿ ಈ ಕಾಮಗಾರಿ ಬಿಲ್ಲುಗಳನ್ನು ಪಾವತಿ ಮಾಡುವ ಮುನ್ನ ಚೆಕ್‌ಮೆಝರ್‌ಮೆಂಟ್ ಮಾಡಿದ ಬಗ್ಗೆ ಖಚಿತಪಡಿಸಿಕೊಂಡಿರುವುದಿಲ್ಲ. ಇವರುಗಳ ಅವಧಿಯಲ್ಲಿ ಈ ಪ್ರಮಾದಗಳು ಕಂಡು ಬಂದಿದ್ದು, Karnataka public works departmental code, ಟೆಂಡರ್ ಷರತ್ತುಗಳು ಪಾವತಿ ನಿಯಮಗಳನ್ನು ಉಲ್ಲಂಘಿಸಿರುವುದು ಕಂಡು ಬಂದಿರುತ್ತದೆ. ಇವರುಗಳ ಮೇಲೆ ಆಡಳಿತಾತ್ಮಕ ಕ್ರಮ ಜರುಗಿಸಬಹುದಾಗಿರುತ್ತದೆ.<br>
Karnataka public works departmental code-2014 ರ chapter-10 paragraph 110 (9) ರನ್ವಯ ಕಾರ್ಯಪಾಲಕ ಅಭಿಯಂತರರು ರೂ.25.00 ಲಕ್ಷಗಳವರೆಗಿನ ಕಾಮಗಾರಿ ಮೌಲ್ಯಗಳಿಗೆ ಶೇ.10 ರಷ್ಟು ಹಾಗೂ ರೂ.25.00 ಲಕ್ಷಗಳನ್ನು ಮೀರಿದ ಕಾಮಗಾರಿ ಮೌಲ್ಯಗಳಿಗೆ ಶೇ.25 ರಷ್ಟು Check Measurement ದಾಖಲಿಸಿದ ನಂತರವೇ ಬಿಲ್ಲು ಪಾವತಿಸಬೇಕಾಗಿರುತ್ತದೆ.<br>
ಈ ಸಂಬಂಧವಾಗಿ ವಿಚಾರಣಾ ಪತ್ರ ಸಂಖ್ಯೆ: 199/2018-19 ದಿ:16.02.2019 ರ ನೀಡಲಾಗಿ ಸಮಂಜಸವಾದ ಉತ್ತರ ಸ್ವೀಕೃತಿಯಾಗದ ಕಾರಣ ಹಾಗೂ ಚೆಕ್‌ಮೆಝರ್ ಮಾಡಿದ ದಾಖಲೆಗಳಿಲ್ಲದ ಕಾರಣ, ಅಳತೆಗಳನ್ನು ಪುನಃ ಖಚಿತಪಡಿಸಿಕೊಳ್ಳುವ ಷರತ್ತಿಗೆ ಒಳಪಡಿಸಿ, ರೂ.61,96,860/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರಗಳು <u>ಅನುಬಂಧ- 48ರಲ್ಲಿ</u> ವರದಿಗೆ ಲಗತ್ತಿಸಿದೆ.</td>
<td>ಪ್ರಸ್ತುತ ಆಳತೆಗಳಿಗೆ ಪರಿಶೀಲನೆ ಮಾಡಲಾಗುವುದು. ಆದ್ದರಿಂದ ಈ ಆಕ್ಷೇಪಣೆಯನ್ನು ಕೈಬಿಡಲು ಕೋರಲಾಗಿದೆ.</td>
</tr>
<tr>
<td>95</td>
<td><u>Electronic Measurement Book ನಿರ್ವಹಿಸದೇ Public works Department code-2014 ರ codal ನಿಯಮಗಳನ್ನು ಉಲ್ಲಂಘಿಸಿ Manual Measurement Book ನಿರ್ವಹಿಸಿರುವುದು :</u><br>
1) ಮಂಗಳೂರು ವಿಶ್ವವಿದ್ಯಾನಿಲಯದ ವಿಜ್ಞಾನ ಸಂಕೀರ್ಣ ಕಟ್ಟಡದ ದುರಸ್ಥಿ ಮತ್ತು ನವೀಕರಣ ಕಾಮಗಾರಿ (ನಾಲ್ಕನೇ ಮತ್ತು ಅಂತಿಮ ಬಿಲ್ಲು) ಯ ಅಂದಾಜು ಮೊತ್ತ ರೂ.1,43,50,000/-(ಬಿ.ಆರ್ ಸಂಖ್ಯೆ:20/2016-17 ದಿನಾಂಕ:21.04.2016)<br>
2) ಮಂಗಳೂರು ವಿಶ್ವವಿದ್ಯಾನಿಲಯದ ಆವರಣದ ವಿಜ್ಞಾನ ಸಂಕೀರ್ಣ ಕಟ್ಟಡದ ಮೊದಲನೆಯ, ಎರಡನೇ ಅಂತಸ್ತು ಹಾಗೂ ಛಾವಣಿಯ ನವೀಕರಣ ಕಾಮಗಾರಿ (ಏಳನೇ ಮತ್ತು ಅಂತಿಮ ಬಿಲ್ಲು) ಯ ಅಂದಾಜು ಮೊತ್ತ ರೂ.2.41/- ಕೋಟಿ (ಬಿ.ಆರ್ ಸಂಖ್ಯೆ:139/2016-17 ದಿನಾಂಕ:13.07.2016)<br>
3) ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ ಚಿಕ್ಕ ಅಳುವಾರದಲ್ಲಿ ವಿಜ್ಞಾನ ಸಂಕೀರ್ಣ ಕಟ್ಟಡ (ಉತ್ತರ ಭಾಗ) ನಿರ್ಮಾಣ ಕಾಮಗಾರಿ (ಮೊದಲನೇ ಮತ್ತು ಭಾಗಶಃ ಬಿಲ್ಲು) ಯ ಅಂದಾಜು ಮೊತ್ತ ರೂ.4,90,20,000/- (ಬಿ.ಆರ್ ಸಂಖ್ಯೆ: 175/2016-17 ದಿನಾಂಕ:12.08.2016)</td>
<td>ಪ್ರಸ್ತುತ ರೂ. 5.00 ಲಕ್ಷದ ಮೇಲ್ಪಟ್ಟ ಎಲ್ಲಾ ಕಾಮಗಾರಿಗಳಿಗೂ Electronic Measurement Book (EMB) ನಿರ್ವಹಿಸಲಾಗುತ್ತಿದೆ. ಆದ್ದರಿಂದ ಆಕ್ಷೇಪಣೆಯನ್ನು ಕೈಬಿಡುವಂತೆ ಕೋರಲಾಗಿದೆ.</td>
</tr>
</table>

| | | |
|---|---|---|
| | ಮೇಲ್ಕಂಡ ಈ ಮೂರು ಕಾಮಗಾರಿಗಳ ಅಳತೆಗಳನ್ನು Electronic Measurement Book ನಲ್ಲಿ ದಾಖಲಿಸಿರುವುದಿಲ್ಲ. ಹಾಗೂ ಅಳತೆಗಳನ್ನು ಕೈಯ ಬರವಣಿಗೆಯಲ್ಲಿ ಬರೆದು ದಾಖಲಿಸಿರುತ್ತಾರೆ. ಅಳತೆ ಪುಸ್ತಕ (Manual measurement Book) ದಲ್ಲಿ ದಾಖಲಿಸಿ, ನಿರ್ವಹಿಸಲಾಗಿರುತ್ತದೆ.<br>Karantaka Public works Department Code-2014 ರ Chapter-10 Paragraph 110 {1.(ಜಿ)} ಮತ್ತು Paragraph 112 (1) [2(i) (ii) ರನ್ವಯ ಮತ್ತು ಸರ್ಕಾರದ ಆದೇಶ ಸಂಖ್ಯೆ: FD/56/PRO/CELL/2004 ಬೆಂಗಳೂರು ದಿನಾಂಕ:18.01.2005 ರನ್ವಯ ಕಾಮಗಾರಿ ಮೌಲ್ಯ ರೂ.25.00 ಲಕ್ಷಗಳು ಮತ್ತು ಅದನ್ನು ಮೀರಿದ್ದಕ್ಕೆ ಗುತ್ತಿಗೆದಾರರು Electronic Measurement Book ನಲ್ಲಿ ಅಳತೆಗಳನ್ನು ದಾಖಲಿಸಿ Soft ಮತ್ತು Hard ಪ್ರತಿಗಳನ್ನು diskette/ CD ROM ಮೂಲಕ ಪಾವತಿಗಾಗಿ ಸಂಬಂಧಿಸಿದ ಅಭಿಯಂತರರಿಗೆ ಸಲ್ಲಿಸಬೇಕಾಗಿರುತ್ತದೆ.<br>ಮೇಲ್ಕಂಡ ನಿಯಮಗಳನ್ನು ಉಲ್ಲಂಘಿಸಿರುವವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಲು ಲೆಕ್ಕಪರಿಶೋಧನಾ ವರದಿಯು ಸೂಚಿಸುತ್ತದೆ ಹಾಗೂ ಈ ಕುರಿತು ಅನುಪಾಲನಾ ವರದಿ ಸಲ್ಲಿಸಲು ಸೂಚಿಸಿದೆ. | |
| 96 | <u>ಏಕೈಕ ಬಿಡ್ಡುದಾರರಿಗೆ ಟೆಂಡರ್ ಕಾಮಗಾರಿ ವಹಿಸಿರುವುದು :</u><br>ಕಾಮಗಾರಿ ಟೆಂಡರ್ ಪ್ರಕ್ರಿಯೆ ಕಡತಗಳನ್ನು ಪರಿಶೀಲಿಸಲಾಗಿ, <u>ಅನುಬಂಧ-49</u> ರಲ್ಲಿ ತಿಳಿಸಿರುವ ಕಾಮಗಾರಿಗಳನ್ನು ಏಕೈಕ ಬಿಡ್ಡುದಾರರಿಗೆ ಕಾರ್ಯಾದೇಶ ನೀಡಿ ವಹಿಸಲಾಗಿರುತ್ತದೆ.<br>ಕರ್ನಾಟಕ ಸರ್ಕಾರದ ಸರ್ಕಾರಿ ಆದೇಶ ಪತ್ರ ಸಂಖ್ಯೆ: NO/PWD/1359/SO/F.C/2001/(P2) ದಿನಾಂಕ: 03.12.2012 ರ ಉಪಬಂಧ 3-1 ರನ್ವಯ ಕಾಮಗಾರಿಯ ಆದೇಶ ನೀಡುವ ಮೊದಲು ಉಪಬಂಧದಲ್ಲಿ ವಿವರಿಸಿರುವಂತೆ ಏಕೈಕ ಬಿಡ್ಡುದಾರರಿಗೆ (Single tender) ಕಾರ್ಯಾದೇಶವನ್ನು ನೀಡುವಂತಿಲ್ಲ. ಟೆಂಡರ್ ಕರೆದಾಗ ಏಕೈಕ ಬಿಡ್ಡುದಾರರು ಆಯ್ಕೆಯಾದಲ್ಲಿ ಸದರಿ ಟೆಂಡರನ್ನು ತಿರಸ್ಕರಿಸಿ, ಮರು ಟೆಂಡರ್ ಆಹ್ವಾನ ನೀಡಬೇಕಾಗಿರುತ್ತದೆ.<br>ಮೇಲ್ಕಂಡ ಸರ್ಕಾರಿ ಆದೇಶವನ್ನು ಉಲ್ಲಂಘಿಸಿ <u>ಅನುಬಂಧ-49 ರಲ್ಲಿ</u> ತಿಳಿಸಿರುವ ಕಾಮಗಾರಿಗಳನ್ನು ಏಕೈಕ ಗುತ್ತಿಗೆದಾರರಿಗೆ ವಹಿಸಿರುವುದಕ್ಕೆ ಸೂಕ್ತ ಸ್ಪಷ್ಟೀಕರಣಗಳನ್ನು ನೀಡಲು ತಿಳಿಸುತ್ತಾ, ಮೂರು ಕಾಮಗಾರಿಗಳ ಒಟ್ಟು ಮೊತ್ತ ರೂ.6,85,890/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ ಹಾಗೂ ಈ ಕುರಿತು ಅನುಪಾಲನಾ ವರದಿ ಸಲ್ಲಿಸಲು ಸೂಚಿಸಿದೆ. | ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿ ಕೈಗೊಳ್ಳಲು ಪ್ರಸ್ತಾಪಿಸಲಾಗುವ ಕೆಲವೊಂದು ಕಾಮಗಾರಿಗಳನ್ನು ಅತೀ ಅಗತ್ಯದ ದೃಷ್ಟಿಯಿಂದ, ಸಕ್ಷಮ ಪ್ರಾಧಿಕಾರಗಳಿಂದ ನಿಯಮಾನುಸಾರವಾಗಿ ವಿಶ್ವವಿದ್ಯಾನಿಲಯಕ್ಕೆ ಹೆಚ್ಚಿನ ಆರ್ಥಿಕ ಹೊರೆ ಇಲ್ಲದಂತೆ ನಿರ್ವಹಿಸಲಾಗಿರುತ್ತದೆ. ಮುಂದಿನ ದಿನಗಳಲ್ಲಿ ಏಕೈಕ ಬಿಡ್ಡುದಾರರಿಗೆ ಟೆಂಡರ್ ಕಾಮಗಾರಿಯನ್ನು ವಹಿಸದಂತೆ ಕ್ರಮ ಕೈಗೊಳ್ಳಲಾಗುವುದು.<br>ಆದುದರಿಂದ ಆಕ್ಷೇಪಣೆ ಕೈಬಿಡುವಂತೆ ಕೋರಲಾಗಿದೆ. |
| 97 | **<u>Inspire Fellowship</u>** <u>ಅನುದಾನದ ದಾಸ್ತಾನು ವಹಿಯನ್ನು ಹಾಜರುಪಡಿಸದಿರುವುದು :</u><br>2016-17ನೇ ಸಾಲಿನ ಲೆಕ್ಕ ಪರಿಶೋಧನೆಯಲ್ಲಿ Inspire Fellowship ಅನುದಾನದ ವೆಚ್ಚದ ಓಚರ್‌ಗಳನ್ನು ಪರಿಶೀಲಿಸಲಾಗಿ, ಈ ಪ್ರಾಜೆಕ್ಟ್‌ಗೆ ಸಂಬಂಧಪಟ್ಟಂತೆ ವಿವಿಧ ಸಂಶೋಧನಾ ವಿದ್ಯಾರ್ಥಿಗಳು ಹಲವಾರು ವಸ್ತುಗಳು ಪಠ್ಯಪುಸ್ತಕಗಳು ಉಪಕರಣಗಳು ಇತ್ಯಾದಿಗಳನ್ನು ಖರೀದಿ ಮಾಡಲಾಗಿದೆ. ಆದರೆ ಇದಕ್ಕೆ ಸಂಬಂಧಪಟ್ಟಂತೆ ಯಾವುದೇ ದಾಸ್ತಾನು ವಹಿಯನ್ನು ನಿರ್ವಹಿಸಿರುವುದಿಲ್ಲ. ಆದ್ದರಿಂದ ಖರೀದಿ ಮಾಡಿರುವ ವಸ್ತುಗಳ ನಿಖರತೆ ಮತ್ತು ಅದರ ಗುಣಮಟ್ಟವನ್ನು ತಿಳಿಯಲು ಸಾಧ್ಯವಿಲ್ಲದ ಕಾರಣ ದಾಸ್ತಾನು ವಹಿಯನ್ನು ಸಮರ್ಪಕವಾಗಿ ನಿರ್ವಹಿಸಲು ತಿಳಿಸಿದೆ. | Inspire Fellowship ನ Contingency ಅನುದಾನದಲ್ಲಿ ಖರೀದಿಸಲಾಗುವ ಕಿರು ಉಪಕರಣ, ರಾಸಾಯನಿಕಗಳಿಗೆ ದಾಸ್ತಾನು ವಹಿ ನಿರ್ವಹಿಸುವಂತೆ ಸಂಶೋಧನಾ ವಿದ್ಯಾರ್ಥಿಗಳಿಗೆ ಸೂಚಿಸಲಾಗುವುದು. ಸದರಿ ಅನುದಾನವನ್ನು ಬಹುತೇಕ ಜೆರಾಕ್ಸ್, ಲೇಖನ ಸಾಮಾಗ್ರಿಗಳ ಖರೀದಿ, ಕ್ಷೇತ್ರ ಕಾರ್ಯದ ಪ್ರಯಾಣ ವೆಚ್ಚ, ಮುದ್ರಣ ಮುಂತಾದ ಕಾರ್ಯಗಳಿಗೆ ಬಳಸಲಾಗುವುದರಿಂದ 2019-20ನೇ ಸಾಲಿನಿಂದ ಸಂಶೋಧನಾ ವಿದ್ಯಾರ್ಥಿಗಳಿಗೆ ಕಟ್ಟುನಿಟ್ಟಾಗಿ ದಾಸ್ತಾನು ವಹಿ ನಿರ್ವಹಿಸಲು ಕ್ರಮಕೈಗೊಳ್ಳುವುದಾಗಿ ತಿಳಿಸುತ್ತಾ ಆಕ್ಷೇಪಣೆ ಕೈ ಬಿಡುವಂತೆ ಕೋರಲಾಗಿದೆ. |
| 98 | **<u>DST PURSE</u>** <u>ಅನುದಾನದ ವೆಚ್ಚಗಳಲ್ಲಿ ಕಂಡು ಬಂದಿರುವ ನ್ಯೂನ್ಯತೆಗಳ ಕುರಿತು :-</u><br>2016-17ನೇ ಸಾಲಿನ ಲೆಕ್ಕ ತಪಾಸಣೆಯಲ್ಲಿ DST PURSE ವತಿಯಿಂದ ಪ್ರಾಯೋಜಿತ ಸಂಶೋಧನೆ ಕಾರ್ಯಕ್ಕೆ ಬಿಡುಗಡೆಯಾಗಿರುವ ಅನುದಾನದ ವೆಚ್ಚಗಳನ್ನು ಪರಿಶೀಲಿಸಲಾಗಿ Schemes and Project ಗಳಿಗೆ ಸಂಬಂಧಿಸಿದಂತೆ ವಾರ್ಷಿಕ ಲೆಕ್ಕ ಪತ್ರದಲ್ಲಿ ನಮೂದಿಸಿರುವಂತೆ DST PURSE, 2016-17ನೇ ಸಾಲಿನ ಲೆಕ್ಕ ಪರಿಶೋಧನೆಯಲ್ಲಿ ಕಂಡು ಬಂದಿರುವ ನ್ಯೂನ್ಯತೆಗಳ ವಿವರಗಳು ಈ ಕೆಳಕಂಡಂತಿದೆ. | |

| ಕ್ರ.ಸಂ | ಓಚರ್ ಸಂಖ್ಯೆ/ ದಿನಾಂಕ | ಧನಾದೇಶ ಸಂಖ್ಯೆ/ ದಿನಾಂಕ | ಮೊತ್ತ | ವಿವರ | ನ್ಯೂನತೆಗಳು |
|---|---|---|---|---|---|
| 1 | 3/02.05.16 | 701042/ 14,50,635 02.05.16 | 15490 | R.o water Purifier, Eureka Farbes Ltd Mangaloere ಇವರಿಂದ ಖರೀದಿ ಮಾಡಿರುವುದು | 1)ಕೊಟೇಶನ್ ಕರೆದಿರುವುದಿಲ್ಲ 2) ದಾಸ್ತಾನುವಹಿಯಲ್ಲಿ ದಾಖಲಾಗಿರುವುದಿಲ್ಲ |
| 2 | 12/19.05.16 | 701053/ 19.05.16 | 9271 | M/s Binary Systems Private Limited , Bangalore ಇವರಿಂದ Laser Printer ಖರೀದಿ ಮಾಡಿರುವುದು | 1)ಕೊಟೇಶನ್ ಕರೆದಿರುವುದಿಲ್ಲ 2)ದಾಸ್ತಾನು ವಹಿಯಲ್ಲಿ ದಾಖಲಾಗಿರುವುದಿಲ್ಲ |
| 3 | 13/24.05.16 | 701054/ 24.05.16 | 54374 | M/s anchids networks & systeams Bangalore ಇವರಿಂದ Dell Computer ಖರೀದಿ ಮಾಡಿರುವುದು | 1) ಕೋಟೇಶನ್ ಕರೆದಿರುವುದಿಲ್ಲ 2) ದಾಸ್ತಾನು ವಹಿಯಲ್ಲಿ ದಾಖಲಾಗಿರುವುದಿಲ್ಲ |
| 4 | 14/24.05.16 | 701055/ 24.05.16 | 1371500 | M/s Convengent Technologies Bangalore ಇವರಿಂದ Logic Analy 3 Tektronix ಉಪಕರಣ ಖರೀದಿ ಮಾಡಿರುವುದು | 1) ಇ-ಟೆಂಡರ್ ಕರೆದಿರುವ ಬಗ್ಗೆ ದಾಖಲೆಗಳನ್ನು ಒದಗಿಸಿರುವುದಿಲ್ಲ 2) ದಾಸ್ತಾನು ವಹಿಯಲ್ಲಿ ದಾಖಲಾಗಿರುವುದಿಲ್ಲ |
| | | **Total** | 14,50,635 | | |

ಈ ಮೇಲಿನ ಓಚರ್‌ಗಳಿಗೆ ಸಂಬಂಧಪಟ್ಟಂತೆ ವಿಚಾರಣಾ ಪತ್ರ ಸಂಖ್ಯೆ:137/2018-19 ದಿನಾಂಕ29.01.2019 ರಂದು ವಿಚಾರಣೆ ನೀಡಿದ್ದು ದಿನಾಂಕ:15.02.2019ರಂದು ನೀಡಿರುವ ಉತ್ತರವು ಸಮಂಜಸವಾಗಿರುವುದಿಲ್ಲ. ಆದ್ದರಿಂದ ಒಟ್ಟು ಮೊತ್ತ ರೂ.14,50,635/-ನ್ನು ಆಕ್ಷೇಪಣೆಯಲ್ಲಿಡಲಾಗಿದೆ.

DST PURSE Lab Service Charge ಹೆಸರಿನಲ್ಲಿ ಈಗಾಗಲೇ ಖಾತೆ ಇದ್ದರೂ ಸಹ, (A/c No 31731454646) ಹೊಸ ಬ್ಯಾಂಕ್ ಖಾತೆಯನ್ನು State Bank of India ಮಂಗಳಗಂಗೋತ್ರಿಯಲ್ಲಿ (A/c.No 36113863215) ತೆರೆಯಲಾಗಿದೆ. ಯಾವುದಾದರು ಒಂದು ಖಾತೆಗೆ ಅಂತಿಮ ಶಿಲ್ಕನ್ನು ವರ್ಗಾವಣೆ ಮಾಡಿಕೊಂಡು ಆ ಖಾತೆಯಲ್ಲಿ ಮಾತ್ರ ನಿರ್ವಹಿಸಲು ನಿರ್ದೇಶನ ನೀಡಿದೆ.

ಸಂಶೋಧನಾ ವಿದ್ಯಾರ್ಥಿಗಳಿಂದ ಸಂಗ್ರಹಸಿರುವ PURSE LAB ಶುಲ್ಕವನ್ನು ಬ್ಯಾಂಕ್ ಖಾತೆಗೆ ಜಮ ಮಾಡಿಸಿರುವ ಬಗ್ಗೆ ಪೂರಕ ದಾಖಲೆ ನೀಡದ ಕಾರಣ, ಜಮಾ ಮಾಡಿರುವ ಮೊತ್ತದಲ್ಲಿ ವ್ಯತ್ಯಾಸ ಕಂಡುಬರುವ ಸಾಧ್ಯತೆ ಇದೆ. ಮತ್ತು ಇದಕ್ಕೆ ಸಂಬಂಧಪಟ್ಟಂತೆ ಯಾವುದೇ ನಗದು ಪುಸ್ತಕವನ್ನು ನಿರ್ವಹಿಸಿರುವುದಿಲ್ಲ ಆದ್ದರಿಂದ ಸಂಗ್ರಹವಾಗಿರುವ ಒಟ್ಟು ರೂ.4,48,775/- ರ ನಿಖರತೆಯನ್ನು ಲೆಕ್ಕಪರಿಶೋಧನೆಯಲ್ಲಿ ಖಚಿತಪಡಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ.

DST PURSE Programme ಖಾತೆ ಸಂಖ್ಯೆ:31731454646ಯಿಂದ, ದಿನಾಂಕ:16.07.16 ಮತ್ತು ದಿನಾಂಕ 03.08.16 ರಂದು ಕ್ರಮವಾಗಿ ರೂ.1,91,034 ಮತ್ತು ರೂ.33,831 ನ್ನು ವಿಶ್ವವಿದ್ಯಾನಿಲಯದ ಸಾಮಾನ್ಯ ನಿಧಿ ಖಾತೆಗೆ ವರ್ಗಾವಣೆ ಮಾಡಿದ್ದು ಇದಕ್ಕೆ ಸಂಬಂಧಪಟ್ಟ ಯಾವುದೇ ದಾಖಲೆಗಳನ್ನು ಒದಗಿಸದಿರುವುದರಿಂದ ಯಾವ ಕಾರಣಕ್ಕಾಗಿ ಈ ಹಣವನ್ನು ವರ್ಗಾವಣೆ ಮಾಡಲಾಯಿತು ಎನ್ನುವುದಕ್ಕೆ ವಿವರಣೆಯನ್ನು ಮುಂದಿನ ಲೆಕ್ಕ ತನಿಖೆಗೆ ಹಾಜರುಪಡಿಸುವುದು.

ಈ ಯೋಜನೆಯಡಿ ಖರೀದಿಸಿರುವ ವಿವಿಧ ಸರಕುಗಳನ್ನು ದಾಸ್ತಾನು ವಹಿಗೆ ಸ್ವೀಕರಿಸಿ ಸರಿಯಾಗಿ ನಿರ್ವಹಿಸಿರುವುದಿಲ್ಲ. ಬದಲಾಗಿ ಕಂಪ್ಯೂಟರ್ ಮುದ್ರಿತ ಪ್ರತಿಯನ್ನು ಇದಕ್ಕೆ ಲಗತ್ತಿಸಲಾಗುತ್ತಿದ್ದು ದೃಢೀಕರಿಸಲು ಕ್ರಮವಹಿಸುವುದು.

ಡಿಎಸ್ಟಿ ಪರ್ಸ್ ಯೋಜನೆಯಡಿ ಖರೀದಿಸಿರುವ ವಿವಿಧ ಸರಕುಗಳನ್ನು ದಾಸ್ತಾನು ವಹಿಯಲ್ಲಿ ಸ್ವೀಕರಿಸಿ, ನಮೂದುಗಳನ್ನು ಮಾಡಿದ್ದು ಈ ಬಗ್ಗೆ ದೃಢೀಕರಿಸಲಾಗಿದೆ ಹಾಗೂ ಇನ್ನು ಮುಂದಕ್ಕೆ ನಿಯಮಾನುಸಾರ ಇ-ಟೆಂಡರ್/ಕೊಟೇಶನ್‌ಗಳನ್ನು ಆಹ್ವಾನಿಸಿ ಸಾಮಾಗ್ರಿಗಳನ್ನು ಖರೀದಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಲಾಗಿದೆ. ಆದ್ದರಿಂದ ಈ ಆಕ್ಷೇಪಣೆಯನ್ನು ಕೈ ಬಿಡುವಂತೆ ಕೋರಲಾಗಿದೆ.

| | | |
|---|---|---|
| 99 | <u>2016-17ನೇ ಸಾಲಿನ ವಿಶೇಷ ಪ್ರಾಜೆಕ್ಟ್ ಸ್ಕೀಂ ಬಿ.ಆರ್.ಎನ್.ಎಸ್ ಆರ್/ಪಿ **Development and environment** ನ ಬಗ್ಗೆ :</u><br>ಮಂಗಳೂರು ವಿ.ವಿ.ಯ 2016-17ನೇ ಸಾಲಿನ ವಿಶೇಷ ಪ್ರಾಜೇಕ್ಟ್ ಸ್ಕೀಂ ಬಿ.ಆರ್.ಎನ್.ಎಸ್ ಆರ್/ಪಿ Development and environment ಗೆ ಸಂಬಂಧಿಸಿದಂತೆ CARER ಕೇಂದ್ರಮಾಹಿತಿ ಪುಸ್ತಕ ಮುದ್ರಣ (ಧನಾದೇಶ ಸಂಖ್ಯೆ:258774) ಪಾವತಿ ಮೊತ್ತ ರೂ.40,800/-ಗಳನ್ನು ಪಾವತಿಸಲಾಗಿರುತ್ತದೆ. ಆದರೆ ಸರ್ಕಾರಿ ಆದೇಶ ಸಂಖ್ಯೆ:ಆಇ.01ಟಿಸಿಇ.2012 ಬೆಂಗಳೂರು ದಿನಾಂಕ:21.06.2012 ಆದೇಶದನ್ವಯ ಮೂರು ದರಪಟ್ಟಿಗಳನ್ನು ಪಡೆದು ಕನಿಷ್ಠ ದರವನ್ನು ನಮೂದಿಸಿರುವ ಸಂಸ್ಥೆಗೆ ಖರೀದಿ ಆದೇಶವನ್ನು ನೀಡಬೇಕಿರುತ್ತದೆ. ದರಪಟ್ಟಿ ಕರೆದು ಖರೀದಿ ಪ್ರಕ್ರಿಯೆ ಕೈಗೊಂಡಿರುವ ಬಗ್ಗೆ ಕಡತಗಳನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರಸಂಖ್ಯೆ:190 ದಿನಾಂಕ:12.02.2019 ರಲ್ಲಿ ಕೋರಲಾಗಿ, ಅವುಗಳನ್ನು ಹಾಜರುಪಡಿಸದಿರುವುದರಿಂದ ರೂ.40,800/-ಗಳನ್ನು ಆಕ್ಷೇಪಣೆಗೆ ಸೂಚಿಸಿದೆ. | ಅತೀ ಅಗತ್ಯದ ಹಿನ್ನಲೆಯಲ್ಲಿ ಪುಸ್ತಕಗಳನ್ನು ಮುದ್ರಣ ಮಾಡಿದ್ದು ಮುಂದೆ ಕೊಟೇಶನ್ ಕರೆದು ನಿರ್ವಹಿಸಲಾಗುವುದು. ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ. |
| 100 | <u>ಮಂಗಳೂರು ವಿಶ್ವವಿದ್ಯಾನಿಲಯ ಉದ್ಯೋಗಿಗಳ ಪತ್ತಿನ ಸಹಕಾರಿ ಸಂಘ ರವರಿಂದ ಖರೀದಿಸಿರುವ ಬಗ್ಗೆ :</u><br>2016-17ನೇ ಸಾಲಿನ ಮಂಗಳೂರು ವಿಶ್ವವಿದ್ಯಾನಿಲಯದ ಲೆಕ್ಕಪರಿಶೋಧನೆಯಲ್ಲಿ ಸಾಮಾನ್ಯ ಖಾತೆಯಿಂದ ಪಾವತಿಸಲಾದ ಓಚರ್‌ಗಳನ್ನು ಪರಿಶೀಲಿಸಲಾಗಿ, ಸುಮಾರು ರೂ.49.00 ಲಕ್ಷಕ್ಕೂ ಅಧಿಕ ಮೊತ್ತದ ಸಾಮಾಗ್ರಿಗಳನ್ನು ಮಂಗಳೂರು ವಿಶ್ವವಿದ್ಯಾನಿಲಯ ಉದ್ಯೋಗಿಗಳ ಪತ್ತಿನ ಸಹಕಾರಿ ಸಂಘದ ಮೂಲಕ ಮಂಗಳೂರು ವಿಶ್ವವಿದ್ಯಾನಿಲಯದ ಅಧೀನದಲ್ಲಿರುವ ಎಲ್ಲಾ ವಿಭಾಗಗಳು, ಕಾಲೇಜುಗಳು ಹಾಗೂ ಸಂಸ್ಥೆಗಳು ನೇರವಾಗಿ ಖರೀದಿಸಿ ಬಿಲ್ಲುಗಳನ್ನು ಪಾವತಿಸಿರುವುದು ಕಂಡು ಬಂದಿರುತ್ತದೆ. ಈ ಖರೀದಿ ಪ್ರಕ್ರಿಯೆಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ-1999 ಅಧಿನಿಯಮ 2000 ವನ್ನು ಪಾಲಿಸಿರುವುದಿಲ್ಲ. ಸಂಘದವರು ಮಾರಾಟ ಮಾಡಲು ಕೆ.ಟಿ.ಪಿ.ಪಿ ನಿಯಮ 4(G) ವಿನಾಯಿತಿ ಪಡೆದುಕೊಂಡಿಲ್ಲ. ಈ ರೀತಿ ಸದರಿ ಸಂಘದಲ್ಲಿ ಖರೀದಿ ವ್ಯವಹಾರ ನಡೆಸಲು ಸರ್ಕಾರದ ಆದೇಶ/ಕೆ.ಟಿ.ಪಿ.ಪಿ ನಿಯಮ 4(ಜಿ)ರಡಿ ವಿನಾಯಿತಿ ಪಡೆದ ಪ್ರತಿಯನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ: 95/ 2018-19 ದಿನಾಂಕ:02.01.2019 ರಲ್ಲಿ ಜಾರಿ ಮಾಡಲಾಗಿ, ಯಾವುದೇ ಮಾಹಿತಿ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ ಮಂಗಳೂರು ವಿಶ್ವವಿದ್ಯಾನಿಲಯ ಉದ್ಯೋಗಿಗಳ ಪತ್ತಿನ ಸಹಕಾರಿ ಸಂಘದಿಂದ ಖರೀದಿಸಲಾದ ಒಟ್ಟು ಮೊತ್ತ ರೂ.49,04,840/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರವನ್ನು <u>ಅನುಬಂಧ-50 ರಲ್ಲಿ</u> ವರದಿಗೆ ಲಗತ್ತಿಸಿದೆ. | ಸದ್ಯ ಸದ್ರಿ ಸಹಕಾರ ಸಂಘದಿಂದ ಖರೀದಿ ವೇಳೆ ಕೆಟಿಟಿಪಿ 1999ರಲ್ಲಿ ಸೂಚಿಸಿದಂತೆ ಕ್ರಮ ಕೈಗೊಳ್ಳಲಾಗುತ್ತಿದೆ. ಆಕ್ಷೇಪಣೆಯನ್ನು ಕೈ ಬಿಡಲು ಕೋರಿದೆ. |
| 101 | <u>ಜಿ.ಆರ್.ಎ ಖಾತೆಯ ವೆಚ್ಚದ ಲೆಕ್ಕಪತ್ರ ದಾಖಲೆಗಳನ್ನು ಹಾಜರುಪಡಿಸದಿರುವುದು :</u><br>2016-17ನೇ ಸಾಲಿನಲ್ಲಿ ಜಿ.ಆರ್.ಎ ಖಾತೆಯಿಂದ ವೆಚ್ಚ ಭರಿಸಲಾದ ಬಿಲ್ಲುಗಳಿಗೆ ಸಂಬಂಧಿಸಿದಂತೆ ಪೂರಕ ದಾಖಲಾತಿಗಳನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:29/18-19 ದಿ:23.11.18, 35/18-19 ದಿ:03.12.2018, 64/18-19 ದಿ:21.02.2018, 116/18-19 ದಿ:17.01.2019 ಗಳನ್ನು ನೀಡಲಾಗಿತ್ತು. ಆದರೆ ಈ ಸಂಬಂಧ ಭಾಗಶಃ ಲೆಕ್ಕಪತ್ರ ದಾಖಲೆಗಳನ್ನು ಮಾತ್ರ ಲೆಕ್ಕಪರಿಶೋಧನೆಗೆ ಹಾಜರುಪಡಿಸಲಾಗಿದ್ದು, ಉಳಿದಂತೆ ಹಾಜರುಪಡಿಸದ ದಾಖಲಾತಿಗಳ ಬಿಲ್ಲುಗಳ ಒಟ್ಟು ಮೊತ್ತ ರೂ.1,17,23,059/-(ಹಣಕಾಸು ಶಾಖೆ ಬಾಬ್ತು ರೂ.82,38,915/-, ಆಡಳಿತ ಶಾಖೆ ರೂ.15,07,560/-, ಪರೀಕ್ಷ ರೂ.19,76,584/-) ಆಕ್ಷೇಪಣೆಯಲ್ಲಿಡಲಾಗಿದೆ. ಇದಕ್ಕೆ ಸಂಬಂಧಿಸಿದವರ ಮೇಲೆ ಆಡಳಿತಾತ್ಮಕ ಕ್ರಮ ಕೈಗೊಳ್ಳಲು ತಿಳಿಸಿದೆ. ವಿವರಗಳನ್ನು <u>ಅನುಬಂಧ-51, 52 ಮತ್ತು 53 ರಲ್ಲಿ</u> ವರದಿಗೆ ಲಗತ್ತಿಸಿದೆ. | ದಾಖಲೆಗಳನ್ನು ಮುಂದಿನ ಲೆಕ್ಕ ತಪಾಸಣಾ ವೇಳೆ ಹಾಜರು ಪಡಿಸಲಾಗುವುದು. |
| 102 | <u>ಸಾಮಾನ್ಯ ನಿಧಿಗೆ ಸಂಬಂಧಿಸಿದ ಅಗತ್ಯ ಲೆಕ್ಕಪತ್ರ ದಾಖಲೆಗಳನ್ನು ಹಾಜರುಪಡಿಸದಿರುವುದು :</u><br>ಸಾಮಾನ್ಯ ನಿಧಿಗೆ ಸಂಬಂಧಿಸಿದಂತೆ ಹಾಜರುಪಡಿಸಲಾದ ಲೆಕ್ಕಪತ್ರದಾಖಲೆಗಳನ್ನು ಪರಿಶೀಲಿಸಲಾಗಿ ಕಂಡುಬಂದ ನ್ಯೂನ್ಯತೆಗಳನ್ನು ಈ ಕೆಳಗಿನ ತಃಖ್ತೆಯಲ್ಲಿ ವಿವರಿಸಲಾಗಿದೆ. | |

| ಕ್ರ.ಸಂ | ಪಾವತಿ ವಿವರಗಳು | ಧನಾದೇಶ ಸಂಖ್ಯೆ/ ದಿನಾಂಕ | ಪಾವತಿ ಮೊತ್ತ ರೂ ಗಳಲ್ಲಿ ವಿವರಗಳು | ಷರಾ |
|---|---|---|---|---|
| 1 | ಶ್ರೀ ದೇವೇಂದ್ರ ಕುಮಾರ್ ವೈದ್ಯಕೀಯ ಖರ್ಚಿಗೆ ಮುಂಗಡ ಹಣ | 118666/9.06.16 | 40,000 | ಓಚರ್‌ಗಳನ್ನು ಹಾಜರುಪಡಿಸಿಲ್ಲ. |
| 2 | ಶ್ರೀ ಲೋಕಾನಾಥ್ ವೈದ್ಯಕೀಯ ವೆಚ್ಚದ ಬಿಲ್ಲು | 118461/1.06.16 | 400492 | ಓಚರ್‌ಗಳನ್ನು ಹಾಜರುಪಡಿಸಿಲ್ಲ |
| 3 | ಕುಲಪತಿಯವರ ಕೊಠಡಿಗೆ ಪೋಸ್ಟ್ ಕವರ್ ಖರೀದಿ | 118682/09.06.16 | 28500 | ದರಪಟ್ಟಿ ಆಹ್ವಾನಿಸಿರುವುದಿಲ್ಲ |
| 4 | ವಿಶ್ವವಿದ್ಯಾನಿಲಯ ಆರೋಗ್ಯ ಕೇಂದ್ರಕ್ಕೆ ಔಷದಿ ಖರೀದಿ | 118853/18.06.16 | 8162 | ದರಪಟ್ಟಿ ಆಹ್ವಾನಿಸಿರುವುದಿಲ್ಲ |
| 5 | ಕಂಪ್ಯೂಟರ್ ಪ್ರಿಪೆರ್ಡ್ ಮಾರ್ಕ್ಸ್ ಕಾರ್ಡ್ ಪೂರೈಕೆ | 118452/1.6.16 | 357599 | ದರಪಟ್ಟಿ ಆಹ್ವಾನಿಸಿರುವುದಿಲ್ಲ |
| 6 | ಟಿ.ಎ /ಡಿ.ಎ ಬಿಲ್ | 118913/23.6.16 | 5225 | ಟಿಎ/ಡಿಎ ಬಿಲ್ ಹಾಜರುಪಡಿಸಿರುವುದಿಲ್ಲ |
| | | 118914&118915/23.6.16 | 9218 | |
| | | 118916/118917/22.6.16 | 6110 | |
| | | ಒಟ್ಟು ಮೊತ್ತ | **8,55,306** | |

ಈ ಮೇಲಿನ ತಃಖ್ತೆಯಲ್ಲಿ ವಿವರಿಸಿರುವಂತೆ ಕ್ರ.ಸಂಖ್ಯೆ1,2,6 ರ ವೈದ್ಯಕೀಯ ಮುಂಗಡ ಬಿಲ್ಲು ಹಾಗೂ ಟಿಎ/ಡಿಎ ಬಿಲ್‌ಗಳನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಕ್ರ.ಸಂಖ್ಯೆ 3, 4 ಮತ್ತು 5 ಕ್ಕೆ ಸಂಬಂಧಿಸಿದ ಓಚರ್‌ಗಳನ್ನು ಪರಿಶೀಲಿಸಲಾಗಿ ಸ್ಪರ್ದಾತ್ಮಕ ದರ ಪಟ್ಟಿಗಳನ್ನು ಆಹ್ವಾನಿಸಿರುವುದಿಲ್ಲ. ಈ ಸಂಬಂಧ ಅಗತ್ಯ ಓಚರ್‌ಗಳನ್ನು ಹಾಜರುಪಡಿಸುವಂತೆ ಕೋರಿ ಲೆಕ್ಕ ತನಿಖಾ ವಿಚಾರಣಾ ಪತ್ರ ಸಂಖ್ಯೆ (193/ದಿನಾಂಕ12.12.2019) ನೀಡಲಾಗಿ, ಅವಶ್ಯ ಲೆಕ್ಕ ಪತ್ರ ದಾಖಲೆಗಳನ್ನು ಪೂರ್ಣ ಪ್ರಮಾಣದಲ್ಲಿ ಹಾಜರುಪಡಿಸಿಲ್ಲ. ಆದ್ದರಿಂದ ಈ ಸಂಬಂಧದ ಒಟ್ಟು ಪಾವತಿ ಮೊತ್ತ 8,55,306/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

ದಾಖಲೆಗಳು ಲಭ್ಯವಿದ್ದು ಮುಂದಿನ ಲೆಕ್ಕ ತಪಾಸಣಾ ವೇಳೆ ಹಾಜರು ಪಡಿಸಲಾಗುವುದು.

103 <u>ಚಿಕ್ಕಳುವಾರ ಪ್ರಾದೇಶಿಕ ಕೇಂದ್ರದ ಮಹಿಳೆಯರ ವಸತಿ ನಿಲಯದ ಲೆಕ್ಕಪತ್ರಗಳನ್ನು ಹಾಜರುಪಡಿಸದಿರುವುದು:</u>

2016-17ನೇ ಸಾಲಿನ ಲೆಕ್ಕತಪಾಸಣೆಗೆ ಚಿಕ್ಕಳುವಾರ ಪ್ರಾದೇಶಿಕ ಕೇಂದ್ರದ ಮಹಿಳಾ ವಸತಿ ನಿಲಯ, ಲೆಕ್ಕತಪಾಸಣೆ ಕೈಗೊಳ್ಳಲು ಈ ಕೆಳಕಂಡ ಲೆಕ್ಕಪತ್ರಗಳನ್ನು ತುರ್ತಾಗಿ ಲೆಕ್ಕತಪಾಸಣೆಗೆ ಹಾಜರುಪಡಿಸುವಂತೆ ಕೋರಲಾಗಿತ್ತು. ಅವುಗಳೆಂದರೆ:

1. ನಗದು ಪುಸ್ತಕ
2. ಧನಾದೇಶ ಪುಸ್ತಕಗಳು
3. ಬ್ಯಾಂಕ್ ಪಾಸ್ ಪುಸ್ತಕಗಳು
4. ರಶೀದಿ ಪುಸ್ತಕಗಳು ಮತ್ತು ದಾಸ್ತಾನು ವಹಿ
5. ದಿನ ವಹಿ ಮತ್ತು ಜಮಾ ವಹಿ
6. ಪ್ರವೇಶಾತಿ ವಹಿ
7. ನಿಶ್ಚಿತ ರೇವಣಿ ವಹಿ
8. ಪ್ರವೇಶಾತಿ ಶುಲ್ಕಗಳ ವಿವರಗಳ

ಸದ್ರಿ ದಾಖಲೆಗಳನ್ನು ಮುಂದಿನ ಲೆಕ್ಕ ತಪಾಸಣಾ ವೇಳೆ ಹಾಜರು ಪಡಿಸಲಾಗುವುದು.

| | | |
|---|---|---|
| | 9. ಸಂಶೋಧನಾ ವಿದ್ಯಾರ್ಥಿಗಳ ಪ್ರವೇಶಾತಿ ವಿವರ<br>10. ಸಂಶೋಧನಾ ವಿದ್ಯಾರ್ಥಿಗಳ ಮನೆ ಬಾಡಿಗೆ ಭತ್ಯೆ ವಸೂಲಾತಿ ವಿವರಗಳು<br>11. ಮೆಸ್ ಬಿಲ್ಲುಗಳು ಮತ್ತು ಡಿ.ಸಿ ಹುಂಡಿಗಳು<br>12. ಎ.ಸಿ ಮತ್ತು ಎನ್.ಡಿ.ಸಿ ಹುಂಡಿಗಳು<br>13. ವಾರ್ಷಿಕ ದಾಸ್ತಾನು ಪರಿಶೀಲನಾ ವರದಿ<br>14. ತಾತ್ಕಾಲಿಕ ನೌಕರರ ನೇಮಕಾತಿ ಪ್ರಕ್ರಿಯೆ ಕಡತ.<br>15. ಖಾಯಂ ಮತ್ತು ತಾತ್ಕಾಲಿಕ ನೌಕರರ ವೇತನ ಪಾವತಿ ಕಡತ ಮತ್ತು ಹಾಜರಾತಿ ವಹಿಗಳು.<br>ಈ ಮೇಲೆ ವಿವರಿಸಿರುವ ಕಡತಗಳು/ ಲೆಕ್ಕಪತ್ರಗಳನ್ನು ಹಾಜರುಪಡಿಸುವಂತೆ ಲೆಕ್ಕ ತಪಾಸಣಾ ವಿಚಾರಣಾ ಪತ್ರದ ಸಂಖ್ಯೆ:178/2018-19 ದಿ:06.02.2019 ಹಾಗೂ 195/2018-19 ದಿ:12.02.2019 ರಲ್ಲಿ ಎರಡು ವಿಚಾರಣಾ ಪತ್ರಗಳನ್ನು ಕೋರಲಾಗಿದ್ದರೂ, ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ. ಆದ್ದರಿಂದ ಸದರಿ ವಸತಿ ನಿಲಯದ ಆರ್ಥಿಕ ವಹಿವಾಟುಗಳನ್ನು ಲೆಕ್ಕತಪಾಸಣೆಗೆ ಕೈಗೊಳ್ಳಲು ಸಾಧ್ಯವಾಗದಿರುವುದರಿಂದ ಕಛೇರಿ ಮುಖ್ಯಸ್ಥರು ಸೂಕ್ತ ಕ್ರಮವಹಿಸಿ ಸಂಬಂಧಿಸಿದವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಸೂಚಿಸಿದೆ. | |
| 104 | <u>ಆಸ್ತಿ ವಿವರಗಳ ವಹಿಯನ್ನು ಹಾಜರುಪಡಿಸದಿರುವುದು :</u><br>2016-17ನೇ ಸಾಲಿನ ಮಂಗಳೂರು ವಿಶ್ವವಿದ್ಯಾನಿಲಯದ ಅಧೀನಕ್ಕೊಳಪಡುವ ಸಂಸ್ಥೆಗಳ/ವಿಭಾಗಗಳ ಆಸ್ತಿಗಳು, ಕಟ್ಟಡಗಳು, ವಾಣಿಜ್ಯ ಕಟ್ಟಡಗಳು, ಚರಾಸ್ತಿಗಳು ಹಾಗೂ ಸ್ಥಿರಾಸ್ತಿಗಳನ್ನೊಳಗೊಂಡ ಆಸ್ತಿ ವಹಿಯನ್ನು ನಿರ್ವಹಿಸಿರುವ ಬಗ್ಗೆ ವಿಚಾರಣಾ ಪತ್ರ ಸಂಖ್ಯೆ:98//2018-19 ದಿ:02.01.2019 ಹಾಗೂ 119/18-19 ದಿ:18.01.2019 ರಂದು ಎರಡು ವಿಚಾರಣಾ ಪತ್ರಗಳನ್ನು ನೀಡಲಾಗಿ, ಯಾವುದೇ ಸಂಸ್ಥೆ/ವಿಭಾಗದ ಚರಾಸ್ತಿ/ ಸ್ಥಿರಾಸ್ತಿಗಳ ವಿವರಗಳನ್ನೊಳಗೊಂಡ ಆಸ್ತಿ ವಹಿಯನ್ನು ಲೆಕ್ಕತಪಾಸಣೆಗೆ ಹಾಜರುಪಡಿಸಿರುವುದಿಲ್ಲ. ಈ ಬಗ್ಗೆ ಆಯಾ ಕಛೇರಿ/ಸಂಸ್ಥೆಯ ಮುಖ್ಯಸ್ಥರು ಆಸಕ್ತಿ ವಹಿಸಿ ಚರಾಸ್ತಿ ಸ್ಥಿರಾಸ್ತಿಯ ವಿಭಾಗವಾರು ಪಟ್ಟಿಯನ್ನು ಸಿದ್ಧಪಡಿಸಿ ಹಣಕಾಸು ಅಧಿಕಾರಿಯವರ ಗಮನಕ್ಕೆ ಸಲ್ಲಿಸಬೇಕಿರುತ್ತದೆ. ಇಲ್ಲವಾದಲ್ಲಿ ಹಣಕಾಸು ಅಧಿಕಾರಿಯವರು ಆಯಾ ಸಂಸ್ಥೆಯ ಮುಖ್ಯಸ್ಥರ ವೇತನವನ್ನು ತಡೆ ಹಿಡಿಯಬಹುದಾಗಿರುತ್ತದೆ. | ವಿಶ್ವವಿದ್ಯಾನಿಲಯ ಅಧೀನಕ್ಕೆ ಒಳಪಡುವ ಸ್ಥಿರ ಆಸ್ತಿಗಳ ವಿವರದ ಪುಸ್ತಕವನ್ನು ಲೆಕ್ಕ ಪರಿಶೋಧಕರಿಗೆ ಹಾಜರುಪಡಿಸಲಾಗಿದೆ. ವಿಶ್ವವಿದ್ಯಾನಿಲಯದ ಸ್ಥಿರ ಆಸ್ತಿಗೆ ಸಂಬಂಧಿಸಿದ ವಿವರಗಳನ್ನು ಕುಲಸಚಿವರ ಪತ್ರ ಸಂಖ್ಯೆ: ಮವಿ/ಡಿಇವಿ/36/2017-18/ಡಿ1, ದಿನಾಂಕ 15.02.2019ರಲ್ಲಿ ಪರಿಶೀಲನೆಗೆ ನೀಡಲಾಗಿರುತ್ತದೆ. ಸದ್ರಿ ಪತ್ರದ ಪ್ರತಿಯನ್ನು ಲಗತ್ತಿಸುತ್ತಾ ಆಕ್ಷೇಪಣೆಯನ್ನು ಕೈ ಬಿಡುವಂತೆ ಕೋರಲಾಗಿದೆ. |
| 105 | <u>ವಾರ್ಷಿಕ ದಾಸ್ತಾನು ಪರಿಶೀಲನಾ ವರದಿಯಲ್ಲಿ ಕಂಡು ಬಂದಿರುವ ನ್ಯೂನ್ಯತೆಗಳು :</u><br>2016-17ನೇ ಸಾಲಿನ ದೂರ ಶಿಕ್ಷಣ ಕೇಂದ್ರ ಮತ್ತು ವಿವಿಧ ವಿಭಾಗಗಳನ್ನೊಳಗೊಂಡಂತೆ ಮಂಗಳೂರು ವಿಶ್ವವಿದ್ಯಾನಿಲಯ ಮಂಗಳೂರು ವಾರ್ಷಿಕ ದಾಸ್ತಾನು ಅನುಮೋದಿತ ಪರಿಶೀಲನಾ ವರದಿಯನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:02/2018-19 ದಿ:13.11.2018, 105/2018-19 ದಿ:05.01.2019 ಮತ್ತು 41/2018-19 ದಿ:06.12.2018 ರಂದು ಜಾರಿ ಮಾಡಲಾಗಿ, ಕೆಲವು ವಿಭಾಗಗಳ ವಾರ್ಷಿಕ ದಾಸ್ತಾನು ಪರಿಶೀಲನಾ ವರದಿಗಳನ್ನು ಹಾಜರುಪಡಿಸಲಾಗಿದೆ. ಇವುಗಳಲ್ಲಿ ಕಂಡು ಬಂದಿರುವ ನ್ಯೂನ್ಯತೆಗಳು ಈ ಕೆಳಕಂಡಂತಿವೆ.<br>1) ನಿಗದಿತ ಸಮಯದಲ್ಲಿ ವಿವಿಧ ವಿಭಾಗಗಳು ಸಕ್ಷಮ ಪ್ರಾಧಿಕಾರಕ್ಕೆ ವಾರ್ಷಿಕ ದಾಸ್ತಾನು ಪರಿಶೀಲನಾ ವರದಿ ಸಲ್ಲಿಸದಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ.<br>2) ಮೂರನೇ ವ್ಯಕ್ತಿಯಿಂದ ದಾಸ್ತಾನು ಪರಿಶೀಲನೆ ನಡೆಸದೆ ಸಂಬಂಧಪಟ್ಟ ವಿಭಾಗದ ಸಿಬ್ಬಂದಿಗಳೇ ಪರಿಶೀಲನೆ ನಡೆಸಿರುವುದನ್ನು ಗಮನಿಸಲಾಗಿದೆ.<br>3) 2016-17ನೇ ಸಾಲಿನಲ್ಲಿ ಖರೀದಿಸಿದ ವಸ್ತುಗಳು ವಾರ್ಷಿಕ ದಾಸ್ತಾನುವಿನಲ್ಲಿ ಕಂಡು ಬರದೇ ಇರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ.<br>4) ವಾರ್ಷಿಕ ದಾಸ್ತಾನು ಪರಿಶೀಲನಾ ವರದಿಯಲ್ಲಿ ಅನುಪಯುಕ್ತ ವಸ್ತುಗಳ ವಿವರಗಳನ್ನು ನಮೂದಿಸಿರುವುದಿಲ್ಲ. | ನ್ಯೂನ್ಯತೆಗಳನ್ನು ಸರಿಪಡಿಸಲು ಎಲ್ಲಾ ಅಧೀನ ಕಚೇರಿ ಮುಖ್ಯಸ್ಥರಿಗೆ ಸೂಚಿಸಲಾಗಿದೆ. ಮುಂದಿನ ಲೆಕ್ಕ ತಪಾಸಣೆ ವೇಳೆ ಹಾಜರುಪಡಿಸಲಾಗುವುದು |

5) ನಿಗದಿತ ನಮೂನೆಯಲ್ಲಿ ವಾರ್ಷಿಕ ದಾಸ್ತಾನು ಪರಿಶೀಲನಾ ವರದಿಯನ್ನು ತಯಾರಿಸದಿರುವುದರಿಂದ ಕೆಲವು ವಿಭಾಗಗಳ ವರದಿಯಲ್ಲಿ ಹೊಸದಾಗಿ ಖರೀದಿಸಿರುವ ವಸ್ತುಗಳ ವಿವರಗಳನ್ನು ಸ್ಪಷ್ಟವಾಗಿ ನಮೂದಿಸಿರುವುದಿಲ್ಲ.

ಕರ್ನಾಟಕ ಆರ್ಥಿಕ ಸಂಹಿತೆ-1958 ರ ಅನುಚ್ಛೇದ-169 ರನ್ವಯ ಆರ್ಥಿಕ ವರ್ಷದ ಕೊನೆಯಲ್ಲಿ ವಾರ್ಷಿಕ ದಾಸ್ತಾನು ಪರಿಶೀಲನೆಯನ್ನು ಕೈಗೊಂಡು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ. ಹಾಗೂ ಕೆ.ಎಫ್.ಸಿ-1958 ರ ಅನುಚ್ಛೇದ-168 ರಿಂದ 171 ರವರೆಗೆ ತಿಳಿಸಿರುವಂತೆ ಅನುಪಯುಕ್ತ ವಸ್ತುಗಳನ್ನು ಪಟ್ಟಿ ಮಾಡಿ ವಿಲೇ ಮಾಡಲು ಕ್ರಮ ಕೈಗೊಳ್ಳಬೇಕಾಗಿರುತ್ತದೆ. ಆದರೆ, ವಾರ್ಷಿಕ ದಾಸ್ತಾನು ಪರಿಶೀಲನೆಯನ್ನು ಕೈಗೊಂಡಿರುವ ವರದಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದರಿಂದ ಆಯಾ ವಿಭಾಗಗಳಲ್ಲಿ ಪ್ರಸ್ತುತ ಲಭ್ಯವಿರುವ ಎಲ್ಲಾ ವಸ್ತುಗಳ ಬಗ್ಗೆ ಖಚಿತಪಡಿಸಲು ಸಾಧ್ಯವಾಗದಿರುವುದರಿಂದ ಕಛೇರಿ ಮುಖ್ಯಸ್ಥರು ಸೂಕ್ತ ಕ್ರಮವಹಿಸಿ ವಾರ್ಷಿಕ ದಾಸ್ತಾನು ಪರಿಶೀಲನೆಯನ್ನು ಕೈಗೊಂಡು ವರದಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ.

<u>ಸಾಮಾನ್ಯ ಅಭಿಪ್ರಾಯ :</u>

2016-17ನೇ ಸಾಲಿನ ಮಂಗಳೂರು ವಿಶ್ವವಿದ್ಯಾನಿಲಯದ ಲೆಕ್ಕಪರಿಶೋಧನೆಯಲ್ಲಿ ಗಮನಿಸಿದಾಗ, ದಾಖಲೆ ಮತ್ತು ಕಡತಗಳ ನಿರ್ವಹಣೆಯು ಕ್ರಮಬದ್ಧವಾಗಿರುವುದಿಲ್ಲ. ಆರ್ಥಿಕ ಮತ್ತು ಆಡಳಿತ ನಿರ್ವಹಣೆಯಲ್ಲಿ ಆಂತರಿಕ ನಿಯಂತ್ರಣ ಕಂಡು ಬಂದಿರುವುದಿಲ್ಲ ಹಾಗೂ ಪ್ರತಿ ಮಾಹೆ ನಗದು ಪುಸ್ತಕ ಹಾಗೂ ಬ್ಯಾಂಕ್‌ಪಾಸ್ ಪುಸ್ತಕಗಳ ವ್ಯವಹಾರಗಳ ನಡುವೆ ಲೆಕ್ಕಸಮನ್ವಯ ಮಾಡಿರುವುದಿಲ್ಲ. ಹಿಂದಿನ ಸಾಲುಗಳ ಆಕ್ಷೇಪಣಾ ಮತ್ತು ವಸೂಲಾತಿಗೆ ಅನುಸರಣಾ ವರದಿ ಸಲ್ಲಿಸಲು ಯಾವುದೇ ಕ್ರಮಗಳನ್ನು ವಹಿಸಿರುವುದಿಲ್ಲ. ನೇಮಕಾತಿ ಮಾಡುವಾಗ ಸರ್ಕಾರದ ಸುತ್ತೋಲೆಗಳನ್ನು ಮತ್ತು ವಿಶ್ವವಿದ್ಯಾನಿಲಯದ ಕಾಯಿದೆಗಳನ್ನು ಅನುಸರಣೆ ಮಾಡುತ್ತಿಲ್ಲ. ನಿಶ್ಚಿತ ಠೇವಣಿಗಳ ಹೂಡಿಕೆಯಲ್ಲಿ ಪಾರದರ್ಶಕತೆಯನ್ನು ಕಾಯ್ದುಕೊಂಡಿಲ್ಲ. ಇಂಜಿನಿಯರಿಂಗ್ ವಿಭಾಗದಲ್ಲಿ ಅತ್ಯವಶ್ಯಕವಾದಂತಹ ದಾಖಲೆಗಳನ್ನು ನಿರ್ವಹಿಸಿರುವುದಿಲ್ಲ. ಯಾವುದೇ ಸಂಗ್ರಹಣೆಗಳಲ್ಲಿ ಕೆ.ಟಿ.ಪಿ.ಪಿ ಅಧಿನಿಯಮ ಹಾಗೂ ನಿಯಮಗಳನ್ನು ಪಾಲನೆ ಮಾಡುತ್ತಿಲ್ಲ. ಸಂಸ್ಥೆಯ ಆಯವ್ಯಯ, ವಾರ್ಷಿಕ ಲೆಕ್ಕಪತ್ರ, ಇವುಗಳ ವ್ಯತ್ಯಾಸಗಳನ್ನು ಇದುವರೆವಿಗೂ ಸರಿದೂಗಿಸಿ ಕೊಂಡಿರುವುದಿಲ್ಲದ ಕಾರಣ ವಾರ್ಷಿಕ ಲೆಕ್ಕಪತ್ರಗಳ ದೃಢೀಕರಣ ಮಾಡಲು ಸಾಧ್ಯವಾಗುತ್ತಿಲ್ಲ. ಈ ಶಿಕ್ಷಣ ಸಂಸ್ಥೆಯನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯುವ ಸಾಮರ್ಥ್ಯವಿರುವುದು ಇಲ್ಲಿನ ಅಧಿಕಾರಿ ವೃಂದಗಳಿಗೆ ಮಾತ್ರ. ಅವರುಗಳು ದೂರದೃಷ್ಟಿ ಯೋಜನೆಯನ್ನು ರೂಪಿಸಿಕೊಂಡಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಅನುದಾನಗಳನ್ನು ಸೆಳೆಯಬಹುದಾಗಿರುತ್ತದೆ. ಹಾಗೂ ಸಂಸ್ಥೆಯ ಘನತೆಯನ್ನು ಉಳಿಸಿಕೊಳ್ಳಬಹುದಾಗಿರುತ್ತದೆ. ಮುಖ್ಯವಾಗಿ ಲೆಕ್ಕಪರಿಶೋಧನೆಗೆ ಕಡತಗಳನ್ನು ಹಾಜರುಪಡಿಸದಿರುವುದು /ಭಾಗಶಃ ಹಾಜರುಪಡಿಸುತ್ತಿರುವುದು ದಾಖಲೆಗಳ ಉತ್ತರದಾಯತ್ವದ ಅಸ್ತಿತ್ವವನ್ನು ಪ್ರಶ್ನಿಸಿದಂತಾಗಿದೆ. ಕಂಡಿಕೆಗಳಲ್ಲಿ ಪ್ರಸ್ತಾಪಿಸಿದಂತೆ ಲೆಕ್ಕಪರಿಶೋಧನೆಗೆ ಕಡತಗಳನ್ನು ಹಾಜರುಪಡಿಸದಿರುವ ಸಿಬ್ಬಂದಿಗಳ ವಿರುದ್ಧ ಅಗತ್ಯ ಕ್ರಮವನ್ನು ವಹಿಸದಿದ್ದಲ್ಲಿ ಇದೇ ರೀತಿಯ ಕಾರ್ಯನಿರ್ವಹಣೆ ಮುಂದುವರೆಯಲು ಅವಕಾಶ ಕಲ್ಪಿಸಿದಂತಾಗುತ್ತದೆ. ಇನ್ನು ಮುಂದಾದರೂ ಇಂತಹ ಸಿಬ್ಬಂದಿಗಳ ವಿರುದ್ಧ ಆಡಳಿತಾತ್ಮಕ ಕ್ರಮ ಜರುಗಿಸುವ ಮೂಲಕ ಹಾಗೂ ಎಚ್ಚರಿಕೆ ನೀಡುವ ಮೂಲಕ ಲೆಕ್ಕಪತ್ರಗಳ ನಿರ್ವಹಣೆಯಲ್ಲಿ ಗಣನೀಯ ಸುಧಾರಣೆ ತರುವುದು ಅಗತ್ಯವಿರುತ್ತದೆ.

ಅಪರ ನಿರ್ದೇಶಕರು
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ,
ಪ್ರಾಂತೀಯ ಕಛೇರಿ, ಮೈಸೂರು ವಿಭಾಗ, ಮೈಸೂರು.